# ಅಧ್ಯಾಯ–೦೬

# ಬ್ಯಾಂಕು, ಹಣಕಾಸು ವ್ಯವಹಾರ, ವ್ಯಾಪಾರ ಹಾಗೂ ವಾಣಿಜ್ಯ

**ಪೀಠಿಕೆ:** ರಾಷ್ಟ್ರವೊಂದು ಆರ್ಥಿಕಾಭಿವೃದ್ಧಿಯನ್ನು ಸಾಧಿಸುವಲ್ಲಿ ಹಣಕಾಸು ಸಂಪನ್ಮೂಲಗಳ ಸಮರ್ಪಕ ಪೂರೈಕೆ ಮತ್ತು ದಕ್ಷ ಆಡಳಿತ ನಿರ್ವಹಣೆ ಅವಶ್ಯವಾಗಿರುತ್ತದೆ. ಸಂಪನ್ಮೂಲಗಳ ಪರಿಣಾಮಕಾರಿ ನಿರ್ವಹಣೆಯಲ್ಲಿ ಬ್ಯಾಂಕಿಂಗ್ ಮತ್ತು ಹಣಕಾಸು ಸಂಸ್ಥೆಗಳು ಮಹತ್ವದ ಪಾತ್ರ ವಹಿಸುತ್ತವೆ. ಇವು ಆಯಾ ದೇಶದ ಆರ್ಥಿಕ ವ್ಯವಸ್ಥೆಗೆ ಜೀವನಾಡಿಗಳಾಗಿರುತ್ತವೆ ಎಂದರೆ ಉತ್ಪ್ರೇಕ್ಷೆಯಾಗಲಾರದು. ಬ್ಯಾಂಕಿಂಗ್ ಮತ್ತು ಹಣಕಾಸು ವ್ಯವಹಾರಗಳೊಂದಿಗೆ ಸಹಕಾರ ಬ್ಯಾಂಕುಗಳು, ಪತ್ತಿನ ಸಹಕಾರ ಸಂಘಗಳು, ವ್ಯಾಪಾರ, ವಾಣಿಜ್ಯ, ಮಾರುಕಟ್ಟೆ ರಚನೆ, ವಿಮಾವ್ಯವಸ್ಥೆ, ಉಗ್ರಾಣ ವ್ಯವಸ್ಥೆ, ತೂಕ ಮತ್ತು ಅಳತೆ ಪದ್ಧತಿ, ನಾಣ್ಯ ಪದ್ಧತಿ, ಆಹಾರ ಮತ್ತು ನಾಗರೀಕ ಸರಬರಾಜು, ಸಾರ್ವಜನಿಕ ವಿತರಣಾ ವ್ಯವಸ್ಥೆ, ಗ್ರಾಹಕರ ಸಂರಕ್ಷಣಾ ಕಾಯಿದೆ ಮುಂತಾದವು ದೇಶದ ಸುಸ್ಥಿರ ಅಭಿವೃದ್ಧಿಯಲ್ಲಿ ಮಹತ್ವಪೂರ್ಣ ಪಾತ್ರವನ್ನು ವಹಿಸುತ್ತವೆ.

ಬ್ಯಾಂಕುಗಳ ಪ್ರಮುಖ ಕಾರ್ಯಗಳೆಂದರೆ ಸಾರ್ವಜನಿಕರಿಂದ ಹಣವನ್ನು ವಿವಿಧ ಠೇವಣಿಗಳ ರೂಪದಲ್ಲಿ ಸ್ವೀಕರಿಸುವುದು, ಅವರಿಗೆ ಆಕರ್ಷಕ ಬಡ್ಡಿಗಳನ್ನು ನೀಡಿ ಉಳಿತಾಯಕ್ಕೆ ಉತ್ತೇಜನ ನೀಡುವುದು. ಬ್ಯಾಂಕಿನ ಸಂಪನ್ಮೂಲ ಹಣವನ್ನು ಅವಶ್ಯಕವಿರುವ ವ್ಯಕ್ತಿ ಹಾಗೂ ಸಂಘಸಂಸ್ಥೆಗಳಿಗೆ ಸರಕಾರ ಮತ್ತು ಸರಕಾರೇತರ ಅಭಿವೃದ್ಧಿ ಚಟುವಟಿಕೆಗಳಿಗೆ ಸಾಲ ಮತ್ತು ಮುಂಗಡವಾಗಿ ನೀಡುವುದಾಗಿದೆ. ಸಂಗ್ರಹಿತ ಬಂಡವಾಳವನ್ನು ವಿವಿಧ ಸಮಾಜೋ–ಆರ್ಥಿಕ ಚಟುವಟಿಕೆಗಳಿಗೆ ಪೂರಕವಾಗಿ ಆರ್ಥಿಕ ನೆರವು ನೀಡುವುದರಿಂದ ಆ ಪ್ರದೇಶದ ಆರ್ಥಿಕ ಮತ್ತು ಸಾಮಾಜಿಕ ಚಟುವಟಿಕೆಗಳು ಉದ್ದೀಪನಗೊಳ್ಳುತ್ತವೆ. ಆದ್ದರಿಂದ ಆಧುನಿಕ ಬ್ಯಾಂಕುಗಳು ಮತ್ತು ಬ್ಯಾಂಕೇತರ ಹಣಕಾಸಿನ ಮಧ್ಯವರ್ತಿ ಸಂಸ್ಥೆಗಳು, ಕೃಷಿ, ಕೈಗಾರಿಕೆ, ವ್ಯಾಪಾರ, ವಾಣಿಜ್ಯ ಉದ್ದಿಮೆಗಳಿಗೆ, ಆರ್ಥಿಕ ಸಾಮಾಜಿಕ ಮತ್ತು ಆಡಳಿತಾತ್ಮಕ ಚಟುವಟಿಕೆಗಳಿಗೆ, ಆರ್ಥಿಕ ಮೂಲಭೂತ ಸೌಕರ್ಯ ಹಾಗೂ ಸಾಮಾಜಿಕ ಮೌಲ್ಯೋತ್ಪಾದಕ ಅಭಿವೃದ್ಧಿಗೆ ಅಗತ್ಯವಾದ ಸಾಲಸೌಲಭ್ಯಗಳನ್ನು ನೀಡುತ್ತಾ ಬಂದಿವೆ. ಕರ್ನಾಟಕ ರಾಜ್ಯದ ಇತರೆ ಜಿಲ್ಲೆಗಳಲ್ಲಿರುವಂತೆ ಚಾಮರಾಜನಗರ ಜಿಲ್ಲೆಯಲ್ಲಿಯೂ ಸಹ ಬ್ಯಾಂಕಿಂಗ್ ಪದ್ಧತಿಯು ಆರ್ಥಿಕ ಮತ್ತು ಸಾಮಾಜಿಕ ಪರಿವರ್ತನೆಯನ್ನು ಸಾಧಿಸುವಲ್ಲಿ ಪ್ರಧಾನ ಪಾತ್ರ ವಹಿಸಿರುವುದನ್ನು ಕಾಣಬಹುದು.

## ಸಾಹುಕಾರರು ಮತ್ತು ದೇಶೀಯ ಲೇವಾದೇವಿಗಾರರು

ಇಪ್ಪತ್ತನೆಯ ಶತಮಾನಕ್ಕೂ ಮೊದಲು, ಆಧುನಿಕ ಬ್ಯಾಂಕಿಂಗ್ ವ್ಯವಸ್ಥೆ ಕಾರ್ಯರೂಪಗೊಳ್ಳುವುದಕ್ಕಿಂತ ಮೊದಲು ಚಾಮರಾಜನಗರ ಜಿಲ್ಲೆಯೂ ಸೇರಿದಂತೆ ಮೈಸೂರು ಸಂಸ್ಥಾನದಲ್ಲಿ ವ್ಯವಸಾಯ, ಕೈಗಾರಿಕೆ, ವ್ಯಾಪಾರ ಮೊದಲಾದ ಚಟುವಟಿಕೆಗಳಿಗೆ ಸಾಲಿಯಾನ ಶೇ ೨೪ ರಿಂದ ೩೬ರ ಬಡ್ಡಿ–ಚಕ್ರ ಬಡ್ಡಿದರದಲ್ಲಿ ಅಲ್ಪಾವಧಿ

ಸಾಲವನ್ನು ರೈತರು, ಕಾರ್ಮಿಕರು ಮತ್ತು ಇತರ ವೃತ್ತಿಪರರು ಸ್ಥಳೀಯ ಸಾಹುಕಾರರು, ಶ್ರೀಮಂತ ಜಮೀನ್ದಾರರು, ಮತ್ತು ಲೇವಾದೇವಿಗಾರರಿಂದ ಪಡೆಯುವ ಪದ್ಧತಿ ರೂಢಿಯಲ್ಲಿದ್ದಿತು. ರಾಜ್ಯದ ಗ್ರಾಮೀಣ ಹಾಗೂ ನಗರ ಪ್ರದೇಶಗಳ ಜನರಿಗೆ ಅಗತ್ಯವಾಗಿ ಬೇಕಾಗುವ ಸಾಲವನ್ನು ಒದಗಿಸುವ ಯಾವುದೇ ಸಾಂಸ್ಥಿಕ ಹಣಕಾಸು ಸಂಸ್ಥೆಗಳು ಆಗಿನ್ನು ಸ್ಥಾಪನೆಗೊಂಡಿರಲಿಲ್ಲ. ಆಗಿನ ಕಾಲದಲ್ಲಿ ಯಾವುದೇ ಆಧಾರವಿಲ್ಲದೆ ನೀಡಲಾಗುತ್ತಿದ್ದ ಸಾಲಕ್ಕೆ 'ಮೈಸಾಲ' ಎಂದು ಕರೆಯಲಾಗುತ್ತಿತ್ತು. ಆಗಿನ ಕಾಲದಲ್ಲಿ ಜಿಲ್ಲೆಯ ಪ್ರತೀ ಗ್ರಾಮದ ಸಾಹುಕಾರರು ಹಣದ ರೂಪದಲ್ಲಿ ನೀಡಿದ ಸಾಲದ ತೀರುವಳಿಗೆ ಕೆಲವೊಮ್ಮೆ ದವಸಧಾನ್ಯ ಪಡಿತರ ಪದಾರ್ಥಗಳಲ್ಲದೇ, ವಸ್ತ್ರ ಮತ್ತು ಒಡವೆಗಳನ್ನು ಪಡೆಯುವ ಪದ್ಧತಿಯೂ ಸಹ ಜಾರಿಯಲ್ಲಿದ್ದಿತು. ಸಾಹುಕಾರರು ಸ್ಥಳೀಯ ವ್ಯಾಪಾರಸ್ಥರಾಗಿದ್ದರಿಂದ ಅವರನ್ನು ಬಣಜಿಗರು, ಶೆಟ್ಟರು, ವೈಶ್ಯರು, ನಕರ ಅಥವಾ ನಗರ್ತರು ಎಂದು ಕರೆಯಲಾಗುತ್ತಿದ್ದು, ಇವರು ಶೈವ, ವೈಷ್ಣವ ಮತ್ತು ಜೈನ ಮತಾವಲಂಬಿಗಳಾಗಿದ್ದರು. ಪಟ್ಟಣಗಳಲ್ಲಿ ವೈಶ್ಯರು ಒಡವೆ ಆಭರಣಗಳು, ಪಡಿತರ ಪದಾರ್ಥಗಳನ್ನು ಒತ್ತೆಯಾಗಿಟ್ಟುಕೊಂಡು ಸಾಲ ನೀಡುತ್ತಿದ್ದರು. ಜೊತೆಗೆ ಇವರು ಗಿರವಿ ಅಂಗಡಿಗಳನ್ನೂ ಸಹ ನಡೆಸುತ್ತಿದ್ದರು. ರೈತರು ಸಾಲವಾಗಿ ಪಡೆದ ಹಣವನ್ನು ಒಪ್ಪಂದದಂತೆ ಸುಗ್ಗಿಯ ನಂತರ ಕೃಷಿ ಉತ್ಪನ್ನಗಳನ್ನು ಸಾಹುಕಾರರಿಗೆ ಮಾರಾಟ ಮಾಡಿ ಸಾಲ ತೀರಿಸುವ ಪದ್ಧತಿಯು ಈಗಲೂ ಸಹ ಗ್ರಾಮಗಳಲ್ಲಿ ಕಾಣಬಹುದು. ರೈತರು ತಮ್ಮ ಅಗತ್ಯಗಳ ಪೂರೈಕೆಗಾಗಿ ಹಣವನ್ನು ಪಡೆಯಲು ಸ್ಥಳೀಯ ಸಾಹುಕಾರರೊಂದಿಗೆ ವಾಗ್ದಾನ ಪತ್ರ (ಪ್ರಾಮಿಸರಿನೋಟ್) ಮತ್ತು ವೈಯಕ್ತಿಕ ಜಾಮೀನಿನ ಮೇಲೆ ಅಲ್ಪಾವಧಿಗೆ ಕಡಿಮೆ ಮೊತ್ತದ ಹಣವನ್ನು ದುಬಾರಿ ಬಡ್ಡಿದರದಲ್ಲಿ ಸಾಲವಾಗಿ ಪಡೆಯುತ್ತಿದ್ದರು. ಸಾಹುಕಾರರು ಸಾಲಗಾರರ ಸ್ಥಿರಾಸ್ತಿ ಮತ್ತು ಇತರ ಬೆಲೆ ಬಾಳುವ ಸ್ವತ್ತು, ಒಡವೆಗಳನ್ನು ಆಧಾರವಾಗಿ ಪಡೆದು ಒಂದು ಅಥವಾ ಎರಡು ವರ್ಷಗಳ ಅವಧಿಗಷ್ಟೇ ಸಾಲವನ್ನು ನೀಡುತ್ತಿದ್ದರು. ಬಡ್ಡಿಯನ್ನು ಸಮಯಕ್ಕೆ ಸರಿಯಾಗಿ ನೀಡದಿದ್ದಲ್ಲಿ ಚಕ್ರಬಡ್ಡಿಯನ್ನು ಕೊಡಬೇಕಾಗುತ್ತಿದ್ದಿತು. ಸಾಲವನ್ನು ವಾಯಿದೆಯೊಳಗೆ ತೀರಿಸಲಾಗದ ಸಾಲಗಾರರು ತಾವು ಅಡವಿಟ್ಟ ಸ್ಥಿರ ಮತ್ತು ಚರ ವಸ್ತುಗಳನ್ನು ಕಳೆದುಕೊಳ್ಳಬೇಕಾಗಿದ್ದಿತು. ಹಿಂದಿನ ಸಾಲದ ಬಾಕಿಯನ್ನು ತೀರಿಸಲಾಗದ ಸುಸ್ತಿದಾರ ಸಾಲಗಾರರು ಸಾಲ ತೀರುವವರೆಗೂ ಸಾಹುಕಾರರ ಮನೆಯಲ್ಲಿ ಜೀತದಾಳಾಗಿ ದುಡಿಯಬೇಕಾಗುತ್ತಿತ್ತು. ಇಂತಹ ಶೋಷಣೆಗಳಿಂದ ಸಾಹುಕಾರರು ಮತ್ತು ಲೇವಾದೇವಿಗಾರರು ತಮ್ಮ ಸಂಪತ್ತನ್ನು ಮತ್ತಷ್ಟು ಹೆಚ್ಚಿಸಿಕೊಂಡು ಶ್ರೀಮಂತ ಜಮೀನ್ದಾರರಾಗಿದ್ದರೆ, ತಲೆಮಾರಿನಿಂದ ನಿರಂತರ ಸಾಲದ ಬವಣೆಯಲ್ಲೇ ನರಳುತ್ತಿದ್ದ ಸಾಲಗಾರರು ಇನ್ನಷ್ಟು ಬಡವರಾಗುವ ಶೋಚನೀಯ ಸ್ಥಿತಿಗೊಳಪಟ್ಟಿದ್ದರು.

## ಋಣಗ್ರಸ್ಥತೆ

ಚಾಮರಾಜನಗರ ಜಿಲ್ಲೆಯು ರಾಜ್ಯದ ಅತ್ಯಂತ ಹಿಂದುಳಿದ ಗಡಿ ಪ್ರದೇಶವಾಗಿದ್ದು, ಬೇಸಾಯವೇ ಪ್ರಧಾನ ಕಸುಬಾಗಿದ್ದು, ಅತಿ ಸಣ್ಣ ರೈತರು, ಕೃಷಿ ಕಾರ್ಮಿಕರು ಮತ್ತು ವಿವಿಧ ಕಸಬುದಾರರಲ್ಲಿ ಸಾಲದ ಹೊರೆ ಹೆಚ್ಚಿನ ಸಂಖ್ಯೆಯಲ್ಲಿ ಕಂಡು ಬಂದಿದೆ. ಜಿಲ್ಲೆಯಲ್ಲಿ ೧೯ರಿಂದ ೨೦ನೇ ಶತಮಾನದ ಪೂರ್ವಾರ್ಧ ಭಾಗದಲ್ಲಿದ್ದಿರಬಹುದಾದ ಋಣಗ್ರಸ್ತತೆಯ ಬಗ್ಗೆ ವಿವರವಾದ ಯಾವುದೇ ಅಧಿಕೃತ ಸಮೀಕ್ಷಾ ವರದಿಗಳು ಲಭ್ಯವಾಗದಿರುವುದರಿಂದ ಜಿಲ್ಲೆಯ ಆರ್ಥಿಕ ಸ್ಥಿತಿಗತಿ ಹಾಗೂ ಸಮಗ್ರ ಸಾಲ ವ್ಯವಸ್ಥೆಯ ಬಗ್ಗೆ ಸ್ಪಷ್ಟ ಚಿತ್ರ ದೊರಕುವುದು ದುರ್ಲಭವಾಗಿದೆ. ಋಣಗ್ರಸ್ತತೆ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿರುವುದಕ್ಕೆ ಹಲವಾರು ಕಾರಣಗಳಿವೆ. ಅವುಗಳೆಂದರೆ, ಅಧಿಕ ಸಂಖ್ಯೆಯಲ್ಲಿರುವ ಸಣ್ಣ ಭೂಹಿಡುವಳಿದಾರರು, ಕೃಷಿಕರು ಹಾಗು ಭೂರಹಿತ ಕಾರ್ಮಿಕರ ಕುಟುಂಬಗಳಲ್ಲಿ ಹೆಚ್ಚುತ್ತಿದ್ದ ಜನಸಂಖ್ಯೆ ಮತ್ತು ಕುಟುಂಬದ ಅವಲಂಬನೆ, ಬಡತನ, ನಿರಕ್ಷರತೆ, ಮೌಢ್ಯತೆ, ಮಳೆಯ ಅನಿಶ್ಚಿತತೆ, ನೆರೆಹಾವಳಿ, ಕ್ಷಾಮ, ಬರಗಾಲ; ಪ್ಲೇಗು, ಕಾಲರಾಗಳಂತಹ ಸಾಂಕ್ರಾಮಿಕ ರೋಗಗಳು, ಜನ ಮತ್ತು ಜಾನುವಾರುಗಳ ಸಾವು; ಮದುವೆ, ಹಬ್ಬ, ತೇರು, ಜಾತ್ರೆ ಮೊದಲಾದ

ಧಾರ್ಮಿಕ ಕಾರ್ಯಗಳಿಗೆ ಹೆಚ್ಚುತ್ತಿದ್ದ ದುಂದುವೆಚ್ಚ, ಹಳೆಯ ಸಾಲದ ಹೊರೆ, ಅದರ ಬಡ್ಡಿ ಮತ್ತು ಚಕ್ರಬಡ್ಡಿಗಳ ಹೊರೆ ಮೊದಲಾದ ಕಾರಣಗಳಿಂದ ಋಣಗ್ರಸ್ತತೆ ವರ್ಷದಿಂದ ವರ್ಷಕ್ಕೆ ನಿರಂತರವಾಗಿ ಹೆಚ್ಚುತ್ತಿದ್ದಿತು. ಅಲ್ಲದೇ ಕೈಗಾರಿಕೆಗಳ ಪೈಪೋಟಿಯಿಂದ ನಶಿಸುತ್ತಿದ್ದ ಗ್ರಾಮೀಣ ಕರಕುಶಲ ವೃತ್ತಿಗಳು ಸಹ ಸಾಲದ ಹೆಚ್ಚಳಕ್ಕೆ ಕಾರಣಗಳಾಗಿದ್ದವು.

೧೯೬೧ರ ಭಾರತದ ಜನಗಣತಿಯಿಂದ ಲಭ್ಯವಾದ ಅಂಕಿಅಂಶಗಳ ಪ್ರಕಾರ ಚಾಮರಾಜನಗರ ಜಿಲ್ಲೆಗೆ ಒಳಪಟ್ಟ ಗ್ರಾಮೀಣ ಪ್ರದೇಶಗಳಲ್ಲಿ ಮಾಸಿಕ ಆದಾಯ ಕುಟುಂಬದ ಋಣಗ್ರಸ್ತತೆಯು ₹ ೨೫ ಕ್ಕಿಂತ ಕಡಿಮೆ ಮಾಸಿಕ ಆದಾಯವುಳ್ಳ ಕುಟುಂಬದ ಸರಾಸರಿ ವಾರ್ಷಿಕ ಸಾಲದ ಪ್ರಮಾಣ ₹ ೧೮೦ ಮತ್ತು ₹ ೧೦೦ ಗಳ ಮಾಸಿಕ ಆದಾಯವುಳ್ಳ ಕುಟುಂಬದ ಸರಾಸರಿ ಸಾಲದ ಪ್ರಮಾಣ ₹ ೧,೦೦೦ ಇದ್ದಿತು. ಈ ಸಾಲಗಾರರೆಲ್ಲರೂ ತಮ್ಮ ಹಳ್ಳಿಯ ಸಾಹುಕಾರರಿಂದ ದುಬಾರಿ ದರದಲ್ಲಿ ಅಲ್ಪಾವಧಿ ಸಾಲ ಪಡೆದವರಾಗಿದ್ದರು.

### ತಕಾವಿ ಸಾಲ ಕಾಯಿದೆ

೧೮ನೇ ಶತಮಾನದಲ್ಲಿ ಭಾರತವು ಬ್ರಿಟಿಷರ ಆಡಳಿತಕ್ಕೆ ಒಳಪಟ್ಟ ಸಂದರ್ಭದಲ್ಲಿ ಮೈಸೂರು ಸಂಸ್ಥಾನದಲ್ಲಿ ಕಂಡು ಬಂದ ಮಳೆಯ ತೀವ್ರ ಅಭಾವದಿಂದುಂಟಾದ ಕೃಷಿ ಉತ್ಪನ್ನದ ಅನಿಶ್ಚತತೆ, ನೆರೆಹಾವಳಿ, ಕ್ಷಾಮ ಮತ್ತು ಬರಗಾಲಗಳಿಂದುಂಟಾದ ಜಾನುವಾರುಗಳ ಅಪಾರ ಸಾವು, ರೈತರ ಸಾಲದ ಹೊರೆ, ಕಡುಬಡತನ ಮೊದಲಾದ ಸಮಸ್ಯೆಗಳಿಗೆ ಪರಿಹಾರ ಕ್ರಮವಾಗಿ ೧೮೬೬ರಲ್ಲಿ ಬ್ರಿಟಿಷ್ ಸರ್ಕಾರವು ತಕಾವಿ ಸಾಲ ಕಾಯಿದೆಯನ್ನು ಜಾರಿಗೊಳಿಸಿತು. ಈ ಕಾಯಿದೆಯನ್ವಯ "ದಕ್ಷಿಣ ಪ್ರಾಂತ ರೈತರ ಸಾಲ ಪರಿಹಾರ ಕಾಯಿದೆ", "ಭೂ ಸುಧಾರಣೆ ಕಾಯಿದೆ" ಮತ್ತು ಮೈಸೂರು ಕೃಷಿ ಅಭಿವೃದ್ಧಿ ಕಾಯಿದೆಗಳನ್ನು ಜಾರಿಗೊಳಿಸಲಾಯಿತು. ಈ ಎಲ್ಲಾ ಕಾಯಿದೆಗಳನ್ನು ಇಂದಿನ ಚಾಮರಾಜನಗರ ಜಿಲ್ಲೆಯನ್ನೊಳಗೊಂಡಂತೆ ಇಡೀ ಮೈಸೂರು ಸಂಸ್ಥಾನಕ್ಕೆ ಅನ್ವಯಗೊಳಿಸಲಾಯಿತು. ಆರ್ಥಿಕ ಸಂಕಷ್ಟಕ್ಕೊಳಗಾಗಿ ಸಾಲಗಾರರಾಗಿದ್ದ ರೈತರ ಅಗಾಧ ಪ್ರಮಾಣದ ಸಾಲವನ್ನು ಸಂಪೂರ್ಣವಾಗಿ ತೀರಿಸುವಷ್ಟು ಪ್ರಮಾಣದ ಹಣ ಸರಕಾರದಿಂದ ಬಿಡುಗಡೆಯಾಗದ ಕಾರಣ ಸಾಲದ ಹೊರೆ ಕಡಿಮೆಯಾಗಲಿಲ್ಲ. ಮುಂದಿನ ದಶಕಗಳಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಸಂಘಟಿತ ವಲಯದ ಸಾಂಸ್ಥಿಕ ಹಣಕಾಸು ಸಂಸ್ಥೆಗಳು ಮತ್ತು ಬ್ಯಾಂಕುಗಳು ಸ್ಥಾಪನೆಯಾಗುವವರೆಗೂ ರೈತರ ಸಾಲದ ಹೊರೆ ಮತ್ತು ರೈತರ ಸ್ಥಿತಿಗತಿಗಳು ತುಂಬಾ ಶೋಚನೀಯವಾಗಿದ್ದಿತು.

೧೯೪೭ರಲ್ಲಿ ಭಾರತ ಸ್ವಾತಂತ್ರ್ಯ ಪಡೆದ ನಂತರ ಇಂದಿನ ಚಾಮರಾಜನಗರ ಜಿಲ್ಲೆಯ ನಾಲ್ಕು ತಾಲೂಕುಗಳಿಗೆ ತಕಾವಿ ಸಾಲವನ್ನು ಮಂಜೂರು ಮಾಡುವ ಅಧಿನಿಯಮವನ್ನು ಸರ್ಕಾರವು ಮುಂದುವರಿಸಿತು. ೧೯೫೧ರಲ್ಲಿ ತಕಾವಿ ಸಾಲವನ್ನು ಬಡತನದಲ್ಲಿರುವ ರೈತರು ಎತ್ತು, ಗಾಡಿ, ಹಸು, ಎಮ್ಮೆ, ಕುರಿ, ಕೋಳಿ, ಮುಂತಾದ ಜಾನುವಾರುಗಳನ್ನು ಖರೀದಿಸಿ ಅವುಗಳಿಂದ ತಮ್ಮ ಉಪಜೀವನ ನಡೆಸಲು ಅನುಕೂಲವಾಗುವಂತೆ ಒಟ್ಟು ೧೯ ಲಕ್ಷ ರೂಪಾಯಿಗಳಷ್ಟು ಸಾಲ ಮಂಜೂರು ಮಾಡಲಾಗಿತ್ತು. ಈ ಸಾಲದ ಒಟ್ಟು ಮೊತ್ತದಲ್ಲಿ ಚಾಮರಾಜನಗರ, ಕೊಳ್ಳೇಗಾಲ, ಗುಂಡ್ಲುಪೇಟೆ ಮತ್ತು ಯಳಂದೂರು ತಾಲೂಕುಗಳಿಗೆ ಕ್ರಮವಾಗಿ ₹ ೧೦.೪೮ ಲಕ್ಷಗಳು, ₹ ೨.೧೮ ಲಕ್ಷಗಳು, ₹ ೧.೨೦ ಲಕ್ಷಗಳು ಮತ್ತು ₹ ೬೦,೦೦೦ಗಳಷ್ಟು ಸಾಲ ನೀಡಿತ್ತು. ೧೯೮೩-೮೪ರಲ್ಲಿ ಸರ್ಕಾರವು ಜಿಲ್ಲೆಯ ನಾಲ್ಕು ತಾಲೂಕುಗಳ ರೈತರು ತಕಾವಿ ಸಾಲದ ಬಾಕಿ ಮೊತ್ತವನ್ನು ಮರುಪಾವತಿ ಮಾಡದಂತೆ ಪೂರ್ತಿಯಾಗಿ ವಿನಾಯಿತಿಗೊಳಿಸಿತು.

ಚಾಮರಾಜನಗರ ಜಿಲ್ಲೆಯಲ್ಲಿನ ತಕಾವಿ ಸಾಲ ಪರಿಹಾರ ಕ್ರಮದಂತೆ ಕಡಿಮೆ ಭೂ ಹಿಡುವಳಿ ಹೊಂದಿದ ಬಡ ರೈತರ ಭೂಕಂದಾಯವನ್ನು ರದ್ದು ಮಾಡುವುದರ ಜೊತೆಗೆ ರೈತರು ಮತ್ತು ಭೂರಹಿತ ಕಾರ್ಮಿಕರಿಗೆ ಅಮಲ್ದಾರರು ಪ್ರತಿ ಕುಟುಂಬಕ್ಕೆ ₹ ೨೫೦ ಗಳಷ್ಟು, ಅಸಿಸ್ಟೆಂಟ್ ಕಮಿಷನರರು ₹ ೫೦೦ ಗಳಷ್ಟು ಮತ್ತು ಜಿಲ್ಲಾಧಿಕಾರಿಗಳು ₹ ೧,೦೦೦ ಗಳಷ್ಟು ಪರಿಹಾರ ನೀಡಲು ಸಾಧ್ಯವಾಗುವಂತೆ ಮೈಸೂರು ಸರಕಾರವು ತಕಾವಿ ಸಾಲ ಕಾನೂನನ್ನು ಜಾರಿಗೊಳಿಸಿತು. ರೈತರಿಗೆ ನೀಡಿದ ದೀರ್ಘಾವಧಿ ಸಾಲದ ಅವಧಿಯನ್ನು ೧೦ ವರ್ಷಗಳಿಂದ ೨೦ ವರ್ಷಗಳವರೆಗೆ ವಿಸ್ತರಿಸಿತು. ಭೂ ಕಂದಾಯ ಸಂಹಿತೆ ಕಾಯಿದೆಯು ಸಾಲದ ತೀರುವಳಿ ಅವಧಿಯನ್ನು ೧೦ ವರ್ಷದವರೆಗೆ ವಿಸ್ತರಿಸಿತು. ತಕಾವಿ ಸಾಲದ ಯೋಜನೆಯಲ್ಲಿ ಜಿಲ್ಲೆಯ ಬಡ ರೈತರಿಗೆ ಬಾವಿಗಳನ್ನು ತೋಡಲು ಪ್ರತಿ ಬಾವಿಗೆ ₹ ೫೦೦ಗಳಷ್ಟು ಬರಪರಿಹಾರವನ್ನು ನೀಡಿತು. ಜಿಲ್ಲೆಯಲ್ಲಿನ ಅತ್ಯಂತ ಬಡತನದಲ್ಲಿರುವವರಿಗೆ ಜೀವನ ನಿರ್ವಹಣೆಗಾಗಿ ಪ್ರತಿ ಕುಟುಂಬಕ್ಕೆ ₹ ೧೦೦೦ ಗಳಷ್ಟು ಪರಿಹಾರವನ್ನು ಸರ್ಕಾರವು ನೀಡುತ್ತಿದ್ದು, ಅಂದಿನ ಮೈಸೂರು ಜಿಲ್ಲೆಯ ಇಂದಿನ ಚಾಮರಾಜನಗರ ಜಿಲ್ಲಾ ಪ್ರದೇಶಕ್ಕೆ ಇದು ಅನ್ವಯಿಸಿತ್ತು.

ಕೊಳ್ಳೇಗಾಲ ತಾಲೂಕು ಮೈಸೂರು ಪ್ರಾಂತ್ಯಕ್ಕೆ ಸೇರುವುದಕ್ಕೆ ಮುಂಚೆ ಆಗಿನ ಮದ್ರಾಸ್ ಪ್ರಾಂತದ ಆಡಳಿತಕ್ಕೆ ಒಳಪಟ್ಟಿದ್ದಿತು. ೧೮೮೫ರಲ್ಲಿ ಕೊಳ್ಳೇಗಾಲ ತಾಲೂಕಿಗೆ ಅನ್ವಯಿಸುವಂತೆ ಸಾಲದ ಮೇಲಿನ ಬಡ್ಡಿದರವನ್ನು ಶೇ.೧೨ರಷ್ಟು ಮಾತ್ರ ವಿಧಿಸಬೇಕೆಂಬ ಕಾನೂನನ್ನು ಮದ್ರಾಸ್ ಪ್ರಾಂತೀಯ ಸರ್ಕಾರ ಜಾರಿಗೊಳಿಸಿತು. ಮುಂದೆ, ೧೯೩೫ರಲ್ಲಿ ಸಾಲ ಪರಿಹಾರ ಕಾಯಿದೆಯನ್ನು ಜಾರಿಗೊಳಿಸಿ, ಸಾಲದ ಮೊತ್ತ ₹ ೫೦೦ ಗಳಿಗಿಂತ ಕಡಿಮೆ ಇರುವ ರೈತರ ಸಾಲವನ್ನು ತೀರಿಸಲು ಸೂಕ್ತ ಕ್ರಮ ಕೈಗೊಂಡಿತು. ಅಲ್ಲದೆ, ೧೯೩೫ರಲ್ಲಿ ಮದ್ರಾಸ್ ಸರ್ಕಾರವು ಋಣ ಸಂಧಾನ ಪರಿಹಾರ ಕಾಯಿದೆಯನ್ನೂ ಜಾರಿಗೊಳಿಸಿತು. ಈ ಕಾಯಿದೆಯನ್ವಯ ಶೇ. ೯ ರಷ್ಟು ಬಡ್ಡಿದರವನ್ನು ಸ್ವತ್ತುಗಳ ಆಧಾರದ ಮೇಲೂ ಮತ್ತು ಶೇ. ೧೫ರಷ್ಟು ಬಡ್ಡಿದರವನ್ನು ಆಧಾರ ರಹಿತ ಸಾಲದ ಮೇಲೂ ವಿಧಿಸುವ ಕಾಯಿದೆಯನ್ನು ಜಾರಿಗೊಳಿಸಿತು. ೧೯೩೮ರಲ್ಲಿ ವ್ಯವಸಾಯಗಾರರ ಋಣ ಪರಿಹಾರ ಕಾಯಿದೆಯನ್ನು ಅಧಿನಿಯಮಿತಗೊಳಿಸಿತು. ನಂತರ ಕೊಳ್ಳೇಗಾಲ ತಾಲೂಕು ಮೈಸೂರು ಜಿಲ್ಲೆಗೆ ಸೇರ್ಪಡೆಯಾದಾಗ ಕರ್ನಾಟಕ ಸರ್ಕಾರವು ಇಂದಿನ ಚಾಮರಾಜನಗರ ಜಿಲ್ಲೆಯ ನಾಲ್ಕು ತಾಲೂಕುಗಳೂ ಮತ್ತು ಮೈಸೂರು ಜಿಲ್ಲೆಯ ಇತರ ತಾಲೂಕುಗಳಿಗೆ ಅನ್ವಯಿಸುವಂತೆ ಋಣ ಪರಿಹಾರ ಕಾಯಿದೆಯನ್ನು ಜಾರಿಗೊಳಿಸಿತು.

## ಲೇವಾದೇವಿ ನಿಯಂತ್ರಣ

ದುಬಾರಿ ಬಡ್ಡಿ ತೆತ್ತು ಆರ್ಥಿಕ ಸಂಕಷ್ಟಕ್ಕೆ ಗುರಿಯಾಗುತ್ತಿದ್ದ ಸಾಲಗಾರರ ಶೋಚನೀಯ ಸ್ಥಿತಿ ಮತ್ತು ಸಾಹುಕಾರರು ಸಾಲಗಾರರಿಗೆ ಮಾಡುತ್ತಿದ್ದ ಮೋಸ, ವಂಚನೆ ಮತ್ತು ಶೋಷಣೆಗಳಿಂದ ಋಣಗ್ರಸ್ಥರಾಗಿದ್ದ ರೈತರ ಸಂಕಷ್ಟಗಳು ಸರ್ಕಾರದ ಗಮನ ಸೆಳೆಯುವಂತಾಯಿತು. ಈ ಅನಿಷ್ಟ ಪದ್ಧತಿಯನ್ನು ತೊಡೆದು ಹಾಕುವಂತೆ ಮೈಸೂರು ಸಂಸ್ಥಾನದ ಅಂದಿನ ಪ್ರಜಾಪ್ರತಿನಿಧಿಗಳು ಸರ್ಕಾರವನ್ನು ಒತ್ತಾಯಿಸತೊಡಗಿದರು. ಸಾಲದ ಹೊರೆಯಿಂದ ಮನೆಮಾರು ಕಳೆದುಕೊಂಡ ಸಾಲಗಾರ ರೈತರು ಕೂಲಿ ಕೆಲಸಗಾರರಾಗಿ, ಜೀತದಾಳುಗಳಾಗಿ ಶ್ರೀಮಂತ ಜಮೀನುದಾರರ ಮನೆಯಲ್ಲಿ ದುಡಿಯುವಂತಾದರು. ಸುಸ್ತಿದಾರ ಸಾಲಗಾರರಿಂದ ಜಮೀನನ್ನು ವಶಪಡಿಸಿಕೊಂಡ ಸಾಹುಕಾರರು ಶ್ರೀಮಂತ ಜಮೀನ್ದಾರರೆನಿಸಿಕೊಂಡರು. ಸಾಲಗಾರ ರೈತರ ಶೋಚನೀಯ ಸ್ಥಿತಿಯನ್ನು ಗಮನಿಸಿದ ಸರ್ಕಾರ ಅಗತ್ಯ ಕಾಯಿದೆಗಳ ಮೂಲಕ ಗ್ರಾಮೀಣ ಋಣಗ್ರಸ್ತತೆಯನ್ನು ನಿಯಂತ್ರಿಸಲು ಮೇಲಿಂದ ಮೇಲೆ ಪ್ರಯತ್ನಿಸತೊಡಗಿತು.

ಕೇಂದ್ರ ಸರ್ಕಾರ ೧೮೮೦ರಲ್ಲಿ ಭೂ ಸುಧಾರಣಾ ಸಾಲ ಕಾನೂನನ್ನು ಜಾರಿಗೊಳಿಸಿತು. ಇದರಿಂದಾಗಿ ಕೃಷಿ ಚಟುವಟಿಕೆಗಳ ಪ್ರಗತಿಗೆ ರೈತರು ಸರಳ ನಿಯಮಗಳಡಿಯಲ್ಲಿ ಸಾಲವನ್ನು ಪಡೆಯಲು ಸಾಧ್ಯವಾಯಿತು. ರೈತರ ಸಾಲ ಪರಿಹಾರಕ್ಕಾಗಿ ಕೈಗೊಳ್ಳಲಾದ ಸರ್ಕಾರದ ಮುಂದಿನ ಹಲವಾರುಕ್ರಮಗಳಿಗೆ ಇದು ಪ್ರೇರಣೆಯಾಯಿತು. ಸಣ್ಣ ಮತ್ತು ಬಡ ರೈತರಿಗೆ ಸಾಲ ಒದಗಿಸುವ ಉದ್ದೇಶದಿಂದ ೧೮೯೪ರಲ್ಲಿ ಅಂದಿನ ದಿವಾನರು ಕೃಷಿ ಬ್ಯಾಂಕುಗಳ ಸ್ಥಾಪನೆಗೆ ಆದೇಶಿಸಿದರು. ೧೯೦೧ರ ವೇಳೆಗೆ ಆಗಿನ ಮೈಸೂರು ಸಂಸ್ಥಾನದಲ್ಲಿ ಇಂತಹ ಹಲವಾರು ಕೃಷಿ ಬ್ಯಾಂಕುಗಳಿದ್ದರೂ, ಅವು ಸರಿಯಾಗಿ ಕಾರ್ಯನಿರ್ವಹಿಸಲಿಲ್ಲ.

೧೯೦೫ರಲ್ಲಿ ಸರ್ಕಾರ ಜಾರಿಗೆ ತಂದ ಸಹಕಾರಿ ಸಂಘಗಳ ಕಾಯ್ದೆ (ರೆಗ್ಯೂಲೇಷನ್ ೩) ಯಿಂದಾಗಿ ರಾಜ್ಯದಲ್ಲಿ ಸಹಕಾರಿ ಆಂದೋಲನಕ್ಕೆ ಚಾಲನೆ ದೊರೆಯಿತು. ಇದರೊಂದಿಗೆ ಆಧುನಿಕ ಬ್ಯಾಂಕಿಂಗ್ ವ್ಯವಸ್ಥೆಯ ಸ್ಥಾಪನೆಗೆ ವ್ಯವಸ್ಥಿತ ಪ್ರಯತ್ನ ಆರಂಭವಾಯಿತು. ಈ ರೀತಿಯ ವ್ಯವಸ್ಥಿತ ಸಾಲಸೌಲಭ್ಯ ನೀಡುವ ಯತ್ನ ಆರಂಭಗೊಂಡ ನಂತರವೂ ಲೇವಾದೇವಿಗಾರರ ಹಾವಳಿ ಕಡಿಮೆಯಾಗಲಿಲ್ಲ. ಸಹಕಾರಿ ಬ್ಯಾಂಕುಗಳು ಕೆಲವು ಷರತ್ತುಗಳ ಮೇಲ ಸಾಲ ನೀಡುತ್ತಿದ್ದವಾದರೂ ಸಾಲ ನೀಡುವಲ್ಲಿ ಅವು ಅನುಸರಿಸುತ್ತಿದ್ದ ವಿಧಿ ವಿಧಾನಗಳು ಮತ್ತು ಆಗುತ್ತಿದ್ದ ವಿಳಂಬಗಳು ಹಣದ ತುರ್ತು ಅಗತ್ಯವಿದ್ದವರನ್ನು ಪ್ರಾಮಸರಿ ಪತ್ರಗಳ ಆಧಾರದ ಮೇಲೆ ಸರಳವಾಗಿ ಸಾಲ ನೀಡುತ್ತಿದ್ದ ಲೇವಾದೇವಿ ವ್ಯವಹಾರಸ್ಥರಿಂದಲೇ ದುಬಾರಿ ಬಡ್ಡಿಯಲ್ಲಿ ಸ್ವತ್ತುಗಳ ಆಧಾರದ ಮೇಲೆ ಸಾಲಪಡೆಯುತ್ತಿದ್ದುದು ಸರ್ವೇಸಾಮಾನ್ಯವಾಗಿದ್ದಿತು. ಇಂತಹ ವ್ಯವಸ್ಥಿತ ಸಾಲ ಸೌಲಭ್ಯ ನೀಡುವ ಖಾಸಗಿ ಹಣಕಾಸು ಸಂಸ್ಥೆಗಳು, ಲೇವಾದೇವಿ ಹಾಗೂ ದೇಶೀಯ ಬ್ಯಾಂಕರರು ಜಿಲ್ಲಾ ಕೇಂದ್ರ ಮತ್ತು ಪಟ್ಟಣಗಳಲ್ಲಿ ನೆಲಸಿದ್ದವು. ಆದರೆ ಗ್ರಾಮೀಣ ಪ್ರದೇಶದಲ್ಲಿ ರೈತರು ತಮ್ಮ ತುರ್ತು ಹಣದ ಅಗತ್ಯಕ್ಕೆ ಹೆಚ್ಚಾಗಿ ಹಳ್ಳಿಯ ಸಾಹುಕಾರರನ್ನೇ ಆಶ್ರಯಿಸಿದ್ದರು.

ಮೈಸೂರು ಸರ್ಕಾರ ಸಾಮಾನ್ಯ ಸಾಲ ಪರಿಹಾರ ಕ್ರಮಗಳನ್ನು ಜಾರಿಗೊಳಿಸುವುದರ ಜೊತೆಗೆ ಈ ಕೆಳಗಿನ ಸಾಲ ನಿಯಂತ್ರಣ ವಿಧಾನಗಳನ್ನೂ ಕಾರ್ಯರೂಪಕ್ಕೆ ತಂದಿತು. ಅವುಗಳೆಂದರೆ,

**೧೯೨೮ರ ಮೈಸೂರು ದುಬಾರಿ ಬಡ್ಡಿ ಸಾಲ ನಿಯಂತ್ರಣ:** ದುಬಾರಿ ಬಡ್ಡಿಗೆ ಸಾಲ ಕೊಡುವ ಸಾಹುಕಾರರ ಹಿಂಸೆ ಮತ್ತು ಶೋಷಣೆಗಳಿಂದ ಬಡವರನ್ನು ಮುಕ್ತಗೊಳಿಸುವ ಗುರಿಯಲ್ಲಿ ನ್ಯಾಯಾಲಯವು ಸಾಲಗಾರರ ಮತ್ತು ಸಾಲಿಗಾರ ನಡುವೆ ಮಧ್ಯಸ್ಥಿಗೆ ವಹಿಸುವ ಅಧಿಕಾರವನ್ನು ನೀಡುವುದರ ಮೂಲಕ ನ್ಯಾಯ ಸಮ್ಮತವಲ್ಲದ ದುಬಾರಿ ಬಡ್ಡಿಯ ಹೊರೆಯಿಂದ ಮುಕ್ತಗೊಳಿಸುವುದಲ್ಲದೇ, ಸಾಲಗಾರರಿಂದ ಒತ್ತೆಯಾಗಿಟ್ಟುಕೊಂಡಿದ್ದ ಚರ ಮತ್ತು ಸ್ಥಿರ ಆಸ್ತಿಗಳ ಹೊಣೆಗಾರಿಕೆಯಿಂದಲೂ ಸಹ ಮುಕ್ತಗೊಳಿಸಿ, ಸಾಲಗಾರರಿಗೆ ಪರಿಹಾರ ನೀಡುವ ಮತ್ತು ಅವರನ್ನು ಋಣಮುಕ್ತರನ್ನಾಗಿ ಮಾಡುವ ಸಾಲ ನಿಯಂತ್ರಣ ಕಾಯಿದೆಯನ್ನು ಜಾರಿಗೊಳಿಸಿತ್ತು.

**೧೯೨೮ರ ಮೈಸೂರು ಕೃಷಿಕರ ಸಾಲ ಪರಿಹಾರ ಯೋಜನೆ:** ಈ ಕಾಯಿದೆಯ ಪ್ರಕಾರ ರೈತ ಸಾಲಗಾರರ ವಾರ್ಷಿಕ ವರಮಾನ ₹ ೧೦೦೦ಗಳಿಗಿಂತ ಕಡಿಮೆ ಇದ್ದಾಗ, ಅಂತಹ ರೈತರಿಗೆ ಪರಿಹಾರವನ್ನು ಸರ್ಕಾರವು ನೀಡಿತು. ಮೇಲಾಗಿ ಈ ಕಾಯಿದೆ ಪ್ರಕಾರ ಸ್ಥಿರ ಸ್ವತ್ತುಗಳಾದ ಜಮೀನು ಮತ್ತು ಮನೆಯನ್ನು ಸಾಲಕ್ಕಾಗಿ ಅಡಮಾನವಾಗಿಡುವುದನ್ನು ಮುಕ್ತಗೊಳಿಸಿತು. ಇಂತಹ ಸ್ಥಿರ ಸ್ವತ್ತುಗಳನ್ನು ಮುಟ್ಟುಗೋಲು ಹಾಕಿಕೊಳ್ಳಲು ಇಲ್ಲವೇ ಮಾರಾಟ ಅಥವಾ ಪರಭಾರೆ ಮಾಡಲಾಗದ ಶಾಸನಬದ್ಧವಾದ ಕಾನೂನನ್ನು ಜಾರಿಗೊಳಿಸಿತು. ಆಧಾರ ಮತ್ತು ಆಧಾರರಹಿತ ಸಾಲಗಳಿಗೆ ಒತ್ತೆ ಇಟ್ಟ ಪಡಿ ಪದಾರ್ಥಗಳನ್ನು ಜಪ್ತಿ ಮಾಡದಂತೆ ಮತ್ತು

ಚರ ಸ್ವತ್ತುಗಳನ್ನು ಸುಸ್ತಿದಾರ ಸಾಲಗಾರನಿಂದ ಸ್ವಾಧೀನಪಡಿಸಿಕೊಳ್ಳದಂತೆ, ಮಾರಾಟವಾಗಲಿ ಅಥವಾ ಪರಭಾರೆಯಾಗಲಿ ಮಾಡದಂತೆ ಶಾಸನಬದ್ಧವಾದ ಕಾಯಿದೆಯನ್ನು ಜಾರಿಗೊಳಿಸಿತು. ಅಲ್ಲದೆ, ಸರ್ಕಾರವು ನಿಗದಿಪಡಿಸಿದ ಬಡ್ಡಿದರದಲ್ಲಿ ಅಸಲನ್ನು ಎಂಟು ವರ್ಷಗಳ ಅವಧಿಯೊಳಗೆ ಕಂತುಗಳ ಮೂಲಕ ಮರುಪಾವತಿ ಮಾಡುವಂತೆ ನ್ಯಾಯಾಲಯವು ತೀರ್ಪು ನೀಡಿದೆ. ಇಂತಹ ಪರಿಹಾರಗಳನ್ನು ೧೯೩೪ರಲ್ಲಿ ಚಾಮರಾಜನಗರ ಜಿಲ್ಲೆಗೂ ಸಹ ಅನ್ವಯಿಸುವಂತೆ ಸರ್ಕಾರವು ಜಾರಿಗೊಳಿಸಿದೆ.

**೧೯೩೭ರ ಋಣ ಸಂಧಾನ ಕಾಯಿದೆ:** ಈ ಕಾಯಿದೆಯ ಪ್ರಕಾರ ಸರ್ಕಾರವು ಸಾಲಿಗರು ಮತ್ತು ಸಾಲಗಾರರಲ್ಲಿ ಪರಸ್ಪರ ಮೈತ್ರೀ ಪೂರ್ಣ ಸಮ್ಮತ ಏರ್ಪಡುವಂತೆ ಸಂಧಾನ ಮಂಡಳಿಯನ್ನು ಸ್ಥಾಪಿಸಿದೆ. ಈ ಮಂಡಳಿಯು ಕೃಷಿ ಸಾಲವನ್ನು ಪರಸ್ಪರ ಒಮ್ಮತದಿಂದ ಬಗೆಹರಿಸಲು ಪ್ರಯತ್ನಿಸುತ್ತದೆ. ೧೯೩೭ರ ಕಾಯಿದೆಯ ಪ್ರಕಾರ ಸಾಲಗಾರರಿಗೆ ಸಾಲ ನೀಡಿದ ಬಗ್ಗೆ ಸಾಲಿಗರು ಸರ್ಕಾರವು ಜಾರಿಗೆ ತಂದ ಋಣ ಪರಿಹಾರ ಕಾಯಿದೆಯ ಪ್ರಕಾರ ಪ್ರತಿಯೊಂದು ಸಾಲದ ಅಸಲು ಮತ್ತು ಬಡ್ಡಿ ವಿವರಗಳನ್ನು ದಾಖಲಿಸುವುದರ ಜೊತೆಗೆ ಸಾಲಗಾರರಿಗೆ ಪರಿಚಯವಿರುವ ಇಬ್ಬರು ವಿಶ್ವಾಸಾರ್ಹತೆಯುಳ್ಳ ವ್ಯಕ್ತಿಗಳ ಸಾಕ್ಷಿಯೊಂದಿಗೆ ವಾಗ್ದಾನ ಪತ್ರದ ಒಂದು ಪ್ರತಿಯನ್ನೂ ಸಾಲಗಾರನಿಗೆ ನೀಡಬೇಕು. ಈ ಪತ್ರದಲ್ಲಿ ಸಾಲಗಾರನು ಆಗಾಗ್ಗೆ ಸಂದಾಯ ಮಾಡಿದ ಬಡ್ಡಿಗಳ ಕಂತನ್ನು ಷರಾದಲ್ಲಿ ಬರೆದುಕೊಡಬೇಕು. ಅಲ್ಲದೆ ಲೇವಾದೇವಿ ವ್ಯವಹಾರಗಳು ಸರ್ಕಾರದ ಋಣ ಪರಿಹಾರ ಕಾಯಿದೆಯನ್ವಯ ಶುದ್ಧ ಹಾಗೂ ಕ್ರಮಬದ್ಧವಾಗಿರಬೇಕು. ಸಾಲಗಳ ವಿವರಗಳ ಬಗ್ಗೆ ಅಂದರೆ ಅದರ ಅಸಲು ಮತ್ತು ಬಡ್ಡಿ ಮೊತ್ತಗಳ ವಿವರಗಳನ್ನು ಸಾಲಗಾರರು ಕೇಳಿದ ಕೂಡಲೇ ವಿಶ್ವಾಸಪೂರ್ವಕವಾಗಿ ಒಪ್ಪಿಸಬೇಕು. ಸಾಲಗಾರನು ಕಾಯಿದೆಯನ್ವಯ ಸಾಲ ತೀರುವಳಿಯಾದ ತಕ್ಷಣ ಸಾಲಿಗನು ಸದರಿ ಸಾಲಗಾರನಿಗೆ ಅಂತಿಮ ಸಾಲ ತೀರುವಳಿ ಪತ್ರವನ್ನು ಸಹ ನೀಡಬೇಕೆಂದು ಕಾಯಿದೆ ತಿಳಿಸುತ್ತದೆ. ೧೯೩೯ರ ಮೈಸೂರು ಸಾಲ ನೀಡುವವರ ಅಧಿನಿಯಮವು ಸಾಲಗಳ ಮೇಲಿನ ಬಡ್ಡಿ ದರಗಳ ಆಧಾರದ ಸಾಲಗಳಿಗೆ ಶೇ. ೯ರಷ್ಟು ಮತ್ತು ಆಧಾರರಹಿತ ಸಾಲಿಗೆ ಶೇ. ೧೨ರಷ್ಟು ವಿಧಿಸಬೇಕೆಂದು ನಿಗಿದಿಪಡಿಸಿದೆ.

ಲೇವಾದೇವಿ ವ್ಯವಹಾರವನ್ನು ನಿಯಂತ್ರಿಸಲು ಇತರ ರಾಜ್ಯಗಳಲ್ಲಿ ಜಾರಿಯಲ್ಲಿದ್ದ ನಿಯಂತ್ರಣ ಕ್ರಮಗಳನ್ನು ಪರಿಶೀಲಿಸಿ, ಅದರಂತೆ ಸರ್ಕಾರ ಲೇವಾದೇವಿಗಾರರ ನೋಂದಣಿ ಮತ್ತು ಪರವಾನಗಿ ಪದ್ಧತಿಯೇ ಲೇವಾದೇವಿ ವ್ಯವಹಾರದ ನಿಯಂತ್ರಣಕ್ಕೆ ಸೂಕ್ತ ಕ್ರಮವೆಂದು ಭಾವಿಸಿ, ೧೯೩೯ರಲ್ಲಿ ಮೈಸೂರು ಲೇವಾದೇವಿಗಾರರ ನಿಯಂತ್ರಣ ಕಾಯಿದೆಯನ್ನು ಜಾರಿಗೊಳಿಸಿತು. ಈ ಕಾಯಿದೆಯನ್ವಯ ಜಿಲ್ಲೆಯ ಲೇವಾದೇವಿ ವ್ಯವಹಾರವನ್ನು ನಿಯಂತ್ರಿಸುವ ಮತ್ತು ಅದರ ವ್ಯವಹಾರವನ್ನು ನಡೆಸಲು ಪರವಾನಗಿಯನ್ನು ನೀಡುವ ಅಧಿಕಾರವನ್ನು ಜಿಲ್ಲಾಧಿಕಾರಿಗಳಿಗೆ, ತಾಲೂಕುಗಳ ತಹಶೀಲ್ದಾರರಿಗೆ ಮತ್ತು ಉಪನೋಂದಣಾಧಿಕಾರಿಗಳಿಗೆ ವಹಿಸಲಾಯಿತು.

ಮೈಸೂರು ಸಂಸ್ಥಾನದ ೧೯೩೯ರ ಸಾಲ ನೀಡುವವರ ಅಧಿನಿಯಮದ ಪ್ರಕಾರ ಸಾಲಗಳ ಮೇಲಿನ ಬಡ್ಡಿದರಗಳು–ಆಧಾರದ ಸಾಲಗಳಿಗೆ ಶೇ. ಒಂಭತ್ತರಷ್ಟು ಮತ್ತು ಆಧಾರ ರಹಿತ ಸಾಲಗಳಿಗೆ ಶೇ. ೧೨ ರಷ್ಟು ಮಾತ್ರ ವಿಧಿಸಬೇಕೆಂದು ನಿಗದಿಪಡಿಸಿದೆ. ಅಗತ್ಯಾನುಸಾರ ಈ ಕಾಯಿದೆಗೆ ೧೯೫೫ ಮತ್ತು ೧೯೫೬ರಲ್ಲಿ ತಿದ್ದುಪಡಿಗಳನ್ನು ಮಾಡಲಾಯಿತು.

ರಾಜ್ಯ ಪುನರ್ ವಿಂಗಡಣೆಯ ನಂತರ ೧೯೫೬ರಲ್ಲಿ ಕರ್ನಾಟಕ ರಾಜ್ಯಕ್ಕೆ ಅನ್ವಯಿಸುವಂತೆ, ಕರ್ನಾಟಕ ಲೇವಾದೇವಿ ನಿಯಂತ್ರಣ ಕಾಯಿದೆ ಮತ್ತು ಕರ್ನಾಟಕ ಗಿರಿವಿದಾರರ ನಿಯಂತ್ರಣ ಕಾಯಿದೆಯನ್ನು ಜಿಲ್ಲಾ ವ್ಯಾಪ್ತಿಗೊಳಪಡುವಂತೆ ಕ್ರಮವಾಗಿ ೧೯೬೨ ಮತ್ತು ೧೯೬೬ರಲ್ಲಿ ಜಾರಿಗೆ ತರಲಾಯಿತು. ಈ

ಎರಡು ಕಾಯಿದೆಗಳನ್ನು ತಿದ್ದುಪಡಿ ಮಾಡುವುದರ ಮೂಲಕ ಅನೇಕ ಸುಧಾರಣಾ ಕ್ರಮಗಳನ್ನು ಅನುಷ್ಠಾನಗೊಳಿಸಲಾಯಿತು. ಈ ಕಾಯಿದೆಯ ಪ್ರಕಾರ ಸಾಲ ನೀಡುವ ಸಾಹುಕಾರರು, ಲೇವಾದೇವಿಗಾರರು ಮತ್ತು ದೇಶೀಯ ಬ್ಯಾಂಕರರು, ಕಾನೂನಿನ ಚೌಕಟ್ಟನ್ನು ಮೀರಿ ಸಾಲಗಾರರಿಂದ ದುಬಾರಿ ಬಡ್ಡಿಯನ್ನು ವಸೂಲಿ ಮಾಡಿದರೆ, ನೀತಿ ನಿಯಮಾವಳಿಗಳನ್ನು ಉಲ್ಲಂಘಿಸಿ, ನಿರ್ದಯಿಯಾಗಿ ವರ್ತಿಸಿದರೆ ಅಂತಹ ನೀತಿ ಬಾಹಿರ ಕೃತ್ಯಗಳನ್ನು ನಿಯಂತ್ರಿಸುವ ಶಿಕ್ಷೆಗೊಳಪಡಿಸುವ, ದಂಡ (ಜುಲ್ಮಾನೆ) ಮತ್ತು ಕಾರಾಗೃಹ ವಾಸವನ್ನು ವಿಧಿಸುವ ಕಠಿಣವಾದ ಶಿಸ್ತಿನ ಹಾಗೂ ನಿಯಂತ್ರಣ ಕ್ರಮಗಳನ್ನು ಕೈಗೊಳ್ಳಲು ಜಿಲ್ಲೆಯ ಸಹಕಾರ ಇಲಾಖೆಯ ಉಪನಿಬಂಧಕರಿಗೆ ಅಧಿಕಾರವಿರುತ್ತದೆ. ಈ ಕಾಯಿದೆಯನ್ವಯ ರಾಜ್ಯ ಮಟ್ಟದಲ್ಲಿ ರಾಜ್ಯ ಸಹಕಾರ ಸಂಘಗಳ ನಿಬಂಧಕರು ಪದನಿಮಿತ್ತ ಲೇವಾದೇವಿಗಾರರ ರಿಜಿಸ್ಟ್ರಾರ್ ಜನರಲ್ ಆಗಿರುತ್ತಾರೆ.

ಅದರಂತೆ ಚಾಮರಾಜನಗರ ಜಿಲ್ಲೆಯ ಸಹಕಾರ ಸಂಘಗಳ ಸಹಾಯಕ ನಿಬಂಧಕರನ್ನು ಲೇವಾದೇವಿಗಾರರ ರಿಜಿಸ್ಟ್ರಾರ್ ಎಂದು ನೇಮಿಸಿ, ಅವರಿಗೆ ಜಿಲ್ಲೆಯ ಲೇವಾದೇವಿ ವ್ಯವಹಾರವನ್ನು ನಿಯಂತ್ರಿಸುವ ಜವಾಬ್ದಾರಿಯನ್ನು ವಹಿಸಲಾಯಿತು. ಈ ಕಾನೂನು ಜಾರಿಗೆ ಬರುವುದಕ್ಕೆ ಮುಂಚೆ ಜಿಲ್ಲೆಯ ಆಯಾ ತಾಲೂಕುಗಳಲ್ಲಿನ ಸಹಕಾರ ಇಲಾಖೆಯ ಉಪನೋಂದಣಾಧಿಕಾರಿಗಳು ತಮ್ಮ ಅಧಿಕಾರ ವ್ಯಾಪ್ತಿಯಲ್ಲಿ ಲೇವಾದೇವಿ ವ್ಯವಹಾರವನ್ನು ನಿಯಂತ್ರಿಸುವ ಕಾರ್ಯವನ್ನು ನಿಯಂತ್ರಿಸುತ್ತಿದ್ದರು. ೧೯೬೬ರಿಂದೀಚೆಗೆ ಜಿಲ್ಲೆಯಲ್ಲಿ ಲೇವಾದೇವಿ ವ್ಯವಹಾರಗಾರರ ರಿಜಿಸ್ಟ್ರಾರ್‌ರಿಂದ ಪರವಾನಗಿ ಪಡೆಯಬೇಕೆಂಬ ನಿಯಮವಿದೆ. ಪರವಾನಗಿ ಇಲ್ಲದೇ ಲೇವಾದೇವಿ ವ್ಯವಹಾರವನ್ನು ಕೈಗೊಳ್ಳುವುದು ಕಾನೂನಿನನ್ವಯ ದಂಡ ಸಹಿತ ಅಪರಾಧವಾಗುತ್ತದೆ. ಕರ್ನಾಟಕ ಸರ್ಕಾರ ೧೯೬೩ರಲ್ಲಿ ಅಧಿಸೂಚನೆಯನ್ನು ಹೊರಡಿಸಿ, ಲೇವಾದೇವಿಗಾರರು ವಿಧಿಸಬಹುದಾದ ಬಡ್ಡಿದರವನ್ನು ಆಧಾರದ ಸಾಲಕ್ಕೆ ಶೇ. ೧೫ರಷ್ಟು ಮತ್ತು ಆಧಾರರಹಿತ ಸಾಲಕ್ಕೆ ಶೇ. ೧೮ರಷ್ಟು ಎಂದು ನಿಗದಿಪಡಿಸಿದೆ. ಸರ್ಕಾರದ ಈಗಿನ ಆದೇಶದಂತೆ ಲೈಸೆನ್ಸ್ ಪಡೆದ ಲೇವಾದೇವಿಗಾರರು ಮತ್ತು ಗಿರವಿದಾರರು ಪ್ರತಿ ಐದು ವರ್ಷಕ್ಕೊಮ್ಮೆ ತಮ್ಮ ಪರವಾನಗಿಯನ್ನು ನವೀಕರಿಸಬೇಕಾಗಿದೆ.

ಏತನ್ಮಧ್ಯೆ ಸಹಕಾರ ಇಲಾಖೆಯ ಆಡಳಿತವನ್ನು ಪುನಾರ್ರಚಿಸಲಾಯಿತು. ಅದರಂತೆ ಜಿಲ್ಲಾ ಸಹಕಾರ ಸಂಘಗಳ ಸಹಾಯಕ ನಿಬಂಧಕರನ್ನು ಸಹಕಾರ ಸಂಘಗಳ ಉಪನಿಬಂಧಕರೆಂದೂ ಹಾಗೂ ಉಪವಿಭಾಗದ ಮುಖ್ಯಸ್ಥರನ್ನು ಸಹಕಾರ ಸಂಘಗಳ ಸಹಾಯಕ ನಿಬಂಧಕರೆಂದೂ ಪುನರ್ ನಾಮಕರಣ ಮಾಡಲಾಯಿತು. ಅಂದಿನಿಂದ ಈ ಅಧಿಕಾರಿಗಳು ೧೯೬೧ರ ಕರ್ನಾಟಕ ಲೇವಾದೇವಿ ಕಾಯ್ದೆ ಮತ್ತು ಕರ್ನಾಟಕ ಗಿರವಿದಾರರ ಕಾಯ್ದೆಯಲ್ಲದೆ ೧೯೮೨ರ ಕರ್ನಾಟಕ ಚಿಟ್‌ಫಂಡ್ ಕಾಯ್ದೆಯನ್ನು ಸಹ ಕಾರ್ಯಾಚರಣೆಗೆ ತರುವ ಜವಾಬ್ದಾರಿಯನ್ನು ಹೊಂದಿರುತ್ತಾರೆ. ಲೇವಾದೇವಿಗಾರರು ವಿಧಿಸಬಹುದಾದ ಬಡ್ಡಿಯ ದರವನ್ನು ೧೯೯೨ರಲ್ಲಿ ಪರಿಷ್ಕರಿಸಿ ಆಧಾರಿತ ಸಾಲದ ಮೇಲೆ ಶೇ. ೨೧ ಮತ್ತು ಆಧಾರ ರಹಿತ ಸಾಲದ ಮೇಲೆ ಶೇ. ೨೩ ಎಂದು ರಾಜ್ಯ ಸರ್ಕಾರ ನಿಗದಿಪಡಿಸಿತ್ತು.

ಇಪ್ಪತ್ತೊಂದನೆಯ ಶತಮಾನದ ಆರಂಭದ ಮೂರು ವರ್ಷಗಳಲ್ಲಿ ರಾಜ್ಯವು ಸತತವಾಗಿ ಅನುಭವಿಸಿದ ತೀವ್ರ ಬರ ಪರಿಸ್ಥಿತಿಯನ್ನು ಪರಿಗಣಿಸಿ, ಸರ್ಕಾರದ ಸಾಲದ ಬಡ್ಡಿ ದರವನ್ನು ೨೦೦೩ರಲ್ಲಿ ಆಧಾರ ಸಾಲಕ್ಕೆ ಶೇ. ೧೪ ಮತ್ತು ಆಧಾರ ರಹಿತ ಸಾಲಕ್ಕೆ ಶೇ. ೧೬ ಎಂದು ನಿಗದಿಪಡಿಸಿದೆ. ೨೦೦೮ರಿಂದೀಚೆಗೆ ಈ ಬಡ್ಡಿದರಗಳನ್ನು ಭಾರತೀಯ ರಿಸರ್ವ್ ಬ್ಯಾಂಕಿನ ಆದೇಶದಂತೆ ಇನ್ನಷ್ಟು ಇಳಿಸಲಾಗಿದ್ದು, ಸಾಲ ಮನ್ನಾ ಮಾಡಲು ಸರ್ಕಾರವು ಸೂಕ್ತ ಕ್ರಮಗಳನ್ನು ಕೈಗೊಂಡಿದೆ.

## ಹಣಕಾಸು ಸಂಸ್ಥೆಗಳು

ಅಸಂಘಟಿತ ಹಣದ ಮಾರುಕಟ್ಟೆಯಲ್ಲಿ ಖಾಸಗಿ ಸಾಲಿಗರು, ಗಿರವಿದಾರರು ಹಾಗೂ ದೇಶೀಯ ಬ್ಯಾಂಕರರಲ್ಲದೇ ಹಲವಾರು ಬ್ಯಾಂಕೇತರ ಹಣಕಾಸಿನ ಮಧ್ಯವರ್ತಿ ಸಂಸ್ಥೆಗಳು ಹಾಗೂ ಚಿಟ್‌ಫಂಡ್‌ಗಳು ಜಿಲ್ಲೆಯ ಪ್ರಮುಖ ನಗರ ಪಟ್ಟಣಗಳಲ್ಲಿ ಕಾರ್ಯನಿರ್ವಹಿಸುತ್ತಿವೆ. ಈ ಸಂಸ್ಥೆಗಳು ವ್ಯಾಪಾರ, ವಾಣಿಜ್ಯ, ಉದ್ದಿಮೆ, ವಾಹನ ಖರೀದಿ ಮುಂತಾದವುಗಳಿಗೆ ಅಡಮಾನ ಸಾಲವನ್ನು ಒದಗಿಸುತ್ತವೆ. ಸಾರ್ವಜನಿಕರ ಉಳಿತಾಯದ ಹಣವನ್ನು ಹಲವಾರು ಆಕರ್ಷಕ ಯೋಜನೆ, ಹೆಚ್ಚು ಬಡ್ಡಿ ನೀಡುವ ಹಾಗೂ ನಗದು ಬಹುಮಾನಗಳನ್ನು ನೀಡುವ ಆಮಿಷಗಳ ಮೂಲಕ ಆಕರ್ಷಿಸಿ, ಈ ಸಂಸ್ಥೆಗಳು ಠೇವಣಿ ಸಂಗ್ರಹಣೆ ಮೂಲಕ ತಮ್ಮ ಸಂಪನ್ಮೂಲಗಳನ್ನು ಹೆಚ್ಚಿಸಿಕೊಳ್ಳುತ್ತವೆ. ಈ ಸಂಸ್ಥೆಗಳಿಂದ ಮೋಟಾರು ಸಾರಿಗೆ ಮಾಲೀಕರು, ವರ್ತಕರು, ಉದ್ದಿಮೆದಾರರು, ಸಣ್ಣ ಪುಟ್ಟ ವ್ಯಾಪಾರಿಗಳು ಮತ್ತು ನೌಕರರ ವರ್ಗದವರು ಸಾಲ ಪಡೆಯುತ್ತಾರೆ. ಈ ಸಂಸ್ಥೆಗಳು ಸಾಮಾನ್ಯವಾಗಿ ಭಾರತೀಯ ಪಾಲುದಾರಿಕೆ ಕಾನೂನು ೧೯೩೨ ಅಥವಾ ಕಂಪನಿ ಕಾಯ್ದೆ ೧೯೫೬ರನ್ವಯ ನೊಂದಾಯಿತ ಸಂಸ್ಥೆಗಳಾಗಿರುತ್ತವೆ. ಕರ್ನಾಟಕ ಲೇವಾದೇವಿ ಕಾನೂನು ೧೯೬೧ರ ಅನ್ವಯ ಸಹಕಾರ ಇಲಾಖೆ ಈ ಸಂಸ್ಥೆಗಳ ಮೇಲೆ ನಿಯಂತ್ರಣ ಹೊಂದಿರುತ್ತದೆ.

## ವಾಣಿಜ್ಯ ಬ್ಯಾಂಕುಗಳು

ಆಧುನಿಕ ವಾಣಿಜ್ಯ ವ್ಯವಹಾರಗಳಲ್ಲಿ ವಾಣಿಜ್ಯ ಬ್ಯಾಂಕುಗಳು ಸಂಘಟಿತ ವಲಯಕ್ಕೆ ಒಳಪಟ್ಟಿದ್ದು, ಅವುಗಳ ಸೇವೆಯನ್ನು ಜನಸಮುದಾಯದಲ್ಲಿ ಒಂದು ಜನಪ್ರಿಯ ವ್ಯವಹಾರವೆಂದು ಪರಿಗಣಿಸಲಾಗಿದೆ. ಆರ್ಥಿಕ ಅಭಿವೃದ್ಧಿ ಮತ್ತು ಸಾಮಾಜಿಕ ಪ್ರಗತಿಯಲ್ಲಿ ಬ್ಯಾಂಕುಗಳ ಪಾತ್ರ ಬಹಳ ಮಹತ್ವಪೂರ್ಣವಾದುದು. ಬ್ಯಾಂಕುಗಳು ಜನಸಮುದಾಯದ ಉಳಿತಾಯವನ್ನು ಸಂಗ್ರಹಿಸಿ ಕೃಷಿ, ಕೈಗಾರಿಕೆ, ವ್ಯಾಪಾರ, ವಾಣಿಜ್ಯ, ಸಾರಿಗೆ ಸಂಪರ್ಕ ಮಾಧ್ಯಮಗಳು ಮೊದಲಾದ ಕ್ಷೇತ್ರಗಳ ಸಮಗ್ರ ಅಭಿವೃದ್ಧಿಗೆ ಹಾಗೂ ಸರ್ಕಾರದ ನಾನಾ ಉತ್ಪಾದನಾ ಯೋಜನೆಗಳಿಗೂ ಹಣವನ್ನು ಒದಗಿಸುತ್ತದೆ.

**ಚಾಮರಾಜನಗರ ಜಿಲ್ಲೆಯಲ್ಲಿ ಬ್ಯಾಂಕುಗಳ ಬೆಳವಣಿಗೆ:** ಅವಿಭಜಿತ ಮೈಸೂರು ಜಿಲ್ಲೆಯಲ್ಲಿ ಪ್ರಪ್ರಥಮ ಕೂಡು ಬಂಡವಾಳ ಬ್ಯಾಂಕಿಂಗ್ ಸಂಸ್ಥೆಗಳಾಗಿ ೧೮೭೪ರಲ್ಲಿ 'ರಾಜಧಾನಿ ಬ್ಯಾಂಕು' ಮತ್ತು 'ಟೌನ್ ಬ್ಯಾಂಕು'ಗಳು ಮೈಸೂರು ನಗರದಲ್ಲಿ ಸ್ಥಾಪನೆಗೊಂಡವು. ಈ ಬ್ಯಾಂಕುಗಳು ೧೯೧೩ ರವರೆಗೂ ಕಾರ್ಯ ನಿರ್ವಹಿಸಿದರೂ, ನಾನಾ ಕಾರಣಗಳಿಂದಾಗಿ ಮುಂದುವರಿಯಲಿಲ್ಲ. ೧೮೮೫ರಲ್ಲಿ ನಂಜನಗೂಡಿನಲ್ಲಿ ಶ್ರೀಕಂಠೇಶ್ವರಸ್ವಾಮಿ ಬ್ಯಾಂಕು ಸ್ಥಾಪನೆಗೊಂಡು ಉತ್ತಮ ಸೇವೆ ಸಲ್ಲಿಸಿದರೂ ಈ ಬ್ಯಾಂಕಿಗೆ ಪರವಾನಗಿ ನಿರಾಕರಿಸಿದ್ದರಿಂದ ಅದು ಮುಂದುವರಿಯಲಿಲ್ಲ. ೧೮೮೪ ರಿಂದ ೧೯೦೮ರವರೆಗೆ ಅವಿಭಜಿತ ಮೈಸೂರು ಜಿಲ್ಲೆಯಲ್ಲಿ ಇಂದಿನ ಚಾಮರಾಜನಗರ ಜಿಲ್ಲೆಯ ನಾಲ್ಕು ತಾಲೂಕುಗಳೂ ಸೇರಿದಂತೆ, ಖಾಸಗಿ ಹಣಕಾಸು ಸಂಸ್ಥೆಗಳ ಜೊತೆಯಲ್ಲಿ ೧೭ ಕೂಡು ಬಂಡವಾಳ ಬ್ಯಾಂಕಿಂಗ್ ಕಂಪೆನಿಗಳು ಪ್ರಮುಖ ನಗರಗಳಲ್ಲಿ ಸ್ಥಾಪನೆಗೊಂಡಿದ್ದವು. ಅವುಗಳಲ್ಲಿ ಶ್ರೀ ಚಾಮರಾಜೇಶ್ವರ ಬ್ಯಾಂಕು, ಚಾಮರಾಜನಗರ (೧೮೯೨); ಶ್ರೀ ರಂಗನಾಥ ಬ್ಯಾಂಕು, ಚಾಮರಾಜನಗರ (೧೮೯೪); ಲಕ್ಷ್ಮಿವಿಲಾಸ ಬ್ಯಾಂಕು, (೧೮೯೪) ಗುಂಡ್ಲುಪೇಟೆ,; ಶ್ರೀ ವಿಜಯನಾರಾಯಣಸ್ವಾಮಿ ಬ್ಯಾಂಕು (೧೮೯೫), ಗುಂಡ್ಲುಪೇಟೆ; ಶ್ರೀನಿವಾಸಸ್ವಾಮಿ ಬ್ಯಾಂಕು (೧೮೯೭), ಗುಂಡ್ಲುಪೇಟೆ; ಶ್ರೀರಾಜರಾಜೇಶ್ವರಿ ಬ್ಯಾಂಕು (೧೯೦೦), ಗುಂಡ್ಲುಪೇಟೆ ಮತ್ತು ಶ್ರೀ ಹಿಮವತ್ ಗೋಪಾಲಸ್ವಾಮಿ ಬ್ಯಾಂಕು (೧೯೦೧) ಗುಂಡ್ಲುಪೇಟೆ, ಇಂದಿನ ಚಾಮರಾಜನಗರ ಜಿಲ್ಲೆಯ ಪ್ರಮುಖ ಪಟ್ಟಣಗಳಲ್ಲಿ ಅದಾಗಲೇ ಪ್ರಾರಂಭಗೊಂಡಿದ್ದು ಉಲ್ಲೇಖಾರ್ಹವಾಗಿದೆ.

## ವ್ಯವಸಾಯ ಬ್ಯಾಂಕುಗಳು

ಸಂಸ್ಥಾನದ ರೈತರಿಗೆ ವ್ಯವಸಾಯ ಅಭಿವೃದ್ಧಿ ಮತ್ತು ಸುಧಾರಣೆಗಾಗಿ ಸಾಲ ನೀಡುವ ಉದ್ದೇಶದಿಂದ ಮೈಸೂರು ಸರ್ಕಾರವು ೧೯೪೪ರಲ್ಲಿ ಕೂಡು ಬಂಡವಾಳ ಕಂಪನಿ (Joint Stock Company) ನಿಯಮಗಳನ್ವಯ ಸಹಕಾರ ನೀತಿ ನಿಯಮಾನುಸಾರವಾಗಿ ವ್ಯವಸಾಯ ಬ್ಯಾಂಕುಗಳನ್ನು ಸ್ಥಾಪಿಸಲು ಮುಂದಾಯಿತು. ಈ ಬ್ಯಾಂಕುಗಳು ಪರಸ್ಪರ ಸಹಕಾರ ಮನೋಭಾವದಿಂದ ರೈತರಿಗೆ ಕಡಿಮೆ ಬಡ್ಡಿದರದಲ್ಲಿ ಸಾಲ ನೀಡುವ ಕಾರ್ಯಕ್ರಮವನ್ನು ಹಮ್ಮಿಕೊಂಡವು. ತತ್ಪರಿಣಾಮವಾಗಿ, ಕೃಷಿ ಬ್ಯಾಂಕುಗಳು ರೈತರಲ್ಲಿ ಪರಸ್ಪರ ಸಹಕಾರ ಮೂಡಿಸುವ ಮೂಲಕ ಅವರ ಶಕ್ತ್ಯಾನುಸಾರ ಠೇವಣಿಗಳನ್ನು ಸ್ವೀಕರಿಸಿ, ಆ ಸಂಗ್ರಹದಿಂದ ಬಂಡವಾಳವನ್ನು ಹೆಚ್ಚಿಸಿಕೊಂಡು ರೈತರಿಗೆ ಯಾವುದೇ ಷರತ್ತು ಇಲ್ಲದೇ ಮತ್ತು ಅಧಿಕ ಮೌಲ್ಯದ ಆಸ್ತಿಯನ್ನು ಆಧಾರವಾಗಿಟ್ಟುಕೊಳ್ಳದೇ ಕಡಿಮೆ ಬಡ್ಡಿದರದಲ್ಲಿ ಸಾಲವನ್ನು ವ್ಯವಸಾಯ ಅಭಿವೃದ್ಧಿಗೆ ನೀಡುವಂತಾಯಿತು. ಕೃಷಿ ಬ್ಯಾಂಕುಗಳ ಆಡಳಿತವು ಬ್ಯಾಂಕಿನ ಸದಸ್ಯ ರೈತರ ನಿರ್ದೇಶನ ಮಂಡಳಿಯ ಸಹಕಾರದಿಂದಾಗಿ ಯಶಸ್ವಿಯಾಗಿ ನಡೆದುಕೊಂಡು ಬಂದಿದೆ. ಈ ಬ್ಯಾಂಕುಗಳು ಮೀಸಲು ನಿಧಿಯನ್ನು ಸ್ಥಾಪಿಸಿ ಬಂಡವಾಳವನ್ನು ಕ್ರೋಢೀಕರಿಸುವುದರ ಮೂಲಕ ರೈತರ ಉಳಿತಾಯದ ಹಣವನ್ನು ಸಹ ಠೇವಣಿಯಾಗಿ ಸ್ವೀಕರಿಸಿ ಕಡಿಮೆ ಆಡಳಿತ ನಿರ್ವಹಣೆ ವೆಚ್ಚದಲ್ಲಿ ಮಿತವ್ಯಯವನ್ನು ಸಾಧಿಸಿ ಷೇರುಬಂಡವಾಳದ ಸಂಗ್ರಹದಿಂದ ಬಂಡವಾಳ ನಿಧಿಯನ್ನು ಸಹ ಸ್ಥಾಪಿಸಿವೆ. ರೈತರಿಗೆ, ಸುಧಾರಿತ ಬೇಸಾಯ ಕ್ರಮಗಳಿಂದ ಅಧಿಕ ಇಳುವರಿ ಪಡೆಯಲು ಅನುಕೂಲವಾಗುವಂತೆ ಸಕಾಲದಲ್ಲಿ ಕೃಷಿ ಅಭಿವೃದ್ಧಿಗೆ ಸಾಲ ನೀಡಲಾಗಿದೆ. ಇಂತಹ ಸಹಕಾರ ತತ್ವಗಳ ಆಧಾರದಿಂದ ೧೯೪೭ರಲ್ಲಿ ಚಾಮರಾಜನಗರ ಜಿಲ್ಲೆಗೆ ಸೇರಿದ ಪ್ರಮುಖ ಪಟ್ಟಣ ಮತ್ತು ಹಳ್ಳಿಗಳಲ್ಲೂ ರೈತರಿಗೆ ಸಾಲ ನೀಡಲಾಗಿತ್ತು. ಆದರೆ ಕಾಲಾನಂತರ ಈ ಕೃಷಿ ಬ್ಯಾಂಕುಗಳು ಪ್ರತಿಷ್ಠಿತ ಶ್ರೀಮಂತ ಜಮೀನ್ದಾರರ ಹಿಡಿತಕ್ಕೆ ಒಳಪಟ್ಟಿದ್ದರಿಂದ ಪ್ರಭಾವಶಾಲಿ ರೈತರು ಬ್ಯಾಂಕಿನ ಬಂಡವಾಳವನ್ನು ತಮ್ಮ ಸ್ವಂತ ಉದ್ದೇಶಕ್ಕೆ ದುರ್ಬಳಕೆ ಮಾಡಿಕೊಂಡ ಪರಿಣಾಮವಾಗಿ ಈ ವ್ಯವಸಾಯ ಬ್ಯಾಂಕುಗಳು ತಮ್ಮ ಅಸ್ತಿತ್ವವನ್ನು ಕಳೆದುಕೊಂಡರೆ, ಇನ್ನೂ ಕೆಲವು ಬ್ಯಾಂಕುಗಳು ನಿರ್ದೇಶಕರ ದುರಾಡಳಿತದಿಂದ ನಿಷ್ಕ್ರಿಯಗೊಂಡು ನಿಂತುಹೋದವು.

ಅವಿಭಜಿತ ಮೈಸೂರು ಜಿಲ್ಲೆಯಲ್ಲಿ ವಾಣಿಜ್ಯ ಬ್ಯಾಂಕುಗಳು ಸ್ಥಾಪನೆಗೊಳ್ಳುವುದಕ್ಕಿಂತ ಮೊದಲು ಲೇವಾದೇವಿಗಾರರು, ಮಧ್ಯವರ್ತಿ ವರ್ತಕರು, ಸಾಹುಕಾರರು, ಸ್ಥಳೀಯ ರೈತರಿಗೆ ದುಬಾರಿ ಬಡ್ಡಿಯಲ್ಲಿ ಸಾಲ ನೀಡುತ್ತಿದ್ದರು. ಅವರಿಂದ ಶೋಷಣೆಗೊಳಗಾದ ರೈತರಿಗೆ ಪರ್ಯಾಯವಾಗಿ ಕಡಿಮೆ ಬಡ್ಡಿದರದಲ್ಲಿ ಸಾಲ ನೀಡುವ ಗುರಿಯೊಂದಿಗೆ ಸಹಕಾರಿ ಬ್ಯಾಂಕುಗಳು ೧೯೦೬ರಲ್ಲಿ ಸ್ಥಾಪನೆಗೊಂಡವು. ರೈತರ ಹಣಕಾಸಿನ ತಾಪತ್ರಯ ಮತ್ತು ಅವರು ಸಾಹುಕಾರರ ಲೇವಾದೇವಿ ವ್ಯವಹಾರಗಳಲ್ಲಿ ಅನುಭವಿಸುತ್ತಿದ್ದ ತೊಂದರೆಗಳನ್ನು ಪ್ರತ್ಯಕ್ಷವಾಗಿ ಸಮೀಕ್ಷಿಸಿದ ಕೆಲವು ಸಹಕಾರಿ ಧುರಿಣರು ಸೇವಾ ಸಹಕಾರ ಬ್ಯಾಂಕುಗಳ ಮೂಲಕ ಜಿಲ್ಲೆಯ ರೈತರಿಗೆ ಸಾಲ ನೀಡುವ ವಿವಿಧ ಯೋಜನೆಗಳನ್ನು ರೂಪಿಸಿದರು.

## ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಸ್ಥಾಪನೆ

೧೯೧೨ರಲ್ಲಿ ಸಮಾವೇಶಗೊಂಡ ಆರ್ಥಿಕ ತಜ್ಞರ ಸಮ್ಮೇಳನದಲ್ಲಿ, ಮೈಸೂರು ಸಂಸ್ಥಾನದಲ್ಲಿ ವಾಣಿಜ್ಯ ಬ್ಯಾಂಕುಗಳನ್ನು ಸ್ಥಾಪಿಸಬೇಕೆಂದು ತೆಗೆದುಕೊಂಡ ನಿರ್ಣಯದಂತೆ, ೧೯೧೩ರಲ್ಲಿ ಸರ್.ಎಂ.ವಿಶ್ವೇಶ್ವರಯ್ಯನವರ ವಿಶೇಷ ಪರಿಶ್ರಮ ಮತ್ತು ಆಸಕ್ತಿಯ ಫಲವಾಗಿ ಸ್ಟೇಟ್‌ಬ್ಯಾಂಕ್ ಆಫ್ ಮೈಸೂರು ಸ್ಥಾಪನೆಗೊಂಡಿತು. ಇದೇ ಸಂದರ್ಭದಲ್ಲಿ ಮೈಸೂರಿನ ಮಹಾರಾಜರು ಬ್ಯಾಂಕುಗಳ ಸ್ಥಾಪನೆಗೆ ಬೇಕಾಗುವ ಬಂಡವಾಳ ವೃದ್ಧಿಗೆ ಷೇರು ಬಂಡವಾಳ ಮತ್ತು ಠೇವಣಿಗಳ ಸಂಗ್ರಹಣೆಗೆ ವಿಶೇಷವಾದ ಆಸಕ್ತಿ ತೋರಿದ ಇವರು, ಬ್ಯಾಂಕುಗಳ ಆಡಳಿತ ನಿರ್ವಹಣಾ ವೆಚ್ಚದ ಕೆಲವು ಭಾಗವನ್ನೂ ತಾವೇ ವಹಿಸಿಕೊಂಡು ಬ್ಯಾಂಕುಗಳ ಬೆಳವಣಿಗೆಗೆ ಪ್ರೋತ್ಸಾಹ ನೀಡಿದರು.

ಆಗಸ್ಟ್ ೧೯೧೪ರಲ್ಲಿ ಮೈಸೂರು ನಗರದಲ್ಲಿ ಸ್ಟೇಟ್‌ಬ್ಯಾಂಕ್ ಆಫ್ ಮೈಸೂರಿನ ಸಂಸ್ಥಾಪನಾ ಶಾಖೆಯು ಸ್ಥಾಪನೆಗೊಂಡಿತು. ತರುವಾಯ ಜಿಲ್ಲೆಯ ಇತರ ತಾಲೂಕು ಕೇಂದ್ರಗಳಲ್ಲೂ ಇದರ ಶಾಖೆಗಳನ್ನು ತೆರೆಯಲಾಯಿತು. ೧೯೩೮ರಲ್ಲಿ ಕೃಷ್ಣರಾಜನಗರದಲ್ಲೂ, ಮತ್ತು ೧೯೪೩ರಲ್ಲಿ ಮೈಸೂರು ನಗರದ ಕೃಷ್ಣರಾಜ ಮಾರ್ಕೆಟ್ ಆವರಣದಲ್ಲಿ ಇದರ ಎರಡನೆಯ ಶಾಖೆಯನ್ನೂ ಸ್ಥಾಪಿಸಲಾಯಿತು. ಕಾರ್ಪೋರೇಷನ್ ಬ್ಯಾಂಕು ೧೯೩೬ರಲ್ಲಿ ಮೈಸೂರಿನಲ್ಲಿ ತನ್ನ ಶಾಖೆಯನ್ನು ತೆರೆಯಿತು. ೧೯೪೭ರಲ್ಲಿ ಡಿಸೆಂಬರ್‌ವರೆಗೆ ಮೈಸೂರು ಜಿಲ್ಲೆಯಲ್ಲಿ ಕೆಳಗಿನ ವಾಣಿಜ್ಯ ಬ್ಯಾಂಕುಗಳು ವಿವಿಧ ಭಾಗಗಳಲ್ಲಿ ಸ್ಥಾಪನೆಗೊಂಡವು. ಅವುಗಳೆಂದರೆ ಸಿಂಡಿಕೇಟ್ ಬ್ಯಾಂಕ್, ಮೈಸೂರು (೧೯೪೫); ವೈಶ್ಯಬ್ಯಾಂಕು, ಮೈಸೂರು (೧೯೪೫) ಮತ್ತು ಕೊಳ್ಳೇಗಾಲ (೧೯೪೭), ಕೆನರಾ ಬ್ಯಾಂಕು, ಮೈಸೂರು (೧೯೪೬), ಇಂಡಿಯನ್ ಓವರ್‌ಸೀಸ್ ಬ್ಯಾಂಕು, ಮೈಸೂರು(೧೯೪೭) ಹೀಗೆ ಒಟ್ಟು ಹತ್ತು ಶಾಖೆಗಳು ಮೈಸೂರು ಜಿಲ್ಲೆಯಲ್ಲಿ ಸ್ಥಾಪನೆಗೊಂಡವು. ಮೈಸೂರು ನಗರದಲ್ಲಿ, ಕೊಳ್ಳೇಗಾಲ ಮತ್ತು ಕೆ.ಆರ್.ನಗರದಲ್ಲಿ ತಲಾ ಒಂದೊಂದು ಶಾಖೆಗಳು ಪ್ರಾರಂಭಗೊಂಡವು. ೧೯೫೫ರಲ್ಲಿ ಭಾರತೀಯ ಸ್ಟೇಟ್ ಬ್ಯಾಂಕ್ ಆರಂಭವಾಗುವವರೆಗೂ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಭಾರತೀಯ ರಿಸರ್ವ್ ಬ್ಯಾಂಕಿನ ಪ್ರತಿನಿಧಿಯಾಗಿ, ಸರ್ಕಾರದ ಬ್ಯಾಂಕ್ ಆಗಿ ಕಾರ್ಯನಿರ್ವಹಿಸುತ್ತಿತ್ತು. ಇವುಗಳಲ್ಲಿ ಇಂದಿನ ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲದಲ್ಲಿ ಮಾತ್ರ ವೈಶ್ಯಬ್ಯಾಂಕು ತನ್ನ ಶಾಖೆಯನ್ನು ಹೊಂದಿತ್ತು.

೧೯೫೧ರಿಂದ ಪಂಚವಾರ್ಷಿಕ ಯೋಜನೆಗಳ ಮೂಲಕ ಭಾರತದ ಸಮಗ್ರ ಪ್ರಗತಿಗಾಗಿ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿ ಪಡಿಸುವ ಉದ್ದೇಶದಿಂದ ಭಾರತೀಯ ರಿಜರ್ವ್ ಬ್ಯಾಂಕು ಉದಾರ ಸಾಲನೀತಿಯನ್ನು ಜಾರಿಗೊಳಿಸಿತು. ಇದರ ಕಾರ್ಯಯೋಜನೆಯಡಿ ಅವಿಭಜಿತ ಮೈಸೂರು ಜಿಲ್ಲೆಯ ಗ್ರಾಮೀಣ, ನಗರ ಮತ್ತು ಪುರ ಪಟ್ಟಣಗಳಲ್ಲಿ ಬ್ಯಾಂಕು ಶಾಖೆಗಳ ವಿಸ್ತರಣೆ, ಸಾರ್ವಜನಿಕರಲ್ಲಿ ಉಳಿತಾಯ ಪ್ರವೃತ್ತಿಗೆ ಉತ್ತೇಜನ ನೀಡುವ ಮತ್ತು ಉಳಿತಾಯದ ಹಣವನ್ನು ವಿವಿಧ ಆಕರ್ಷಕ ಠೇವಣಿಗಳ ಮೂಲಕ ಸಂಗ್ರಹಿಸಿ ಬಂಡವಾಳವನ್ನು ವೃದ್ಧಿಗೊಳಿಸುವುದರ ಜೊತೆಗೆ ಕೃಷಿಯಲ್ಲಿ ಸುಧಾರಿತ ಬೇಸಾಯ ಕ್ರಮದ ಮೂಲಕ ಅಧಿಕ ಇಳುವರಿ ಪಡೆಯಲು ಸಾಲನೀಡಿಕೆ, ಕೃಷಿ ಆಧಾರಿತ ಕೈಗಾರಿಕೆಗಳಿಗೆ, ಗ್ರಾಮೋದ್ಯೋಗ ಕೈಗಾರಿಕೆಗಳಿಗೆ, ಗ್ರಾಮೀಣ ಉಪಕಸುಬು ವೃತ್ತಿಪರರಿಗೆ, ಕೃಷಿ ಮತ್ತು ಕೃಷಿಯೇತರ ಚಟುವಟಿಕೆಗಳೇ ಮುಂತಾದ ಆದ್ಯತಾ ವಲಯಗಳಿಗೆ ಮಾರ್ಗದರ್ಶಿ ಬ್ಯಾಂಕುಗಳು (ಲೀಡ್ ಬ್ಯಾಂಕ್) ರೂಪಿಸುವ ಜಿಲ್ಲಾ ಪತ್ತಿನ ಕ್ರಿಯಾ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲಾಯಿತು.

## ಬ್ಯಾಂಕುಗಳ ರಾಷ್ಟ್ರೀಕರಣ

೧೯೬೯ರ ಜುಲೈ ೧೯ರಂದು ಪ್ರಥಮ ಬಾರಿಗೆ ಭಾರತದಲ್ಲಾದ ೧೪ ಪ್ರಮುಖ ವಾಣಿಜ್ಯ ಬ್ಯಾಂಕುಗಳ ರಾಷ್ಟ್ರೀಕರಣ, ರಾಷ್ಟ್ರದ ಬ್ಯಾಂಕುಗಳ ಇತಿಹಾಸದಲ್ಲೊಂದು ಮೈಲಿಗಲ್ಲೆಂದೇ ಭಾವಿಸಲಾಗಿದೆ. ಖಾಸಗಿ ವಲಯದ ಸಾಂಸ್ಥಿಕ ಹಣಕಾಸು ಸಂಸ್ಥೆಗಳನ್ನು ಸರ್ಕಾರಿ ವಲಯಕ್ಕೆ ತರುವಲ್ಲಿ ಇದು ಪ್ರಥಮ ದಿಟ್ಟ ಹೆಜ್ಜೆಯಾಗಿತ್ತು. ಭಾರತದ ತ್ವರಿತ ಆರ್ಥಿಕಾಭಿವೃದ್ಧಿಗೆ ಪೂರಕವಾಗುವಂತೆ ಮತ್ತು ನಿರ್ಲಕ್ಷ್ಯಕ್ಕೆ ಒಳಗಾಗಿದ್ದ ಸಮಾಜದಲ್ಲಿನ ಹಿಂದುಳಿದ, ದುರ್ಬಲ ವರ್ಗ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಜನರ ಏಳಿಗೆಗೆ ಮತ್ತು ಅವರಿಗೆ ಸಾಮಾಜಿಕ ನ್ಯಾಯವನ್ನು ಒದಗಿಸಿ ಅವರ ಜೀವನಮಟ್ಟವನ್ನು ಸುಧಾರಿಸಲು, ಆದ್ಯತಾ ವಲಯಗಳಿಗೆ, ಪ್ರಾದೇಶಿಕ ಅಸಮತೋಲನವನ್ನು ಸರಿಪಡಿಸುವ ಗುರಿಯಲ್ಲಿ ಅತ್ಯಂತ ಹಿಂದುಳಿದ ಗುಡ್ಡಗಾಡು ಪ್ರದೇಶಗಳ ಸಮಗ್ರ ಅಭಿವೃದ್ಧಿಗೆ ಗ್ರಾಮೀಣ, ಕೃಷಿ, ಸಣ್ಣ, ಗುಡಿ ಕೈಗಾರಿಕೆಗಳ ಮತ್ತು ರಫ್ತು ಅಭಿವೃದ್ಧಿಗೆ ನೆರವಾಗುವಂತೆ ಬ್ಯಾಂಕುಗಳ ಸಂಪನ್ಮೂಲಗಳನ್ನು ಉಪಯೋಗಿಸಿಕೊಳ್ಳಲು ಸರ್ಕಾರಕ್ಕೆ ಸಾಧ್ಯವಾಯಿತು. ರಾಷ್ಟ್ರೀಕರಣಕ್ಕಿಂತ ಮೊದಲು ಬ್ಯಾಂಕುಗಳ ಸಾಲ ನೀಡಿಕೆಯಿಂದ ವಂಚಿತರಾಗಿದ್ದ ಹಿಂದುಳಿದ ದುರ್ಬಲ ವರ್ಗದವರಿಗೆ ಆದ್ಯತೆಯ ಮೇರೆಗೆ ನೇರವಾಗಿ ತ್ವರಿತಗತಿಯಲ್ಲಿ ಸಾಲಸೌಲಭ್ಯಗಳನ್ನು ಒದಗಿಸಲಾಯಿತು. ಇದರಿಂದ ಅಸಂಘಟಿತ ಆರ್ಥಿಕ

ವಲಯಗಳು ಅಭಿವೃದ್ಧಿಯ ಮುಖ್ಯವಾಹಿನಿಯಲ್ಲಿ ಸೇರುವಂತಾಯಿತು. ಅದುವರೆಗೂ ಮೇಲ್ವರ್ಗದ ಪ್ರತಿಷ್ಠಿತ ಶ್ರೀಮಂತ ವರ್ಗ ಹಾಗೂ ಕೈಗಾರಿಕೋದ್ಯಮಿಗಳಿಗೆ ಸೀಮಿತಗೊಂಡಿದ್ದ ಬ್ಯಾಂಕುಗಳ ಸೇವೆಗಳು ಶೇ.೭೦ ರಷ್ಟು ರೈತರು ಮತ್ತು ಕೆಳವರ್ಗದವರಿಗೆ ಸುಲಭವಾಗಿ ಲಭ್ಯವಾಗುವಂತೆ ಸರ್ಕಾರವು ತನ್ನ ಆರ್ಥಿಕ ನೀತಿಯಲ್ಲಿ ಹೊಸ ಆಯಾಮವನ್ನು ರಚಿಸಿತು. ಪ್ರಾದೇಶಿಕವಾಗಿ ಹಿಂದುಳಿದ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಕೆಳಸ್ತರಗಳಲ್ಲಿ ಆರ್ಥಿಕ ಸಮಾನತೆ, ಸಾಮಾಜಿಕ ನ್ಯಾಯ ಮತ್ತು ಪರಿವರ್ತಿತ ಸುಧಾರಣೆಗಳನ್ನು ತರಲು ಸಹಾಯಕವಾಗುವಂತೆ ತ್ವರಿತವಾಗಿ ಸಾಲಸೌಲಭ್ಯಗಳು ನೇರವಾಗಿ ತಲುಪುವಂತೆ ಉದಾರತೆಯಿಂದ ಕೂಡಿದ ಕಾರ್ಯಯೋಜನೆಗಳನ್ನು ರೂಪಿಸುವ ಮೂಲಕ ರಾಷ್ಟ್ರೀಕೃತ ಬ್ಯಾಂಕುಗಳ ಧ್ಯೇಯೋದ್ದೇಶಗಳ ಗುರಿಯನ್ನು ಸಾಧಿಸಲು ಸಾಲಸೌಲಭ್ಯಗಳನ್ನು ಕಡ್ಡಾಯವಾಗಿ ನೀಡುವಲ್ಲಿ ಯಶಸ್ವಿಯಾಗಿದೆ.

೧೯೬೯ರ ಪ್ರಾರಂಭದಲ್ಲಿ ಅವಿಭಜಿತ ಮೈಸೂರು ಜಿಲ್ಲೆಯಲ್ಲಿದ್ದ ವಾಣಿಜ್ಯ ಬ್ಯಾಂಕುಗಳ ೨೨ ಶಾಖೆಗಳು ೧೯೬೯ರ ಅಂತ್ಯಕ್ಕೆ ೪೪ಕ್ಕೆ ಹೆಚ್ಚಿದ್ದು, ಅವುಗಳಲ್ಲಿ ೨೩ ಶಾಖೆ ನಗರಗಳಲ್ಲೂ, ೧೨ ಪುರಸಭೆ ಪಟ್ಟಣಗಳಲ್ಲೂ ಮತ್ತು ೯ ಶಾಖೆಗಳು ಗ್ರಾಮೀಣ ಪ್ರದೇಶಗಳಲ್ಲೂ ಸ್ಥಾಪಿತವಾಗಿದ್ದವು. ೧೯೬೯ರ ವಾಣಿಜ್ಯ ಬ್ಯಾಂಕುಗಳ ಶಾಖೆಗಳ ಅಂಕಿಅಂಶಗಳ ಪ್ರಕಾರ ರಾಷ್ಟ್ರಮಟ್ಟದಲ್ಲಿ ಸರಾಸರಿ ೬೬೦೦೦ ಜನಸಂಖ್ಯೆಗೆ ಒಂದು ಬ್ಯಾಂಕು ಸ್ಥಾಪನೆಯಾಗಿದ್ದು, ಕರ್ನಾಟಕ ರಾಜ್ಯದಲ್ಲಿ ಸರಾಸರಿ ೩೬೦೦೦ ಜನಸಂಖ್ಯೆಗೆ ಒಂದು ಬ್ಯಾಂಕು ಇದ್ದರೆ, ಮೈಸೂರು ಜಿಲ್ಲೆಯಲ್ಲಿ ಪ್ರತಿ ೪೬೦೦೦ ಜನಸಂಖ್ಯೆಗೆ ಒಂದು ಬ್ಯಾಂಕು ಸ್ಥಾಪನೆಗೊಂಡಿತ್ತು.

ಮೈಸೂರು ಜಿಲ್ಲೆಯಲ್ಲಿ ಕಾವೇರಿ ಕಲ್ಪತರು ಗ್ರಾಮೀಣ ಬ್ಯಾಂಕು ೧೯೭೬ರಲ್ಲಿ ಸ್ಥಾಪನೆಯಾದ ನಂತರ ಚಾಮರಾಜನಗರ ಜಿಲ್ಲೆಯೂ ಸೇರಿದಂತೆ ಜಿಲ್ಲೆಗಳಲ್ಲಿ ೧೪೪ ಬ್ಯಾಂಕು ಶಾಖೆಗಳು ಕಾರ್ಯನಿರ್ವಹಿಸುತ್ತಿದ್ದವು. ಇವುಗಳಲ್ಲಿ ೫೬ ನಗರಗಳಲ್ಲಿ, ೫೯ ಪುರಸಭಾ ಪಟ್ಟಣಗಳಲ್ಲೂ, ಉಳಿದ ೨೯ ಶಾಖೆಗಳು ಗ್ರಾಮೀಣ ಪ್ರದೇಶಗಳಲ್ಲೂ ಸ್ಥಾಪನೆಗೊಂಡಿದ್ದವು. ೧೯೭೭ರಲ್ಲಿ ರಾಷ್ಟ್ರಮಟ್ಟದಲ್ಲಿ ಪ್ರತಿ ಸರಾಸರಿ ೨೦೦೦೦ ಜನಸಂಖ್ಯೆಗೆ ಒಂದು ಬ್ಯಾಂಕು ಸ್ಥಾಪನೆಯಾಗಿದ್ದರೆ, ಅವಿಭಜಿತ ಮೈಸೂರು ಜಿಲ್ಲೆಯಲ್ಲಿ ಸರಾಸರಿ ೧೪,೦೦೦ ಜನಸಂಖ್ಯೆಗೆ ಒಂದು ಬ್ಯಾಂಕು ಇದ್ದರೆ, ಕರ್ನಾಟಕ ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಪ್ರತಿ ೧೬,೦೦೦ ಜನಸಂಖ್ಯೆಗೆ ಒಂದು ಬ್ಯಾಂಕು ಸ್ಥಾಪಿಸಿದ ಬಗ್ಗೆ ಅಂಕಿಅಂಶಗಳಿಂದ ವೇದ್ಯವಾಗುತ್ತದೆ.

೧೯೬೬–೬೭ರಲ್ಲಿ ಲಭ್ಯವಾದ ಅಂಕಿಅಂಶಗಳ ಪ್ರಕಾರ ಮೈಸೂರು ಜಿಲ್ಲೆಯ ಏಳು ಮತ್ತು ಚಾಮರಾಜನಗರ ಜಿಲ್ಲೆಯ ನಾಲ್ಕು ತಾಲೂಕುಗಳಲ್ಲಿ ೭೩ ಗ್ರಾಮೀಣ ಬ್ಯಾಂಕುಗಳು ಸ್ಥಾಪನೆಗೊಂಡಿದ್ದವು. ಸರಾಸರಿ ೮೦೦೦ ಜನಸಂಖ್ಯೆಗೆ ಒಂದು ಗ್ರಾಮೀಣ ಬ್ಯಾಂಕು ಶಾಖೆ ಸ್ಥಾಪನೆಗೊಂಡಿತ್ತು.

ಚಾಮರಾಜನಗರ ಮತ್ತು ಇತರ ತಾಲೂಕುಗಳಲ್ಲಿ ಬ್ಯಾಂಕುಗಳು ಕೆಲವು ಆಯ್ದ ಗ್ರಾಮಗಳನ್ನು ದತ್ತು ತೆಗೆದುಕೊಂಡು ಅತ್ಯಂತ ಕೆಳಹಂತದಿಂದ ಎಲ್ಲಾ ಪ್ರಕಾರದ ಸಮಗ್ರ ಅಭಿವೃದ್ಧಿಗೆ ಉದಾರವಾಗಿ ಸಾಲ ನೀಡಿರುವುದರಿಂದ ರೇಷ್ಮೆ ಬೆಳೆಗಾರರಿಗೆ, ತೋಟಗಾರಿಕೆ (ಹಣ್ಣು, ತರಕಾರಿ ಬೆಳೆಗಳಿಗೆ ಸಾಲ) ಕುರಿ, ಕೋಳಿ, ಜೇನುಸಾಕಣೆ, ಒಣಭೂಮಿ ಬೇಸಾಯ, ನೀರಾವರಿ ಅಶಕ್ತರಿಗೆ ಗೃಹಸಾಲ ಮತ್ತು ಸ್ವಂತ ಉದ್ಯೋಗದಲ್ಲಿ ನಿರತರಾಗುವಂತೆ ಯುವಕರಿಗೆ ಸಾಲ ಸೌಲಭ್ಯ ನೀಡಿವೆ.

## ಕಾವೇರಿ ಕಲ್ಪತರು ಗ್ರಾಮೀಣ ಬ್ಯಾಂಕು

ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳ ೧೯೭೬ರ ಶಾಸನದ ಪ್ರಕಾರ ಭಾರತ ಸರ್ಕಾರ, ರಾಜ್ಯ ಸರ್ಕಾರ ಮತ್ತು ಪ್ರವರ್ತಕ ಬ್ಯಾಂಕುಗಳ ಸಹಭಾಗಿತ್ವದಲ್ಲಿ ಒಂದು ಅಥವಾ ಎರಡು ಜಿಲ್ಲಾ ವ್ಯಾಪ್ತಿಯನ್ನು ಒಳಗೊಂಡಂತೆ

ಗ್ರಾಮೀಣ ಬ್ಯಾಂಕುಗಳನ್ನು ದೇಶದಾದ್ಯಂತ ಸ್ಥಾಪಿಸಲಾಯಿತು. ಅದರಂತೆ, ಮೈಸೂರು–ಚಾಮರಾಜನಗರ ಜಿಲ್ಲೆಗಳ ವ್ಯಾಪ್ತಿಯನ್ನೊಳಗೊಂಡ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಪ್ರಾಯೋಜಿತ ಕಾವೇರಿ ಕಲ್ಪತರು ಗ್ರಾಮೀಣ ಬ್ಯಾಂಕುಗಳನ್ನು ಆ ಭಾಗದಲ್ಲಿ ಸ್ಥಾಪಿಸಲಾಯಿತು.

**ಗ್ರಾಮೀಣ ಬ್ಯಾಂಕುಗಳ ಔಚಿತ್ಯತೆ:** ವಾಣಿಜ್ಯ ಬ್ಯಾಂಕುಗಳು ತಮ್ಮ ಬ್ಯಾಂಕಿಂಗ್ ಚಟುವಟಿಕೆಗಳನ್ನು ಕೇವಲ ನಗರ–ಪಟ್ಟಣಗಳಿಗೆ ಮಾತ್ರ ಸೀಮಿತಗೊಳಿಸಿದ್ದು, ಭಾರತದಲ್ಲಿ ಶೇ. ೭೦ರಷ್ಟು ಜನಸಂಖ್ಯೆಯುಳ್ಳ ಸುಮಾರು ೫.೫ ಲಕ್ಷದಷ್ಟು ಗ್ರಾಮಗಳ ರೈತ, ಕುಶಲಕರ್ಮಿ, ಕೃಷಿ ಕಾರ್ಮಿಕರೇ ಮೊದಲಾದ ಗ್ರಾಮಸ್ಥರ ಆರ್ಥಿಕ ಸ್ಥಿತಿಗತಿ, ಬೇಸಾಯ, ಕೃಷಿಯೇತರ ಚಟುವಟಿಕೆ, ಗ್ರಾಮೋದ್ಯೋಗ ಮೊದಲಾದವುಗಳನ್ನು ನಗರ ಪಟ್ಟಣಗಳಲ್ಲಿರುವಂತೆಯೇ ಸಮನಾದ ಅಭಿವೃದ್ಧಿಯನ್ನು ಸಾಧಿಸುವ ಜವಾಬ್ದಾರಿಯನ್ನು ವಾಣಿಜ್ಯ ಬ್ಯಾಂಕುಗಳು ಹೊರಲಾರವೆಂದು ಸರ್ಕಾರ ಪ್ರತ್ಯಕ್ಷದರ್ಶಿಯಾಗಿ ಮನಗಂಡು ಗ್ರಾಮೀಣ ಆರ್ಥಿಕತೆಯನ್ನು ಉತ್ತಮಪಡಿಸುವ ಗುರಿಯಿಂದ ಗ್ರಾಮೀಣ ಪರಿಸರಕ್ಕೆ ಹೊಂದಿಕೊಳ್ಳುವಂತೆ ಪ್ರತ್ಯೇಕ ಗ್ರಾಮೀಣ ಬ್ಯಾಂಕುಗಳನ್ನು ಸ್ಥಾಪಿಸಲು ಮುಂದಾಯಿತು. ಸಮಗ್ರ ಗ್ರಾಮೀಣ ಅಭಿವೃದ್ಧಿಗೆ ನೆರವಾಗುವ ಗುರಿಯಿಂದ ರೈತರ ಹಣದ ಬೇಡಿಕೆಯನ್ನು ಪೂರೈಸುವುದಕ್ಕೆ ಈ ಬ್ಯಾಂಕುಗಳು ಮೀಸಲಾಗಿದ್ದು ಗ್ರಾಮೀಣ ಮತ್ತು ಕೃಷಿ ಅಭಿವೃದ್ಧಿಗೆ ಪೂರ್ಣ ಪ್ರಮಾಣದಲ್ಲಿ ಸಕಾಲದಲ್ಲಿ ಹಣದ ಸೌಲಭ್ಯಗಳನ್ನು ಒದಗಿಸುತ್ತವೆ. ರೈತರು, ಸಾಹುಕಾರರು ಹಾಗೂ ಶ್ರೀಮಂತ ಜಮೀನ್ದಾರರಲ್ಲಿ ಪುನಃ ಸಾಲಕ್ಕೆ ಕೈಚಾಚುವುದನ್ನು ತಪ್ಪಿಸುವ ಗುರಿಯಿಂದ ಅತಿ ಸಣ್ಣ ರೈತರು ಮತ್ತು ಕೃಷಿ ಕಾರ್ಮಿಕರು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಗಿರಿಜನರು ಆದಿವಾಸಿಗಳು, ಸೋಲಿಗರು ಹಾಗೂ ಹಿಂದುಳಿದ ದುರ್ಬಲ ವರ್ಗದ ಬಡವರ ಜೀವನಮಟ್ಟವನ್ನು ಸುಧಾರಿಸಲು ನೆರವಾಗುವಂತೆ ಆರ್ಥಿಕ ನೆರವು ನೀಡುವುದೇ ಗ್ರಾಮೀಣ ಬ್ಯಾಂಕುಗಳ ಧ್ಯೇಯೋದ್ದೇಶವಾಗಿರುತ್ತದೆ. ೧೯೭೬ರಲ್ಲಿ ಮೈಸೂರು ಜಿಲ್ಲೆಯಲ್ಲಿ ಕಾವೇರಿ ಗ್ರಾಮೀಣ ಬ್ಯಾಂಕು ಐದು ಶಾಖೆಗಳನ್ನು ಸ್ಥಾಪಿಸಿತು. ೧೯೮೬ರಲ್ಲಿ ಇವುಗಳ ಸಂಖ್ಯೆ ೭೩ಕ್ಕೆ ಹೆಚ್ಚಿದವು.

೧೯೯೭ರಲ್ಲಿ ಚಾಮರಾಜನಗರ ಪ್ರತ್ಯೇಕ ಜಿಲ್ಲೆಯಾಗಿ ರಚನೆಗೊಂಡಾಗ ೩೩ ವಾಣಿಜ್ಯ ಬ್ಯಾಂಕುಗಳು ಮತ್ತು ೨೨ ಗ್ರಾಮೀಣ ಬ್ಯಾಂಕುಗಳು ನೂತನ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದವು. ೨೦೧೦ರ ವೇಳೆಗೆ ಇವುಗಳ ಒಟ್ಟು ಸಂಖ್ಯೆ ೭೫ಕ್ಕೆ ಹೆಚ್ಚಿತ್ತು.

ಚಾಮರಾಜನಗರ ಜಿಲ್ಲೆಯಲ್ಲೂ ಗ್ರಾಮೀಣ ಜನರ ಅಭ್ಯುದಯಕ್ಕಾಗಿ ಕೃಷಿಯಲ್ಲಿ ನಿರತರಾಗಿರುವ ಸಣ್ಣ ರೈತರು, ರೈತ ಕಾರ್ಮಿಕರು, ಬಡವರು, ದುರ್ಬಲ ವರ್ಗದವರು, ಅಲ್ಪಸಂಖ್ಯಾತರು, ಮಹಿಳೆಯರು, ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸುವಲ್ಲಿ ಈ ಬ್ಯಾಂಕುಗಳು ಉತ್ತಮ ಸೇವೆ ಸಲ್ಲಿಸುತ್ತಾ ಬಂದಿವೆ. ಗ್ರಾಮೀಣ ಜನರ ಉಳಿತಾಯದ ಹಣವನ್ನೂ ಠೇವಣಿ ರೂಪದಲ್ಲಿ ಸ್ವೀಕರಿಸುವುದು. ಅವರಲ್ಲಿ ಉಳಿತಾಯ ಪ್ರವೃತ್ತಿ ಹೆಚ್ಚುವಂತೆ ಉತ್ತೇಜನ ನೀಡುವುದು. ಪ್ರತಿ ತಿಂಗಳು ಗ್ರಾಮಸ್ಥರೊಂದಿಗೆ ಗ್ರಾಮೀಣ ಬ್ಯಾಂಕು ಮತ್ತು ಮಾರ್ಗದರ್ಶಿ ಬ್ಯಾಂಕುಗಳ ಅಧಿಕಾರಿಗಳು, ನೇರ ಸಂವಾದ ಏರ್ಪಡಿಸಿ ಬ್ಯಾಂಕುಗಳ ಚಟುವಟಿಕೆಗಳನ್ನು ಅವರಿಗೆ ಪರಿಚಯಿಸುವ ಮೂಲಕ ಗ್ರಾಮಸ್ಥರು ಬ್ಯಾಂಕು ವ್ಯವಹಾರಗಳಲ್ಲಿ ತೊಡಗುವಂತೆ ಪ್ರಚಾರಾಂದೋಳನದಲ್ಲಿ ಕಾರ್ಯಪ್ರವೃತ್ತರಾಗಿದ್ದು, ಗ್ರಾಮೀಣ ಜನರೊಂದಿಗೆ ಸಮಾಜಮುಖಿಗಳಾಗಿದ್ದಾರೆ.

ಕೃಷಿ ಮತ್ತು ಕೃಷಿಯೇತರ ಚಟುವಟಿಕೆಗಳಿಗೆ ಹಣವನ್ನು ಗ್ರಾಮೀಣ ಅಭಿವೃದ್ಧಿಗೆ ಸಾಕಷ್ಟು ಪ್ರಮಾಣದಲ್ಲಿ ಸಾಲಸೌಲಭ್ಯವನ್ನು ಸಕಾಲದಲ್ಲಿ ಒದಗಿಸುವುದು; ರೇಷ್ಮೆ, ಹೈನುಗಾರಿಕೆ, ಕುರಿ, ಕೋಳಿ ಸಾಕಣೆ, ಕಿರು ಅರಣ್ಯ ಅಭಿವೃದ್ಧಿ, ಸಣ್ಣ ನೀರಾವರಿ, ತೋಟಗಾರಿಕೆ, ಯುವಕರು ಸ್ವ ಉದ್ಯೋಗದಲ್ಲಿ ತೊಡಗುವಂತೆ ಆರ್ಥಿಕ ಧನಸಹಾಯ ನೀಡುವುದು; ಸಮಗ್ರ ಗ್ರಾಮೀಣ ಉದ್ಯೋಗಗಳ ಹೆಚ್ಚಳಕ್ಕೆ ನೆರವು ನೀಡುವುದು; ಸ್ತ್ರೀ ಶಕ್ತಿ ಅಥವಾ ಮಹಿಳಾ ಸಬಲೀಕರಣ ಯೋಜನೆ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಬಡವರು, ಹಿಂದುಳಿದ ದುರ್ಬಲ ವರ್ಗದವರು, ಅಲ್ಪಸಂಖ್ಯಾತರು, ಅಂಗವಿಕಲರು, ವಿಧವೆಯರು, ಬಡತನದಲ್ಲಿರುವ ಹಿರಿಯ ನಾಗರೀಕರು; ಸಣ್ಣ ಪ್ರಮಾಣದ ಕೈಗಾರಿಕೆಗಳು, ಕುಶಲಕರ್ಮಿಗಳು, ಗುಡಿ ಮತ್ತು ಗ್ರಾಮೀಣ ಕೈಗಾರಿಕೆ ಹಾಗೂ ಗ್ರಾಮೋದ್ಯೋಗ ಇವೇ ಮೊದಲಾದ ಚಟುವಟಿಕೆಗಳಿಗೆ ಕಾವೇರಿ ಗ್ರಾಮೀಣ ಬ್ಯಾಂಕು ಜಿಲ್ಲೆಯಲ್ಲಿ ಆರ್ಥಿಕ ನೆರವು ನೀಡುತ್ತಾ ಬಂದಿದೆ.

## ಮಾರ್ಗದರ್ಶಿ ಬ್ಯಾಂಕು (ಲೀಡ್ ಬ್ಯಾಂಕ್) ಯೋಜನೆ ಮತ್ತು ಪತ್ತಿನ ಕ್ರಿಯಾ ಯೋಜನೆ (ಕ್ರೆಡಿಟ್ ಪ್ಲಾನ್)

ಬ್ಯಾಂಕುಗಳ ರಾಷ್ಟ್ರೀಕರಣದ ನಂತರ ಹಿಂದುಳಿದ ಪ್ರದೇಶಗಳ ಅಭಿವೃದ್ಧಿಗೆ ಬ್ಯಾಂಕುಗಳ ಸೌಲಭ್ಯಗಳನ್ನು ಉಪಯೋಗಿಸಲು ಶ್ರೀ ನಾರಿಮನ್ ಸಮಿತಿಯು ಶಿಫಾರಸ್ಸು ಮಾಡಿದ್ದ ವರದಿಯನ್ನಾಧರಿಸಿ ೧೯೬೯ರ ಡಿಸೆಂಬರ್‌ನಲ್ಲಿ ಭಾರತೀಯ ರಿಸರ್ವ್ ಬ್ಯಾಂಕು ಮಾರ್ಗದರ್ಶಿ ಬ್ಯಾಂಕ್ ಯೋಜನೆಯನ್ನು ಜಾರಿಗೆ ತಂದಿತು. ಈ ಬ್ಯಾಂಕು ಯೋಜನೆಯನ್ವಯ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಜಿಲ್ಲೆಯ ಮಾರ್ಗದರ್ಶಿ (ಲೀಡ್‌ಬ್ಯಾಂಕು) ಬ್ಯಾಂಕಿನ ಹೊಣೆಗಾರಿಕೆಯನ್ನು ವಹಿಸಿಕೊಂಡಿದೆ. ಜಿಲ್ಲೆಯ ಆರ್ಥಿಕ ಸಾಮಾಜಿಕ ಸ್ಥಿತಿಗತಿಗಳ ಬಗೆಗೆ ಪ್ರಾಥಮಿಕ ಹಂತದಿಂದ ಸರ್ವೇಕ್ಷಣ ನಡೆಸಿ, ಆ ಪ್ರದೇಶದಲ್ಲಿ ಆರ್ಥಿಕ ಚಟುವಟಿಕೆಗಳ ಸಾಧ್ಯತೆ, ಲಭ್ಯವಿರುವ ಸಂಪನ್ಮೂಲಗಳನ್ನು ಆದ್ಯತಾ ವಲಯಗಳಿಗೆ ಅಗತ್ಯವಾದ ಸಾಲ ಮುಂಗಡಗಳ ಮಂಜೂರಾತಿ, ವ್ಯತ್ಯಾಸಾತ್ಮಕ ಬಡ್ಡಿಸಾಲ, ಜಿಲ್ಲೆಯ ಎಲ್ಲಾ ಸಾಂಸ್ಥಿಕ ಹಣಕಾಸು ಸಂಸ್ಥೆಗಳನ್ನೊಳಗೊಂಡಂತೆ ಆ ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ಅದರಲ್ಲಿಯೂ ವಿಶೇಷವಾಗಿ ಹಿಂದುಳಿದ ಪ್ರದೇಶದ ಅಭಿವೃದ್ಧಿಗೆ ನೆರವು ನೀಡುವುದು ಇದರ ಒಂದು ಮುಖ್ಯ ಉದ್ದೇಶವಾಗಿದೆ. ಮಾರ್ಗದರ್ಶಿ ಬ್ಯಾಂಕು ಯೋಜನೆಯನ್ನು ಇನ್ನೂ ಹೆಚ್ಚು ಪರಿಣಾಮಕಾರಿಯಾಗಿ ಮಾಡಲು ಜಿಲ್ಲೆಯ ಶಾಖಾ ಬ್ಯಾಂಕುಗಳಿಗೆ ಆಯ್ಕೆ ಮಾಡಿದ ಗ್ರಾಮಗಳ ಅಭಿವೃದ್ಧಿಗಾಗಿ "ಸಂಪೂರ್ಣ ಅಭಿವೃದ್ಧಿ ಸೇವಾಕ್ಷೇತ್ರ" ಎಂಬ ಯೋಜನೆಯನ್ನು ೧೯೮೯ರಿಂದ ರೂಪಿಸಲಾಗಿದೆ. ಬ್ಯಾಂಕುಗಳ ಶಾಖಾವಾರು ಸಾಲಯೋಜನೆ ಮತ್ತು ಕ್ರಿಯಾಯೋಜನೆಯನ್ನು ತಯಾರಿಸಿ ಅದನ್ನು ಕಾರ್ಯರೂಪಕ್ಕೆ ತರುವಲ್ಲಿ ಕ್ರಮ ಕೈಗೊಳ್ಳಲಾಗುತ್ತಿದೆ.

ಜಿಲ್ಲಾ ಮಾರ್ಗದರ್ಶಿ ಬ್ಯಾಂಕ್ ಯೋಜನೆಯನ್ವಯ ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿಗೆ ಚಾಮರಾಜನಗರ ಜಿಲ್ಲೆಯ ಈ ಹೊಣೆಗಾರಿಕೆಯನ್ನು ವಹಿಸಲಾಗಿದ್ದು, ಜಿಲ್ಲೆಯ ಎಲ್ಲಾ ಸಾಂಸ್ಥಿಕ ಹಣಕಾಸು ಸಂಸ್ಥೆಗಳ ಸಹಯೋಗದೊಂದಿಗೆ ಎಸ್.ಬಿ.ಎಂ. ವಾರ್ಷಿಕ ಜಿಲ್ಲಾ ಸಾಲ ಯೋಜನೆಗಳನ್ನು ತಯಾರಿಸಿ ಅದನ್ನು ಅನುಷ್ಠಾನಕ್ಕೆ ತರುತ್ತಿದೆ. ಈ ರೀತಿಯ ಸಾಲಯೋಜನೆಗಳು ಕಾರ್ಯರೂಪಕ್ಕೆ ಬಂದಂದಿನಿಂದ ಗ್ರಾಮಾಂತರ ಪ್ರದೇಶಗಳಿಗೆ ಹೆಚ್ಚಿನ ಸಾಲ ಸೌಲಭ್ಯಗಳು ದೊರಕುವಂತಾಗಿದೆ.

ಚಾಮರಾಜನಗರ ಜಿಲ್ಲೆಯ ಸಾಂಸ್ಥಿಕ ಹಣಕಾಸು ಸಂಸ್ಥೆಗಳ ಪ್ರಗತಿಗೆ ಸಂಬಂಧಿಸಿದ ಅಂಕಿಅಂಶಗಳ ವಿವರವನ್ನು ಕೋಷ್ಟಕ ೬.೧ರಲ್ಲಿ ಸಾಂಸ್ಥಿಕ ಹಣಕಾಸು ಸಂಸ್ಥೆಗಳ ಪ್ರಗತಿಗೆ ಸಂಬಂಧಿಸಿದ ಅಂಕಿಅಂಶಗಳ ವಿವರವನ್ನು ಕೋಷ್ಟಕ ೬.೨ರಲ್ಲಿ ನೀಡಲಾಗಿದೆ.

**ಕೋಷ್ಟಕ ೬.೧: ಚಾಮರಾಜನಗರ ಜಿಲ್ಲೆಯಲ್ಲಿ ೨೦೦೭ರ ಮಾರ್ಚ್ ಅಂತ್ಯದಲ್ಲಿದ್ದಂತೆ ಎಲ್ಲಾ ಸಾಂಸ್ಥಿಕ ಹಣಕಾಸು ಸಂಸ್ಥೆಗಳು ಸಾಧಿಸಿದ ಪ್ರಗತಿ (ಲಕ್ಷ ₹ ಗಳಲ್ಲಿ)**

| ಕ್ರ ಸಂ | ಜಿಲ್ಲೆಯ ಬ್ಯಾಂಕುಗಳು | ಒಟ್ಟು ಶಾಖೆಗಳು | ಗ್ರಾಮೀಣ | ನಗರ/ ಪಟ್ಟಣ | ಠೇವಣಿಗಳು | ಮುಂಗಡಗಳು | ಸಾಲ/ ಠೇವಣಿಗಳ ಅನುಪಾತ (ಶೇಕಡ) | ಒಟ್ಟು ಆದ್ಯತಾ ವಲಯ ಸಾಲ | ಒಟ್ಟು ಸಾಲಗಳಲ್ಲಿ ಆದ್ಯತಾ ವಲಯ ಸಾಲಗಳ ಪ್ರಮಾಣ (ಶೇ) | ಡಿಸಿ ಪ್ಲ್ಯಾನಿನ ಸಾಧನೆ. |
|---|---|---|---|---|---|---|---|---|---|---|
| ೧ | ಸ್ಟೇಟ್ ಬ್ಯಾಂಕ್ ಆಫ್ ಮೈಸೂರು | ೧೫ | ೧೦ | ೫ | ೧೭೭೯೯.೪೭ | ೧೧೪೦೫.೦೪ | ೬೪.೦೮ | ೧೧೨೫೮.೦೦ | ೯೮.೭೧ | ೧೯೪೬.೯೭ |
| ೨ | ಕೆನರಾ ಬ್ಯಾಂಕ್ | ೪ | ೨ | ೩ | ೪೧೦೩.೦೦ | ೯೩೯೯.೦೦ | ೨೨೯.೦೮ | ೮೫೬೪.೦೦ | ೯೧.೧೨ | ೩೩೭೫.೫೦ |
| ೩ | ಸಿಂಡಿಕೇಟ್ ಬ್ಯಾಂಕ್ | ೫ | ೨ | ೩ | ೭೪೪೬.೮೫ | ೮೪೧೨.೩೯ | ೧೧೨.೯೭ | ೬೬೨೪.೩೩ | ೭೮.೭೪ | ೩೧೭೧.೮೫ |
| ೪ | ವಿಜಯಾ ಬ್ಯಾಂಕ್ | ೬ | ೩ | ೩ | ೪೪೭೧.೦೬ | ೪೧೩೬.೩೪ | ೯೨.೫೧ | ೩೨೬೬.೨೩ | ೭೮.೯೬ | ೧೪೩೪.೫೭ |
| ೫ | ಇಂಡಿಯನ್ ಓವರ್‌ಸೀಸ್ ಬ್ಯಾಂಕ್ | ೧ | ೧ | – | ೪೧೯.೩೮ | ೫೩೯.೬೪ | ೧೨೮.೬೮ | ೪೮೯.೨೧ | ೯೦.೬೫ | ೯೫೯.೦೨ |
| ೬ | ಇಂಡಿಯನ್ ಬ್ಯಾಂಕ್ | ೧ | | ೧ | ೧೧೫೬.೨೩ | ೯೭೪.೪೧ | ೮೪.೨೭ | ೭೦೭.೪೨ | ೭೨.೬೦ | ೨೧೩೦.೬೪ |
| ೭ | ಯುನೈಟೆಡ್ ಬ್ಯಾಂಕ್ ಆಫ್ ಇಂಡಿಯಾ | ೨ | ೧ | ೨ | ೬೧೩.೮೨ | ೬೧೯.೫೦ | ೧೦೦.೯೩ | ೪೪೫.೦೦ | ೭೧.೮೩ | ೧೨೩೩.೩೨ |
| ೮ | ಬ್ಯಾಂಕ್ ಆಫ್ ಇಂಡಿಯಾ | ೧ | | ೧ | ೩೬೮.೭೨ | ೨೨೦.೦೦ | ೫೯.೬೭ | ೧೨೦.೦೦ | ೫೪.೫೫ | ೫೮೮.೭೨ |
| ೯ | ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ | ೨ | | ೨ | ೧೩೩೦.೦೭ | ೨೨೯೩.೦೨ | ೧೭೨.೪೦ | ೧೭೦೩.೮೮ | ೭೪.೩೧ | ೩೬೭೩.೦೯ |
| ೧೦ | ಇಂಗ್ ವೈಶ್ಯ ಬ್ಯಾಂಕ್ | ೨ | | ೨ | ೨೦೪೨.೫೮ | ೭೫೮.೭೦ | ೩೭.೧೪ | ೬೪೯.೯೩ | ೮೫.೬೬ | ೧೪೦೦.೬೪ |
| | ವಾಣಿಜ್ಯ ಬ್ಯಾಂಕುಗಳ ಒಟ್ಟು ಸಂಖ್ಯೆ | **೩೯** | **೧೮** | **೨೧** | **೩೯೭೫೧.೧೮** | **೩೮೭೫೮.೦೪** | **೯೭.೫೦** | **೩೩೮೨೮.೦೦** | **೮೭.೨೮** | **೨೧೨೧.೮೭** |
| ೧೧ | ಕಾವೇರಿ ಗ್ರಾಮೀಣ ಕಲ್ಪತರು ಬ್ಯಾಂಕು (ಪ್ರಾದೇಶಿಕ ಗ್ರಾಮೀಣ ಬ್ಯಾಂಕು) | ೨೩ | ೧೯ | ೪ | ೮೦೮೫.೦೯ | ೫೧೯೨.೧೯ | ೬೩.೮೫ | ೪೬೦೦.೦೦ | ೮೯.೧೧ | ೫೭೫.೯೭ |
| ೧೨ | ಚಾಮರಾಜನಗರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕು | ೪ | | ೪ | ೧೫೦೭.೧೦ | ೨೧೮೩.೨೯ | ೧೪೪.೮೭ | ೨೧೮೩.೨೯ | ೧೦೦.೦೦ | ೯೨೨.೬೦ |
| ೧೩ | ಪ್ರಾಥಮಿಕಸಹಕಾರಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕು | ೪ | ೪ | | ೧.೯೦ | ೨೦೬೧.೧೨ | ೧೦೮೪೮೦.೦೦ | ೨೦೯೧.೧೨ | ೧೦೦.೦೦ | ೫೧೫.೭೭ |
| ೧೪ | ಕರ್ನಾಟಕ ಕೈಗಾರಿಕಾ ಸಹಕಾರಿ ಬ್ಯಾಂಕು | ೧ | | ೧ | ೪.೫೭ | ೮೧೦.೭೧ | ೧೭೯೩೬.೦೬ | ೮೯೬.೭೮ | ೧೧೦.೦೦ | ೮೧೫.೨೩ |
| ೧೫ | ಕೈಗಾರಿಕಾ ರಾಜ್ಯ ಹಣಕಾಸು ನಿಗಮ | ೧ | | ೧ | | | | | | |
| | ಜಿಲ್ಲೆಯ ಒಟ್ಟು ಬ್ಯಾಂಕುಗಳು | **೭೨** | **೪೧** | **೩೧** | **೪೯೩೪೯.೭೯** | **೪೮೯೭೫.೩೫** | **೯೯.೨೪** | **೪೩೫೭೯.೧೭** | **೮೮.೯೬** | **೧೪೨೫** |

*ಆಧಾರ : ಲೀಡ್ ಬ್ಯಾಂಕು (ಸ್ಟೇಟ್ ಬ್ಯಾಂಕ್ ಆಫ್ ಮೈಸೂರು) ಚಾಮರಾಜನಗರ*

ಕೋಷ್ಟಕ ೬.೨: ಚಾಮರಾಜನಗರ ಜಿಲ್ಲೆಯ ಸಾಂಸ್ಥಿಕ ಹಣಕಾಸು ಸಂಸ್ಥೆಗಳು (ಬ್ಯಾಂಕುಗಳು) ಆದ್ಯತಾ ವಲಯಗಳಿಗೆ ಮುಂಗಡ ಸಾಲ ನೀಡಿಕೆ – ಪ್ರತಿ ಬ್ಯಾಂಕು ವಲಯವಾರು ವಾರ್ಷಿಕ ಪತ್ತಿನ ಕ್ರಿಯಾ ಯೋಜನೆ ೦೧–೦೪–೨೦೦೬ ರಿಂದ ೩೧–೦೩–೨೦೦೭ರವರೆಗೆ (ಲಕ್ಷ ರೂ.ಗಳಲ್ಲಿ)

| ಕ್ರ ಸಂ | ಜಿಲ್ಲೆಯ ಬ್ಯಾಂಕುಗಳು | ಶಾಖೆಗಳು | ೧ | | | | | | | ೨ | | |
|---|---|---|---|---|---|---|---|---|---|---|---|---|
| | | | ಕೃಷಿ ಬೆಳೆಸಾಲ | | ಕೃಷಿಗೆ ನೇರ ಸಾಲ | | ಕೃಷಿವಲಯಗಳಿಗೆ ನೀಡಿದ ಒಟ್ಟು ಸಾಲ | | ಶೇಕಡ | ಸಣ್ಣ ಕೈಗಾರಿಕೆಗಳಿಗೆ ಸಾಲ | | |
| | | | ವಾರ್ಷಿಕ ಗುರಿ | ಸಾಧನೆ | ವಾರ್ಷಿಕ ಗುರಿ | ಸಾಧನೆ | ವಾರ್ಷಿಕ ಗುರಿ | ಸಾಧನೆ | | ವಾರ್ಷಿಕಗುರಿ | ಸಾಧನೆ | ಶೇಕಡ |
| ೧ | ಸ್ಟೇಟ್ ಬ್ಯಾಂಕ್ ಆಫ್ ಮೈಸೂರು | ೧೫ | ೧೩೬೩.೨೪ | ೧೮೨೬.೮೩ | ೧೩೧೨.೭೬ | ೧೧೬೩.೯೧ | ೨೬೭೬.೦೦ | ೨೯೯೦.೭೪ | ೧೧೨ | ೨೧೩.೫೦ | ೭೮.೮೫ | ೩೭ |
| ೨ | ಕೆನರಾ ಬ್ಯಾಂಕ್ | ೪ | ೯೧೬.೭೦ | ೧೩೪೯.೭೧ | ೧೧೫೧.೮೭ | ೩೬೬.೬೪ | ೨೦೬೮.೫೭ | ೧೭೨೬.೩೫ | ೮೩ | ೨೦.೦೦ | ೪.೦೦ | ೨೦ |
| ೩ | ಸಿಂಡಿಕೇಟ್ ಬ್ಯಾಂಕ್ | ೫ | ೬೨೨.೭೦ | ೧೦೦೧.೭೩ | ೬೧೩.೦೪ | ೯೦೭.೬೫ | ೧೨೩೫.೭೪ | ೧೯೨೧.೩೮ | ೧೫೫ | ೫೪.೫೫ | ೪೯೦.೩೫ | ೮೯೯ |
| ೪ | ವಿಜಯಾ ಬ್ಯಾಂಕ್ | ೬ | ೪೯೯.೦೦ | ೬೫೫.೫೭ | ೨೨೯.೭೦ | ೪೫೧.೭೬ | ೭೨೮.೭೦ | ೧೧೦೭.೩೩ | ೧೫೨ | ೪೪.೫೦ | ೩.೪೦ | ೮ |
| ೫ | ಇಂಡಿಯನ್ ಓವರ್‌ಸೀಸ್ ಬ್ಯಾಂಕ್ | ೧ | ೧೭೪.೦೦ | ೧೩೭.೧೯ | ೪೨.೭೫ | ೩೭.೫೧ | ೨೧೬.೭೫ | ೧೭೪.೭೦ | ೮೧ | ೪.೭೫ | ೨.೦೦ | ೪೨ |
| ೬ | ಇಂಡಿಯನ್ ಬ್ಯಾಂಕ್ | ೧ | ೧೩೦.೫೪ | ೧೨೮.೬೪ | ೭೦.೭೦ | ೪೯.೦೭ | ೨೦೧.೨೪ | ೧೭೭.೭೧ | ೮೮ | ೩.೩೩ | ೦.೬೦ | ೧೮ |
| ೭ | ಯುನೈಟೆಡ್ ಬ್ಯಾಂಕ್ ಆಫ್ ಇಂಡಿಯಾ | ೩ | ೮೦.೦೦ | ೭೧.೮೩ | ೧೪.೧೦ | ೦.೧೨ | ೯೪.೧೦ | ೭೧.೯೫ | ೭೬ | ೩.೦೦ | ೪.೭೫ | ೧೫೮ |
| ೮ | ಬ್ಯಾಂಕ್ ಆಫ್ ಇಂಡಿಯಾ | ೧ | ೭.೫೦ | ೨.೭೯ | ೨೪.೫೦ | ೧೭.೮೫ | ೩೨.೦೦ | ೨೦.೬೪ | ೬೫ | ೪.೫೦ | ೧೧.೯೦ | ೨೬೪ |
| ೯ | ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ | ೨ | ೨೮.೮೬ | ೨೩೯.೪೯ | ೧೭೭.೧೪ | ೬೮.೪೨ | ೨೦೬.೦೦ | ೩೦೭.೯೬ | ೧೪೯ | ೪೦.೫೦ | ೮.೨೦ | ೨೦ |
| ೧೦ | ಇಂಗ್ ವೈಶ್ಯ ಬ್ಯಾಂಕ್ | ೨ | ೭೪.೦೬ | ೩೦೯.೭೭ | ೧೨೨.೪೬ | ೩೪.೪೨ | ೧೯೬.೫೨ | ೩೪೪.೧೯ | ೧೭೫ | ೮೪.೫೬ | ೨೩.೧೯ | ೨೭ |
| ೧೧ | ಕಾವೇರಿ ಗ್ರಾಮೀಣ ಕಲ್ಪತರು ಬ್ಯಾಂಕು (ಪ್ರಾದೇಶಿಕ ಗ್ರಾಮೀಣ ಬ್ಯಾಂಕು) | ೨೩ | ೯೩೦.೦೦ | ೧೨೧೨.೫೭ | ೨೪೯.೨೫ | ೨೭೧.೮೭ | ೧೧೭೯.೨೫ | ೧೪೦೪.೪೪ | ೧೨೮ | ೭೦.೦೦ | ೩೪.೯೦ | ೫೦ |
| ೧೨ | ಚಾಮರಾಜನಗರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕು | ೪ | ೨೬೬೧.೬೦ | ೧೭೭೧.೧೩ | ೫೩೮.೭೦ | ೨೧೮.೧೬ | ೩೨೦೦.೩೦ | ೧೯೮೯.೭೯ | ೬೨ | ೫೪.೮೦ | ೪.೧೫ | ೮ |
| ೧೩ | ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕು | ೪ | – | – | ೩೭೪.೪೦ | ೩೨೦.೨೮ | ೩೭೪.೪೦ | ೩೨೦.೨೦ | ೮೬ | ೬.೦೦ | ೨.೦೦ | ೩೩ |
| ೧೪ | ಕರ್ನಾಟಕ ಕೈಗಾರಿಕಾ ಸಹಕಾರಿ ಬ್ಯಾಂಕು | ೧ | – | – | – | – | – | –– | – | – | –– | – |
| ೧೫ | ಕೈಗಾರಿಕಾ ರಾಜ್ಯ ಹಣಕಾಸು ನಿಗಮ | ೧ | – | – | – | – | – | – | – | ೭೮.೦೦ | ೧೦೨.೦೬ | ೧೩೧ |
| | **ಜಿಲ್ಲೆಯ ಒಟ್ಟು ಬ್ಯಾಂಕುಗಳು** | **೭೨** | **೭೪೮೮.೨೦** | **೮೭೨೯.೨೫** | **೪೯೨೧.೩೭** | **೩೯೦೭.೭೧** | **೧೨೪೦೯.೫೭** | **೧೨೬೩೬.೯೬** | **೧೦೨** | **೬೮೨.೪೪** | **೭೭೦.೩೫** | **೧೧೩** |

| ಕ್ರ ಸಂ | ಜಿಲ್ಲೆಯ ಬ್ಯಾಂಕುಗಳು | ೩ | | | ೪ | | |
|---|---|---|---|---|---|---|---|
| | | ಇತರ ಸೇವಾವಲಯಗಳು | | | ಒಟ್ಟು ಮೊತ್ತ | | |
| | | ವಾರ್ಷಿಕ ಗುರಿ | ಸಾಧನೆ | ಶೇಕಡ | ವಾರ್ಷಿಕ ಗುರಿ | ಸಾಧನೆ | ಶೇಕಡ |
| ೧ | ಸ್ಟೇಟ್ ಬ್ಯಾಂಕ್ ಆಫ್ ಮೈಸೂರು | ೧೬೧೯.೦೦ | ೭೬೯.೯೩ | ೪೮ | ೪೫೦೮.೫೦ | ೩೮೫೯.೫೨ | ೮೫ |
| ೨ | ಕೆನರಾ ಬ್ಯಾಂಕ್ | ೩೬೪.೭೦ | ೩೮೬.೭೮ | ೯೮ | ೨೪೮೩.೭೨ | ೨೧೧೭.೧೩ | ೮೫ |
| ೩ | ಸಿಂಡಿಕೇಟ್ ಬ್ಯಾಂಕ್ | ೭೮೩.೨೫ | ೮೯೪.೬೨ | ೧೧೪ | ೨೦೩೩.೫೪ | ೩೩೦೬.೩೫ | ೧೫೯ |
| ೪ | ವಿಜಯಾ ಬ್ಯಾಂಕ್ | ೩೦೫.೧೫ | ೬೦೩.೧೭ | ೧೯೮ | ೧೦೭೮.೩೫ | ೧೭೧೩.೯೦ | ೧೫೯ |
| ೫ | ಇಂಡಿಯನ್ ಓವರ್‌ಸೀಸ್ ಬ್ಯಾಂಕ್ | ೯.೪೦ | ೪೪.೨೫ | ೪೭೧ | ೨೩೦.೯೦ | ೨೨೦.೯೫ | ೯೬ |
| ೬ | ಇಂಡಿಯನ್ ಬ್ಯಾಂಕ್ | ೫೦.೦೦ | ೪೩.೨೦ | ೮೬ | ೨೫೪.೫೭ | ೨೨೧.೫೧ | ೮೭ |
| ೭ | ಯುನೈಟೆಡ್ ಬ್ಯಾಂಕ್ ಆಫ್ ಇಂಡಿಯಾ | ೧೮.೦೦ | ೬೦.೨೭ | ೩೩೫ | ೧೧೫.೧೦ | ೧೩೬.೯೭ | ೧೧೯ |
| ೮ | ಬ್ಯಾಂಕ್ ಆಫ್ ಇಂಡಿಯಾ | ೪೭.೦೦ | ೨೮.೮೭ | ೬೧ | ೮೩.೫೦ | ೬೧.೪೧ | ೭೪ |
| ೯ | ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ | ೧೪೦.೦೦ | ೨೮೯.೮೭ | ೨೦೮ | ೩೮೭.೦೦ | ೬೦೬.೦೩ | ೧೫೭ |
| ೧೦ | ಇಂಗ್ ವೈಶ್ಯ ಬ್ಯಾಂಕ್ | ೧೮೨.೧೮ | ೨೪೧.೪೩ | ೧೩೩ | ೪೬೩.೨೬ | ೬೦೮.೮೧ | ೧೩೧ |
| ೧೧ | ಕಾವೇರಿ ಗ್ರಾಮೀಣ ಬ್ಯಾಂಕು | ೯೩೫.೭೫ | ೧೦೧೭ | ೧೦೯ | ೨೧೮೫.೦೦ | ೨೫೩೬.೯೮ | ೧೧೬ |
| ೧೨ | ಚಾಮರಾಜನಗರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕು | | ೬೪.೦೯ | – | ೩೨೫೫.೧೦ | ೨೦೫೭.೫೩ | ೬೩ |
| ೧೩ | ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕು | ೭೪.೬೭ | ೫೯.೦೦ | ೭೯ | ೪೫೫.೦೭ | ೩೮೧.೨೮ | ೮೪ |
| ೧೪ | ಕರ್ನಾಟಕ ಕೈಗಾರಿಕಾ ಸಹಕಾರಿ ಬ್ಯಾಂಕು | | | | | | |
| ೧೫ | ಕೈಗಾರಿಕಾ ರಾಜ್ಯ ಹಣಕಾಸು ನಿಗಮ | ೧೦೨.೦೦ | ೪೫.೨೦ | ೪೪ | ೧೮೦.೦೦ | ೧೪೭.೨೬ | ೫೨ |
| | ಒಟ್ಟು ಮೊತ್ತ | **೪೬೬೧.೫೯** | **೪೫೪೮.೩೨** | **೯೮** | **೧೭೭೫೩.೬೦** | **೧೭೯೫೫.೬೩** | **೧೦೧** |

*ಆಧಾರ: ೧,೨ ಮತ್ತು ೩ ಲೀಡ್ ಬ್ಯಾಂಕು (ಸ್ಟೇಟ್ ಬ್ಯಾಂಕ್ ಆಫ್ ಮೈಸೂರು) ಚಾಮರಾಜನಗರ*

**ಕೋಷ್ಟಕ ೬.೩: ಚಾಮರಾಜನಗರ ಜಿಲ್ಲೆ ಸಾಂಸ್ಥಿಕ ಹಣಕಾಸು ಸಂಸ್ಥೆಗಳು ಆದ್ಯತಾ ವಲಯಗಳಿಗೆ ನೀಡಿದ ಮುಂಗಡ ಸಾಲ ಬಾಕಿ (೩೦-೦೩-೨೦೦೬ರವರೆಗೆ)**

(ಲಕ್ಷ ರೂ.ಗಳಲ್ಲಿ)

| ಕ್ರಸಂ | ಬ್ಯಾಂಕುಗಳು | ಕೃಷಿ/ಡೇರಿ | ಎಸ್.ಎಸ್.ಐ. ಎಸ್.ಬಿ.ಎಸ್ | ಒ.ಪಿ.ಎಸ್. | ಒಟ್ಟು | ಎಸ್.ಸಿ./ ಎಸ್.ಟಿ. | ಶೇ | ದುರ್ಬಲ ವರ್ಗ | ಶೇ | ಮಹಿಳೆಯರಿಗೆ | ಶೇ | ಅಲ್ಪಸಂಖ್ಯಾತರಿಗೆ | ಶೇ. |
|---|---|---|---|---|---|---|---|---|---|---|---|---|---|
| ೧ | ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ | ೧೯೫.೨೬ | ೪.೫೨ | ೪೪.೧೫ | ೨೪೩.೯೩ | ೦.೩೮ | ೦.೧೬ | – | ೦೦ | ೩೦.೪೩ | ೧೨.೪೭ | ೬.೭೧ | ೨.೭೫ |
| ೨ | ಸ್ಟೇಟ್ ಬ್ಯಾಂಕ್ ಆಫ್ ಮೈಸೂರು | ೬೮೩೧.೦೦ | ೩೭೩.೦೦ | ೪೦೫೪.೦೦ | ೧೧೨೫೮.೦೦ | ೧೦೧೩.೦೦ | ೯.೦೦ | ೧೬೮೯.೦೦ | ೧೫.೦೦ | ೧೮೨೫.೦೦ | ೧೬.೨೧ | ೨೧೫೬.೦೦ | ೧೯.೧೫ |
| ೩ | ಕೆನರಾ ಬ್ಯಾಂಕ್ | ೭೩೪೨.೦೦ | ೧೬೧.೦೦ | ೧೦೬೧.೦೦ | ೮೫೬೪.೦೦ | ೫೧೪.೦೦ | ೬.೦೦ | ೧೩೮೦.೦೦ | ೧೬.೧೧ | ೧೪೩೦.೦೦ | ೧೬.೭೦ | ೪೩೯.೦೦ | ೫.೧೩ |
| ೪ | ಇಂಡಿಯನ್ ಬ್ಯಾಂಕ್ | ೨೮೯.೫೨ | ೧೦.೯೨ | ೧೧೭.೦೨ | ೪೧೭.೪೬ | ೩೮.೭೯ | ೯.೨೬ | ೯೧.೬೭ | ೨೧.೯೬ | ೮೩.೭೪ | ೨೦.೦೬ | ೪೮.೦೭ | ೧೧.೫೧ |
| ೫ | ಐ.ಒ.ಬಿ | ೨೦೪.೬೩ | ೬೨.೫೮ | ೮.೫೭ | ೨೭೫.೭೬ | ೨೮.೦೦ | ೧೦.೧೫ | ೨೦೨.೦೦ | ೭೩.೨೫ | ೩೯.೮೪ | ೧೪.೪೫ | ೧೦.೦೧ | ೩.೯೩ |
| ೬ | ಸಿಂಡಿಕೇಟ್ ಬ್ಯಾಂಕ್ | ೪೪೬೫.೭೫ | ೪೩.೦೧ | ೨೧೧೫.೫೭ | ೬೬೨೪.೩೩ | ೬೯೪.೭೭ | ೧೦.೪೯ | ೧೩೨೩.೩೦ | ೧೯.೯೮ | ೭೪೪.೫೭ | ೧೧.೨೪ | ೪೩೪.೮೦ | ೬.೫೬ |
| ೭ | ವಿಜಯಾ ಬ್ಯಾಂಕ್ | ೧೯೯೧.೦೦ | ೯೩.೩೪ | ೧೧೮೧.೮೯ | ೩೨೬೬.೨೩ | ೯೦.೭೦ | ೨.೭೮ | ೧೩೧೭.೨೦ | ೪೦.೨೩ | ೫೫೨.೩೪ | ೧೯.೯೧ | ೧೫೦.೭೦ | ೪.೬೧ |
| ೮ | ಕಾವೇರಿ ಗ್ರಾಮೀಣ ಬ್ಯಾಂಕ್ | ೨೯೮೮.೫೧ | ೪೬.೩೮ | ೧೫೬೪.೯೯ | ೪೫೯೯.೮೮ | ೧೮೩೬.೭೧ | ೩೯.೯೩ | ೩೪೪೯.೧೮ | ೭೪.೯೮ | ೧೨೨೯.೫೫ | ೨೬.೫೧ | ೩೦೩.೪೪ | ೯.೬೦ |
| ೯ | ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ | ೩೭೩೭.೯೧ | ೫೭೬.೯೦ | | ೪೩೧೭.೫೧ | ೬೨೫.೧೫ | ೧೪.೪೮ | | | ೨೪೯.೨೮ | ೫.೭೭ | ೨೨.೮೯ | ೦.೫೩ |
| ೧೦ | ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕು | ೨೦೬೧.೧೨ | – | | ೨೦೯೧.೧೨ | | | | | ೧೩೬.೬೨ | ೬.೬೩ | | |
| ೧೧ | ಇಂಗ್ ವೈಶ್ಯ ಬ್ಯಾಂಕ್ | ೨೮೦.೩೨ | ೧೦.೧೨ | ೨೨೭.೫೯ | ೫೧೭.೯೩ | ೧೭.೫೯ | ೩.೪೦ | ೩೦.೯೦ | ೫.೯೭ | ೨೧.೮೩ | ೪.೨೧ | ೧೬೭.೯೭ | ೩೨.೪೩ |
| ೧೨ | ಬ್ಯಾಂಕ್ ಆಫ್ ಇಂಡಿಯಾ | ೭.೦೦ | ೭೭.೦೦ | ೬೭.೦೦ | ೧೫೧.೦೦ | ೨.೦೦ | ೧.೩೨ | ೨.೦೦ | ೧.೩೨ | ೩.೦೦ | ೧.೯೯ | ೪.೦೦ | ೨.೬೫ |
| ೧೩ | ಯುನೈಟೆಡ್ ಬ್ಯಾಂಕ್ ಆಫ್ ಇಂಡಿಯಾ | ೨೩೫.೩೭ | ೭.೭೭ | ೫೫.೪೮ | ೨೯೮.೬೨ | ೩೫.೯೦ | ೧೨.೦೨ | ೧೨೪.೦೯ | ೪೧.೫೫ | ೩೮.೨೬ | ೧೨.೮೧ | ೭.೫೦ | ೨.೫೧ |
| | ಒಟ್ಟು | ೩೦೬೨೯.೦೯ | ೧೪೬೯.೪೨ | ೧೦೪೯೭.೨೬ | ೪೨೫೫೫.೭೭ | ೪೮೯೬.೯೯ | ೧೧.೫೦ | ೯೬೦೯.೩೪ | ೨೨.೫೬ | ೬೩೭೪.೪೬ | ೧೪.೯೭ | ೩೭೫೧.೦೯ | ೮.೮೧ |

*ಎಸ್.ಎಸ್.ಐ=ಸಣ್ಣಕೈಗಾರಿಕೆಗಳು,ಎನ್‌ಎಫ್‌ಎಸ್=ಕೃಷಿಯೇತರ ಚಟುವಟಿಕೆಗಳು: ಒಪಿಎಸ್=ಇತರ ಅದ್ಯತಾವಲಯಗಳು: ಎಸ್‌ಸಿ/ಎಸ್‌ಟಿ=ಪರಿಶಿಷ್ಟಜಾತಿ/ಪರಿಶಿಷ್ಟಪಂಗಡ ವಲಯವಾರು ಹಂಚಿಕೆ;ಆದ್ಯತಾ ವಲಯಗಳಿಗೆ ಹಂಚಿಕೆ–ಶೇ.೪೦; ಕೃಷಿ ವಲಯ–ಶೇ.೧೮; ಸಣ್ಣ ಪ್ರಮಾಣದ ಕೈಗಾರಿಕೆಗಳು–ಶೇ.೧೮; ದುರ್ಬಲ ವರ್ಗದವರು–ಶೇ.೨೫; ಪರಿಶಿಷ್ಟ ಜಾತಿ–ಶೇ.೧೫; ಪರಿಶಿಷ್ಟ ಪಂಗಡ–ಶೇ.೭.೫೦; ಅಲ್ಪಸಂಖ್ಯಾತರು–ಶೇ.೫; ಮಹಿಳೆಯರು–ಶೇ.೫*

**ಕೋಷ್ಟಕ ೬.೪: ಚಾಮರಾಜನಗರ ಜಿಲ್ಲೆಯ ಸಾಂಸ್ಥಿಕ ಹಣಕಾಸು ಸಂಸ್ಥೆಗಳು (ಅಂಕಿಅಂಶಗಳ ವಿವರ) ೩೧-೦೩-೨೦೦೭ ರವರೆಗೆ**

| ಕ್ರ. ಸಂ | ವಿವರ | ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ (ಡಿಸಿಸಿಬಿ) | ಪ್ರಾಥಮಿಕ ಕೃಷಿ ಸಹಕಾರ ಸಂಘಗಳು (ಪಿಎಸಿಎಸ್) | ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ (ಪಿಸಿಎಆರ್ ಡಿಬಿಎಸ್) | ಪ್ರಾದೇಶಿಕ ಗ್ರಾಮೀಣ ಬ್ಯಾಂಕ್ (ಆರ್. ಆರ್.ಬಿ) | ವಾಣಿಜ್ಯ ಬ್ಯಾಂಕ್ (ಸಿ.ಬಿ) | ಒಟ್ಟು |
|---|---|---|---|---|---|---|---|
| ೧ | ಬ್ಯಾಂಕುಗಳ ಸಂಖ್ಯೆ | ೧ | ೪ | ೪ | ೧೯ | ೨೦ | ೪೦ |
| ೨ | ಬ್ಯಾಂಕುಗಳ ಶಾಖೆಗಳು | | ೮೩ | | | | |
| ೩ | ೧. ಗ್ರಾಮೀಣ | ೧ | | | ೧ | ೭ | ೯ |
| ೪ | ೨. ಪಟ್ಟಣ | ೪ | | ನಗರ-೧ ಪಟ್ಟಣ-೩ | ೩ | ೧೦ | ೯+೧೯ |
| ೫ | ೩.ಒಟ್ಟು ಸಂಖ್ಯೆ | ೫ | ೮೩ | ೦೪ | ೨೩ | ೩೭ | ೬೯+೮೩ |
| ೬ | ಸಾಲ ನೀಡಿದ ಒಟ್ಟು ಸಂಖ್ಯೆ | ೬೪೫೦ | | ೯೭೦೨ | ೧೭೫೮೮ | ೪೪೨೦೨ | ೭೭೯೪೨ |
| ೭ | ಪ್ರತಿ ಶಾಖೆ ನೀಡಿದ ಸಾಲ | ೧೨೯೦ | | ೨೪೨೩ | ೭೬೫ | ೧೧೯೫ | ೧೪೧೮ |
| ೮ | ಸರಾಸರಿ ಜನಸಂಖ್ಯೆಗೆ ಶಾಖೆ | | | | | | ೧೩೯೨ |
| ೯ | ಪ್ರತಿ ಸಾಖೆಗೆ ಒಳಪಟ್ಟ ಗ್ರಾಮಗಳು (ಸರಾಸರಿ) | ೫ | | ೧೧೦ | ೧೯ | ೧೨ | ೩೬.೫ |
| ೧೦ | ಪ್ರತಿ ಶಾಖೆಯ ಸರಾಸರಿ ಠೇವಣಿ ಸಂಗ್ರಹಣೆ | ೩೦೧.೪೨ | | ೧.೨೮ | ೩೫೧.೫೨ | ೧೦೭೪.೩೫ | ೪೩೨.೧೪ |
| ೧೧ | ಒಟ್ಟು ಸಾಲದ ಬಾಕಿ ಬರಬೇಕಾದುದು | ೨೧೮೩.೨೯ | | ೨೮೭೧.೮೩ | ೫೧೬೨.೧೯ | ೩೮೭೫೯.೦೪ | ೪೮೯೭೬.೩೫ |
| ೧೨ | ಪ್ರತಿ ಶಾಖೆಯ ಸಾಲದ ಬಾಕಿ | ೨೪.೮ | | ೫೭೪.೨ | ೨೨೪.೪ | ೧೦೪೭.೫ | ೪೬೭.೭ |
| ೧೩ | ಶೇಕಡಾ ಕೃಷಿ ಸಾಲ | **೮೯.೫** | | **೭೨.೦** | **೬೫.೦** | **೬೯.೦** | **೭೩.೧೨** |
| | ಸಾಲ ಠೇವಣಿ ಅನುಪಾತ | ೧೪೫ | | | ೬೪ | ೯೮ | ೯೯ |

*ಆಧಾರ: ಸ್ಟೇಟ್ ಬ್ಯಾಂಕ ಆಫ್ ಮೈಸೂರು,ಮಾರ್ಗದರ್ಶಿ ಬಾಂಕು, ಚಾಮರಾಜನಗರ ಜಿಲ್ಲೆ*

## ಜಿಲ್ಲಾ ಸಾಲ ಯೋಜನೆ ೨೦೧೦-೧೧

೨೦೧೦-೧೧ ನೇ ಸಾಲಿಗೆ ಒಟ್ಟು ಸಾಲ ಯೋಜನೆ ₹ ೪೨೩.೦೬ ಕೋಟಿ ಆಗಿದ್ದು, ಅದು ಕಳೆದ ವರ್ಷಕ್ಕಿಂತ ₹ ೧೧೩.೧೫ ಕೋಟಿಗಳಷ್ಟು ಹೆಚ್ಚು ವೆಚ್ಚದಿಂದ ಕೂಡಿದೆ. ೧೯೮೮ರಿಂದ ಜಿಲ್ಲಾ ಸಾಲ ಯೋಜನೆ ಜಿಲ್ಲೆಯ ಪ್ರತಿ ಗ್ರಾಮದಲ್ಲಿ ಕೃಷಿ ಮತ್ತು ಕೃಷಿಯೇತರ ಚಟುವಟಿಕೆಗಳಿಗೆ ಆದ್ಯತಾ ಮತ್ತು ಇತರ ವಲಯಗಳಿಗೆ ಕಾವೇರಿ ಕಲ್ಪತರು ಬ್ಯಾಂಕು, ವಾಣಿಜ್ಯ ಬ್ಯಾಂಕುಗಳು ಸಹಕಾರಿ ಬ್ಯಾಂಕುಗಳು, ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕು ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ಮುಂತಾದವು ವಿವಿಧ ಯೋಜನೆಯಡಿಗಳಲ್ಲಿ ಸಾಲ ಸೌಲಭ್ಯಗಳನ್ನು ನೀಡಿ ಸಮಗ್ರ ಗ್ರಾಮೀಣ ಮತ್ತು ಕೃಷಿ ಅಭಿವೃದ್ಧಿಯಲ್ಲಿ ಮುನ್ನಡೆ ಸಾಧಿಸಿವೆ.

### ಕೋಷ್ಟಕ ೬.೫: ೨೦೧೦–೧೧ನೇ ಸಾಲಿನ ಜಿಲ್ಲಾ ಸಾಲ ಯೋಜನೆಯ ವಿವರ (ಮೊತ್ತ ಲಕ್ಷ ₹ ಗಳಲ್ಲಿ)

| ಕ್ರ. ಸಂ | ವಿವರ | ಮೊತ್ತ | ಸಾಲ ಪಡೆದವರ ಖಾತೆಗಳ ಸಂಖ್ಯೆ |
|---|---|---|---|
| ೧ | ಆದ್ಯತಾ ವಲಯ | ೪೨೩೦೫.೫೩ | ೬೭೨೪೧ |
| ೨. | ಆದ್ಯತಾ ವಲಯಕ್ಕೆ ಒಳಪಡದ | ೧೮೦೦.೫೦ | ೪೦೧೫ |
| ೨ | ವಿವಿಧ ರೀತಿಯ ಬ್ಯಾಂಕುಗಳ ಯೋಜನೆ (ಆದ್ಯತಾ ವಲಯ) | ಮೊತ್ತ | ಶೇಕಡವಾರು |
| | ಅ. ವಾಣಿಜ್ಯ ಬ್ಯಾಂಕುಗಳು | | |
| | ೧. ಸಾರ್ವಜನಿಕ ವಲಯ | ೨೮೧೧೬.೬೬ | ೬೬.೪೬ |
| | ೨. ಖಾಸಗಿ ವಲಯ | ೧೭೮೦.೯೯ | ೪.೨೧ |
| ೩ | ಕಾವೇರಿ ಕಲ್ಪತರು ಗ್ರಾಮೀಣ ಬ್ಯಾಂಕು | ೫೪೯೨.೭೫ | ೧೨.೯೮ % |
| ೩ | ಸಹಕಾರಿ ಬ್ಯಾಂಕುಗಳು | | |
| | ಕರ್ನಾಟಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕು (ಕಾಸ್ಕರ್ಡ್) | ೩೮೩.೮೧ | ೦.೯೧ % |
| ೪ | ಎಂ.ಸಿ.ಡಿ.ಸಿ.ಸಿ. ಬ್ಯಾಂಕ್ | ೫೯೩೧.೩೨ | ೧೪.೦೨ % |
| ೫ | ಕರ್ನಾಟಕ ರಾಜ್ಯ ಹಣಕಾಸು ನಿಗಮ (ಕೆ.ಎಸ್.ಎಫ್.ಸಿ) | ೬೦೦.೦೦ | ೧.೪೨% |
| | ಒಟ್ಟು ಯೋಜನೆ | ೪೨೩೦೫.೫೩ | ೧೦೦ % |
| ೩ | ವಲಯವಾರು ಸಾಲ ಯೋಜನೆ | | |
| | ೧.ಕೃಷಿ ಸಾಲ (ಬೆಳೆಸಾಲ) | ೧೭೧೨೧.೩೨ | ೪೦.೪೭ % |
| | ೨. ಮಧ್ಯಮಾವಧಿ ಸಾಲ (ಕೃಷಿ) | ೯೫೭೫.೯೨ | ೨೨.೬೪ % |
| | ೩. ಗುಡಿ ಮತ್ತು ಸಣ್ಣ ಕೈಗಾರಿಕೆ | ೧೯೨೦.೨೦ | ೪.೫೪ % |
| | ೪. ವ್ಯಾಪಾರ ಮತ್ತು ಇತರ ಸೇವೆ | ೧೩೬೮೮.೦೯ | ೩೨.೩೬ % |
| | ಒಟ್ಟು | **೪೨೩೦೫.೫೩** | ೧೦೦ % |

*ಆಧಾರ: ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಮಾರ್ಗದರ್ಶಿ ಬ್ಯಾಂಕು ಚಾಮರಾಜನಗರ ಜಿಲ್ಲೆ*

### ಕೋಷ್ಟಕ ೬.೬: ೨೦೧೦–೧೧ನೇ ಸಾಲಿನ ಜಿಲ್ಲಾ ಸಾಲ ಯೋಜನೆ ವಲಯವಾರು ಹಂಚಿಕೆ ವಿವರ

| ಕ್ರ.ಸಂ | ಸಾಲದ ವಿವರ | ಖಾತೆಗಳ ಸಂಖ್ಯೆ | ಮೊತ್ತ (ಲಕ್ಷ ₹ ಗಳಲ್ಲಿ) |
|---|---|---|---|
| ೧ | ಬೆಳೆಸಾಲ | ೩೭೮೬೦ | ೧೭೧೨೧.೩೨ |
| ೨ | ಇತರೇ ಆದ್ಯತಾ ವಲಯಗಳು | ೧೧೩೫೨ | ೧೩೬೮೮.೦೯ |
| ೩ | ತೋಟಗಾರಿಕೆ | ೪೬೭೮ | ೨೫೧೫.೯೦ |
| ೪ | ಕೃಷಿಯೇತರ ಮತ್ತು ಗುಡಿ ಮತ್ತು ಸಣ್ಣ ಕೈಗಾರಿಕೆಗಳು | ೨೫೮೧ | ೧೯೨೦.೨೦ |
| ೫ | ಹೈನುಗಾರಿಕೆ (ಪಶುಸಂಗೋಪನೆ) | ೨೧೮೯ | ೯೫೧.೫೦ |
| ೬ | ಸಣ್ಣ ನೀರಾವರಿ | ೪೨೯೧ | ೨೩೨೧.೭೦ |
| ೭ | ಭೂ ಅಭಿವೃದ್ಧಿ | ೧೪೨೭ | ೮೪೪.೨೭ |
| ೮ | ಕೃಷಿ ಯಾಂತ್ರೀಕರಣ | ೫೮೮ | ೧೬೬೧.೧೪ |
| ೯ | ಕೋಳಿ ಸಾಕಾಣಿಕೆ | ೧೬೪ | ೫೮ |
| ೧೦ | ಕುರಿ,ಮೇಕೆ,ಹಂದಿ,ಮೊಲ ಇತರ ಸಾಕಾಣಿಕೆ | ೪೦೦ | ೨೨೭.೫೬ |
| ೧೧ | ಮೀನುಗಾರಿಕೆ | ೧೨೪ | ೪೭.೫೦ |
| ೧೨ | ಅರಣ್ಯ ಅಭಿವೃದ್ಧಿ ಮತ್ತು ಬಂಜರು ಭೂಮಿ ಅಭಿವೃದ್ಧಿ | ೨೩೪ | ೭೯.೦೦ |
| ೧೩ | ಮಾರುಕಟ್ಟೆ ಮತ್ತು ಉಗ್ರಾಣ ವ್ಯವಸ್ಥೆ | ೨೨೮ | ೩೨೬.೬೦ |
| ೧೪ | ಇತರ ಕೃಷಿ ಮತ್ತು ಕೃಷಿ ಆಧಾರಿತ ಚಟುವಟಿಕೆಗಳು | ೧೧೨೫ | ೫೪೨.೭೫ |
| | ಒಟ್ಟು | **೬೭೨೪೧** | **೪೨೩೦೫.೫೩** |

**ಕೋಷ್ಟಕ ೬.೭: ೨೦೧೦–೧೧ರ ಅನ್ವಯ ಜಿಲ್ಲೆಯಲ್ಲಿದ್ದ ಬ್ಯಾಂಕುಗಳ ಸಾಲ ಯೋಜನೆ (ಲಕ್ಷ ₹ ಗಳಲ್ಲಿ)**

| ಕ್ರ. ಸಂ | ಜಿಲ್ಲೆಯ ಬ್ಯಾಂಕುಗಳು | ಶಾಖೆಗಳ ಸಂಖ್ಯೆ | ಖಾತೆಗಳ ಸಂಖ್ಯೆ | ಕೃಷಿ ಮತ್ತು ಕೃಷಿ ಅವಲಂಬಿತ ವಲಯಗಳು | ಕೃಷಿಯೇತರ ಮತ್ತು ಗುಡಿ ಮತ್ತು ಸಣ್ಣ ಕೈಗಾರಿಕಾ ವಲಯಗಳು | ಇತರ ಆದ್ಯತಾ ವಲಯ | ಒಟ್ಟು ಮೊತ್ತ | ಶೇಕಡಾವಾರು |
|---|---|---|---|---|---|---|---|---|
| ೧ | ಸ್ಟೇಟ್ ಬ್ಯಾಂಕ್ ಆಫ್ ಮೈಸೂರು | ೧೭ | ೧೧೨೫೦ | ೨೪೩೭.೨೬ | ೬೧೦.೦೦ | ೪೬೯೦.೮೦ | ೧೦೭೩೭.೨೬ | ೨೫.೩೮ |
| ೨ | ಸ್ಟೇಟ್ ಬ್ಯಾಂಕ್ ಆಪ್ ಇಂಡಿಯಾ | ೩ | ೫೧೮೦ | ೧೫೦೦.೦೦ | ೧೫೦.೦೦ | ೧೩೫೦.೦೦ | ೩೦೦೦.೦೦ | ೭.೦೯ |
| ೩ | ಕೆನರಾ ಬ್ಯಾಂಕ್ | ೫ | ೬೯೭೫ | ೪೦೫೪.೦೦ | ೪೯.೮೦ | ೫೯೫.೫೦ | ೪೬೯೯.೩೦ | ೧೧.೧೧ |
| ೪ | ಸಿಂಡಿಕೇಟ್ ಬ್ಯಾಂಕ್ | ೫ | ೩೫೪೪ | ೧೫೭೩.೧೦ | ೯೦.೦೦ | ೧೫೪೯.೫೦ | ೩೨೧೨.೬೦ | ೭.೫೯ |
| ೫ | ವಿಜಯಾ ಬ್ಯಾಂಕ್ | ೬ | ೧೯೯೨ | ೨೭೫೫.೦೦ | ೧೪೪.೧೦ | ೧೦೬೭.೪೦ | ೩೯೬೬.೫೦ | ೯.೩೮ |
| ೬ | ಇಂಡಿಯನ್ ಓವರ್‌ಸೀಸ್ ಬ್ಯಾಂಕ್ | ೧ | ೬೬೨ | ೩೬೦.೦೦ | ೧೦.೦೦ | ೧೦೦.೦೦ | ೪೭೦.೦೦ | ೧.೧೧ |
| ೭ | ಇಂಡಿಯನ್ ಬ್ಯಾಂಕ್ | ೧ | ೧೨೦೦ | ೬೩೦.೦೦ | ೫೦.೦೦ | ೧೬೦.೦೦ | ೮೬೦.೦೦ | ೨.೦೩ |
| ೮ | ಬ್ಯಾಂಕ್ ಆಪ್ ಇಂಡಿಯಾ | ೧ | ೫೮೪ | ೨೨೮.೦೦ | ೪೨.೦೦ | ೨೩೦.೦೦ | ೫೦೦.೦೦ | ೧.೧೮ |
| ೯ | ಯುನೈಟೆಡ್ ಬ್ಯಾಂಕ್ ಆಫ್ ಇಂಡಿಯಾ | ೨ | ೫೪೦ | ೪೬೧.೦೦ | ೩೦.೦೦ | ೧೮೦.೦೦ | ೬೭೧.೦೦ | ೧.೫೯ |
| ೧೦ | ಇಂಗ್ ವೈಶ್ಯ ಬ್ಯಾಂಕ್ | ೨ | ೭೩೫ | ೬೫೭.೬೦ | ೫೦.೦೦ | ೪೭೩.೩೯ | ೧೧೮೦.೯೯ | ೨.೭೯ |
| ೧೧ | ಕರ್ನಾಟಕ ಬ್ಯಾಂಕು | ೧ | ೨೦೬ | ೧೩೭.೦೦ | ೪೦.೦೦ | ೧೨೩.೦೦ | ೩೦೦.೦೦ | ೦.೭೧ |
| ೧೨ | ಅಕ್ಸಿಸ್ ಬ್ಯಾಂಕು | ೧ | ೩೬೨ | ೨೦೦.೦೦ | ೦.೦೦ | ೧೦೦.೦೦ | ೩೦೦.೦೦ | ೦.೭೧ |
| ೧೩ | ಕಾವೇರಿ ಕಲ್ಪತರು ಗ್ರಾಮೀಣ ಬ್ಯಾಂಕು | ೨೨ | ೧೧೨೩೫ | ೨೮೪೩.೧೫ | ೪೪೨೩೦ | ೨೨೦೭.೩೦ | ೫೪೯೨.೭೫ | ೧೨.೯೮ |
| ೧೪ | ಎಂ.ಸಿ.ಡಿ.ಸಿಸಿ. ಬ್ಯಾಂಕು | ೪ | ೨೫೫೧೫ | ೫೫೦೩.೩೨ | ೧.೦೦ | ೪೨೭.೦೦ | ೫೯೩೧.೩೨ | ೧೪.೦೨ |
| ೧೫ | ಕ್ಯಾಸ್ಕಾರ್ಡ್ | ೪ | ೧೨೩೪ | ೩೩೭.೮ | ೧೧.೦೦ | ೩೫.೦೦ | ೩೮೩.೮೧ | ೦.೯೧ |
| ೧೬ | ಕೈಗಾರಿಕಾ ರಾಜ್ಯ ಹಣಕಾಸು ನಿಗಮ | ೧ | ೨೪ | ೦.೦೦ | ೨೦೦.೦೦ | ೪೦೦.೦೦ | ೬೦೦.೦೦ | ೧.೪೨ |
| | **ಒಟ್ಟು ಮೊತ್ತ** | **೭೬** | **೬೭೨೪೧** | **೨೬೬೯೭.೨೪** | **೧೯೨೦.೨೦** | **೧೩೬೮೮.೦೯** | **೪೨೩೦೫.೫೩** | **೧೦೦.೦೦** |

*ಆಧಾರ: ಲೀಡ್ ಬ್ಯಾಕ್, (ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಚಾಮರಾಜನಗರ ಜಿಲ್ಲೆ, ೨೦೧೦–೧೧*

ಮಾರ್ಗದರ್ಶಿ ಬ್ಯಾಂಕು ಇತರ ಬ್ಯಾಂಕು ಸಮೂಹಕ್ಕೆ ನಾಯಕ ಸ್ಥಾನದಲ್ಲಿರುತ್ತದೆ. ಶಾಖಾ ರಹಿತ ಪ್ರದೇಶಗಳನ್ನು ವಿವಿಧ ಬ್ಯಾಂಕುಗಳಿಗೆ ಹಂಚಿ ಅಲ್ಲಿ ಶಾಖೆಗಳನ್ನು ತೆರೆಯುವಂತೆ ಮಾಡುವುದು, ಜಿಲ್ಲಾ ಸಾಲ ಯೋಜನೆಯ ರೂಪಣೆ, ಸಾಲ ಯೋಜನೆಯೂ ಸೇರಿದಂತೆ, ವಿವಿಧ ಯೋಜನೆಗಳ ಅನುಷ್ಠಾನದಲ್ಲಿ ವಿವಿಧ ಬ್ಯಾಂಕುಗಳ ನಡುವೆ ಸಮನ್ವಯ ಸಾಧಿಸವುದು ಮಾರ್ಗದರ್ಶಿ ಬ್ಯಾಂಕಿನ ಜವಾಬ್ದಾರಿಯಾಗಿದೆ. ಬ್ಯಾಂಕು, ಪಾಲುದಾರಿಕೆ ತಂತ್ರದ ಮೂಲಕ ಹೆಚ್ಚಿನ ಜವಾಬ್ದಾರಿ ನಿರ್ವಹಿಸುತ್ತದೆ. ಶಾಖಾ ರಹಿತ ಹಿಂದುಳಿದ ಪ್ರದೇಶಗಳಲ್ಲಿ ಶಾಖಾ ವಿಸ್ತರಣೆ ನಡೆಸುವಲ್ಲಿ ಮಹತ್ವದ ಪಾತ್ರ ವಹಿಸಿದೆ. ೧೯೬೯ರಲ್ಲಿ ಭಾರತದಲ್ಲಿ ೮೨೬೨ ಬ್ಯಾಂಕು ಶಾಖೆಗಳಿದ್ದವು. ೨೦೦೭ರಲ್ಲಿ ಶಾಖೆಗಳ ಸಂಖ್ಯೆ ೭೭೭೧೧ಕ್ಕೆ ಏರಿತು. ಅಂದರೆ ಇದು ಒಂಭತ್ತು ಪಟ್ಟು ಹೆಚ್ಚಳವಾಗಿದೆ. ಬ್ಯಾಂಕುಗಳ ಠೇವಣಿ ಮೊತ್ತ ₹ ೪೬೪೬ ಕೋಟಿಗಳಿಂದ ₹ ೨೦೬೦,೦೦೦ ಕೋಟಿಗಳಿಗೆ

ಹೆಚ್ಚಿದೆ. ಅಂದರೆ ಸುಮಾರು ೫೬೦ ಪಟ್ಟು ಹೆಚ್ಚಳ ಕಂಡು ಬಂದಿದೆ. ಹಾಗೆಯೇ ನೀಡಿದ ಸಾಲ ಮೊತ್ತ ₹ ೩೫೯ ಕೋಟಿಗಳಿಂದ ₹ ೧೯೫೦೦೦೦ ಕೋಟಿಗಳಿಗೆ ಏರಿದೆ. (೫೪೨ ಪಟ್ಟು ಹೆಚ್ಚಳ) ೧೯೬೯ರಲ್ಲಿ ೬೪೦೦೦ ಜನರಿಗೊಂದರಂತೆ ಬ್ಯಾಂಕು ಶಾಖೆಯಿದ್ದರೆ, ೨೦೦೯ರಲ್ಲಿ ೧೨೦೦೦ ಜನರಿಗೊಂದರಂತೆ ಬ್ಯಾಂಕು ಶಾಖೆಗಳಿದ್ದವು. ೧೯೯೯ರಲ್ಲಿ ಶಾಖೆಗಳ ಸರಾಸರಿ ಠೇವಣಿ ₹ ೫೬ ಲಕ್ಷಗಳಿದ್ದರೆ, ೨೦೦೯ರಲ್ಲಿ ಅದು ₹ ೩೭ ಕೋಟಿಗಳಿಗೆ ಹೆಚ್ಚಿದೆ. ಅಂದರೆ ಸುಮಾರು ೭೦ ಪಟ್ಟು ಹೆಚ್ಚಳವಾಗಿದೆ. ಶಾಖೆಗಳ ಸರಾಸರಿ ಸಾಲ ₹ ೪೪ ಲಕ್ಷಗಳಿಂದ ೨೦೧೦ರ ವೇಳೆಗೆ ₹ ೩೦ ಕೋಟಿಗಳಿಗೆ ಹೆಚ್ಚಿದೆ. ಅಂದರೆ ೬೫ ಪಟ್ಟು ಏರಿಕೆ ಕಂಡು ಬಂದಿದೆ.

ಮಾರ್ಗದರ್ಶಿ ಬ್ಯಾಂಕು ಯೋಜನೆಯು ಚಾಮರಾಜನಗರ ಜಿಲ್ಲೆಯ ಜನರಿಗೆ ಶೇ. ೧೦೦ರಷ್ಟು ಹಣಕಾಸಿನ ಪ್ರಯೋಜನವಾಗಬೇಕೆಂಬ ಗುರಿಯಿಂದ, ಎಲ್ಲಾ ವರ್ಗದ ಜನರಲ್ಲಿಯೂ ಬ್ಯಾಂಕಿಂಗ್ ಅಭ್ಯಾಸ, ಉಳಿತಾಯ ಅಭ್ಯಾಸ, ಉತ್ಪಾದನೆಗಾಗಿ ಸಾಲ ನೀಡಿಕೆಯಿಂದ ಫಲೋತ್ಪಾದಕ ಬಳಕೆ, ಹಣಕಾಸಿನ ಸಾಕ್ಷರತೆ, ಸಾಲ ಸಾಕ್ಷರತೆ, ಎಲ್ಲಾ ಗ್ರಾಮಗಳಲ್ಲಿ ಆಗಬೇಕೆಂಬ ಗುರಿಯನ್ನು ಮೈಗೂಡಿಸಿಕೊಂಡಿದೆ. ಜಿಲ್ಲೆಯ ಎಲ್ಲರೂ ಹಣಕಾಸಿನ ಮತ್ತು ಆರ್ಥಿಕ ಜೀವನದ ಮುಖ್ಯ ವಾಹಿನಿಗೆ ಬರುವಂತಾಗಬೇಕು. ಅವರೆಲ್ಲ ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಹಣಕಾಸಿನ ಸೊತ್ತುಗಳನ್ನು ಹೊಂದುವಂತಾಗಬೇಕು ಎಂಬ ದೃಷ್ಟಿಯಿಂದ ಆರಂಭಗೊಂಡ ಮಾರ್ಗದರ್ಶಿ ಬ್ಯಾಂಕು ಸುಧಾರಣೆ ಯೋಜನೆಯು, ಜಿಲ್ಲೆಯ ಎಲ್ಲ ಜನರಿಗೂ ಮಾರ್ಗದರ್ಶಿ ಸೇವೆ ಸಲ್ಲಿಸುತ್ತಿದೆ.

## ಜಿಲ್ಲಾ ಸಾಲ ಯೋಜನೆ

ಜಿಲ್ಲೆಯ ಎಲ್ಲಾ ಬ್ಯಾಂಕುಗಳ ಶಾಖೆಗಳಿಗೆ ಸಂಬಂಧಿಸಿದಂತೆ, ಶಾಖಾವಾರು ಯೋಜನೆಗಳನ್ನು ಪ್ರತೀ ವರ್ಷ ತಯಾರಿಸುತ್ತವೆ. ಈ ಎಲ್ಲಾ ಶಾಖಾವಾರು ಯೋಜನೆಗಳನ್ನು ಕ್ರೋಡೀಕರಿಸಿ ತಾಲೂಕು ಮಟ್ಟದ ಸಾಲಯೋಜನೆ, ನಂತರ ಜಿಲ್ಲಾ ಮಟ್ಟದ ಸಾಲಯೋಜನೆಯನ್ನು ಲೀಡ್ ಬ್ಯಾಂಕ್ ಸಿದ್ಧಪಡಿಸುತ್ತದೆ. ಈ ಸಾಲಯೋಜನೆಗಳಲ್ಲಿ ವಿವಿಧ ಕ್ಷೇತ್ರಗಳಿಗೆ ಸಾಲ ನೀಡುವ ಗುರಿಯನ್ನು ನಿಗದಿಪಡಿಸಲಾಗುತ್ತದೆ. ಈ ಯೋಜನೆಗಳ ಅನುಷ್ಠಾನದ ಜವಾಬ್ದಾರಿ ಮತ್ತು ಕಾಲಕಾಲಕ್ಕೆ ಅದರ ಪ್ರಗತಿ ಪರಿಶಿಲನೆ ನಡೆಸುವುದು ಲೀಡ್ ಬ್ಯಾಂಕಿನ ಪ್ರಮುಖ ಹೊಣೆಗಾರಿಕೆಯಾಗಿದ್ದು, ಅದರ ಯಶಸ್ವಿ ನಿರ್ವಹಣೆಗಾಗಿ ಬ್ಲಾಕ್ ಮಟ್ಟದ ಬ್ಯಾಂಕುಗಳ ಸಮಿತಿ (ಬಿಎಲ್‌ಬಿಸಿ) ಯೋಜನೆಗಳ ಅನುಷ್ಠಾನ ಪ್ರಗತಿ ಪರಿಶೀಲನೆ, ಮುಂತಾದ ವಿಷಯಗಳ ಬಗ್ಗೆ ಸವಿಸ್ತಾರ ಚರ್ಚೆ ನಡೆಸಿದ್ದರೆ ಜಿಲ್ಲಾ ಮಟ್ಟದ ಸಮನ್ವಯ ಸಮಿತಿಯ (ಡಿ.ಸಿ.ಸಿ.) ಸಭೆಯಲ್ಲಿ ಜಿಲ್ಲಾ ಸಾಲ ಯೋಜನೆಗಳ ಚಿಂತನ–ಮಂಥನ ಜರುಗುತ್ತದೆ. ಜಿಲ್ಲಾ ಮಟ್ಟದ ಪರಿಶೀಲನಾ ಸಮಿತಿ (ಡಿ.ಎಲ್.ಆರ್.ಸಿ)ಯು ವಿವಿಧ ಯೋಜನೆಗಳ ಪ್ರಗತಿ ಪರಿಶೀಲನೆ ಮತ್ತು ಅನುಷ್ಠಾನಗೊಳ್ಳುವಲ್ಲಿ ಬರುವ ಅಡಚಣೆಗಳ ಬಗ್ಗೆ ಚರ್ಚಿಸಿ ಪರಿಹಾರ ಕಂಡುಕೊಳ್ಳುತ್ತದೆ. ಸ್ಥಾಯಿ ಸಮಿತಿಗಳು (**Standing Committee**) ಪ್ರತೀ ತಿಂಗಳು ಸಭೆ ಸೇರಿ ಮಾಸಿಕ ಪ್ರಗತಿ ಪರಿಶೀಲನೆ ನಡೆಸುತ್ತಿದ್ದು, ಇವು ಡಿ.ಸಿ.ಸಿ.ಯ ಅಂಗ ಸಮಿತಿಗಳಾಗಿರುತ್ತವೆ. ಜಿಲ್ಲಾ ಮಟ್ಟದ ಸ್ವರ್ಣಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆ (S.G.S.Y.)ಸಮಿತಿಯು ಯೋಜನೆಯ ಪ್ರಗತಿ ಪರಿಶೀಲನೆ, ಅನುಷ್ಠಾನದಲ್ಲಿಯ ಕುಂದುಕೊರತೆ ಇತ್ಯಾದಿ ವಿಷಯಗಳ ಬಗ್ಗೆ ಚರ್ಚಿಸುತ್ತದೆ. ಜಿಲ್ಲಾ ಮಟ್ಟದ ಭದ್ರತಾ ಸಮಿತಿಯ ಭದ್ರತಾ ಸಂಬಂಧಿ ವಿಷಯಗಳ ಬಗ್ಗೆ ಚರ್ಚಿಸಿ ಸೂಕ್ತ ಕ್ರಮಜಾರಿಗೊಳಿಸಲು ಆರು ತಿಂಗಳಿಗೊಮ್ಮೆ ಸಭೆ ನಡೆಸುತ್ತದೆ.

ಈ ಮೇಲೆ ತಿಳಿಸಿದ ಸಮಿತಿಗಳಲ್ಲದೆ ಲೀಡ್ ಬ್ಯಾಂಕ್ ಮ್ಯಾನೇಜರರು ಜಿಲ್ಲೆಯ ಪ್ರಮುಖ ಸಮಿತಿಗಳಲ್ಲಿ ಕ್ರಿಯಾಶೀಲ ಸದಸ್ಯರಾಗಿ ಜಿಲ್ಲೆಯ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಾರೆ. ಪ್ರತಿ ಶಾಖೆಗಳಿಂದ

ಲೀಡ್ ಬ್ಯಾಂಕು ವರದಿಗಳನ್ನು ಕಾಲಕಾಲಕ್ಕೆ ಸಂಗ್ರಹಿಸಿ ಗಣಕೀಕರಿಸಿ ಜಿಲ್ಲಾ ಮಟ್ಟದ ವರದಿಗಳನ್ನು ಭಾರತೀಯ ರಿಜರ್ವ್ ಬ್ಯಾಂಕು, ರಾಜ್ಯ ಮಟ್ಟದ ಬ್ಯಾಂಕುಗಳ ಸಮಿತಿ (S.L.B.C.), ನಬಾರ್ಡ್ ಇತ್ಯಾದಿ ಕಚೇರಿಗಳಿಗೆ ತಲುಪಿಸುವ ಜವಾಬ್ದಾರಿ ಲೀಡ್ ಬ್ಯಾಂಕ್‌ನ ಕರ್ತವ್ಯವಾಗಿರುತ್ತದೆ.

## ಬ್ಯಾಂಕುಗಳು ನೀಡುವ ಸೇವಾ ಸೌಲಭ್ಯಗಳು

ಜಿಲ್ಲೆಯ ಬ್ಯಾಂಕುಗಳು ನೀಡುವ ಆರ್ಥಿಕ ಉತ್ಪನ್ನ ಸೇವಾಸೌಲಭ್ಯಗಳಲ್ಲಿ ಠೇವಣಿ ಸಂಗ್ರಹಣೆ, ಸಾಲಯೋಜನೆಗಳು, ಜೀವವಿಮೆ ಮತ್ತು ಅನ್ಯ ವಿಮಾಸೌಲಭ್ಯ, ಕ್ರೆಡಿಟ್/ಡೆಬಿಟ್ ಕಾರ್ಡುಗಳು, ನಗದು ನಿರ್ವಹಣಾ ಸೇವೆ, ವಿದೇಶಗಳಿಗೆ ತ್ವರಿತವಾಗಿ ಹಣ ರವಾನೆ ಮುಂತಾದ ಸೇವೆಗಳು ಸೇರಿವೆ.

ಬದಲಾದ ಬ್ಯಾಂಕಿಂಗ್ ಸನ್ನಿವೇಶದಲ್ಲಿ ಬ್ಯಾಂಕುಗಳು ಇಂದು ಬಹುವಿಧ ಸೇವಾ ಮಾಧ್ಯಮಗಳಾದ ಎ.ಟಿ.ಎಂ. ಕೋರ್ ಬ್ಯಾಂಕಿಂಗ್ ಸೊಲ್ಯೂಶನ್ (ಸಿಬಿಎಸ್) ಕಾಲ್ ಸೆಂಟರ್, ಟೆಲಿಬ್ಯಾಂಕಿನ ಇಂಟರ್‌ನೆಟ್ ಬ್ಯಾಂಕಿಂಗ್ ಮತ್ತು ಸಂಚಾರಿ ಬ್ಯಾಂಕಿಂಗ್ ಸೌಲಭ್ಯಗಳನ್ನು ಒದಗಿಸುತ್ತಿವೆ. ಚಾಮರಾಜನಗರ ಜಿಲ್ಲೆಯಲ್ಲಿ ಈ ವ್ಯವಸ್ಥೆಗಳನ್ನು ನಾಲ್ಕು ತಾಲೂಕು ಕೇಂದ್ರಗಳಲ್ಲಿ ಒದಗಿಸಿವೆ. ಇವಲ್ಲದೆ ಜಿಲ್ಲೆಯಲ್ಲಿ ಬ್ಯಾಂಕುಗಳು ವಿವಿಧ ಜನೋಪಯೋಗಿ ಸೇವೆಗಳಾದ ವಿದ್ಯುತ್/ನೀರಿನ ಬಿಲ್ಲು ಪಾವತಿ, ಟೆಲಿಫೋನ್ ಬಿಲ್ ಪಾವತಿ, ರೈಲ್ವೆ, ಬಸ್, ವಿಮಾನ ಟಿಕೆಟ್ ಕಾದಿರುಸುವಿಕೆ, ಗ್ರಾಹಕರಿಗೆ ಚಿನ್ನದ ಮಾರಾಟ, ಜೀವವಿಮೆ ಕಂತು ಪಾವತಿ ಮುಂತಾದವುಗಳನ್ನು ಒದಗಿಸುತ್ತವೆ. ಇತ್ತೀಚೆಗೆ ಬ್ಯಾಂಕುಗಳು ಹೊಸದಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ತೆರಿಗೆ/ತೆರಿಗೇತರ ಆದಾಯ ಸಂಗ್ರಹಣಾ ಸೇವೆಗಳ ಜೊತೆಗೆ ಮುಜರಾಯಿ ಇಲಾಖೆಗೆ ಸಂಬಂಧಿಸಿದ ವಂತಿಗೆ, ದೇಣಿ ಹಾಗೂ ಇತರ ಸೇವಾ ಕಾರ್ಯಗಳಲ್ಲಿ ನಿರತವಾಗಿವೆ.

## ಸಂಪನ್ಮೂಲ ಸಂಗ್ರಹಣೆ

ಚಾಮರಾಜನಗರ ಜಿಲ್ಲೆಯಲ್ಲಿರುವ ಬ್ಯಾಂಕಿಂಗ್ ವ್ಯವಸ್ಥೆಯು ವಿವಿಧ ಯೋಜನೆಗಳ ಮೂಲಕ ಠೇವಣಿ ಸಂಗ್ರಹಿಸಿ ಜನತೆಯ ಉಳಿತಾಯ ಒಟ್ಟುಗೂಡಿಸುವುದರಲ್ಲಿ ಶ್ಲಾಘನೀಯ ಕಾರ್ಯಸಾಧನೆಯನ್ನು ಮಾಡಿವೆ. ಒಟ್ಟು ಠೇವಣಿಗಳ ಬೆಳವಣಿಗೆ ವರ್ಷದಿಂದ ವರ್ಷಕ್ಕೆ ವೃದ್ಧಿಗೊಳ್ಳುತ್ತಿದೆ. ಜಿಲ್ಲೆಯಲ್ಲಿ ಬ್ಯಾಂಕುಗಳು ಬ್ಯಾಂಕಿಂಗ್ ಸೌಲಭ್ಯ ತಲುಪದ ಗ್ರಾಮ, ಗುಡ್ಡಗಾಡು ಹಾಗೂ ಗಡಿ ಪ್ರದೇಶಗಳಿಗೆ ಸೌಲಭ್ಯವನ್ನು ನೀಡುವುದರ ಜೊತೆಗೆ ಅನಿವಾಸಿ ಭಾರತೀಯರ ಆದಾಯ ಸ್ವದೇಶಕ್ಕೆ ಹರಿದುಬರುವಂತೆ ಮಾಡಿದ ಪ್ರಯತ್ನಗಳೂ ಈ ಸಾಧನೆಗೆ ಕಾರಣವಾಗಿದೆ.

ಜಿಲ್ಲೆಯಿಂದ ಸಂಗ್ರಹಿಸಿದ ಸಂಪನ್ಮೂಲಗಳನ್ನು ಬ್ಯಾಂಕುಗಳು ಜಿಲ್ಲೆಯ ಸರ್ವಾಂಗೀಣ ಅಭಿವೃದ್ಧಿಗೆ ವಿನಿಯೋಗಿಸಲು ಅದರಲ್ಲೂ ಮುಖ್ಯವಾಗಿ ಆದ್ಯತಾ ರಂಗಗಳಾದ ಕೃಷಿ, ಕೃಷಿ ಉಪವೃತ್ತಿ, ಕೃಷಿ ಆಧಾರಿತ ಕೈಗಾರಿಕೆಗಳು ಸಣ್ಣ ಪ್ರಮಾಣದ ಉದ್ದಿಮೆ, ಚಿಲ್ಲರೆ ವ್ಯಾಪಾರ, ಸಣ್ಣ ವ್ಯವಹಾರ ಮತ್ತು ಸ್ವಉದ್ಯೋಗಗಳು, ಸ್ತ್ರೀಶಕ್ತಿ ಸಹಾಯಕ ಯೋಜನೆಗಳು, ಶಿಕ್ಷಣ, ರಸ್ತೆ ಸಾರಿಗೆ, ವಸತಿ ಹಾಗೂ ದುರ್ಬಲ ವರ್ಗಗಳ ಅವಶ್ಯಕತೆ ಪೂರೈಸಲು ಸಾಲಸೌಲಭ್ಯಗಳನ್ನು ಕೈಗೊಂಡಿವೆ. ಚಾಮರಾಜನಗರ ಜಿಲ್ಲೆಯು ಹಿಂದುಳಿದ ಕೃಷಿ ಪ್ರಧಾನ ಜಿಲ್ಲೆಯಾದುದರಿಂದ ಕೃಷಿ ಚಟುವಟಿಕೆಗಳಾದ ಭೂ ಅಭಿವೃದ್ಧಿ ಆಹಾರ ಸಂಸ್ಕರಣೆ, ಕೃಷಿ ಯಂತ್ರಗಳ ಖರೀದಿ, ತೋಟಗಾರಿಕೆ, ಹೈನುಗಾರಿಕೆ, ಜೇನು ಹಾಗೂ ರೇಷ್ಮೆ ಸಾಕಣೆ, ಗ್ರಾಮೀಣ ಗೋದಾಮು, ಕೃಷಿ ಚಿಕಿತ್ಸಾಲಯ, ಕೃಷಿ ವ್ಯವಹಾರ ಕೇಂದ್ರ ಮುಂತಾದವುಗಳಿಗೆ ಆರ್ಥಿಕ ನೆರವು ನೀಡುತ್ತಾ ಬಂದಿದೆ.

## ಕೃಷಿ ವಲಯಕ್ಕೆ ನೀಡಿದ ಆರ್ಥಿಕ ನೆರವು

**೧. ಕಿಸಾನ್ ಕ್ರೆಡಿಟ್ ಕಾರ್ಡ್ ಯೋಜನೆ:** ರೈತರ ಕ್ರೆಡಿಟ್ ಕಾರ್ಡ್ ಯೋಜನೆಯು ಮೂಲತಃ ರೈತರ ವ್ಯವಸಾಯ ವೆಚ್ಚಕ್ಕೆ ಅವರ ಅಗತ್ಯಕ್ಕನುಸಾರವಾಗಿ ಯಾವುದೇ ಅಡಚಣೆಯಿಲ್ಲದೆ ಸಮಯಕ್ಕೆ ಸರಿಯಾಗಿ ನೆರವು ಒದಗಿಸುವ ಉದ್ದೇಶ ಹೊಂದಿದೆ. ಈ ಯೋಜನೆಯು ಆವರ್ತನ ಸಾಲ ನೆರವು ರೂಪದಲ್ಲಿ ಒದಗಿಸುತ್ತಿರುವುದರಿಂದ ರೈತರು ತಮಗೆ ಬೇಕೆಂದಾಗ ಪಡೆದುಕೊಳ್ಳಬಹುದು. ಒಮ್ಮೆ ಜಾರಿ ಮಾಡಿದ ಕಿಸಾನ್ ಕ್ರೆಡಿಟ್ ಮೂರು ವರ್ಷದವರೆಗೆ ಚಾಲನೆಯಲ್ಲಿರುತ್ತದೆ.

**ಸಾಲ ವಿತರಣೆಯ ಸರಳ ಪದ್ಧತಿಗಳು:** ನಗರ, ಪಟ್ಟಣ ಹಾಗೂ ಗ್ರಾಮಗಳ ರೈತರು, ಬಡವರು, ಸಣ್ಣ ಉದ್ದಿಮೆ ಹಾಗೂ ಚಿಲ್ಲರೆ ವ್ಯಾಪಾರಿಗಳು, ಸ್ವ ಉದ್ಯೋಗಿಗಳು, ಕಾರ್ಮಿಕರು, ಮಹಿಳೆಯರು, ಅಲ್ಪಸಂಖ್ಯಾತ ದುರ್ಬಲ ವರ್ಗದ ಹಿಂದುಳಿದ ಹಾಗೂ ಹರಿಜನ ಗಿರಿಜನರು ಮುಂತಾದವರು ಆದಾಯವನ್ನು ಹೆಚ್ಚಿಸಿಕೊಳ್ಳುವಂತಹ ಚಟುವಟಿಕೆಗಳನ್ನು ಕೈಗೊಳ್ಳಲು ಅನುಕೂಲ ಒದಗಿಸುವ ಮೂಲಕ ಅವರನ್ನು ಸಶಕ್ತರನ್ನಾಗಿಸುವುದು ತನ್ಮೂಲಕ ಬಡತನ ಸಮಸ್ಯೆಯನ್ನು ಎದುರಿಸುವ ಪರಿಣಾಮಕಾರಿ ಕಾರ್ಯಯೋಜನೆಗಳಿಗೆ ಅತ್ಯಂತ ಸರಳ ಪದ್ಧತಿಯಲ್ಲಿ ಸಾಲ ವಿತರಣೆ ಮಾಡುವ ವಿಧಾನಗಳನ್ನು ಬ್ಯಾಂಕುಗಳು ಕೈಗೊಂಡಿವೆ.

ಸ್ವಸಹಾಯ ಗುಂಪುಗಳಿಗೆ (ಎಸ್.ಎಚ್.ಜಿ) ಉತ್ತೇಜನ ನೀಡುವುದರ ಜೊತೆಗೆ ಗ್ರಾಮೀಣ ಬಡವರನ್ನು ಸಶಕ್ತರನ್ನಾಗಿಸಲು ಅತ್ಯುತ್ತಮವಾದ ಸ್ವಸಹಾಯ ಗುಂಪುಗಳನ್ನು ಬ್ಯಾಂಕಿಗೆ ವಹಿಸುವ ಕಾರ್ಯ ಯೋಜನೆಯು ಚಾಮರಾಜನಗರ ಜಿಲ್ಲೆಯಲ್ಲಿ ೧೯೯೨ರಲ್ಲಿ ಪ್ರಾರಂಭವಾಯಿತು. ಇದು ಬಡವರ ಅದರಲ್ಲೂ ವಿಶೇಷವಾಗಿ ಮಹಿಳಾ ಸಬಲೀಕರಣಕ್ಕೆ ಉಪಯುಕ್ತವೆಂದು ಕಂಡು ಬಂದಿದೆ.

ಚಾಮರಾಜನಗರ ಜಿಲ್ಲೆಯ ಗ್ರಾಮೀಣ ಜನಸಂಖ್ಯೆಯು ಶೇ. ೭೦ ರಷ್ಟಿದೆ. ಇದರಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರು ಶೇ. ೨೨, ಕೃಷಿಕಾರ್ಮಿಕರು ಶೇ. ೨೦, ಮತ್ತು ಒಟ್ಟು ಕಾರ್ಮಿಕರು ಶೇ. ೩೮ ರಷ್ಟು ಇದ್ದಾರೆ. ಒಟ್ಟು ೧೮೮ ಕಾರ್ಮಿಕರಲ್ಲಿ ಶೇ. ೧೦ ರಷ್ಟು ಅರೆ ಕಾಲಿಕ ಕಾರ್ಮಿಕರಿದ್ದಾರೆ. ಆದುದರಿಂದ ಸೂಕ್ಷ್ಮ ಆರ್ಥಿಕ ನೆರವಿಗೆ (ಮೈಕ್ರೋ ಫೈನಾನ್ಸ್) ಜಿಲ್ಲೆಯಲ್ಲಿ ತುಂಬಾ ಸಾಧ್ಯತೆಗಳಿವೆ. ಈ ಸೂಕ್ಷ್ಮ ಆರ್ಥಿಕ ನೆರವನ್ನು ಪರಿಣಾಮಕಾರಿಯಾಗಿ ಅಳವಡಿಸಿಕೊಳ್ಳುವುದರಲ್ಲಿ ಚಾಮರಾಜನಗರ ಜಿಲ್ಲೆಯು ಮಂಚೂಣಿಯಲ್ಲಿದೆ.

ವಾಣಿಜ್ಯ ಬ್ಯಾಂಕುಗಳು, ಪ್ರಾದೇಶಿಕ ಗ್ರಾಮೀಣ ಬ್ಯಾಂಕು ಮತ್ತು ಚಾಮರಾಜನಗರ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕು (M.C.D.C.C.B.) ಸಾಲವಾಹಕದ ಪಾತ್ರ ವಹಿಸುತ್ತಿವೆ. ಎಮ್.ಸಿ.ಡಿ.ಸಿ.ಸಿ. ಬ್ಯಾಂಕು ಪ್ರಾಥಮಿಕ ಕೃಷಿ ಸಹಕಾರಿ ಸಂಘಗಳ ಮೂಲಕ ಸ್ವಸಹಾಯ ಗುಂಪುಗಳನ್ನು ಉತ್ತೇಜಿಸಿ ಆರ್ಥಿಕ ಬೆಂಬಲವಿತ್ತು ಅವುಗಳನ್ನು ತಮ್ಮ ಜೊತೆ ವಿನಿಯೋಗಿಸಿಕೊಂಡಿವೆ.

## ಸರಕಾರ ಪ್ರವರ್ತಿತ ಯೋಜನೆಗಳ ಅನುಷ್ಠಾನದಲ್ಲಿ ಬ್ಯಾಂಕುಗಳ ಪಾತ್ರ

ಕೇಂದ್ರ ಹಾಗೂ ರಾಜ್ಯ ಸರಕಾರಗಳು ಹಲವಾರು ಸಹಾಯ ಧನ ಸಹಿತ ಸಾಲ ಯೋಜನೆಗಳನ್ನು ಕಾರ್ಯರೂಪಕ್ಕೆ ತಂದಿವೆ. ಬಡತನ ನಿರ್ಮೂಲನೆ ಮತ್ತು ನಿರುದ್ಯೋಗ ನಿವಾರಣೆ ಈ ಯೋಜನೆಗಳ ಪ್ರಮುಖ ಉದ್ದೇಶವಾಗಿದೆ. ಎಲ್ಲಾ ಯೋಜನೆಗಳು ಸಾಲ ಮತ್ತು ಸಹಾಯ ಧನ ಬಳಕೆಯಿಂದ ಉತ್ಪಾದಕ ಸ್ವತ್ತುಗಳು

ಸೃಷ್ಟಿಯಾಗಬೇಕೆಂಬ ಆಶಯದಿಂದ ಕೂಡಿವೆ. ಈ ಯೋಜನೆಗಳು ಬಡವರನ್ನು ಬಡತನರೇಖೆಯಿಂದ ಮೇಲಕ್ಕೆತ್ತಿ ಅವರಿಗೆ ಲಾಭಪ್ರದ ಉದ್ಯೋಗವನ್ನು ದೊರಕಿಸುವ ಗುರಿಯನ್ನಿಟ್ಟುಕೊಂಡಿವೆ.

**ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆ (ಎಸ್.ಜಿ.ಎಸ್.ವೈ):** ಭಾರತ ಸರಕಾರವು ಸ್ವೋದ್ಯೋಗ ಕಾರ್ಯಕ್ರಮವನ್ನು ಪುನರ್ರಚಿಸಿ ಏಪ್ರೀಲ್ ೧, ೧೯೯೯ ರಲ್ಲಿ "ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆ" ಎಂಬ ಹೊಸ ಕಾರ್ಯಕ್ರಮವನ್ನು ಕಾರ್ಯರೂಪಕ್ಕಿಳಿಸಿತು. ಈ ಕಾರ್ಯಕ್ರಮವು ಅನುಷ್ಠಾನಕ್ಕೆ ಬಂದೊಡನೆಯೇ ಅದಕ್ಕೆ ಮೊದಲಿನ ಕಾರ್ಯಕ್ರಮಗಳಾದ ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ (ಐ.ಆರ್.ಡಿ.ಪಿ), ಟ್ರೈಸೆಮ್, ಗ್ರಾಮೀಣ ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಯೋಜನೆ (ದ್ವಾಕ್ರ), ಗಂಗಾಕಲ್ಯಾಣ ಯೋಜನೆ (ಜಿ.ಕೆ.ವೈ), ಮಿಲಿಯ ಬಾವಿಗಳ ಯೋಜನೆ (ಎಂ.ಡಬ್ಲ್ಯು.ಎಸ್) ಗಳು ಅನುಷ್ಠಾನದಲ್ಲಿ ಉಳಿದಿಲ್ಲ.

ಸ್ವ.ಜ.ಗ್ರಾ.ಸ್ವ. ಯೋಜನೆ (ಎಸ್.ಜಿ.ಎಸ್.ವೈ.)ಯು ಬಡವರನ್ನು ಸ್ವಸಹಾಯ ಗುಂಪುಗಳಲ್ಲಿ ಸಂಘಟಿಸುವುದು, ಗುಂಪುಗಳಿಗೆ ಅವಶ್ಯವಿರುವ ತರಬೇತಿ, ಸಾಲ, ತಂತ್ರಜ್ಞಾನ, ಮೂಲಭೂತ ಸೌಕರ್ಯಗಳು ಮತ್ತು ಮಾರಾಟ ಸೌಕರ್ಯ ಮುಂತಾದ ಸ್ವೋದ್ಯೋಗದ ಎಲ್ಲ ವಿಷಯಗಳನ್ನು ಒಳಗೊಂಡ ಒಂದು ಪರಿಪೂರ್ಣ ಕಾರ್ಯಕ್ರಮವಾಗಿದೆ. ಬ್ಯಾಂಕಿನ ಸಾಲ ಮತ್ತು ಸರಕಾರದ ಸಹಾಯಧನದಲ್ಲಿ ಆದಾಯ ತರುವ ಸೊತ್ತುಗಳನ್ನು ಒದಗಿಸಿ ಆರ್ಥಿಕ ಸಹಾಯ ಪಡೆದ ದಿನಾಂಕದಿಂದ ಮೂರುವರ್ಷಗಳ ಅವಧಿಯಲ್ಲಿ ನೆರವು ಪಡೆದ ಬಡಕುಟುಂಬಗಳನ್ನು ಬಡತನದ ರೇಖೆಯಿಂದ ಮೇಲೇತ್ತುವುದು ಸ್ವ.ಜ.ಗ್ರಾ.ಸ್ವ. ಯೋಜನೆಯ ಮೂಲೋದ್ದೇಶವಾಗಿದೆ. ನೆರವು ಪಡೆದ ಕುಟುಂಬಕ್ಕೆ ಕಡಿಮೆ ಪಕ್ಷ ₹ ೨೦೦೦ದ ನಿವ್ವಳ ಮಾಸಿಕ ಆದಾಯ ಗಳಿಸುವುದನ್ನು ಸುನಿಶ್ಚಿತಗೊಳಿಸಲು ಈ ಯೋಜನೆಯು ಆಶಿಸುತ್ತದೆ. ಪ್ರಯೋಜನಾರ್ಥಿ ಕುಟುಂಬಗಳು ನೇರವಾಗಿ ಇಲ್ಲವೆ ಸ್ವಸಹಾಯ ಸಂಘಗಳ ಮೂಲಕ ಈ ಯೋಜನೆಯಲ್ಲಿ ನೆರವು ಪಡೆಯಲು ಸಾಧ್ಯವಿದೆ.

**ಪ್ರಧಾನ ಮಂತ್ರಿಗಳ ರೋಜ್‌ಗಾರ್ ಯೋಜನೆ (ಪಿ.ಎಂ.ಆರ್.ವೈ):** ಪ್ರಧಾನ ಮಂತ್ರಿಗಳ ಸ್ವರೋಜ್‌ಗಾರ್ ಯೋಜನೆಯು ವಿದ್ಯಾವಂತ ನಿರುದ್ಯೋಗಿ ಯುವಕರಿಗೆ ಸ್ವೋದ್ಯೋಗ ಒದಗಿಸಲು ೦೨–೧೦–೧೯೯೩ರಂದು ಕಾರ್ಯರೂಪಕ್ಕೆ ತಂದ ಸಹಾಯಧನ ಸಹಿತ ಸಾಲ ನೀಡುವ ಕಾರ್ಯಕ್ರಮವಾಗಿದೆ. ಈ ಕಾರ್ಯಕ್ರಮದನ್ವಯ ಕನಿಷ್ಠ ಎಂಟನೇ ತರಗತಿವರೆಗೆ ವಿದ್ಯಾಭ್ಯಾಸ ಪಡೆದ ೧೮ ರಿಂದ ೩೫ ವರ್ಷದ ವಯೋಮಿತಿ (ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರು, ಪೂರ್ವ ಸೈನಿಕರು, ವಿಕಲಾಂಗರು ಮತ್ತು ಮಹಿಳೆಯರಿಗೆ ೧೦ ವರ್ಷ ವಯೋ ರಿಯಾಯಿತಿಯೊಡನೆ)ಯೊಳಗೆ ಕುಟುಂಬದ ವಾರ್ಷಿಕ ಆದಾಯ ₹ ೧,೦೦,೦೦೦ಗಳಿಗೆ ಮೀರಿರದ ನಿರುದ್ಯೋಗಿ ಯುವಕರು ಸಹಾಯಧನ ಸಹಿತ ಸಾಲಪಡೆಯಲು ಅರ್ಹರು. ಸರಕಾರದಿಂದ ಮಾನ್ಯತೆ ಪಡೆದ ವಿದ್ಯಾಸಂಸ್ಥೆ (ಐಟಿಐ)ಗಳಲ್ಲಿ ಕನಿಷ್ಠ ಆರು ತಿಂಗಳು ಯಾವುದೇ ವೃತ್ತಿ ತರಬೇತಿ ಪಡೆದವರಿಗೆ ಆದ್ಯತೆ ನೀಡಲಾಗುತ್ತದೆ. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗೆ (ಶೇ. ೨೨.೫ರಷ್ಟು)ಮತ್ತು ಅನ್ಯಹಿಂದುಳಿದ ಜಾತಿಯವರಿಗೆ (ಶೇ.೨೭ ರಷ್ಟು) ಯೋಜನೆಯಲ್ಲಿ ಅವಕಾಶ ಕಾದಿರಿಸಲಾಗಿದೆ. ಕೃಷಿ ಮತ್ತು ಕೃಷಿ ಉಪವೃತ್ತಿಗಳಲ್ಲಿ ಬೆಳೆ ಬೆಳೆಯುವ ಹಾಗೂ ಗೊಬ್ಬರ ಖರೀದಿ ಇತ್ಯಾದಿಗಳನ್ನು ಹೊರತುಪಡಿಸಿ ಇನ್ನೆಲ್ಲ ಚಟುವಟಿಕೆಗಳು ಈ ಯೋಜನೆಗೆ ಒಳಪಟ್ಟಿವೆ. ಅಲ್ಲದೆ ರೂ.೨ಲಕ್ಷ ವ್ಯಯವನ್ನು ಮೀರದ ಯಾವುದೇ ಉದ್ದಿಮೆ/ಸೇವೆ/ವ್ಯಾಪಾರ (ಐ.ಎಸ್.ಬಿ.) ಚಟುವಟಿಕೆಗಳನ್ನು ಕೈಗೊಳ್ಳಲೂ ಸಾಧ್ಯವಿದೆ. ಜಿಲ್ಲಾ ಕೈಗಾರಿಕಾ ಕೇಂದ್ರ (ಡಿಸ್ಟ್ರಿಕ್ಟ್ ಇಂಡಸ್ಟ್ರೀಸ್ ಸೆಂಟರ್)ವು ಈ ಕಾರ್ಯಕ್ರಮ ಅನುಷ್ಠಾನದ ಕೇಂದ್ರ ಕಾರ್ಯಕರ್ತನ ಹೊಣೆ ವಹಿಸುತ್ತದೆ. ಯೋಜನೆಯ ಪ್ರಯೋಜನಾರ್ಥಿಗಳಿಗೆ ₹ ೧೨,೫೦೦ರ ಗರಿಷ್ಠ ಮಿತಿಗೆ ಒಳಪಟ್ಟು ಶೇ.೧೫ರ ಬಂಡವಾಳ ಸಹಾಯಧನ

ಲಭ್ಯವಿದೆ. ವ್ಯಾಪಾರ ಮತ್ತು ಸೇವಾರಂಗದ ಚಟುವಟಿಕೆಗಳಿಗೆ ₹ ೨ ಲಕ್ಷದ ಸಾಲಮಿತಿಯಿದ್ದರೆ, ಉದ್ದಿಮೆ ಚಟುವಟಿಕೆಗಳಿಗೆ ₹ ೫ ಲಕ್ಷದ ಸಂಯೋಜಿತ ಸಾಲವನ್ನು ಮಂಜೂರು ಮಾಡಬಹುದು. ಅರ್ಹ ವ್ಯಕ್ತಿಗಳು ಒಟ್ಟುಗೂಡಿ ₹ ೧೦ ಲಕ್ಷದ ಒಳಗಿನ ಯೋಜನಾ ವೆಚ್ಚದ ಉದ್ಯಮಕ್ಕೆ ಆರ್ಥಿಕ ನೆರವು ಪಡೆಯಬಹುದು. ಈ ಯೋಜನೆಯಲ್ಲಿ ಕೈಗಾರಿಕಾ ಕ್ಷೇತ್ರಕ್ಕೆ ಪಡೆಯುವ ₹ ಐದು ಲಕ್ಷದವರೆಗಿನ ಹಾಗೂ ವ್ಯಾಪಾರ ಮತ್ತು ಸೇವಾ ಕ್ಷೇತ್ರಕ್ಕೆ ಪಡೆಯುವ ₹ ಎರಡು ಲಕ್ಷದವರೆಗಿನ ಸಾಲಕ್ಕೆ ಉಪಭದ್ರತೆಗಳ ಅಗತ್ಯವಿಲ್ಲ.

**ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ (ಎನ್.ಆರ್.ಇ.ಜಿ.ಎಸ್):** ಈ ಯೋಜನೆಯಡಿ ಜಿಲ್ಲೆಯಲ್ಲಿ ೭೨,೮೩೨ ಜನರು ಹೆಸರನ್ನು ನೋಂದಾಯಿಸಿಕೊಂಡಿದ್ದಾರೆ. ಇವರಲ್ಲಿ ೬೨,೩೫೧ ಜನರಿಗೆ ಉದ್ಯೋಗ ಭರವಸೆ ಕಾರ್ಡ್ ನೀಡಲಾಗಿದೆ. ೨೦೦೮–೦೯ನೇ ಸಾಲಿನಲ್ಲಿ ೨,೪೧೪ ಕಾಮಗಾರಿಗಳನ್ನು ₹ ೨೦.೨೪ ಕೋಟಿ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲಾಗಿದೆ. ಜಲಸಂವರ್ಧನೆಯಡಿಯಲ್ಲಿ ಜಿಲ್ಲೆಯ ೨೨ ಕೆರೆ–ಕಟ್ಟೆಗಳ ಪುನರುಜ್ಜೀವನಕ್ಕೆ ಕ್ರಮ ಕೈಗೊಳ್ಳಲಾಗಿತ್ತು. ಇದಕ್ಕಾಗಿ ₹ ೬೭ ಲಕ್ಷ ಅಂದಾಜು ಮಾಡಲಾಗಿದ್ದು, ₹ ೧೫ ಲಕ್ಷ ವೇತನವನ್ನು ನೀಡಲಾಗಿತ್ತು. ಈ ಕಾಮಗಾರಿಯಲ್ಲಿ ೫೦೮ ಕುಟುಂಬಗಳ ೧೭೪೪ ಸದಸ್ಯರು ದುಡಿದಿದ್ದು,. ಕಾರ್ಮಿಕರ ದಿನಗೂಲಿಯನ್ನು ೮೨ ರೂಪಾಯಿಂದ ೧೦೦ ರೂಪಾಯಿಗೆ ಏರಿಸಲಾಗಿತ್ತು. ಈ ಯೋಜನೆಯಡಿ ಶೇ. ೨೫ ರಷ್ಟನ್ನು ರಸ್ತೆ ನಿರ್ಮಾಣಕ್ಕೆ ಹಾಗೆಯೇ ಗ್ರಾಮಾಂತರ ಪ್ರದೇಶಗಳಲ್ಲಿ ಶೌಚಾಲಯ ನಿರ್ಮಾಣಕ್ಕೆ ಹಣ ಬಳಸಲಾಗಿತ್ತು. ಸ್ವಚ್ಛ ಗ್ರಾಮ ಯೋಜನೆಯಡಿ ಶೇ. ೧೦೦ ರಷ್ಟು ಶೌಚಾಲಯ ನಿರ್ಮಿಸುವ ಉದ್ದೇಶವಿತ್ತು.

ವಿಶ್ವಬ್ಯಾಂಕ್ ಯೋಜನೆಯಾದ 'ಗ್ರಾಮಸ್ವರಾಜ್', ಜಿಲ್ಲೆಯಲ್ಲಿ ಅನುಷ್ಠಾನಗೊಂಡಿದ್ದು, ಗ್ರಾಮಪಂಚಾಯಿತಿ ಮಟ್ಟದಲ್ಲಿ ಜಲಸಂವರ್ಧನೆ, ಕೆರೆಗಳ ಪುನರುಜ್ಜೀವನ, ಸ್ವ ಉದ್ಯೋಗ ತರಬೇತಿ, ಜಲನಿರ್ಮಲ ಮತ್ತು ಗ್ರಾಮಗಳಲ್ಲಿ ನೀರು ಸರಬರಾಜು ಮಾಡುವ ನೀರಿನ ಟ್ಯಾಂಕುಗಳಿಗೆ ಫಿಲ್ಟರ್ ಅಳವಡಿಸಲಾಗಿದೆ. ಗ್ರಾಮ ಪಂಚಾಯತಿಗಳಿಗೆ ಉಪತಹಶೀಲ್ದಾರ್ ದರ್ಜೆಯ ಅಭಿವೃದ್ಧಿ ಅಧಿಕಾರಿಗಳನ್ನು ನೇಮಕ ಮಾಡಲಾಗಿದೆ.

**ಸ್ವರ್ಣಜಯಂತಿ ಷಹರಿ ರೋಜ್‌ಗಾರ್ ಯೋಜನೆ (ಎಸ್.ಜೆ.ಎಸ್.ಆರ್.ವೈ):** ಇದು ಜಿಲ್ಲೆಯ ನಗರ ಕೇಂದ್ರಗಳಲ್ಲಿ ಅನುಷ್ಠಾನಗೊಳ್ಳುತ್ತಿರುವ ಕೇಂದ್ರ ಸರಕಾರ ಪ್ರವರ್ತಿತ ಕಾರ್ಯಕ್ರಮ. ಬಡತನ ರೇಖೆಯ ಕೆಳಗೆ ಜೀವಿಸುತ್ತಿರುವ ನಗರದ ಬಡಜನರಿಗೆ ಸ್ವೋದ್ಯೋಗ ಸ್ಥಾಪನೆ ಅಥವಾ ದಿನಗೂಲಿ ಉದ್ಯೋಗದ ಮೂಲಕ ಲಾಭಪ್ರದ ಉದ್ಯೋಗ ಒದಗಿಸುವುದು ಈ ಯೋಜನೆಯ ಗುರಿ. ಈ ಯೋಜನೆಯಲ್ಲಿ ಎರಡು ಕಾರ್ಯಕ್ರಮಗಳಿವೆ. ನಗರ ಸ್ವೋದ್ಯೋಗ ಯೋಜನೆ ಮತ್ತು ನಗರ ದಿನಗೂಲಿ ಉದ್ಯೋಗ ಯೋಜನೆ. ಈ ಯೋಜನೆಯಡಿ ಕುಟುಂಬದ ಆದಾಯ ಬಡತನದ ರೇಖೆಯ ಕೆಳಗಿದ್ದು ಒಂಭತ್ತನೇ ತರಗತಿವರೆಗೆ ಕಲಿತ ಅರೆಉದ್ಯೋಗಿ ಯಾ ನಿರುದ್ಯೋಗಿಯಾದ ಯುವಕರಿಗೆ ಯೋಜಿತ ಉದ್ಯಮ ವೆಚ್ಚದ ಶೇ.೧೫ರ ಸಹಾಯಧನಯುಕ್ತ ರೂ.೫೦,೦೦೦/– ದ ಬ್ಯಾಂಕು ಸಾಲದ ನೆರವು ನೀಡಲಾಗುವುದು. ಪ್ರಯೋಜನಾರ್ಥಿಗಳು ತೊಡಗಿಸಬೇಕಾದ ಮೂಲಧನ ಶೇ.೫ರಷ್ಟು ಮಾತ್ರ. ಪಾಲುದಾರಿಕೆ ಸಮ್ಮತಿಸಲ್ಪಟ್ಟಿದ್ದರೂ ಅವರ ಒಟ್ಟು ಯೋಜಿತ ಉದ್ಯಮ ವೆಚ್ಚವು ವ್ಯಕ್ತಿಗತ ಮಿತಿಯನ್ನನುಸರಿಸಿ ಪಾಲುದಾರರಿಗಿರುವ ಒಟ್ಟು ಮೊತ್ತಕ್ಕೆ ಸೀಮಿತವಾಗಿದೆ. ಗುಂಪಾಗಿ ಸ್ವೋದ್ಯೋಗ ಕೈಗೊಳ್ಳಲಿಚ್ಚಿಸುವ ನಗರದ ಬಡ ಮಹಿಳೆಯರಿಗೆ ಈ ಯೋಜನೆಯು ವಿಶೇಷ ಸವಲತ್ತನ್ನು ಒದಗಿಸುತ್ತದೆ. ಕನಿಷ್ಠ ೧೦ ಮಹಿಳೆಯರಿಂದ ಕೂಡಿದ ಇಂಥ ಪ್ರತಿ ಗುಂಪು ₹ ೧.೨೫ ಲಕ್ಷ ಯಾ ಯೋಜಿತ ಉದ್ಯಮ ವೆಚ್ಚದ ಶೇ.೫೦ ಇವೆರಡರಲ್ಲಿ ಕಡಿಮೆಯಾದುದಕ್ಕೆ ಸೀಮಿತವಾದ ಸಹಾಯಧನ

ಪಡೆಯಲು ಅರ್ಹರು. ಯೋಜನೆಯಡಿ ಆಯ್ಕೆಯಾದ ಉದ್ಯಮೋತ್ಸಾಹಿಗಳಿಗೆ ಸರಕಾರವು ತರಬೇತಿಯನ್ನು ನೀಡುತ್ತದೆ. ನಗರದ ಸ್ಥಳೀಯ ಆಡಳಿತ ವರ್ಗವು ಈ ಕಾರ್ಯಕ್ರಮ ಅನುಷ್ಠಾನದ ಕೇಂದ್ರ ಕಾರ್ಯಕರ್ತನ ಹೊಣೆ ಹೊರುತ್ತದೆ.

## ಉದ್ಯೋಗಿನಿ

೧೯೯೬-೯೭ ರಲ್ಲಿ ಆರಂಭಿಸಲಾದ ಈ ಹೊಸ ಯೋಜನೆಯು ಮಹಿಳಾ ಉದ್ಯಮಿಗಳಿಗೆ ವ್ಯಾಪಾರ ಮತ್ತು ಸೇವಾ ಉದ್ಯೋಗಗಳಿಗೆ ₹೧,೦೦,೦೦೦ಲಕ್ಷದವರೆಗಿನ ಸಹಾಯಧನಯುಕ್ತ ಸಾಲದ ನೆರವನ್ನು ನೀಡುವ ಉದ್ದೇಶವನ್ನು ಹೊಂದಿದೆ. ಸಹಾಯಧನವು ಯೋಜಿತ ಉದ್ಯೋಗ ವೆಚ್ಚದ ಶೇ೨೦ರ ಮಿತಿಗೊಳಪಟ್ಟಿದೆ. ಆದರೆ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ, ವಿಕಲಾಂಗ ಮತ್ತು ವಿಧವೆಯರಾದ ಮಹಿಳೆಯರು ಶೇ.೩೦ ರ ಹೆಚ್ಚಿನ ಸಹಾಯಧನಕ್ಕೆ ಅರ್ಹರು. ಪ್ರಯೋಜನಾರ್ಥಿಗಳ ವಾರ್ಷಿಕ ಮಿತಿ ₹ ೨೫,೦೦೦ ಅಥವಾ ಅದಕ್ಕೂ ಕಡಿಮೆಯಾಗಿರಬೇಕೆನ್ನುವುದು ಅರ್ಹತೆಯ ನಿಯಮ. ಈ ಯೋಜನೆಯ ಅನುಷ್ಠಾನದ ಹೊಣೆಯನ್ನು ಕರ್ನಾಟಕ ಸರಕಾರದ ಮಹಿಳಾ ಮತ್ತು ಶಿಶು ಕಲ್ಯಾಣ ಇಲಾಖೆಯು ವಹಿಸಿದೆ.

## 'ಸ್ವಾವಲಂಬನಾ' ಮೃದು ಸಾಲ ಯೋಜನೆ

ಅರ್ಹ ವ್ಯಕ್ತಿಗಳಿಗೆ ಈ ಯೋಜನೆಯಡಿಯಲ್ಲಿ ಬ್ಯಾಂಕುಗಳ ಮೂಲಕ ವ್ಯಾಪಾರ ಅಭಿವೃದ್ಧಿ, ಸಣ್ಣ ಪ್ರಮಾಣದ ಉದ್ದಿಮೆಗಳ ಪ್ರಾರಂಭ, ಸೇವಾ ಉದ್ಯಮ, ಕೃಷಿ ಇತ್ಯಾದಿ ಚಟುವಟಿಕೆಯಲ್ಲಿ ತೊಡಗಲು ಆರ್ಥಿಕ ನೆರವು ನೀಡಲಾಗುತ್ತದೆ. ಯೋಜನೆಯನ್ವಯ ಸಹಾಯಕ್ಕೆ ಅರ್ಹರಾಗಲು, ಅರ್ಜಿದಾರರು ಜನ್ಮದಿಂದ ಅಥವಾ ವಾಸ್ತವ್ಯದಿಂದ ಕರ್ನಾಟಕ ರಾಜ್ಯದ ನಿವಾಸಿ ಹಾಗೂ ಧಾರ್ಮಿಕ ಅಲ್ಪಸಂಖ್ಯಾತರ ಗುಂಪಿಗೆ ಸೇರಿರಬೇಕು. ಅಲ್ಲದೆ ಅರ್ಜಿದಾರರ ಕುಟುಂಬದ ಒಟ್ಟು ವಾರ್ಷಿಕ ಆದಾಯ ₹ ೨೨,೦೦೦ವನ್ನು ಮೀರಿರಬಾರದು. ಹಾಗೆಯೇ ಅರ್ಜಿದಾರರು ವ್ಯಾಪಾರ ಅಥವಾ ತಮ್ಮದೇ ಆದ ಉದ್ಯೋಗ ಪ್ರಾರಂಭಿಸಲು ಅಗತ್ಯವುಳ್ಳ ಕೌಶಲ್ಯ ಮತ್ತು ಅನುಭವಗಳನ್ನು ಹೊಂದಿರಬೇಕು. ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮವು ಅರ್ಜಿದಾರರನ್ನು ಗುರುತಿಸಿ ಅವರ ಅರ್ಜಿಯನ್ನು ಸಂಬಂಧಪಟ್ಟ ಬ್ಯಾಂಕಿಗೆ ಅವರು ಕೈಗೊಳ್ಳುವ ಉದ್ಯಮದ ಸಾಧ್ಯತೆ ಮತ್ತು ಲಾಭದಾಯಕತೆಗಳ ಪರಿಶೀಲನೆಗಾಗಿ ಕಳುಹಿಸಿಕೊಡುತ್ತದೆ.

## ಚೈತನ್ಯ ಸಾಲ ಯೋಜನೆ

ಈ ಯೋಜನೆಯಡಿಯಲ್ಲಿ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮವು ಹಿಂದುಳಿದ ವರ್ಗಕ್ಕೆ ಸೇರಿದ ಪ್ರಯೋಜನಾರ್ಥಿಗಳಿಗೆ ಗರಿಷ್ಠ ಮಿತಿ ₹ ೫೦,೦೦೦ಕ್ಕೆ ಒಳಪಟ್ಟು ಅವರು ಕೈಗೊಳ್ಳುವ ಉದ್ಯಮವೆಚ್ಚದ ಶೇ. ೫೦ರ ಸಹಾಯಧನ ನೀಡುವುದಲ್ಲದೆ, ಅವರಿಗೆ ಅದಾಯ ತರುವ ಉದ್ದಿಮೆ, ಸೇವಾ ಉದ್ಯಮ ಮತ್ತು ವ್ಯಾಪಾರ ರಂಗದ ಅನೇಕ ಚಟುವಟಿಕೆಗಳಿಗೆ ಬ್ಯಾಂಕುಗಳು ಮತ್ತು ಆರ್ಥಿಕ ಸಂಸ್ಥೆಗಳಿಂದ ಸಾಲ ಪಡೆಯಲು ನೆರವಾಗುತ್ತದೆ.

**ಶ್ರೀ ದೇವರಾಜ ಅರಸ್ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ (೨೦೦೮-೦೯)**

| ೨೦೦೮-೦೯ | ಗುರಿ | ಸಾಧನೆ |
|---|---|---|
| ಚೈತನ್ಯ ಸಾಲ ಯೋಜನೆ | ೨೬೧ | ೨೦೫ |
| ಸ್ವಾವಲಂಬನ ಮೃದು ಸಾಲ ಯೋಜನೆ | ೨೫೦ | ೧೫೬ |

**ಡಾ.ಬಿ.ಆರ್.ಅಂಬೇಡ್ಕರ್ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಅಭಿವೃದ್ಧಿ ನಿಗಮ**

| ೨೦೦೮-೦೯ | ಗುರಿ | ಸಾಧನೆ |
|---|---|---|
| ಎಸ್.ಇ.ಪಿ. | ೭೦೩ | ೫೦೩ |
| ಐ.ಎಸ್.ಬಿ. | ೧೦೦ | ೬೦ |

**ಕಾವೇರಿ ಸರಸ್:** ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಬಡತನ ನಿರ್ಮೂಲನೆಗೆ ಸ್ವರ್ಣ ಜಯಂತಿ ಗ್ರಾಮ ಸ್ವರಾಜ್‌ಗಾರ್ ಯೋಜನೆಯಡಿಯಲ್ಲಿ ಶೇ. ೭೫.೨೫ ಅನುಪಾತದಲ್ಲಿ ಸಾಲ-ಸಹಾಯಧನ ಒದಗಿಸಿ ಜಿಲ್ಲೆಯ ಗ್ರಾಮೀಣ ಭಾಗದಲ್ಲಿನ ಸಂಪನ್ಮೂಲ ಮತ್ತು ಮಾನವ ಶಕ್ತಿ ಉಪಯೋಗಿಸಿಕೊಂಡು ಗ್ರಾಮೀಣ ಜನರಿಗೆ ಉದ್ಯೋಗ ನೀಡುವುದರ ಜೊತೆಗೆ ಅವರು ಉತ್ಪಾದಿಸಿದ ಪಾರಂಪರಿಕ ಗುಡಿ ಕೈಗಾರಿಕಾ ಉತ್ಪನ್ನಗಳ ಮಾರಾಟಕ್ಕೆ ಪ್ರತಿ ವರ್ಷ ಕಾವೇರಿ ಸರಸ್ ಮೇಳವನ್ನು ಬೆಂಗಳೂರು ನಗರದಲ್ಲಿ ಏರ್ಪಡಿಸುತ್ತಿದೆ.

## ನಬಾರ್ಡ್ ಸಂಸ್ಥೆಯ ಚಟುವಟಿಕೆಗಳು (National Bank for Agriculture and Rural Development)

ನಬಾರ್ಡ್ ಸಂಸ್ಥೆಯು ಚಾಮರಾಜನಗರ ಜಿಲ್ಲೆಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಕಾರ್ಯಗಳನ್ನು ಅನುಷ್ಠಾನಗೊಳಿಸಲು ಬ್ಯಾಂಕ್ ಹಾಗೂ ಇನ್ನಿತರ ಸಂಘಸಂಸ್ಥೆಗಳ ವಿವಿಧ ಯೋಜನೆಗಳ ಮುಖಾಂತರ ನಿರಂತರ ಸಹಕಾರವನ್ನು ನೀಡುತ್ತಿವೆ. ನಬಾರ್ಡ್ ಸಂಸ್ಥೆಯು ಬ್ಯಾಂಕುಗಳಿಗೆ ಮರುಸಾಲ ಯೋಜನೆ (Refinance) ಸಹಕಾರಿ ಹಾಗೂ ಗ್ರಾಮೀಣ ಬ್ಯಾಂಕುಗಳ ಮೇಲುಸ್ತುವಾರಿ ಹಾಗೂ ಮರುಸಾಲ ನೀಡುವಿಕೆಯ ಜವಾಬ್ದಾರಿಯನ್ನು ವಹಿಸಿಕೊಂಡಿವೆ. ಜಿಲ್ಲೆಯಲ್ಲಿರುವ ವಿವಿಧ ಸರಕಾರೇತರ ಸಂಘಟನೆಗಳಿಗೆ (N.G.O.) ಸ್ವಸಹಾಯ ಸಂಘಗಳಿಗೆ ಬ್ಯಾಂಕಿನ ಸಿಬ್ಬಂದಿಗಳಿಗೆ ಸರಕಾರಿ ಅಧಿಕಾರಿಗಳಿಗೆ ಹಾಗೂ ಸ್ವಯಂ ಉದ್ಯೋಗ ಪಡೆಯಲಿಚ್ಛಿಸುವವರಿಗೆ ಉದ್ಯಮ ಶೀಲತೆಯ ತರಬೇತಿ ಕಾರ್ಯಕ್ರಮಗಳಿಗೆ ರೈತಮಿತ್ರ ಸಂಘಗಳಿಗೆ ನಬಾರ್ಡ್ ಹಣಕಾಸಿನ ನೆರವು ನಿಡುತ್ತಿದೆ. ನಬಾರ್ಡ್ ಸಂಸ್ಥೆಯ ಜಿಲ್ಲಾ ಮಟ್ಟದ ಅಧಿಕಾರಿಗಳು ಸದಾ ಬ್ಯಾಂಕು ಇನ್ನಿತರ ಸಂಘಸಂಸ್ಥೆ ಹಾಗೂ ಸರಕಾರಿ ಕಚೇರಿಗಳ ಸಮನ್ವಯದೊಂದಿಗೆ ಜತೆಗೂಡಿ ಗ್ರಾಮೀಣ ಅಭಿವೃದ್ಧಿಯಲ್ಲಿ ಸಾಧನೆ ಮಾಡುತ್ತಿದ್ದಾರೆ. ನಬಾರ್ಡ್ ಸಂಸ್ಥೆಯ ಪ್ರತಿನಿಧಿಗಳು ಪ್ರತಿ ತಾಲೂಕುಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಬ್ಯಾಂಕುಗಳ ಸಾಲಯೋಜನೆಗೆ ಪೂರಕವಾಗಿ ನಬಾರ್ಡ್ ಮಾರ್ಗಸೂಚಿಯಾಗಿರುತ್ತದೆ.

## ರೈತಕೂಟಗಳು

ಜಿಲ್ಲೆಯಲ್ಲಿ ರೈತಸ್ನೇಹಿ ಸಂಘಗಳ ಚಟುವಟಿಕೆಗಳಿಗೆ ನಬಾರ್ಡ್ ಧನಪ್ರೋತ್ಸಾಹ ನೀಡಿದೆ.

## ಸ್ತ್ರೀಶಕ್ತಿ ಯೋಜನೆ

ಚಾಮರಾಜನಗರ ಜಿಲ್ಲೆಯಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆವತಿಯಿಂದ ಸ್ತ್ರೀಶಕ್ತಿ ಯೋಜನೆಯನ್ನು ೨೦೦೦-೦೧ನೇ ಸಾಲಿನಿಂದ ಅನುಷ್ಠಾನಗೊಳಿಸಲಾಗಿದೆ. ಗ್ರಾಮೀಣ ಮಹಿಳೆಯರ ಸ್ವಸಹಾಯ ಗುಂಪುಗಳ ಮೂಲಕ ಆರ್ಥಿಕ ಮತ್ತು ಸಾಮಾಜಿಕ ಸಶಕ್ತತೆಯನ್ನು ತರುವುದು ಈ ಯೋಜನೆಯ ಉದ್ದೇಶವಾಗಿರುತ್ತದೆ.

## ಆಸರೆ

೧೮–೩೫ ವರ್ಷದ ವಯೋಮಿತಿಯೊಳಗಿನ ಮಹಿಳೆಯರು ಗೃಹ ಕೈಗಾರಿಕೆ, ಹೊಲಿಗೆ, ಕಸೂತಿ, ಗೃಹ ಅಲಂಕಾರ ವಸ್ತುಗಳು, ಗೊಂಬೆ ತಯಾರಿಗೆ, ಉಡುಪಿ ತಯಾರಿಕೆ, ಹಪ್ಪಳ, ಸಂಡಿಗೆ, ಮೊದಲಾದ ತಿಂಡಿತಿನಿಸುಗಳು, ಜಾಮ್, ಐಸ್‌ಕ್ರೀಮ್, ಉಪ್ಪಿನಕಾಯಿ ಮುಂತಾದ ಉತ್ಪನ್ನಗಳ ಸ್ವಂತ ತಯಾರಿಕೆಗೆ ಉದ್ದಿಮೆ, ಸಣ್ಣ ಅಂಗಡಿ, ಸೇವಾಕ್ಷೇತ್ರಗಳಲ್ಲಿ ಉದ್ಯೋಗ ನಿರತರಾಗುವ ಗುರಿಯಿಂದ ಸ್ವಂತ ಆದಾಯ ಸಂಪಾದನೆ ಪಡೆಯಲು ಬ್ಯಾಂಕುಗಳು ಸಬ್ಸಿಡಿ ನೀಡಿ ಸಾಲ ಸೌಲಭ್ಯಗಳನ್ನು ನೀಡುತ್ತಿವೆ.

## ಅಮೃತ ಯೋಜನೆ

ಈ ಯೋಜನೆಯನ್ವಯ ಫಲಾನುಭವಿಗಳಾದ ವಿಧವೆಯರು, ದೇವದಾಸಿಯರು, ತಂದೆತಾಯಿ ಪೋಷಕರ ಆಶ್ರಯವಿಲ್ಲದ ನಿರ್ಗತಿಕ ಮಹಿಳೆಯರಿಗೆ, ವಿಕಲಿತರಿಗೆ, ನಿರಾಶ್ರಿತ ಮಹಿಳೆಯರಿಗೆ, ಬ್ಯಾಂಕುಗಳು ಸಬ್ಸಿಡಿ ನೀಡಿ ಸಾಲಸೌಲಭ್ಯ ನೀಡುತ್ತಿವೆ. ರೇಷ್ಮೆ, ಮೀನುಗಾರಿಕೆ, ಪಾರಂಪರಿಕ ಉದ್ಯೋಗಗಳನ್ನು ಮುಂದುವರಿಸಲು ಹೈನುಗಾರಿಕೆ, ಕೈಮಗ್ಗ, ಮುಂತಾದ ಗ್ರಾಮೋದ್ಯೋಗಗಳಲ್ಲಿ ಸ್ವ ಉದ್ಯೋಗದಲ್ಲಿ ತೊಡಗಿ ಆದಾಯ ಗಳಿಸುವ ಗುರಿಯಲ್ಲಿ ಬ್ಯಾಂಕುಗಳು ಅರ್ಹ ಫಲಾನುಭವಿ ಮಹಿಳೆಯರಿಗೆ, ಪುರುಷರಿಗೆ, ಸಹಾಯ ಧನದ ಸಾಲ ಸೌಲಭ್ಯ ನೀಡುತ್ತಿವೆ.

## ಜಿಲ್ಲೆಯಲ್ಲಿ ಬ್ಯಾಂಕುಗಳ ಸಾಧನೆ

ಸಾಂಸ್ಥಿಕ ಹಣಕಾಸು ಸಂಸ್ಥೆಗಳು ಚಾಮರಾಜನಗರ ಜಿಲ್ಲೆಯ ಅತ್ಯಧಿಕ ಸಂಖ್ಯೆಯ ಜನರಿಗೆ ಅದರಲ್ಲೂ ವಿಶೇಷವಾಗಿ ಗ್ರಾಮಸ್ಥರಿಗೆ ತಮ್ಮ ಸೇವೆಯನ್ನು ಸಲ್ಲಿಸುತ್ತಿರುವುದು ನಿಜಕ್ಕೂ ಶ್ಲಾಘನೀಯವಾದುದು. ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲದೇ ಅನಿವಾಸಿ ಭಾರತೀಯ ಮೂಲದಿಂದಲೂ ಗಮನಾರ್ಹ ಸಂಪನ್ಮೂಲ ಸಂಗ್ರಹಿಸಿ ಅದನ್ನು ಸಮರ್ಪಕವಾಗಿ ಜಿಲ್ಲೆಯ ಸರ್ವತೋಮುಖ ಅಭಿವೃದ್ಧಿಗೆ ಬಳಸುವ ಮೂಲಕ ಅನುಪಮ ಸೇವೆ ಸಲ್ಲಿಸುತ್ತಿವೆ. ಕೃಷಿ, ಉದ್ದಿಮೆ, ವ್ಯಾಪಾರ, ಸಾರಿಗೆ ಸಂಪರ್ಕ, ವಸತಿ, ಶಿಕ್ಷಣ, ನೀರಾವರಿ, ಮುಂತಾದ ಸೇವಾ ವಲಯಗಳ ಅಭಿವೃದ್ಧಿಗೆ ನೆರವು ನೀಡಿವೆ. ಜಿಲ್ಲೆಯ ಸಾಂಪ್ರದಾಯಿಕ ಚಟುವಟಿಕೆಗಳಾದ ರೇಷ್ಮೆ, ಕರಕುಶಲ ವಸ್ತುಗಳ ಉತ್ಪಾದನೆ, ಕಿರು ಅರಣ್ಯ ಉತ್ಪನ್ನ, ಸಾಂಬಾರ ಹಾಗೂ ದಿನಸಿ ಪದಾರ್ಥಗಳು ಆಹಾರ ಸಂಸ್ಕರಣೆ ಮುಂತಾದವುಗಳಿಗೆ ಬೆಂಬಲ ನೀಡಿ ವಿದೇಶಿ ವಿನಿಮಯಗಳಿಸಲು ಬ್ಯಾಂಕುಗಳು ಕಾರಣವಾಗಿವೆ. ಇವುಗಳ ಜೊತೆಗೆ ಸರಕಾರಿ ಪ್ರವರ್ತಿತ ಯೋಜನೆಗಳ ಅನುಷ್ಠಾನ, ಸ್ವಸಹಾಯ ಗುಂಪುಗಳಿಗೆ ಉತ್ತೇಜನ, ದಲಿತರು, ದುರ್ಬಲರು, ಹಿಂದುಳಿದ ಅಲ್ಪಸಂಖ್ಯಾತರು, ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದವರಿಗೆ ಹಾಗೂ ಮಹಿಳಾ ಮತ್ತು ಮಕ್ಕಳು ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಸಂಪೂರ್ಣವಾಗಿ ಭಾಗಿಯಾಗಿ ಸಾಮಾಜಿಕ ನ್ಯಾಯ ಒದಗಿಸುವ ಯಶಸ್ವಿ ವಾಹಕಗಳಾಗಿವೆ. ಒಂದೇ ಮಾತಿನಲ್ಲಿ ಹೇಳುವುದಾದರೆ ಬ್ಯಾಂಕುಗಳು ಜಿಲ್ಲೆಯ ಜನಜೀವನದಲ್ಲಿ ಹಾಸುಹೊಕ್ಕಾಗಿ ಬೆರೆತು ಅವರ ಶ್ರೇಯೋಭಿವೃದ್ಧಿಗೆ ಪೂರ್ಣ ಸಹಕಾರ, ಪ್ರೋತ್ಸಾಹಗಳನ್ನಿತ್ತು ಜಿಲ್ಲೆಯ ಅಭಿವೃದ್ಧಿಯ ವೇದವರ್ಧಕಗಳಾಗಿವೆ ಎನ್ನುವುದನ್ನು ಅಂಕಿ–ಅಂಶಗಳು ಸಾಬೀತು ಪಡೆಸಿವೆ.

ಗ್ರಾಮೀಣ ಏಳಿಗೆಗೆ ಮೂಲಭೂತ ಸೌಕರ್ಯಗಳ ಅಭಿವೃದ್ಧಿಯು ಪ್ರಮುಖ ಪಾತ್ರವಹಿಸುವುದನ್ನು ಮನಗಂಡು ಭಾರತ ಸರಕಾರ ಗ್ರಾಮೀಣ ಮೂಲಭೂತ ಸೌಕರ್ಯದ ಅಭಿವೃದ್ಧಿ ನಿಧಿ (RIDF) ಯನ್ನು ೧೯೯೫ರಿಂದ ಪ್ರಾರಂಭಿಸಿತು. ನಬಾರ್ಡ್ ಸಂಸ್ಥೆಯು ಈ ನಿಧಿ ನಿರ್ವಹಣೆಯ ಜವಾಬ್ದಾರಿ ವಹಿಸಿಕೊಂಡಿದೆ. ಬ್ಯಾಂಕುಗಳಿಂದ ಹಾಗೂ ಇನ್ನಿತರ ಹಣಕಾಸು ಸಂಸ್ಥೆಗಳಿಂದ ಈ ನಿಧಿಯಲ್ಲಿ ಹಣವನ್ನು ತೊಡಗಿಸಿ ಸಂಪನ್ಮೂಲ ಕ್ರೋಢೀಕರಿಸುತ್ತದೆ. ರಾಜ್ಯ ಸರ್ಕಾರಗಳಿಗೆ ತಮ್ಮ ಅನೇಕ ಗ್ರಾಮೀಣ ಮೂಲಭೂತ ಸೌಕರ್ಯ

ಅಭಿವೃದ್ಧಿ ಯೋಜನೆಗಳನ್ನು ಅನುಷ್ಠಾನಗೊಳಿಸಲು ನಬಾರ್ಡ್ ಸಂಸ್ಥೆಯು ದೀರ್ಘಾವಧಿ ಸಾಲದ ರೂಪದಲ್ಲಿ ಈ ನಿಧಿಯಿಂದ ಸಹಾಯ ಮಾಡುತ್ತದೆ. ಚಾಮರಾಜನಗರ ಜಿಲ್ಲೆಗೆ ಸದರೀ ಯೋಜನೆಯಡಿ ವಿವಿಧ ಯೋಜನೆಗಳಿಗೆ ಧನ ಸಹಾಯ ಮಾಡುತ್ತಿದೆ. ಈ ಯೋಜನೆಗಳ ಸಿಂಹಪಾಲು (ಶೇ. ೭೦ರಷ್ಟು) ಗ್ರಾಮೀಣ ರಸ್ತೆ ಹಾಗೂ ಸೇತುವೆ ನಿರ್ಮಾಣ ಕಾರ್ಯಗಳಿಗೆ ವಿನಿಯೋಗಿಸಲಾಗಿದೆ. ಇತರ ಪ್ರಮುಖ ಯೋಜನೆಗಳಾದ ಶಾಲಾ ಕೊಠಡಿ, ಅಂಗನವಾಡಿ ಕೇಂದ್ರಗಳ ಕಟ್ಟಡ ನಿರ್ಮಾಣ, ಕಿರು ನೀರಾವರಿ, ಕೃಷಿ ಹೊಂಡ, ಜಲಾನಯನ ಪ್ರದೇಶದ ಅಭಿವೃದ್ಧಿ, ಗ್ರಾಮೀಣ ಕುಡಿಯುವ ನೀರಿನ ಸೌಕರ್ಯ, ಗ್ರಾಮೀಣ ಪ್ರಾಥಮಿಕ ಆರೋಗ್ಯ ಕೇಂದ್ರ ಕಟ್ಟಡಗಳ ನಿರ್ಮಾಣ, ಗ್ರಾಮೀಣ ಮಾರುಕಟ್ಟೆ ವ್ಯವಸ್ಥೆ ಮುಂತಾದವು ಅರ್.ಐ.ಡಿ.ಎಫ್ ಯೋಜನೆಯಿಂದ ಲಾಭ ಪಡೆದುಕೊಂಡಿದೆ.

## ಮೈಕ್ರೋ ಫೈನಾನ್ಸಿಂಗ್ ಮತ್ತು ಬ್ಯಾಂಕುಗಳು

ಮೈಕ್ರೋ ಫೈನಾನ್ಸಿಂಗ್ ಪದ್ಧತಿಯನ್ನು ಅಳವಡಿಸಿಕೊಳ್ಳುವಲ್ಲಿ ಚಾಮರಾಜನಗರ ಜಿಲ್ಲೆಯು ಮಂಚೂಣಿಯಲ್ಲಿದೆ. ಜಿಲ್ಲೆಯಲ್ಲಿ ಹಲವಾರು ಸರಕಾರೇತರ ಸಂಘಟನೆ ಮತ್ತು ಸ್ವಸಹಾಯ ಸಂಘಗಳನ್ನು ಉತ್ತೇಜಿಸುವ ಸಂಸ್ಥೆಗಳು (ಎಸ್.ಎಚ್.ಪಿ.ಐ) ಕಾರ್ಯನಿರತವಾಗಿವೆ. ಜಿಲ್ಲೆಯ ಎಲ್ಲಾ ಬ್ಯಾಂಕುಗಳು, ಸ್ವಸಹಾಯ ಗುಂಪುಗಳಿಗೆ ಸಾಲನೀಡುತ್ತಿವೆ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ "ಸ್ತ್ರೀ ಶಕ್ತಿ" ಗುಂಪುಗಳನ್ನು ಪ್ರಯೋಜಿಸುತ್ತಿದೆ. ನಬಾರ್ಡ್ ಸಂಸ್ಥೆಯು ಸ್ವಸಹಾಯ ಗುಂಪುಗಳ ಮೈಕ್ರೋ ಫೈನಾನ್ಸ್ ಬೆಳವಣಿಗೆಯಲ್ಲಿ ಈ ಕೆಳಗಿನ ಯೋಜನೆಗಳಲ್ಲಿ ಮುಖ್ಯ ಪಾತ್ರ ವಹಿಸುತ್ತದೆ.

೧. ಸ್ವಸಹಾಯ ಸಂಘಗಳ ರಚನೆ,
೨. ನವೀನ ವಿಚಾರಗಳನ್ನು ಸಂಶೋಧನೆಗಳನ್ನು ಜಿಲ್ಲೆಯಲ್ಲಿ ಅನುಷ್ಠಾನಗೊಳಿಸುವುದು
೩. ಎನ್.ಜಿ.ಓ. ಹಾಗೂ ಸ್ವಯಂ ಸೇವಾ ಸಂಸ್ಥೆಗಳಿಗೆ ಬೆಂಬಲ
೪. ಪ್ರಚಾರ ಕಾರ್ಯಕ್ರಮ
೫. ತರಬೇತಿ ಕಾರ್ಯಕ್ರಮಗಳಿಗೆ ಬೆಂಬಲ
೬. ಸಾಲಸೌಲಭ್ಯಗಳ ಸಂಪರ್ಕ ಕಾರ್ಯಕ್ರಮಗಳಲ್ಲಿ ಸಕ್ರಿಯ ಭಾಗವಹಿಸುವಿಕೆ.
೭. ವಿಶೇಷ ಅಧ್ಯಯನ, ಯಶೋಗಾಥೆಗಳ ಸಂಗ್ರಹಣೆ ಮತ್ತು ಪ್ರಚಾರ
೮. ಎನ್.ಜಿ.ಒ. ಮತ್ತು ಮೈಕ್ರೋ ಫೈನಾನ್ಸ್ ಸಂಸ್ಥೆಗಳಿಗೆ ಬೆಂಬಲ ನೀಡುವುದು ಮತ್ತು ಸ್ವಸಹಾಯ ಗುಂಪುಗಳ ಮುನ್ನಡೆ ಸಾಧಿಸುವುದು
೯. ಆರ್ಥಿಕ ಚಟುವಟಿಕೆ ಕಾರ್ಯಕ್ರಮಗಳನ್ನು ನಿಭಾಯಿಸಲು ಸಹಾಯ ನೀಡುವುದು.

## ತರಬೇತಿ ಕೇಂದ್ರಗಳು

ಕೃಷಿಕರಿಗೆ, ಕುಶಲಕರ್ಮಿಗಳಿಗೆ, ವಿದ್ಯಾವಂತ ನಿರುದ್ಯೋಗಿಗಳಿಗೆ, ಕೈಗಾರಿಕೆ, ವ್ಯಾಪಾರ ಮತ್ತು ಸೇವಾ ಕ್ಷೇತ್ರದ ಜನರಿಗೆ ತಂತ್ರಜ್ಞಾನ, ಮಾಹಿತಿ ಹಾಗೂ ತರಬೇತಿ ನೀಡಿ ಉದ್ಯಮಶೀಲತೆ ಅಭಿವೃದ್ಧಿಯಲ್ಲಿ ಪಾಲುಗೊಳ್ಳಲು ಮತ್ತು ಅದರಿಂದ ಆರ್ಥಿಕ ಅಭಿವೃದ್ಧಿಗೆ ಜಿಲ್ಲೆಯ ಬ್ಯಾಂಕುಗಳು ಹಲವಾರು ತರಬೇತಿ ಕೇಂದ್ರಗಳನ್ನು ಸ್ಥಾಪಿಸಿವೆ. ಅವುಗಳೆಂದರೆ

೧. ಗ್ರಾಮೀಣ ಅಭಿವೃದ್ಧಿ ಮತ್ತು ಸ್ವ ಉದ್ಯೋಗ ತರಬೇತಿ ಸಂಸ್ಥೆ (ರುಡಸೆಟ್)
೨. ಗ್ರಾಮೀಣ ಬ್ಯಾಂಕು ಉದ್ಯಮಶೀಲತೆ ಅಬಿವೃದ್ಧಿ ಸಂಸ್ಥೆ

## ಸಹಕಾರ

**ಸಹಕಾರಿ ಆಂದೋಲನ:** ಸಹಕಾರ ಪದ್ಧತಿಯು ಮಾನವನ ಸಾಮೂಹಿಕ ಜೀವನದ ಒಂದು ಅವಿಭಾಜ್ಯ ಅಂಗವಾಗಿದೆ. ಭಾರತದ ಆರ್ಥಿಕ ಪ್ರಗತಿಯಲ್ಲಿ ಸಹಕಾರಿ ಬ್ಯಾಂಕು ಮತ್ತು ಸಂಘ-ಸಂಸ್ಥೆಗಳು ಮಹತ್ವಪೂರ್ಣವಾದ ಪಾತ್ರವನ್ನು ವಹಿಸಿವೆ. ನಮ್ಮ ದೇಶದಲ್ಲಿ ಸಾರ್ವಜನಿಕ ವಲಯ ಮತ್ತು ಖಾಸಗಿ ವಲಯಗಳ ಸಹ ಅಸ್ತಿತ್ವದೊಂದಿಗೆ ಸಹಕಾರಿ ವಲಯ ಜನಸಾಮಾನ್ಯರ ಹಣಕಾಸಿನ ಅವಶ್ಯಕತೆಗಳನ್ನು ಪೂರೈಸಿ ಅವರ ಆರ್ಥಿಕ ಉನ್ನತಿಗೆ ಮಾರ್ಗದರ್ಶಿಯಾಗಿದೆ. ಜನಸಾಮಾನ್ಯರು ಸ್ವಯಂ ಪ್ರೇರಿತರಾಗಿ ಸಂಘಟನೆಗೊಂಡು ಸಹಭಾಗಿತ್ವದಿಂದ ದುಡಿಯುವುದು ಸಹಕಾರ ತತ್ವದ ತಿರುಳಾಗಿದೆ. ತಾವು ಎಲ್ಲರಿಗಾಗಿ ಎಲ್ಲರೂ ತನಗಾಗಿ ದುಡಿಯಬೇಕೆಂಬುದು ಸಹಕಾರದ ಮೂಲಮಂತ್ರವಾಗಿದೆ.

ಭಾರತ ಸರ್ಕಾರದ ೧೯೦೪ರ ಸಹಕಾರಿ ಸಂಘಗಳ ಕಾಯಿದೆಯನ್ವಯ ಮೈಸೂರು ಸಹಕಾರ ಪತ್ತಿನ ಸಂಘವನ್ನು ಪ್ರಪ್ರಥಮವಾಗಿ ೧೯೦೭ರಲ್ಲಿ ಮೈಸೂರಿನಲ್ಲಿ ಸ್ಥಾಪಿಸಲಾಯಿತು. ಈ ಸಂಘವನ್ನು ಈಗ ಮೈಸೂರು ಸಹಕಾರ ಬ್ಯಾಂಕು ಎಂದು ಕರೆಯಲಾಗಿದೆ. ತರುವಾಯ ಜಿಲ್ಲೆಯಾದ್ಯಂತ ಐದು ಸಹಕಾರ ಸಂಘಗಳು ಸ್ಥಾಪನೆಗೊಂಡವು. ೧೯೧೨ರಲ್ಲಿ ಸಹಕಾರ ಸಂಘಗಳ ನಿಬಂಧನೆ ೨ರ ತಿದ್ದುಪಡಿಯೊಂದಿಗೆ ಗ್ರಾಮೀಣ ಪ್ರದೇಶಗಳಲ್ಲಿ ರೈತರಿಗೆ ಮತ್ತು ಕೃಷಿಯೇತರ ಪತ್ತಿನ ಸಂಘ, ಅಲ್ಪಾವಧಿ ಕೃಷಿ ಪತ್ತಿನ ಸಂಘ, ಪ್ರಾಥಮಿಕ ಪತ್ತಿನ ಸಹಕಾರ ಸಂಘ, ಕೇಂದ್ರ ಸಹಕಾರ ಬ್ಯಾಂಕು, ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕು, ನಗರ ಸಹಕಾರಿ ಬ್ಯಾಂಕು, ನೌಕರರ ಸಹಕಾರಿ ಪತ್ತಿನ ಬ್ಯಾಂಕುಗಳು, ಬಳಕೆದಾರರ ಸಹಕಾರ ಸಂಘಗಳು, ಮೊದಲಾದವು ಚಾಮರಾಜನಗರ ಜಿಲ್ಲೆಯ ನಗರ, ಪಟ್ಟಣ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಸ್ಥಾಪನೆಗೊಂಡವು. ಪತ್ತಿನ ಸಹಕಾರ ಸಂಘಗಳು ರಐತರಿಗೆ ವ್ಯವಸಾಯದ ಅಭಿವೃದ್ಧಿಗೆ ಸುಲಭವಾಗಿ ಸಾಲ ಸೌಲಭ್ಯಗಳನ್ನು ಒದಗಿಸುತ್ತಿವೆ. ಇದರಿಂದ ರೈತರನ್ನು ಸಆಹುಕಾರರ ದುಬಾರಿ ಬಡ್ಡಿಯ ಹೊರೆ, ಶೋಷಣೆ, ಸುಲಿಗೆಗಳಿಂದ ತಪ್ಪಿಸಿ ಅವರನ್ನು ಋಣಮುಕ್ತರನ್ನಾಗಿ ಮಾಡುವುದರ ಮೂಲಕ ಸಾಮಾನ್ಯವರ್ಗದ ಜನರ ಜೀವನ ಮಟ್ಟವನ್ನು ಸುಧಾರಿಸುತ್ತವೆ. ವಿವಿಧ ಸಹಕಾರ ಸಂಘಗಳು ಕೃಷಿಕರಲ್ಲಿ ಸಹಕಾರ ಮನೋಭಾವವನ್ನು ಬೆಳೆಸಿ ಸ್ವಯಂ ಪ್ರೇರಣೆಯಿಂದ ಸಂಘಟನೆ ಹೊಂದಿ ರೈತರ ಹಿತಾಸಕ್ತಿಯನ್ನು ಕಾಪಾಡುತ್ತವೆ. ಜೊತೆಗೆ ಜನಸಾಮಾನ್ಯರಲ್ಲಿ ಉಳಿತಾಯ ಪ್ರವೃತ್ತಿಯನ್ನು ಹೆಚ್ಚಿಸಿ, ತನ್ಮೂಲಕ ಬಂಡವಾಳ ವೃದ್ಧಿಗೆ ಉತ್ತೇಜನ ನೀಡುತ್ತವೆ.

## ಆರಂಭದ ಸಹಕಾರಿ ಸಂಸ್ಥೆಗಳು

ಲಭ್ಯವಿರುವ ದಾಖಲೆಗಳ ಪ್ರಕಾರ ೧೯೦೮ರಲ್ಲಿ ಸಣ್ಣ ಪ್ರಮಾಣದ ಪ್ರಾಥಮಿಕ ಕೃಷಿ ಪತ್ತಿನ ಅನ್ಯೋನ್ಯ ಸಹಕಾರಿ ಸಂಘವನ್ನು ಚಾಮರಾಜನಗರ ತಾಲೂಕಿನ ಕುದೇರು ಗ್ರಾಮದಲ್ಲಿ ಪ್ರಪ್ರಥಮ ಸಹಕಾರ ಸಂಘವನ್ನು ಸ್ಥಾಪಿಸಲಾಯಿತು. ನಂತರ ೧೯೧೨ರಲ್ಲಿ ಕೊಳ್ಳೇಗಾಲ ತಾಲೂಕಿನ ತೆಳನೂರು ಗ್ರಾಮದಲ್ಲಿನ ರೈತರ ಸೇವಾ ಸಹಕಾರ ಸಂಘವನ್ನು ಸ್ಥಾಪಿಸಲಾಯಿತು. ೧೯೧೦ರಲ್ಲಿ ಗುಂಡ್ಲುಪೇಟೆಯಲ್ಲಿ ವ್ಯವಸಾಯೇತರ ಸಹಕಾರ ಸಂಘವನ್ನು ಸ್ಥಾಪಿಸಲಾಯಿತು. ೧೯೧೨ರಲ್ಲಿ ದೊಡ್ಡ ಪ್ರಮಾಣದ ಸಹಕಾರ ಸಂಘವನ್ನು ಚಾಮರಾಜನಗರ ತಾಲೂಕಿನ ಆಲೂರಿನಲ್ಲಿ ಸ್ಥಾಪಿಸಿಲಾಯಿತು. ೧೯೧೮ರಲ್ಲಿ ಆದಿಕರ್ನಾಟಕ ಸಹಕಾರ ಸಂಘವನ್ನು ಚಾಮರಾಜನಗರದಲ್ಲಿ ಸ್ಥಾಪಿಸಲಾಯಿತು. ೧೯೨೧ರಲ್ಲಿ ಮೀನುಗಾರರ ಸಹಕಾರ ಸಂಘವನ್ನು ಕೊಳ್ಳೇಗಾಲ ತಾಲೂಕಿನ ಹರವೆಯಲ್ಲಿ, ೧೯೨೫ರಲ್ಲಿ ತಾಲ್ಲೂಕು ಮಟ್ಟದ ಕುಶಲಕಾರ್ಮಿಕರ ವಿವಿಧೋದ್ದೇಶ ಸಹಕಾರ ಸಂಘವನ್ನು ಚಾಮರಾಜನಗರದಲ್ಲಿ ಮತ್ತು ೧೯೨೭ರಲ್ಲಿ ಅರಣ್ಯ ಕಾರ್ಮಿಕರ ಸಹಕಾರ ಸಂಘವನ್ನು ಚಾಮರಾಜನಗರ ತಾಲೂಕಿನ ನಲ್ಲೂರಿನಲ್ಲಿ ಸ್ಥಾಪಿಸಲಾಯಿತು.

೧೯೦೫ರ ಸಹಕಾರ ಸಂಘಗಳ ನಿಬಂಧನೆ ೨ರ ಕಾಯಿದೆಯನ್ನು ೧೯೧೮ರಲ್ಲಿ ನವೀಕರಿಸಿದ್ದರಿಂದ ಮೈಸೂರು ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನ, ತಾಲೂಕು ಮಟ್ಟದಲ್ಲಿ ಚಾಮರಾಜನಗರ, ಕೊಳ್ಳೇಗಾಲ ಮತ್ತು ಗುಂಡ್ಲುಪೇಟೆಗಳಲ್ಲಿ ಒಂದೊಂದು ಕೇಂದ್ರ ಸಹಕಾರ ಸಂಘಗಳನ್ನು ಸ್ಥಾಪಿಸಲಾಯಿತು. ತಾಲೂಕು ಕೇಂದ್ರ ಸಹಕಾರ ಸಂಘದ ಮೇಲ್ವಿಚಾರಣೆಯಿಂದ ವ್ಯವಸಾಯ ಮತ್ತು ವ್ಯವಸಾಯೇತರ ಪತ್ತಿನ ಸಂಘಗಳನ್ನು ಇನ್ನಷ್ಟು ಬಲಪಡಿಸಲಾಯಿತು. ಈ ಸಂಘಗಳ ದಕ್ಷ ಆಡಳಿತ ನಿರ್ವಹಣೆಗಾಗಿ ತಾಲೂಕಿಗೊಬ್ಬರಂತೆ ಸಹಾಯಕ ಸಹಕಾರ ನಿಬಂಧಕರನ್ನು ೧೯೧೮ರಲ್ಲಿ ನೇಮಕ ಮಾಡಲಾಯಿತು. ವ್ಯವಸಾಯ ಪತ್ತಿನ ಸಹಕಾರ ಸಂಘಗಳನ್ನು ಸಣ್ಣ ಮತ್ತು ದೊಡ್ಡ ಪತ್ತಿನ ಸಹಕಾರ ಸಂಘಗಳೆಂದು ವಿಭಜಿಸಿ ಪ್ರತ್ಯೇಕ ಆಡಳಿತಕ್ಕೆ ಒಳಪಡಿಸಲಾಯಿತು.

೧೯೨೪ರಲ್ಲಿ, ಮೈಸೂರು ಸಂಸ್ಥಾನದ ಸಹಕಾರಿ ಯೂನಿಯನ್ ಸ್ಥಾಪಿಸಲ್ಪಟ್ಟು ಸಹಕಾರ ಸಂಘಗಳ ನಿಬಂಧಕರು, ನೌಕರರಿಗೆ ಸಹಕಾರ ಸಂಘದ ಅಭಿವೃದ್ಧಿಯ ಬಗ್ಗೆ ಪೂರ್ಣಾವಧಿಯಲ್ಲಿ ತರಬೇತಿ ನೀಡುವುದರ ಜೊತೆಗೆ ಅವರಿಗೆ ಸಹಕಾರ ಸಂಘಗಳ ಮೂಲ ಧ್ಯೇಯೋದ್ದೇಶಗಳ ಬಗ್ಗೆ ಸೂಕ್ತ ಮಾರ್ಗದರ್ಶನ ನೀಡುವ ಕಾರ್ಯವನ್ನು ಕೈಗೊಳ್ಳುವಂತಾಯಿತು.

ಸಹಕಾರ ಸಂಘಗಳ ಪ್ರಗತಿಯನ್ನು ಪರಾಮರ್ಶಿಸಿ ಮುಂದಿನ ಬೆಳವಣಿಗೆಗೆ ಸಂಬಂಧಿಸಿದಂತೆ ಸಲಹೆಗಳನ್ನು ಸೂಚಿಸಲು ಸರ್ಕಾರವು ಸಮಲ್‌ದಾಸ್ ಮೆಹತಾ ಸಮಿತಿಯನ್ನು ರಚಿಸಿತು. ಈ ಸಮಿತಿಯು ಸಲ್ಲಿಸಿದ ವರದಿಯನ್ವಯ ಸರ್ಕಾರ ೧೯೨೫ರಲ್ಲಿ ಸಾಲೇತರ ಸಹಕಾರ ಸಂಘಗಳ ಸ್ಥಾಪನೆಗೆ ಅದರಲ್ಲೂ ಮುಖ್ಯವಾಗಿ ಹಿಂದುಳಿದ ಪ್ರದೇಶಗಳಲ್ಲಿ ಸಹಕಾರ ಸಂಘಗಳ ಸಂಘಟನೆಗೆ ಉತ್ತೇಜನ ನೀಡಿತು. ರೈತರಿಗೆ ಋಣ ವಿಮೋಚನಾ ಸಾಲಗಳನ್ನು ಒದಗಿಸುವ ಉದ್ದೇಶದಿಂದ ೧೯೨೯ರಲ್ಲಿ ಭೂಅಡಮಾನ ಬ್ಯಾಂಕನ್ನು (ಅಂದರೆ ಈಗಿನ ಭೂ ಅಭಿವೃದ್ಧಿ ಬ್ಯಾಂಕು) ಸಹಕಾರ ತಳಹದಿಯ ಮೇಲೆ ಸ್ಥಾಪಿಸಲಾಯಿತು. ಮೆಹತಾ ಸಮಿತಿಯ ಶಿಫಾರಸ್ಸಿನ ಮೇರೆಗೆ ಮೈಸೂರು ಪ್ರಾಂತೀಯ ಸಹಕಾರಿ ಬ್ಯಾಂಕನ್ನು ಅಪೆಕ್ಸ್ ಬ್ಯಾಂಕಾಗಿ ಪುನರ್‌ರಚಿಸಲಾಯಿತು. ಅಲ್ಲದೆ ಸಹಕಾರಿ ತತ್ವದ ಪ್ರಚಾರಕ್ಕಾಗಿ ಪ್ರಾಂತೀಯ ಪ್ರಚಾರ ಸಂಸ್ಥೆಯನ್ನು ಸಹ ಸ್ಥಾಪಿಸಲಾಯಿತು. ರೈತರಿಗೆ ಸಾಲ ನೀಡುವುದರ ಜೊತೆಗೆ ಸುಧಾರಿಸಿದ ಬೇಸಾಯ ಕ್ರಮಗಳನ್ನು ಅವರು ಕೈಗೊಳ್ಳುವಂತೆ ನೆರವಾಗಲು ಕೃಷಿಕರಿಗೆ ಬೇಸಾಯಕ್ಕೆ ಬೇಕಾಗುವ ಸುಧಾರಿತ ಕೃಷಿ ಉಪಕರಣ, ಬಿತ್ತನೆ ಬೀಜ, ರಸಗೊಬ್ಬರ ಸಸ್ಯ ಸಂರಕ್ಷಣಾ ಔಷಧಿ ಮತ್ತು ಸಿಂಪಡಣಾ ಸಲಕರಣೆಗಳನ್ನು ಕೃಷಿ ಸೇವಾ ಸಹಕಾರ ಸಂಘಗಳಿಂದ ಒದಗಿಸಲಾಯಿತು.

೧೯೨೯-೩೧ರ ಘೋರ ಜಾಗತಿಕ ಆರ್ಥಿಕ ಮುಗ್ಗಟ್ಟಿನಿಂದಾಗಿ ಸಹಕಾರ ಸಂಘಗಳ ಪ್ರಗತಿ ಕುಂಠಿತವಾಯಿತು. ಇದರಿಂದ ಕೃಷಿ ಉತ್ಪನ್ನಗಳ ಬೆಲೆಯಲ್ಲೂ ಕುಸಿತವುಂಟಾಯಿತು. ರೈತರು ಸಾಲ ತೀರಿಸುವ ಸಾಮರ್ಥ್ಯವನ್ನು ಕಳೆದುಕೊಂಡರು. ಸಹಕಾರಿ ಸಂಘಗಳ ಸಾಲವನ್ನು ತೀರಿಸಲು ಅಶಕ್ತರಾದ್ದರಿಂದ ಸಂಘಗಳಲ್ಲಿ ಸುಸ್ತಿ ಬಾಕಿಯು ಹೆಚ್ಚಿತು. ಇಂತಹ ಆರ್ಥಿಕ ಮುಗ್ಗಟ್ಟಿನಿಂದ ಚೇತರಿಸಿಕೊಳ್ಳಲಾಗದ ಅನೇಕ ಕೃಷಿ ಪತ್ತಿನ ಸಂಘಗಳನ್ನು ಮುಚ್ಚಲಾಯಿತು. ಸಹಕಾರ ಸಂಘಗಳ ಪುನಶ್ಚೇತನಕ್ಕಾಗಿ ಸರ್ಕಾರ ೧೯೩೫ರಲ್ಲಿ ಕೆ.ಎಸ್.ಚಂದ್ರಶೇಖರ್ ಅಯ್ಯರ್ ಸಮಿತಿಯನ್ನು ರಚಿಸಿತು. ಈ ಸಮಿತಿಯ ಶಿಫಾರಸ್ಸುಗಳನ್ವಯ ಸಹಕಾರ ಚಳುವಳಿಯ ಪುನಶ್ಚೇತನಕ್ಕಾಗಿ ಹಲವಾರು ಸುಧಾರಣಾ ಕ್ರಮಗಳನ್ನು ಕೈಗೊಳ್ಳಲಾಯಿತು. ೧೯೩೯ರಲ್ಲಿ ಎರಡನೆಯ ಜಾಗತಿಕ ಯುದ್ಧ ಪ್ರಾರಂಭವಾದ ಕಾರಣ ಕೃಷಿ ಉತ್ಪನ್ನಗಳಿಗೆ ಬೇಡಿಕೆ ಹೆಚ್ಚಿ ಬೆಲೆಗಳು ತೀವ್ರವಾಗಿ ಏರತೊಡಗಿದವು. ಈ ಕಾರಣದಿಂದಾಗಿ ಆಹಾರದ ಬೆಲೆಗಳ ಏರಿಕೆಯಿಂದ ರೈತರ ಆರ್ಥಿಕ ಸ್ಥಿತಿ ಸುಧಾರಿಸಿತು. ರೈತರು ಸಹಕಾರಿ ಸಾಲ ತೀರಿಸಲು ಸಮರ್ಥರಾದ ಕಾರಣ ಪ್ರಾಥಮಿಕ ಕೃಷಿ ಸಹಕಾರ ಸಂಘಗಳ ಸ್ಥಿತಿಯೂ ಸುಧಾರಿಸುವಂತಾಯಿತು.

ಇದೇ ಸಂದರ್ಭದಲ್ಲಿ ಏರುತ್ತಿರುವ ಬೆಲೆಗಳನ್ನು ನಿಯಂತ್ರಿಸಲು ಸಹಾಯಕವಾಗುವಂತೆ ಗ್ರಾಹಕರ ಸಹಕಾರ ಸಂಘಗಳು ಅಸ್ತಿತ್ವಕ್ಕೆ ಬಂದವು.

೧೯೪೭ರ ತರುವಾಯ ಕೇಂದ್ರ ಸರ್ಕಾರ ವ್ಯವಸಾಯ ಪತ್ತಿನ ಸಹಕಾರ ಸಂಘಗಳನ್ನು ಪುನರ್ ಸಂಘಟಿಸಲು ಹಲವಾರು ಯೋಜನಾಬದ್ಧ ಕಾರ್ಯಕ್ರಮಗಳನ್ನು ಕೈಗೊಂಡಿದ್ದರಿಂದ ವಿವಿಧೋದ್ದೇಶ ಸಹಕಾರ ಸಂಘಗಳು ಜಿಲ್ಲೆಯಲ್ಲಿ ಸ್ಥಾಪನೆಗೊಂಡವು. ಮೊದಲೇ ಅಸ್ತಿತ್ವದಲ್ಲಿದ್ದ ವ್ಯವಸಾಯ ಪತ್ತಿನ ಸಹಕಾರ ಸಂಘಗಳನ್ನು ವಿವಿಧೋದ್ದೇಶ ಸಂಘಗಳನ್ನಾಗಿ ಪರಿವರ್ತಿಸಲಾಯಿತು. ಜಿಲ್ಲೆಯ ಹಲವಾರು ಕೃಷಿ ಪತ್ತಿನ ಸಹಕಾರ ಸಂಘಗಳನ್ನು ಮುಂದೆ ಕೃಷಿ ಉತ್ಪನ್ನಗಳ ಮಾರಾಟ, ಆಹಾರ ಸಂಸ್ಕರಣಾ ಘಟಕಗಳ ಸ್ಥಾಪನೆ, ನಿಯಂತ್ರಿತ ಮತ್ತು ನಿಯಂತ್ರಿಕವಲ್ಲದ ಮತ್ತು ಆಹಾರೇತರ ಉತ್ಪನ್ನಗಳ ವಿತರಣೆ ಮತ್ತು ಮಾರಾಟ, ಉಗ್ರಾಣ ವ್ಯವಸ್ಥೆ, ರೈತರಿಗೆ ಅಲ್ಪಾವಧಿ (ಬೆಳೆ ಸಾಲ) ಮತ್ತು ಮಧ್ಯಮಾವಧಿ ಸಾಲ ನೀಡುವುದರ ಜೊತೆಗೆ ಅವರಿಗೆ ಕೃಷಿ ಉಪಕರಣ, ಬಿತ್ತನೆಬೀಜ, ಗೊಬ್ಬರ ಮತ್ತು ಸಸ್ಯಸಂರಕ್ಷಣಾ ಔಷಧಿ ಮತ್ತು ಸಿಂಪರಣೆ ಸಲಕರಣೆಗಳು ಮೊದಲಾದವುಗಳನ್ನು ಪೂರೈಕೆ ಮಾಡುವ ವಿವಿಧೋದ್ದೇಶ ಕೃಷಿ ಸಹಕಾರ ಸಂಘಗಳನ್ನಾಗಿ ಪರಿವರ್ತಿಸಲಾಯಿತು. ಇದರ ಜೊತೆಗೆ ರೈತರಿಗೆ ಅಧಿಕ ಇಳುವರಿ ಪಡೆಯುವ ಬಗ್ಗೆ ಕೃಷಿ ವಿಜ್ಞಾನದಲ್ಲಿ ತರಬೇತಿ ಪಡೆದ ಕೃಷಿ ಸಹಾಯಕರು ರೈತರ ಜಮೀನಿನಲ್ಲಿಯೇ ಪ್ರಾಯೋಗಿಕವಾದ ಮಾರ್ಗದರ್ಶನ ಸಲಹೆ ಸೂಚನೆ ಮೊದಲಾದ ಕೃಷಿ ಅಭಿವೃದ್ಧಿ ಕ್ರಮಗಳ ಬಗ್ಗೆ ರೈತರಿಗೆ ಹೆಚ್ಚಿನ ಮಾಹಿತಿಯನ್ನು ಸಹ ನೀಡುವ ಕಾರ್ಯಕ್ರಮವನ್ನು ನಿಯೋಜಿಸಲಾಗಿದೆ.

ಜಿಲ್ಲೆಯ ರೈತರು ತಮ್ಮ ಜಮೀನಿನಲ್ಲಿ ಶಾಶ್ವತವಾದ ಅಭಿವೃದ್ಧಿಯನ್ನು ಕೈಗೊಳ್ಳಲು ನೆರವಾಗುವಂತೆ ದೀರ್ಘಾವಧಿ ಸಾಲದ ಅವಶ್ಯಕತೆಯನ್ನು ಪೂರೈಸುವ ಗುರಿಯಿಂದ ಭೂ ಅಭಿವೃದ್ಧಿ ಬ್ಯಾಂಕನ್ನು ಸ್ಥಾಪಿಸಲಾಯಿತು. ತಾಲೂಕು ಕೃಷಿ ಉತ್ಪನ್ನ ಸಹಕಾರ ಮಾರುಕಟ್ಟೆಯನ್ನು ಸ್ಥಾಪಿಸಲಾಯಿತು. ರೈತರ ಕೃಷಿ ಉತ್ಪನ್ನಗಳ ಮಾರಾಟದ ವ್ಯವಸ್ಥೆಯ ಜೊತೆಗೆ ಅವರಿಗೆ ಸಾಲ ನೀಡುವ ಕಾರ್ಯವನ್ನು ಕೈಗೊಂಡಿದೆ.

೧೯೫೧ರಿಂದ ಪ್ರಾರಂಭವಾದ ಪಂಚವಾರ್ಷಿಕ ಯೋಜನೆ ಕೃಷಿವಲಯಕ್ಕೆ ಪ್ರಥಮ ಆದ್ಯತೆ ನೀಡಿದ್ದರ ಫಲವಾಗಿ ಸಹಕಾರ ಸಂಘಗಳಿಗೆ ಹೆಚ್ಚಿನ ಆರ್ಥಿಕ ನೆರವು ನೀಡಲಾಯಿತು. ವಿವಿಧೋದ್ದೇಶ ಸಹಕಾರ ಸಂಘಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಸ್ಥಾಪಿಸುವುದರ ಜೊತೆಗೆ ಮೊದಲೇ ಕಾರ್ಯನಿರತವಾಗಿದ್ದ ವ್ಯವಸಾಯ ಪತ್ತಿನ ಸಂಘಗಳನ್ನು ವಿವಿಧೋದ್ದೇಶ ಸಂಘಗಳನ್ನಾಗಿ ಪರಿವರ್ತಿಸಿ ಹೆಚ್ಚಿನ ಆದ್ಯತೆ ನೀಡಲಾಯಿತು. ಜಿಲ್ಲೆಯಲ್ಲಿನ ಅನೇಕ ವಿವಿಧೋದ್ದೇಶ ಸಹಕಾರ ಸಂಘಗಳನ್ನು ಸಂಘಟಿಸಲಾಯಿತು. ಕೃಷಿ ಮತ್ತು ಕೃಷಿಯೇತರ ಸಾಲ ನೀಡುವ ಮತ್ತು ಸಾಲೇತರ ಸಹಕಾರ ಸಂಘಗಳನ್ನು ಸರ್ಕಾರದ ಸಹಾಯದಿಂದ ಅಭಿವೃದ್ಧಿಪಡಿಸಲಾಯಿತು. ಇದರಿಂದ ಹಿಂದಿನ ದಶಕಗಳಲ್ಲಿ ಸಹಕಾರಿ ಆಂದೋಲನವು ಭೌಗೋಳಿಕವಾಗಿ ವಿಸ್ತಾರವಾಗಿ ಬೆಳೆಯುವುದರ ಜೊತೆಗೆ ಗುಣಾತ್ಮಕವಾಗಿ ಅಭಿವೃದ್ಧಿ ಹೊಂದಲೂ ಸಹಾಯಕವಾಯಿತು. ಸಹಕಾರ ಸಂಘಗಳಿಗೆ ಅಲ್ಪಾವಧಿ ಬೆಳೆ ಸಾಲ ಮತ್ತು ಮದ್ಯಮಾವಧಿ ಅಭಿವೃದ್ಧಿ ಸಾಲ ಒದಗಿಸುವ ಉದ್ದೇಶದಿಂದ ೧೯೫೫ರಲ್ಲಿ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕನ್ನು ಮೈಸೂರಿನಲ್ಲಿ ಸ್ಥಾಪಿಸಲಾಯಿತು. ಇಂದಿನ ಚಾಮರಾಜನಗರ ಜಿಲ್ಲೆಯು ಇದರ ಆಡಳಿತ ವ್ಯಾಪ್ತಿಗೆ ಆಗ ಒಳಪಟ್ಟಿತ್ತು. ೧೯೬೧ರಲ್ಲಿ ಜಿಲ್ಲೆಯಲ್ಲಿ ದೊಡ್ಡ ಪ್ರಮಾಣದ ಪ್ರಾಥಮಿಕ ಸಹಕಾರ ಸಂಘಗಳನ್ನು ತಾಲೂಕಿಗೊಂದರಂತೆ ಸ್ಥಾಪಿಸಲಾಯಿತು.

ಪ್ರಾಥಮಿಕ ವ್ಯವಸಾಯ ಹುಟ್ಟುವಳಿ ಮಾರಾಟ ಸಂಘಗಳನ್ನು ೧೯೫೯ರಲ್ಲಿ ಸ್ಥಾಪಿಸಲಾಯಿತು. ಬಿತ್ತನೆಬೀಜ, ರಸಗೊಬ್ಬರ, ವ್ಯವಸಾಯ ಉಪಕರಣ, ಕ್ರಿಮಿನಾಶಕ ಮೊದಲಾದವುಗಳ ಮಾರಾಟ ಮತ್ತು ಶೇಖರಣೆಗೆ ಮಾರಾಟ ಸಂಘಗಳ ಹಾಗೂ ಗೋದಾಮುಗಳ ನಿರ್ಮಾಣ ಕಾರ್ಯ ಪ್ರಾರಂಭವಾಯಿತು. ಇವುಗಳ ನಿರ್ಮಾಣಕ್ಕಾಗಿ ಸರ್ಕಾರ ಧನ ಸಹಾಯ ನೀಡಿತು. ಈ ಅವಧಿಯಲ್ಲಿ ಜಿಲ್ಲೆಯಲ್ಲಿ ನೇಕಾರರ ಸಹಕಾರ ಸಂಘ ಮತ್ತು ಕೈಗಾರಿಕಾ ಸಂಘಗಳನ್ನು ಸಹ ಸ್ಥಾಪನೆ ಮಾಡಲಾಯಿತು. ೧೯೬೩ರಲ್ಲಿ ಕೊಳ್ಳೆಗಾಲ ತಾಲೂಕಿನಲ್ಲಿ ಶ್ರೀ ಮಹದೇಶ್ವರ ಸಹಕಾರ ಸಕ್ಕರೆ ಕಾರ್ಖಾನೆಯನ್ನು ಸ್ಥಾಪಿಸಲಾಯಿತು. ಆ ವೇಳೆಗೆ ಬೇಸಾಯಗಾರರ ಸಹಕಾರ ಸಂಘ, ಕಬ್ಬು ಬೆಳೆಗಾರರ ಸಹಕಾರ ಸಂಘ, ಸಹಕಾರಿ ಮಾರಾಟ ಸಂಘ ಹಾಗೂ ಮೀನುಗಾರರ ಸಹಕಾರ ಸಂಘಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದವು. ಚಾಮರಾಜನಗರ ಜಿಲ್ಲೆಯೂ ಸೇರಿದಂತೆ ೧೯೮೫–೮೬ರಲ್ಲಿ ಅಂದಿನ ಮೈಸೂರು ಜಿಲ್ಲೆಯಲ್ಲಿದ್ದ ೪.೮೧ ಲಕ್ಷ ಕುಟುಂಬಗಳಲ್ಲಿ ೩.೭೯ ಲಕ್ಷ ಕುಟುಂಬಗಳು ವಿವಿಧ ಸಹಕಾರ ಸಂಘಗಳಿಂದ ಕೃಷಿ ಸಾಲವನ್ನು ಪಡೆದಿದ್ದವು. ಒಟ್ಟು ೮೧,೦೦೦ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಲ್ಲಿ ೭೮,೦೦೦ ಕುಟುಂಬಗಳು ವಿವಿಧ ಸಹಕಾರ ಸಂಘಗಳಿಂದ ಸಾಲ ಸೌಲಭ್ಯವನ್ನು ಪಡೆದುಕೊಂಡಿದ್ದವು. ಜಿಲ್ಲೆಯ ಒಟ್ಟು ೨೮೫ ಪ್ರಾಥಮಿಕ ಸಹಕಾರ ಸಂಘಗಳಲ್ಲಿ ೧೬೨ ಪ್ರಾಥಮಿಕ ಪತ್ತಿನ ಸಹಕಾರ ಸಂಘಗಳು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನಿಂದ ಸಾಲ ಪಡೆದಿದ್ದರೆ, ಉಳಿದ ೧೨೩ ಸಂಘಗಳು ರಾಷ್ಟ್ರೀಕೃತ ಮತ್ತು ಗ್ರಾಮೀಣ ಬ್ಯಾಂಕುಗಳಿಂದ ಸಾಲ ಪಡೆದಿವೆ. ಜಿಲ್ಲೆಯಲ್ಲಿ ವಿವಿಧ ಸಹಕಾರ ಸಂಘಗಳಿಂದ ಪಡೆದ ಒಟ್ಟು ಸಾಲವು ₹ ೯೭೩.೧೨ ಲಕ್ಷದಷ್ಟಿದ್ದು, ಅದರಲ್ಲಿ ಅಲ್ಪಾವಧಿ ಸಾಲವು ₹ ೪೪೨.೨೦ ಲಕ್ಷಗಳು, ಮಧ್ಯಮಾವಧಿ ಸಾಲವು ₹ ೨೧೧.೩೨ ಲಕ್ಷಗಳು ಮತ್ತು ದೀರ್ಘಾವಧಿ ಸಾಲ ₹ ೪.೦೪ ಲಕ್ಷಗಳಷ್ಟಿತ್ತು.

## ಸರ್ಕಾರದಿಂದ ಪಡೆದ ನೆರವು

ಕರ್ನಾಟಕ ಸರ್ಕಾರವು ಜಿಲ್ಲೆಯ ವಿವಿಧ ಸಹಕಾರ ಸಂಘಗಳ ಯೋಜನಾಬದ್ಧ ಕಾರ್ಯಕ್ರಮಗಳಿಗೆ ನೀಡಿದ ಆರ್ಥಿಕ ನೆರವು ೧೯೮೪–೮೫ರಲ್ಲಿ ₹ ೧೭.೨೨ ಲಕ್ಷಗಳು, ೧೯೮೫–೮೬ರಲ್ಲಿ ₹ ೫.೮೯ ಲಕ್ಷಗಳು ಮತ್ತು ೧೯೮೬–೮೭ರಲ್ಲಿ ₹ ೫.೯೪ ಲಕ್ಷಗಳಿಷ್ಟಿದೆ. ೧೯೮೨–೮೩ರಿಂದ ಸಹಕಾರ ಸಂಘಗಳು ಸರಕಾರಕ್ಕೆ ಸಾಲ ಮರುಪಾವತಿಯಲ್ಲಿ ವಾಯಿದೆಯೊಳಗೆ ತೀರಿಸಿದ ಸಾಲಗಳಿಗೆ ಬಡ್ಡಿಗೆ ಸಹಾಯಧನ ನೀಡಿದೆ. ಸಹಕಾರ ಸಂಘಗಳಿಂದ ರೈತರು ಪಡೆದ ಸಾಲಗಳಿಗೆ ಶೇ. ೭ರಷ್ಟು ಬಡ್ಡಿ ನೀಡಬೇಕಾಗಿದ್ದು, ರೈತರು ಬಾವಿಗಳನ್ನು ತೋಡಲು ಪಡೆದ ಸಾಲಗಳಲ್ಲಿ ಬಾವಿ ವಿಫಲವಾದರೆ, ನಿಷ್ಪ್ರಯೋಜಕವೆಂದು ತೀರ್ಮಾನಿಸಿ ಬಾವಿ ಸಾಲವನ್ನು ಮನ್ನಾ ಮಾಡಲಾಗಿದೆ. ಜೊತೆಗೆ ಆರ್ಥಿಕ ಸಂಕಷ್ಟಕ್ಕೊಳಗಾದ ರೈತರಿಗೆ ಧನಸಹಾಯವನ್ನೂ ಸಹ ನೀಡಿದೆ. ಜಿಲ್ಲೆಯಲ್ಲಿ ಸಾಲದ ಬಡ್ಡಿಯಲ್ಲಿ ನೀಡಿರುವ ರಿಯಾಯಿತಿಯು ೧೯೮೨–೮೩, ೧೯೮೩–೮೪ ಮತ್ತು ೧೯೮೪–೮೫ರಲ್ಲಿ ಕ್ರಮವಾಗಿ ₹ ೬೭.೩೫, ₹ ೮೬.೮೦ ಮತ್ತು ₹ ೯.೩೨ ಲಕ್ಷಗಳಷ್ಟಿದೆ.

ಜಿಲ್ಲೆಯಲ್ಲಿ ೧೯೦೫ರಲ್ಲಿ ಆರಂಭಗೊಂಡ ಸಹಕಾರ ಆಂದೋಲನ ಸ್ವಾತಂತ್ರ್ಯ ಪೂರ್ವದಲ್ಲಿ ವ್ಯವಸ್ಥಿತವಾಗಿ ಬೆಳೆದು ಬಂದಿತಲ್ಲದೇ ಅದು ಜನರಲ್ಲಿ 'ಸಹಕಾರ'ದ ಬಗ್ಗೆ ವಿಶ್ವಾಸ ಮತ್ತು ಆಸಕ್ತಿ ಮೂಡಿಸುವಲ್ಲಿ ಪರಿಣಾಮಕಾರಿ ಪಾತ್ರವನ್ನು ವಹಿಸುವಂತಾಗಿತ್ತು. ಸ್ವಾತಂತ್ರ್ಯಾ ನಂತರವೂ ಅದು ಉತ್ತಮ ಸ್ಥಿತಿಯಲ್ಲಿ ಮುಂದುವರಿಯುವಂತಾಯಿತು. ೧೯೫೬ರ ರಾಜ್ಯ ಪುನರ್ ಸಂಘಟನೆಯ ನಂತರ ಇಡೀ ರಾಜ್ಯಕ್ಕೆ ಅನ್ವಯವಾಗುವಂತೆ ಸಮಗ್ರ ಏಕೀಕೃತ ಕರ್ನಾಟಕ ಸಹಕಾರ ಕಾಯ್ದೆ ೧೯೫೯ ಅನ್ನು ರೂಪಿಸಿ ರಾಜ್ಯಾದ್ಯಂತ ೧೯೬೦ರಿಂದ ಜಾರಿಗೆ ತಂದ ನಂತರ 'ಸಹಕಾರಿ' ಕ್ಷೇತ್ರದಲ್ಲಿ ಮಹತ್ತರವಾದ ಬದಲಾವಣೆಗಳನ್ನು ತರಲಾಯಿತು.

ಸಹಕಾರಿ ಕ್ಷೇತ್ರ ಸರ್ಕಾರದ ಆರ್ಥಿಕ ಸಹಾಯ ಮತ್ತು ಪ್ರೋತ್ಸಾಹದಿಂದ ಜಿಲ್ಲೆಯ ಸಹಕಾರ ಸಂಘಗಳು ರೈತರು ಹಾಗೂ ಸಾಮಾನ್ಯ ವರ್ಗದವರಲ್ಲಿ ಸಹಕಾರ ಮನೋಭಾವವನ್ನು ಬೆಳಸಿ ಸ್ವಯಂ ಪ್ರೇರಣೆಯಿಂದ ಸಂಘಟನೆ ಹೊಂದಿ ಜನಸಾಮಾನ್ಯರಲ್ಲಿ ಉಳಿತಾಯ ಪ್ರವೃತ್ತಿಯನ್ನು ಹೆಚ್ಚಿಸಿ ತನ್ಮೂಲಕ ಬಂಡವಾಳ ವೃದ್ಧಿಗೆ ಉತ್ತೇಜನ ನೀಡುತ್ತಾ ಬಂದಿವೆ. ಜಿಲ್ಲೆಗೆ ಒಬ್ಬ ಉಪನಿಬಂಧಕರು, ನೇಮಕಗೊಂಡು ಕಾರ್ಯನಿರ್ವಹಿಸುತ್ತಾ ಬಂದಿದ್ದಾರೆ.

## ಮೈಸೂರು–ಚಾಮರಾಜನಗರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ (ನಿಯಮಿತ) (ಎಂಸಿಡಿಸಿಸಿ)

ಭಾರತೀಯ ಸಹಕಾರ ಸಂಘಗಳ ಕಾಯಿದೆ ೧೯೧೨ರ ಅನ್ವಯ ಮೈಸೂರು–ಚಾಮರಾಜನಗರ ಜಿಲ್ಲೆಯಲ್ಲಿ ರೈತರಿಗೆ ಕೃಷಿ ಸಾಲವನ್ನು ಒದಗಿಸುವ ಮೂಲ ಉದ್ದೇಶ ಹಾಗೂ ಗ್ರಾಮೀಣ ಜನರನ್ನು ಸಾಹುಕಾರರು, ಲೇವಾದೇವಿಗಾರರು ಮತ್ತು ಮಧ್ಯವರ್ತಿ ವರ್ತಕರಿಂದ ವಿಮುಕ್ತಿಗೊಳಿಸಿ ಗ್ರಾಮೀಣ ಆರ್ಥಿಕ ಪ್ರಗತಿಯನ್ನು ಸಾಧಿಸುವ ಉದ್ದೇಶದಿಂದ ಫೆಬ್ರವರಿ ೧೯೫೩ರಲ್ಲಿ ಮೈಸೂರು–ಚಾಮರಾಜನಗರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕು ಸಹಕಾರ ಸಂಘಗಳ ಅಧಿನಿಯಮಗಳ ಅಡಿಯಲ್ಲಿ ಸ್ಥಾಪನೆಗೊಂಡಿತು. ದಿನಾಂಕ ೩೦–೧೦–೨೦೦೬ರಂದು ಬ್ಯಾಂಕಿನ ಸುವರ್ಣ ಮಹೋತ್ಸವವನ್ನು ಆಚರಿಸಲಾಯಿತು. ಈ ಬ್ಯಾಂಕು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಮತ್ತು ಇತರ ಎಲ್ಲಾ ಸಹಕಾರ ಸಂಘಗಳಿಗೆ ಅಗತ್ಯವಾಗಿ ಬೇಕಾಗುವ ಸಾಲಗಳನ್ನು ಒದಗಿಸುವುದು, ಸಹಕಾರ ಸಂಘಗಳ ಮೇಲ್ವಿಚಾರಣೆಯ ಜೊತೆಗೆ ಸಹಕಾರ ಆಂದೋಲನವನ್ನು ಹೆಚ್ಚು ಪರಿಣಾಮಕಾರಿಯಾಗಿ ವಿಸ್ತರಿಸಿ ತನ್ನ ಕಾರ್ಯಕ್ಷೇತ್ರವನ್ನು ಅಭಿವೃದ್ಧಿ ಪಡಿಸುವ ಕಾರ್ಯಯೋಜನೆಯನ್ನು ರೂಪಿಸಿಕೊಂಡಿತು.

ಮೈಸೂರು–ಚಾಮರಾಜನಗರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕು ಜಿಲ್ಲೆಯ ಗ್ರಾಮೀಣಾಭಿವೃದ್ಧಿಗೆ ಪೂರಕವಾದ ಮಾರಾಟ ಸಹಕಾರ ಸಂಘ, ಕೃಷಿ ಅಭಿವೃದ್ಧಿ ಸಂಘ, ನೇಕಾರರ ಸಹಕಾರ ಸಂಘ, ತೋಟಗಾರಿಕೆ ಉತ್ಪನ್ನಗಳ ಮಾರಾಟ ಸಹಕಾರ ಸಂಘ, ಸಕ್ಕರೆ ಕಾರ್ಖಾನೆ, ಹಾಲು ಉತ್ಪಾದಕರ ಸಹಕಾರ ಸಂಘ, ರೇಷ್ಮೆ ಬೆಳೆಗಾರರ ಸಹಕಾರ ಸಂಘ, ಆಹಾರ ಸಂಸ್ಕರಣ ಘಟಕ ಮುಂತಾದ ಹಲವಾರು ಸಹಕಾರ ಸಂಘಗಳ ಮೂಲಕ ಜಿಲ್ಲೆಯ ಗ್ರಾಮೀಣ ಆರ್ಥಿಕಾಭಿವೃದ್ಧಿಗೆ ಅನುವು ಮಾಡಿಕೊಟ್ಟಿದೆ. ಜಿಲ್ಲೆಯ ಪ್ರಮುಖ ಬೆಳೆಗಳಾದ ತೆಂಗು, ಅಡಿಕೆ, ಬಾಳೆ, ಭತ್ತ, ಕಬ್ಬು ಖುಷ್ಕಿ ಬೆಳೆಗಳು, ಹಣ್ಣು, ತರಕಾರಿ ಮುಂತಾದ ಬೆಳೆಗಳನ್ನು ಬೆಳೆಸಲು ಅಲ್ಪಾವಧಿ ಸಾಲವನ್ನು ನೀಡುತ್ತಿದೆ. ಸರಕಾರದ ಪ್ರಾಯೋಜಿತ ಕಾರ್ಯಕ್ರಮಗಳಾದ ಐ.ಆರ್.ಡಿ.ಪಿ. ನೂರು ಬಾವಿ ಯೋಜನೆ, ಬಯೋಗ್ಯಾಸ್, ಗ್ರಾಮೀಣ ಉದ್ಯೋಗ ಯೋಜನೆ, ಸ್ವಸಹಾಯ ಗುಂಪು, ಸ್ತ್ರೀಶಕ್ತಿ ಯೋಜನೆ ಮುಂತಾದ ಹಲವು ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಿಸುವಲ್ಲಿ ಬ್ಯಾಂಕು ಮಹತ್ವದ ಪಾತ್ರ ವಹಿಸುತ್ತಿದೆ. ಗ್ರಾಮೀಣ ರೈತರಿಗೆ ಪಂಪ್‌ಸೆಟ್, ಕೊಳವೆಬಾವಿ, ಪವರ್‌ಟಿಲ್ಲರ್, ಹೈನುಗಾರಿಕೆ, ಕೋಳಿಸಾಗಣೆ, ತೋಟಗಾರಿಕೆ, ಕೆರೆ ದುರಸ್ತಿ, ಭೂ ಅಭಿವೃದ್ಧಿ ಕೃಷಿ ಕ್ಷೇತ್ರ, ಗೃಹ ನಿರ್ಮಾಣ, ಜಾನುವಾರು ಖರೀದಿ, ಹಾಗೂ ಕೃಷಿ ಉತ್ಪನ್ನಗಳ ಮಾರಾಟಕ್ಕೆ ಮುಂತಾದ ಉದ್ದೇಶಗಳಿಗೆ ಮದ್ಯಮಾವಧಿ ಮತ್ತು ದೀರ್ಘಾವಧಿ ಸಾಲಗಳನ್ನು ಒದಗಿಸುತ್ತಿದೆ. ಹೈನುಗಾರಿಕೆ, ಕುರಿ ಕೋಳಿಸಾಕಣೆ, ಮುಂತಾದ ಕೃಷಿಯೇತರ ಉಪ ಕಸುಬುಗಳಲ್ಲಿ ಕಾರ್ಯನಿರತರಾಗಿರುವವರಿಗೆ ಸಾಕಷ್ಟು ಸಾಲಸೌಲಭ್ಯ ಒದಗಿಸುತ್ತಿರುವುದರಿಂದ ಈ ವೃತ್ತಿಯನ್ನು ಅವಲಂಬಿಸುವ ಕುಟುಂಬಗಳು ಆರ್ಥಿಕವಾಗಿ ಸ್ವಾವಲಂಬಿಗಳಾಗಿರುತ್ತವೆ.

ಗ್ರಾಮೀಣ ನಿರುದ್ಯೋಗವನ್ನು ನೀಗಿಸಲು ಕೃಷಿ ಹಾಗೂ ಕೃಷಿಯೇತರ ಚಟುವಟಿಕೆಗಳಿಗೆ ಕೇಂದ್ರ ಬ್ಯಾಂಕು 'ನಬಾರ್ಡ್' ಪುನರ್ಧನ ಯೋಜನೆಯಡಿಯಲ್ಲಿ ಗ್ರಾಮೀಣ ಗುಡಿ ಕೈಗಾರಿಕೆ, ಕಿರು ಕೈಗಾರಿಕೆ, ಸೇವಾ

ಘಟಕಗಳು, ಮುಂತಾದವುಗಳಿಗೆ ಕಡಿಮೆ ಬಡ್ಡಿಯಲ್ಲಿ ಸಾಲ ನೀಡುತ್ತಿರುವುದಲ್ಲದೆ ಆರ್ಥಿಕ ಸಂಕಷ್ಟಕ್ಕೆ ಒಳಗಾದ ಸಾಲಗಾರರ ಬಡ್ಡಿಯನ್ನು ಮನ್ನಾ ಮಾಡುವ ಕ್ರಮವನ್ನು ಸಹ ಕೈಗೊಂಡಿದೆ. ಜೊತೆಗೆ ಸ್ವಂತ ಉದ್ಯೋಗವನ್ನು ಕೈಗೊಳ್ಳುವಂತೆ ಸಾಲ ನೀಡುವುದಲ್ಲದೇ ಸಹಾಯ ಧನವನ್ನು ಸಹ ನೀಡುತ್ತಿದೆ. ಗ್ರಾಮೀಣ ಜನರಿಗೆ ವ್ಯಾಪಾರ, ಸಾಲ, ವಾಹನ ಖರೀದಿ ಸಾಲ, ಅಂಗಡಿ ಮಳಿಗೆಗಳ ನಿರ್ಮಾಣ, ವಾಣಿಜ್ಯ ಸಂಕೀರ್ಣ ನಿರ್ಮಾಣ, ಸಾಲ ಮುಂತಾದ ಹಲವು ವಿಧದ ಸಾಲದ ಬೇಡಿಕೆಗಳನ್ನು ಬ್ಯಾಂಕು ಪೂರೈಸುತ್ತಿದೆ. ಮಹಿಳೆಯರು ಸ್ವ ಉದ್ಯೋಗ ಕೈಗೊಳ್ಳಲು ಉತ್ತೇಜನ, ಮಾರ್ಗದರ್ಶನ, ಸಾಲಸೌಲಭ್ಯ ಮುಂತಾದವುಗಳನ್ನು ನೀಡುತ್ತಿದೆ.

೧೯೫೫ರಲ್ಲಿ ಬ್ಯಾಂಕಿನ ಸದಸ್ಯರ ಸಂಖ್ಯೆ ೧೪೦ ಮತ್ತು ಷೇರು ಬಂಡವಾಳ ₹ ೧.೩೬ ಲಕ್ಷ ಇತ್ತು. ೧೯೫೭ರಲ್ಲಿ ರಾಜ್ಯ ಸರ್ಕಾರವು ಈ ಬ್ಯಾಂಕಿನ ಹಣಕಾಸಿನ ಪರಿಸ್ಥಿತಿಯನ್ನು ಬಲಪಡಿಸುವ ಗುರಿಯಿಂದ ₹ ೧.೫೦ ಲಕ್ಷಗಳಷ್ಟು ಷೇರು ಬಂಡವಾಳದ ಪಾಲನ್ನು ತನ್ನ ವತಿಯಿಂದ ನೀಡಿತು. ೧೯೬೫ರ ಜೂನ್ ಅಂತ್ಯಕ್ಕೆ ಅದರ ಸದಸ್ಯರ ಸಂಖ್ಯೆ ೮೧೪ ಮತ್ತು ಷೇರು ಬಂಡವಾಳವು ₹ ೧೮೭.೩೧ ಲಕ್ಷಗಳಷ್ಟಿತ್ತು. ಇದರಲ್ಲಿ ಸರ್ಕಾರದ ಪಾಲು ₹ ೫೭.೭೨ ಲಕ್ಷಗಳು ಸೇರಿತ್ತು.

ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕು ೧೯೫೫ ರಿಂದ ಸಾರ್ವಜನಿಕರು, ಕೃಷಿಕರು, ಭೂರಹಿತ ಕೃಷಿಕಾರ್ಮಿಕರು ದಿನಗೂಲಿ ಕೆಲಸಗಾರರೇ ಮುಂತಾದವರಲ್ಲಿ ಉಳಿತಾಯ ಮನೋಭಾವ ಪ್ರವೃತ್ತಿಯನ್ನು ಹೆಚ್ಚಿಸುವ ಗುರಿಯಿಂದ ಪಿಗ್ಮಿ ಠೇವಣಿ ಖಾತೆ ಸೌಲಭ್ಯವನ್ನು ಪ್ರಾರಂಭಿಸಿತು. ಈ ಯೋಜನೆಯಿಂದ ಬ್ಯಾಂಕಿನ ಆಂತರಿಕ ಬಂಡವಾಳ ವೃದ್ಧಿಗೆ ನೆರವಾಯಿತು. ಬ್ಯಾಂಕು ಬಡವರಿಗೆ ದುರ್ಬಲ ವರ್ಗದವರಿಗೆ ಶೇ. ೯ ರಿಂದ ೧೧ ರ ಬಡ್ಡಿದರದಲ್ಲಿ ಅಲ್ಪಾವಧಿ ಸಾಲ ನೀಡಿದೆ. ೧೯೮೬–೮೭ರಲ್ಲಿ ಬ್ಯಾಂಕು ನೀಡಿದ್ದ ಒಟ್ಟು ಅಲ್ಪಾವಧಿ ಮತ್ತು ಮಧ್ಯಮಾವಧಿ ಸಾಲ ₹ ೬೫೬.೮೮ ಲಕ್ಷಗಳಲ್ಲಿ ₹ ೨೪೫.೦೦ ಲಕ್ಷಗಳು ಮಾತ್ರ ವಸೂಲಾಗಿತ್ತು. ಉಳಿದ ₹ ೪೧೧.೮೮ ಲಕ್ಷಗಳಷ್ಟು ಬಾಕಿ ಹಾಗೆಯೇ ಉಳಿದಿತ್ತು.

ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆಯ ಕಾರ್ಯಕ್ರಮಗಳಾದ ಬಡತನ ನಿರ್ಮೂಲನಕ್ಕೆ ಉದ್ಯೋಗ ಭರವಸೆಯ ೨೦ ಅಂಶಗಳ ಆರ್ಥಿಕ ಕಾರ್ಯಕ್ರಮದ ಯೋಜನೆಯಲ್ಲಿ ಆದ್ಯತಾವಲಯಗಳಿಗೆ ದುರ್ಬಲವರ್ಗದ ಕಡುಬಡವರ ಅನುಭೋಗವನ್ನು ಹೆಚ್ಚಿಸುವ ಗುರಿಯಿಂದ ಸಾಲ ನೀಡಲಾಗಿದೆ. ಇದರ ಅನ್ವಯ ೨೭ ಸಹಾಯಕ ಕ್ಷೇತ್ರಗಳನ್ನು ಗುರುತಿಸಿ ೧೯೮೭ ಜೂನ್ ಅಂತ್ಯದ ವೇಳೆಗೆ ₹ ೬೬.೦೭ ಲಕ್ಷಗಳಷ್ಟು ಪರಿಹಾರ ಧನವನ್ನು ನೀಡಲಾಗಿತ್ತು. ಇದರಲ್ಲಿ ₹ ೨೮.೩೪ ಲಕ್ಷಗಳು ವಸೂಲಾಗದೆ ಬಾಕಿ ಹಾಗೆಯೇ ಉಳಿದಿತ್ತು.

ಇಪ್ಪತ್ತು ಅಂಶಗಳ ಆರ್ಥಿಕ ಕಾರ್ಯಕ್ರಮದ ಯೋಜನೆಯಲ್ಲಿ ಆದ್ಯತೆಯ ಆಧಾರದಲ್ಲಿ ಅತ್ಯಂತ ಕಡುಬಡವರು, ದುರ್ಬಲವರ್ಗದ ಹಿಂದುಳಿದವರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಬ್ಯಾಂಕು ₹ ೫೬೩.೫೭ ಲಕ್ಷಗಳಷ್ಟು ನೆರವು ನೀಡಿತ್ತು. ಈ ವರ್ಗದ ಜನರಿಗೆ ಗೋಬರ್ ಗ್ಯಾಸ್ ಮತ್ತು ಜೈವಿಕ ಅನಿಲಗಳನ್ನು ಸಹ ಸಹಾಯ ಧನ ಮತ್ತು ರಿಯಾಯಿತಿ ನೀಡಿ ವಿತರಣೆ ಮಾಡಿದೆ. ೧೯೮೧ ರಿಂದಲೂ ಈಯೋಜನೆಯಲ್ಲಿ ನೀಡಿದ ಸಾಲವನ್ನು ಫಲಾನುಭವಿಗಳು ತೀರಿಸಲಾಗದೆ ಸುಸ್ತಿದಾರರಾದ್ದರಿಂದ ಸರ್ಕಾರವು ಇಂತಹ ಅನುಬೋಗದ ಸಾಲ ಸೌಲಭ್ಯಗಳನ್ನು ಅನಿವಾರ್ಯವಾಗಿ ನಿಲ್ಲಿಸಿದೆ.

೧೯೮೭–೮೮ರಲ್ಲಿ ಜಿಲ್ಲೆಯ ರೇಷ್ಮೆ ಬೆಳೆಗಾರರಿಗೆ ಸಹಕಾರ ಸೇವಾ ಸಂಘಗಳಿಗೆ ₹ ೬೭ ಲಕ್ಷಗಳಷ್ಟು ನಗದು ಸಾಲ ನೀಡಿದೆ. ಭಾರತೀಯ ರಿಜರ್ವ್ ಬ್ಯಾಂಕಿನ ಆದೇಶದ ಮೇರೆಗೆ ಬ್ಯಾಂಕು "ಬೆಳೆ ಸಾಲ ಯೋಜನೆಯನ್ನು ಜಿಲ್ಲೆಯಾದ್ಯಂತ ಜಾರಿಗೊಳಿಸಿ, ಬತ್ತ, ಕಬ್ಬು, ಹೊಗೆಸೊಪ್ಪು, ಹಿಪ್ಪುನೇರಳೆ ಬೆಳೆ, ರಾಗಿ, ಶೇಂಗಾ, ತೋಟಗಾರಿಕೆ ಬೆಳೆ ಹಣ್ಣು, ತರಕಾರಿ, ಬೆಳೆಗಳ ಜೊತೆಗೆ ಕೃಷಿಯೇತರ ಚಟುವಟಿಕೆಗಳಿಗೂ ಸಾಲ ವಿತರಣಾ ಯೋಜನೆಯನ್ನು ಜಾರಿಗೊಳಿಸಿತು.

ಬ್ಯಾಂಕಿನ ಸಂಪನ್ಮೂಲಗಳನ್ನು ಹೆಚ್ಚಿಸುವ ಗುರಿಯಿಂದ ಆಂತರಿಕ ಬಂಡವಾಳವೃದ್ಧಿಗೆ ಠೇವಣಿಗಳ ಸಂಗ್ರಹಣೆಯು ೧೯೮೪–೮೫ರಲ್ಲಿ ₹ ೭೬೪.೭೭ ಲಕ್ಷಗಳು, ೧೯೮೫–೮೬ರಲ್ಲಿ ₹ ೯೧೯.೮೬ ಲಕ್ಷಗಳು ಮತ್ತು ೧೯೮೬–೮೭ ರಲ್ಲಿ ₹ ೧೦೫೯.೫೦ ಲಕ್ಷ ರೂ.ಗಳಷ್ಟು ಸಂಗ್ರಹಿಸಿದೆ. ಅದೇ ಅವಧಿಯಲ್ಲಿ ಅಲ್ಪಾವಧಿ, ಮಧ್ಯಮಾವಧಿ ನಗದು ಬೆಳೆಸಾಲಗಳ ನೀಡಿಕೆಯ ಮೊತ್ತವು ಕ್ರಮವಾಗಿ ₹ ೯೯೯.೧೨ ಲಕ್ಷಗಳು, ₹ ೧೦೭೮.೫೩ ಲಕ್ಷಗಳು ಮತ್ತು ₹ ೧೧೯೯.೧೩ ಲಕ್ಷಗಳಷ್ಟಿದೆ. ಅಪೆಕ್ಸ್ ಬ್ಯಾಂಕ್ (ಬೆಂಗಳೂರು) ಜಿಲ್ಲೆಯ ಕೇಂದ್ರ ಬ್ಯಾಂಕಿಗೆ ನೀಡಿದ ಸಾಲದ ಮೊತ್ತವು ಕ್ರಮವಾಗಿ ₹ ೩೦೧.೨೪ ಲಕ್ಷಗಳು, ₹ ೨೮೭.೨೩ ಲಕ್ಷಗಳು ಮತ್ತು ₹ ೩೫೫.೭೧ ಲಕ್ಷಗಳಷ್ಟಿದೆ. ಬ್ಯಾಂಕು ಗಳಿಸಿದ ನಿವ್ವಳ ಲಾಭವು ಕ್ರಮವಾಗಿ ₹ ೧೨.೦೨ ಲಕ್ಷಗಳು; ₹ ೪.೪೯ ಲಕ್ಷಗಳು ಮತ್ತು ₹ ೧.೦೧ ಲಕ್ಷಗಳಷ್ಟು ಇದೆ. ೧೯೬೭ರಲ್ಲಿ ಬ್ಯಾಂಕು ₹ ೬ ಲಕ್ಷಗಳಷ್ಟು ವೆಚ್ಚ ಮಾಡಿ ಸ್ವಂತ ಕಟ್ಟಡವನ್ನು ಹೊಂದಿದೆ. ಈ ಬ್ಯಾಂಕು ಬೆಂಗಳೂರು ನಗರದಲ್ಲಿರುವ ಸಹಕಾರಿ ತರಬೇತಿ ಕಾಲೇಜಿನ ಕಟ್ಟಡ ನಿರ್ಮಾಣಕ್ಕೆ ₹ ೧೦,೦೦೦ಗಳು ಮತ್ತು ಸಹಕಾರ ಯೂನಿಯನ್ ಕಟ್ಟಡದ ನಿರ್ಮಾಣಕ್ಕೆ ₹ ೨೫,೦೦೦ಗಳಷ್ಟು ಧನವನ್ನು ನೀಡಿದೆ. ೧೯೮೭ರ ಜೂನ್ ಅಂತ್ಯದ ವೇಳೆಗೆ ಬ್ಯಾಂಕಿನ ಆಸ್ತಿ ಮತ್ತು ಹೊಣೆಗಾರಿಕೆಯ ಒಟ್ಟು ಮೊತ್ತವು ಕ್ರಮವಾಗಿ ₹ ೧೮೦೨.೦೬ ಮತ್ತು ₹ ೧೮೦೨.೦೫ ಲಕ್ಷಗಳಷ್ಟಿತ್ತು. ಎಂಸಿಡಿಸಿಸಿ ಬ್ಯಾಂಕಿನ ಆರ್ಥಿಕ ಪ್ರಗತಿಯನ್ನು ಮುಂದಿನ ಕೋಷ್ಟಕದಲ್ಲಿ ತೋರಿಸಲಾಗಿದೆ.

ಜಿಲ್ಲೆಯ ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುವ ಬಡವರಿಗೆ ಸ್ವಸಹಾಯ ಸಂಘಗಳ ಮೂಲಕ ಸಾಲ ನೀಡಿ ಬಡತನ ನಿವಾರಣಾ ಕಾರ್ಯಕ್ರಮಗಳನ್ನು ರೂಪಿಸಿಕೊಂಡು ಮುನ್ನಡೆ ಸಾಧಿಸಿದೆ. ನಬಾರ್ಡ್ ಯೋಜನೆಯಡಿಯಲ್ಲಿ ಬ್ಯಾಂಕು ಜಿಲ್ಲೆಯಲ್ಲಿ ರೈತಕೂಟಗಳನ್ನು ಸ್ಥಾಪಿಸುವುದರ ಜೊತೆಗೆ, ಗ್ರಾಮೀಣ ಜನರಿಗೆ ತರಬೇತಿ ಶಿಕ್ಷಣವನ್ನು ಸಹ ನೀಡುತ್ತಿದೆ.

## ಯಶಸ್ವಿನಿ ವಿಮಾ ಯೋಜನೆ

ಕರ್ನಾಟಕ ಸರ್ಕಾರವು ರಾಷ್ಟ್ರದಲ್ಲಿಯೇ ಪ್ರಪ್ರಥಮವಾಗಿ ರೈತ ಸದಸ್ಯರಿಗೆ ಯಶಸ್ವಿನಿ ವಿಮಾ ಯೋಜನೆಯನ್ನು ಪ್ರಾರಂಭಿಸಿ, ಜಿಲ್ಲೆಯಲ್ಲಿ ರೈತರಿಗೆ ವಿಮಾ ಯೋಜನೆಯ ಸೌಲಭ್ಯಗಳನ್ನು ನೀಡಿದೆ. ರೈತರಿಗೆ ಕೃಷಿ ಅಭಿವೃದ್ಧಿಗಾಗಿ ಶೇ. ನಾಲ್ಕರ ಬಡ್ಡಿ ದರದಲ್ಲಿ ಸಾಲ ನೀಡುತ್ತಿದೆ.

ಬ್ಯಾಂಕು, ಜಿಲ್ಲೆಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು, ತಾಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘ, ಕೈಗಾರಿಕಾ ಮತ್ತು ನೇಕಾರರ ಸಂಘಗಳು, ಪಟ್ಟಣ ಸಹಕಾರ ಸಂಘಗಳು ಮತ್ತು ಪಟ್ಟಣ ಸಹಕಾರ ಬ್ಯಾಂಕುಗಳಿಗೆ ನೆರವು ನೀಡುತ್ತಿದೆ.

ಬ್ಯಾಂಕು ೧೯೯೯–೨೦೦೦ರಿಂದ ಜಾರಿಗೊಳಿಸಿದ ಕಿಸಾನ್ ಕ್ರೆಡಿಟ್ ಕಾರ್ಡ್ ಯೋಜನೆಯನ್ವಯ ರೈತರಿಗೆ ಸಾಲವನ್ನು ಒದಗಿಸುತ್ತಿದೆ. ಸಾಲ ಪಡೆಯುವ ರೈತನ್ನು ವೈಯಕ್ತಿಕ ಅಪಘಾತ ವಿಮಾ ಯೋಜನೆಯ ವ್ಯಾಪ್ತಿಗೆ ಒಳಪಡಿಸಲಾಗುತ್ತಿದೆ. ಸ್ವಸಹಾಯ ಗುಂಪುಗಳಿಗೂ ಜಿಲ್ಲಾ ಬ್ಯಾಂಕು ಸಾಲ ಸೌಲಭ್ಯಗಳನ್ನು ನೀಡುತ್ತಿದೆ.

ಕಿಸಾನ್ ಕ್ರೆಡಿಟ್ ಕಾರ್ಡ್ ಯೋಜನೆಯಡಿ ೩೧–೦೩–೨೦೧೧ರವರೆಗೆ ೨೮೯೫೮ ಸದಸ್ಯರಿಗೆ ₹ ೧೧೯೪೨.೬೦ ಲಕ್ಷಗಳನ್ನು ೨೫೭೫೪ ಅಡಿ ಸಣ್ಣ ರೈತರಿಗೆ ₹ ೮೪೧೩ ಲಕ್ಷಗಳನ್ನು ಬಿಡುಗಡೆ ಮಾಡಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ४೬೮೧ ರೈತರಿಗೆ ₹ ೧೩೯೦.೨४ ಲಕ್ಷಗಳನ್ನು ಬಿಡುಗಡೆ ಮಾಡಿದೆ. ४೧೮೧ ಹೊಸ ರೈತರಿಗೆ ₹ ೧೧४४.೫೦ ಲಕ್ಷಗಳನ್ನು ಬಿಡುಗಡೆ ಮಾಡಿದೆ.

ಎಂ.ಸಿ.ಡಿ.ಸಿ.ಸಿ. ಬ್ಯಾಂಕ್ ತನ್ನ ಸಮಗ್ರ ಆಡಳಿತ ನಿರ್ವಹಣೆಯಲ್ಲಿ ಹಾರ್ಡ್‌ವೇರ್ ಮತ್ತು ಸಾಫ್ಟ್‌ವೇರ್ ತಂತ್ರಾಂಶಗಳನ್ನೊಳಗೊಂಡ ಕೋರ್ ಬ್ಯಾಂಕಿಂಗ್ ಪದ್ಧತಿಯನ್ನು ಅಳವಡಿಸಿದೆ. ಕಂಪ್ಯೂಟರ್ ಅಕೌಂಟ್ ಪದ್ಧತಿಯಲ್ಲಿ ತನ್ನ ಇಡೀ ಆಡಳಿತವನ್ನು ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿದೆ. ತನ್ನ ಎಲ್ಲಾ ಶಾಖೆಗಳ ಆಡಳಿತ ಮೇಲ್ವಿಚಾರಣೆಯ ಜೊತೆ ಅಪೆಕ್ಸ್ ಬ್ಯಾಂಕ್, ಬೆಂಗಳೂರು ಇವುಗಳೊಂದಿಗೆ ಕಂಪ್ಯೂರ್ ಪದ್ಧತಿಯಲ್ಲಿಯೇ ಲೆಕ್ಕಪತ್ರಗಳ ವ್ಯವಹಾರಗಳನ್ನು ನಿರ್ವಹಿಸುತ್ತಿದೆ.

ಇತ್ತೀಚಿನ ವೈದ್ಯನಾಥನ್ ಸಮಿತಿ ಶಿಫಾರಸ್ಸುಗೆ ನೀಡಿದ ಸಲಹೆಗಳನ್ನು ಎಂ.ಸಿ.ಡಿ.ಸಿ.ಸಿ. ಬ್ಯಾಂಕು ತನ್ನ ೨೫೧ ಪ್ರಾಥಮಿಕ ಕೃಷಿ ಸಹಕಾರ ಸಂಘಗಳಿಗೆ ಭಾರತ ಸರ್ಕಾರದ ಷೇರುಧನ ₹ ೨೨.೯೬ ಕೋಟಿಗಳು, ರಾಜ್ಯ ಸರ್ಕಾರದ ಷೇರುಧನ ₹ ೩.೬೬ ಕೋಟಿಗಳು ಮತ್ತು ಪ್ರಾಥಮಿಕ ಕೃಷಿ ಸಹಕಾರ ಸಂಘಗಳ ಷೇರು ಧನ ₹ ೫.೨೨ ಕೋಟಿಗಳ ಪಾಕೇಜ್ ಪ್ರೋಗ್ರಾಂನಂತೆ ತನ್ನ ಆಡಳಿತ ಸಿಬ್ಬಂದಿ ವರ್ಗದವರಿಗೆ ತರಬೇತಿಯನ್ನು ನೀಡಿದೆ.

## ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು

ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಭಾರತದ ಸಹಕಾರ ವ್ಯವಸ್ಥೆಯಲ್ಲಿ ಆಧಾರ ಸ್ಥಂಭಗಳಾಗಿದ್ದು, ಇವು ಅತ್ಯಂತ ಕೆಳಮಟ್ಟದಲ್ಲಿ ಅಂದರೆ ಪ್ರತೀ ಗ್ರಾಮದಲ್ಲಿ ಹತ್ತು ಅಥವಾ ಅದಕ್ಕಿಂತ ಹೆಚ್ಚಿನ ಗ್ರಾಮಸ್ಥರು ಸೇರಿ ಸ್ಥಾಪಿಸಿದ ಪತ್ತಿನ ಸಹಕಾರಿ ಸಂಘಗಳಾಗಿದ್ದು, ಸಂಘದ ಸದಸ್ಯರಿಗೆ ಬೇಸಾಯ ಮತ್ತು ಕೃಷಿಯೇತರ ಚಟುವಟಿಕೆಗಳಿಗೆ ಕಡಿಮೆ ಬಡ್ಡಿದರದಲ್ಲಿ ಅಲ್ಪಾವಧಿ ಸಾಲ ನೀಡುತ್ತವೆ. ವ್ಯವಸಾಯದ ಅಭಿವೃದ್ಧಿಗೆ ಒದಗಿಸಲಾಗುವ ಸಹಕಾರಿ ಸಾಲವನ್ನು ಹೆಚ್ಚು ಪರಿಣಾಮಕಾರಿಗೊಳಿಸುವುದು, ರೈತರನ್ನು ಸ್ಥಳೀಯ ಸಾಹುಕಾರರು ಮತ್ತು ಜಮೀನ್ದಾರರಿಂದ ಋಣಮುಕ್ತರನ್ನಾಗಿಸುವುದು ಮತ್ತು ಮುಂದೆ ಪುನಃ ಸಾಹುಕಾರರ ಬಳಿ ಸಾಲಕ್ಕೆ ಕೈ ಚಾಚದಂತೆ ಅವರಿಗೆ ಸಂಘಗಳಿಂದ ಅಲ್ಪಾವಧಿ (ಬೆಳೆಸಾಲ) ಮತ್ತು ಮಧ್ಯಮಾವಧಿ ಸಾಲ ನೀಡುವುದು ಜೊತೆಗೆ ಸುಧಾರಿಸಿದ ಬಿತ್ತನೆ ಬೀಜ, ರಸಗೊಬ್ಬರ, ಹಾಗೂ ಕ್ರಿಮಿನಾಶಕ ಔಷಧಿಗಳನ್ನು ಒದಗಿಸುವುದಾಗಿದ್ದು, ರೈತರಿಗೆ ಅಗತ್ಯವಾಗಿ ಬೇಕಾಗುವ ಸಕ್ಕರೆ, ಸೀಮೆಎಣ್ಣೆ, ಪಡಿತರ, ಬಟ್ಟೆ, ಮೊದಲಾದ ವಸ್ತುಗಳನ್ನು ಮಾರಾಟ ಮಾಡಲಾಗುತ್ತದೆ.

**ಕೋಷ್ಟಕ ೬.೭: ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕು (ಎಂ.ಸಿ.ಡಿ.ಸಿ.ಸಿ.) ಸಾಧಿಸಿರುವ ಪ್ರಗತಿ ತಃಖ್ತೆ (₹ ಲಕ್ಷಗಳಲ್ಲಿ)**

| ಕ್ರ. ಸಂ | ವಿವರ | ೩೧–೧೩–೦೬ | ೩೧–೦೩–೦೭ | ೩೧–೦೩–೦೮ | ೩೧–೦೩–೦೯ | ೩೧–೧೨–೧೦ |
|---|---|---|---|---|---|---|
| ೧ | ಸದಸ್ಯತ್ವ (ಬ್ಯಾಂಕುಗಳು) | ೧೧೪೫ | ೧೧೬೫ | ೧೧೭೬ | ೧೧೭೬ | ೧೧೯೧ |
| ೨ | ಪ್ರಾ.ಕೃ.ಸಹಕಾರ ಸಂಘಗಳ ಒಟ್ಟು ಸದಸ್ಯರು | ೩೫೪೨೧೬ | ೩೫೭೩೮೭ | ೩೬೦೯೧೮ | ೩೬೨೨೭೮ | ೩೬೨೨೭೮ |
| ೩ | ಷೇರು ಬಂಡವಾಳ ಸಂಘಗಳು | ೯೦೬.೫೬ | ೧೦೪೪.೫೩ | ೧೧೩೧.೫೯ | ೧೨೭೫.೫೨ | ೧೪೬೩.೭೪ |
| ೪ | ಷೇರು ಬಂಡವಾಳ ಸರ್ಕಾರದಿಂದ | ೫೭.೭೨ | ೦ | ೦ | ೦ | ೦ |
| ೫ | ಕಾಯ್ದಿಟ್ಟ ನಿಧಿಗಳು | ೩೩೬೧.೩೬ | ೩೨೦೬.೪೧ | ೩೨೩೫.೧೮ | ೩೬೨೮.೩೦ | ೩೬೦೪.೯೦ |
| ೬ | ಠೇವಣಿಗಳು | ೯೫೯೧.೩೦ | ೧೨೫೫೫.೪೭ | ೧೩೦೮೯.೪೬ | ೧೪೩೧೪.೦೯ | ೧೭೭೭೨.೮೭ |
| ೭ | ಪಡೆದ ಸಾಲಗಳು ಅಪೇಕ್ಸ್ ಬ್ಯಾಂಕು | ೫೭೮೯.೫೬ | ೭೩೧೨.೬೪ | ೯೬೩೫.೫೨ | ೭೪೪೭.೮೨ | ೬೭೪೬.೪೧ |
| ೮ | ಹೂಡಿಕೆ | ೪೭೦೩.೨೪ | ೬೩೧೨.೫೦ | ೧೦೬೭೪.೫೦ | ೧೧೭೯೮.೨೮ | ೧೨೬೯೮.೬೨ |
| ೯ | ಸಾಲ ಮತ್ತು ಮುಂಗಡಗಳು | ೧೨೬೮೧.೬೬ | ೧೨೬೭೧.೦೭ | ೧೨೬೨೦.೮೩ | ೧೫೧೩೩.೦೦ | ೧೮೭೧೨.೫೮ |
| ೧೦ | ಬರಬೇಕಾದ ಸಾಲಗಳು | ೧೩೦೫೬.೯೮ | ೧೬೩೩೩.೩೮ | ೧೫೬೨೦.೮೩ | ೧೫೧೩೩.೦೦ | ೧೮೭೧೨.೫೮ |
| ೧೧ | ಲಾಭ | ೨೩೩.೮೧ | ೪೨.೬೮ | ೧೫೯.೧೮ | ೩೧೦.೧೦ | ೭೩೦.೬೦ |
| ೧೨ | ವಸೂಲಾತಿ – ಕೃಷಿ ಸಾಲಗಳು | ೭೯% | ೩೯% | ೫೮% | ೭೮% | ೮೧% |
| | ವಸೂಲಾತಿ–ಕೃಷಿಯೇತರ ಸಾಲಗಳು | ೫೩% | ೫೫% | ೪೬% | ೫೧೫ | ೭೬% |
| ೧೩ | ಸ್ವಸಹಾಯ ಗುಂಪುಗಳ ಪ್ರಗತಿ | | | | | |
| | ಸ್ವಸಹಾಯ ಗುಂಪುಗಳ ಪ್ರಗತಿ ಒಟ್ಟು ಸ್ವಸಹಾಯ ಗುಂಪುಗಳು | ೪೭೦೭ | ೫೨೬೬ | ೫೭೯೪ | ೬೩೩೮ | ೬೬೮೦ |

*ಆಧಾರ: ಎಂ.ಸಿಡಿಸಿಸಿ ಬ್ಯಾಂಕು–ಮೈಸೂರು*

**ಕೋಷ್ಟಕ ೬.೯: ಕರ್ನಾಟಕ ರಾಜ್ಯ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕು (ನಿ)(ಪೀಕಾರ್ಡ್) ಪ್ರಗತಿ ತಃಖ್ತೆ**

**(₹ ಲಕ್ಷಗಳಲ್ಲಿ)**

| ಕ್ರ. ಸಂ | ವಿವರ | ೩೧–೦೩–೦೭ | ೩೧–೦೩–೦೮ | ೩೧–೦೩–೦೯ |
|---|---|---|---|---|
| ೧ | ಬ್ಯಾಂಕಿನ ಸಂಖ್ಯೆ | ೪ | ೪ | ೪ |
| ೨ | ಸದಸ್ಯತ್ವ | ೧೪೯೮೦ | ೧೬೨೩೬ | ೧೩೦೬೩ |
| ೩ | ಷೇರುಧನ | ೧೮೪.೬೯ | ೧೮೮.೩೪ | ೧೮೭.೧೧ |
| ೪ | ನಿಧಿಗಳು | ೨೩೧.೩೧ | ೨೯೧೩೭ | ೨೯೬.೬೪ |
| ೫ | ಠೇವಣಿಗಳು | ೧.೨೪ | ೧.೩೧ | ೦.೩೧ |
| ೬ | ಪಡೆದ ಸಾಲಗಳು | ೨೪೬೫.೩೭ | ೨೪೪೩.೬೯ | ೨೨೯೩.೩೮ |
| ೭ | ಸಾಲ ವಿತರಣೆ | ೪೪೫.೮೩ | ೪೦೭.೭೮ | ೬೭.೪೯ |
| ೮ | ಬರಬೇಕಾದ ಸಾಲಗಳು | ೨೦೯೫.೬೦ | ೨೧೫೭.೫೯ | ೧೮೬೧.೦೯ |

### ಚಾಮರಾಜನಗರ ಜಿಲ್ಲಾ ಸಹಕಾರ ಒಕ್ಕೂಟ(ನಿ)

ಸಹಕಾರಿ ಆಂದೋಲನದ ವ್ಯಾಪಕ ಪ್ರಚಾರ, ಪ್ರಗತಿಪರ ಧೋರಣೆ ಮತ್ತು ಪರಿಸರ ಸ್ನೇಹಿ ಬೆಳವಣಿಗೆಯಲ್ಲಿ ಸಹಕಾರಿ ಯೂನಿಯನ್ (ಒಕ್ಕೂಟ) ಕಳೆದ ಒಂದು ಶತಮಾನದಿಂದಲೂ ಮಹತ್ವಪೂರ್ಣವಾದ ಪಾತ್ರವನ್ನು ವಹಿಸುತ್ತಾ ಬಂದಿದೆ. ಮೂಲಭೂತ ಸಹಕಾರ ತತ್ವಗಳ ಪ್ರಚಾರ ಸಂಘಗಳ ರಚನೆಗೆ ಮಾರ್ಗದರ್ಶನ ಸದಸ್ಯರಿಗೆ ಮತ್ತು ಆಡಳಿತ ವರ್ಗದವರಿಗೆ ಸೂಕ್ತ ತರಬೇತಿ ಮತ್ತು ಮಾರ್ಗದರ್ಶನ, ಸಹಕಾರಿ ಧೋರಣೆಯ ನಿರೂಪಣೆ, ಸದಸ್ಯರಿಗೆ ಸಹಕಾರಿ ಶಿಕ್ಷಣದ ಪ್ರಚಾರ ಇವೇ ಮುಂತಾದವು ಸಹಕಾರ ಒಕ್ಕೂಟದ ಪ್ರಮುಖ ಉದ್ದೇಶಗಳು. ರಾಜ್ಯ ಪುನರಚನೆಯ ನಂತರ ರಾಜ್ಯ ಮಟ್ಟದಲ್ಲಿ ಪುನರ್‌ರಚನೆಗೊಂಡ ರಾಜ್ಯ ಸಹಕಾರಿ ಯೂನಿಯನ್ (ನಂತರ ಸಹಕಾರ ಮಹಾ ಮಂಡಳ) ಬೆಂಗಳೂರು ಜಿಲ್ಲಾ ಮಟ್ಟದ ಸಂಸ್ಥೆಗಳಿಗೆ ಮಾರ್ಗದರ್ಶನ ನೀಡುವಲ್ಲಿ ಪರಿಣಾಮಕಾರಿ ಪಾತ್ರವಹಿಸುತ್ತಿದೆ.ಜಿಲ್ಲಾ ಸಹಕಾರಿ ಯೂನಿಯನ್‌ಗಳ ಒಕ್ಕೂಟವೇ ಸಹಕಾರಿ ಮಹಾಮಂಡಳವಾಗಿದೆ.

ಸಹಕಾರ ಚಳುವಳಿಯ ಪ್ರಗತಿಗೆ ಅಗತ್ಯವಾದ ಮಾರ್ಗದರ್ಶನ ನೀಡುವ ಉದ್ದೇಶದಿಂದ ೧೯೬೩ರಲ್ಲಿ ಮೈಸೂರು ಜಿಲ್ಲಾ ಸಹಕಾರಿ ಯೂನಿಯನ್ ಎಂಬ ಸಂಸ್ಥೆಯನ್ನು ಸ್ಥಾಪಿಸಲಾಯಿತು. ಇದು ರಾಜ್ಯ ಸಹಕಾರಿ ಮಹಾಮಂಡಳಿಯೊಂದಿಗೆ ಸಂಯೋಜನೆ ಗೊಂಡಿದೆ. ಇದು ರಾಜ್ಯ ಸಹಕಾರ ಮಹಾಮಂಡಳದ ಮಾರ್ಗದರ್ಶನ ಮೇರೆಗೆ ಸಹಕಾರಿ ತತ್ವಗಳಾದ ಸಹಕಾರಿ ಶಿಕ್ಷಣ, ತರಬೇತಿ, ಪ್ರಚಾರ ಕಾರ್ಯಕ್ರಮಗಳನ್ನು ಜಿಲ್ಲಾ ಮಟ್ಟದಲ್ಲಿ ಅನುಷ್ಠಾನಕ್ಕೆ ತರುವ ಮೂಲಕ ಸಹಕಾರದ ಉದ್ದೇಶ ಹಾಗೂ ತತ್ವಗಳನ್ನು ಪ್ರಚಾರ ಮಾಡಿ ಸಹಕಾರ ಚಳವಳಿಯ ಬೆಳವಣಿಗೆಗಾಗಿ ಶ್ರಮಿಸುತ್ತಿದೆ. ಅಲ್ಲದೇ ಜಿಲ್ಲೆಯಲ್ಲಿನ ಎಲ್ಲಾ ಬಗೆಯ ಸಹಕಾರ ಸಂಘಗಳನ್ನು ಬಲಪಡಿಸುವುದು, ಹೊಸ ಸಹಕಾರ ಸಂಘಗಳನ್ನು ಸ್ಥಾಪಿಸಲು ಮಾರ್ಗದರ್ಶನ ನೀಡುವುದು ಮುಂತಾದವು ಈ ಒಕ್ಕೂಟದ ಉದ್ದೇಶಗಳಾಗಿವೆ. ಜಿಲ್ಲೆಯಲ್ಲಿನ ಎಲ್ಲಾ ಸಹಕಾರ ಸಂಘಗಳು ಈ ಯೂನಿಯನ್ನಿನ ಸದಸ್ಯತ್ವವನ್ನು ಪಡೆಯಬಹುದಾಗಿದೆ.

ನವದೆಹಲಿಯಲ್ಲಿ ರಾಷ್ಟ್ರೀಯ ಸಹಕಾರ ಒಕ್ಕೂಟದವರು ರೂಪಿಸಿರುವಂತೆ ಜಿಲ್ಲೆಯಲ್ಲಿ ಸಹಕಾರ ಶಿಕ್ಷಣ, ಅಭಿವೃದ್ಧಿ ಮತ್ತು ಪ್ರಚಾರ ಯೋಜನೆಯು ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ನಿರ್ದೇಶನದಂತೆ ಜಾರಿಯಲ್ಲಿರುತ್ತದೆ. ಸಹಕಾರ ಸಂಘಗಳಲ್ಲಿ ಕೆಲಸ ಮಾಡುತ್ತಿರುವ ಸಿಬ್ಬಂದಿಗಳಿಗೆ ಆಡಳಿತ ಮಂಡಳಿ ಸದಸ್ಯರು, ಮಹಿಳಾ ಸದಸ್ಯರು, ಹಾಗೂ ಯುವ ಜನರಿಗೆ ಸಹಕಾರ ಶಿಕ್ಷಣ ಯೋಜನೆಯಲ್ಲಿ ತರಬೇತಿ ನೀಡಲಾಗುತ್ತದೆ. ಈ ಕಾರ್ಯಕ್ರಮಗಳ ಜೊತೆಗೆ ಸಹಕಾರ ಸಮ್ಮೇಳನ, ಸಹಕಾರ ಸಪ್ತಾಹ, ಸಹಕಾರ ಸಂಘಗಳ ಸಿಬ್ಬಂದಿ ವರ್ಗದವರಿಗೆ ಆಡಳಿತ ಮಂಡಳಿ ಸದಸ್ಯರಿಗೆ, ಸಹಕಾರ ಸಂಘಗಳ ವ್ಯವಸ್ಥಾಪಕರಿಗೆ, ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳಿಗೆ, ಕೇಂದ್ರ ಸಹಕಾರ ಬ್ಯಾಂಕಿನ ಮಾರಾಟಗಾರರು ಮತ್ತು ಮೇಲ್ವಿಚಾರಕರಿಗೆ, ಲೆಕ್ಕ ಪರಿಶೋಧನಾ ಇಲಾಖೆ ಅಧಿಕಾರಿಗಳಿಗೆ ಮಹಿಳಾ ಸಹಕಾರಿಗಳಿಗೆ ಆದಾಯೋತ್ಪನ್ನ ತರಬೇತಿ ನೀಡಲಾಗಿದೆ.

ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ಸಹಕಾರ ಕುರಿತು ಚರ್ಚಾ ಮತ್ತು ಪ್ರಬಂಧ ಸ್ಪರ್ಧೆ ಕಾರ್ಯಕ್ರಮಗಳನ್ನು ಏರ್ಪಡಿಸಿ ಕಾರ್ಯಗತಗೊಳಿಸುವಲ್ಲಿ ಯಶಸ್ವಿ ಪ್ರಯತ್ನ ನಡೆಸಲಾಗಿದೆ. ವಿವಿಧ ಸಹಕಾರ ಸಂಘಗಳನ್ನು ನೋಂದಣಿ ಮಾಡಿಸುವಲ್ಲಿ ಮಾರ್ಗದರ್ಶನ ಸಲಹೆ ಸೂಚನೆಗಳನ್ನು ಕೊಡಲಾಗಿದೆ. ರಾಜ್ಯ ಪುನರ್‌ರಚನೆಯ ನಂತರ ರಾಜ್ಯಮಟ್ಟದಲ್ಲಿ ಪುನರ್‌ರಚನೆಗೊಂಡ ರಾಜ್ಯ ಸಹಕಾರ ಮಹಾಮಂಡಳ ಬೆಂಗಳೂರು ಜಿಲ್ಲಾ ಮಟ್ಟದ ಸಂಸ್ಥೆಗಳಿಗೆ ಮಾರ್ಗದರ್ಶನ ನೀಡುವಲ್ಲಿ ಪರಿಣಾಮಕಾರಿ ಪಾತ್ರ ವಹಿಸುತ್ತದೆ. ಜಿಲ್ಲಾ ಸಹಕಾರಿ ಯೂನಿಯನ್‌ಗಳ ಒಕ್ಕೂಟವೇ ಸಹಕಾರಿ ಮಹಾಮಂಡಳವಾಗಿದೆ.

## ತಾಲೂಕು ಕೃಷಿ ಉತ್ಪನ್ನ ಮಾರಾಟ ಸಹಕಾರ ಸಂಘಗಳು

ಕರ್ನಾಟಕ ರಾಜ್ಯ ಸಹಕಾರ ವಲಯದ ಅಭಿವೃದ್ಧಿಯಲ್ಲಿ ಕೃಷಿ ಉತ್ಪನ್ನ ಮಾರಾಟ ಸಹಕಾರ ಸಂಘಗಳು ಮಹತ್ವದ ಪಾತ್ರವನ್ನು ವಹಿಸಿವೆ. ಸಹಕಾರ ಸಂಘಗಳು ಮತ್ತು ಬ್ಯಾಂಕುಗಳು ಕೃಷಿಯ ಅಭಿವೃದ್ಧಿಗೆ ಸಾಲ ಸೌಲಭ್ಯ ಒದಗಿಸುವುದರ ಜೊತೆಗೆ ರೈತರು ಬೆಳೆದ ಹುಟ್ಟುವಳಿಗಳನ್ನು ಉತ್ತಮ ಹಾಗೂ ಲಾಭದಾಯಕ ಬೆಲೆಗಳಿಗೆ ಮಾರಾಟ ಮಾಡುವ ವ್ಯವಸ್ಥೆಯನ್ನು ವಹಿಸಿಕೊಂಡಿವೆ. ಕೃಷಿ ಉತ್ಪನ್ನಗಳನ್ನು ರಾಜ್ಯ ಉಗ್ರಾಣಗಳಲ್ಲಿ ದಾಸ್ತಾನಾಗಿಟ್ಟು, ಅದರ ರಸೀತಿಯ ಆಧಾರದಿಂದ ಬ್ಯಾಂಕುಗಳಲ್ಲಿ ಅಲ್ಪಾವಧಿ ಸಾಲ ಪಡೆಯುವ, ಕೃಷಿ ಉತ್ಪನ್ನ ಮಾರಾಟ ಸಹಕಾರ ಸಂಘ ಅಥವಾ ಕೃಷಿ ಉತ್ಪನ್ನ ನಿಯಂತ್ರಿತ ಮಾರುಕಟ್ಟೆಗಳಲ್ಲಿ ವಿದ್ಯುನ್ಮಾನ ಮೆಟ್ರಿಕ್ ಪದ್ಧತಿಯ ತೂಕ ಮತ್ತು ಅಳತೆಯಲ್ಲಿ ಯೋಗ್ಯ ಬೆಲೆಗೆ ಮಾರಾಟ ಮಾಡುವ, ಗುಣಮಟ್ಟದಿಂದ ಕೂಡಿದ ಸಂಸ್ಕರಣಗೊಂಡ ಹಾಗೂ ಶುದ್ಧೀಕರಣಗೊಳಿಸಿದ ಆಹಾರ ಧಾನ್ಯಗಳನ್ನು ಗ್ರಾಹಕರಿಗೆ ಮಾರಾಟ ಮಾಡುವ ಕಾರ್ಯಗಳನ್ನು ನಿರ್ವಹಿಸುತ್ತವೆ.

ಚಾಮರಾಜನಗರ ಜಿಲ್ಲೆಯ ನಾಲ್ಕು ತಾಲೂಕು ಸೇರಿದಂತೆ ಹೋಬಳಿಗಳಲ್ಲಿ ತಾಲೂಕು ಕೃಷಿ ಉತ್ಪನ್ನ ಮಾರಾಟ ಸಹಕಾರ ಸಂಘಗಳು, ತೋಟಗಾರಿಕೆ ಮಾರಾಟ ಸಂಘಗಳು, ತೋಟಗಾರಿಕೆ ಮಾರಾಟ ಸಂಘಗಳು, ಬೆಳೆ ಮಾರಾಟ ಸಂಘಗಳು ಮತ್ತು ಇತರ ಕೃಷಿ ಉತ್ಪನ್ನ ಮಾರಾಟ ಸಹಕಾರ ಸಂಘಗಳನ್ನು ಸ್ಥಾಪಿಸಲಾಗಿದೆ. ವಿಶಿಷ್ಟೋಪಯುಕ್ತ ಮಾರಾಟ ಸಂಘಗಳು ಅಧಿಕ ಇಳುವರಿಗೆ ಬೇಕಾಗುವ ಉತ್ತಮ ಬಿತ್ತನೆ ಬೀಜದ ತಳಿಗಳು, ರಸಗೊಬ್ಬರ, ಕೃಷಿ ಉಪಕರಣ, ಕೀಟನಾಶಕ ಔಷಧಿಗಳು, ಮುಂತಾದ ಕೃಷಿ ಪರಿಕರಗಳನ್ನು ರೈತರಿಗೆ ಪೂರೈಕೆ ಮಾಡುವುದರ ಜೊತೆಗೆ ರೈತರ ಉತ್ಪನ್ನಗಳನ್ನು ಗುಣಮಟ್ಟ ಆಧಾರಿತ ವರ್ಗೀಕರಣ, ಶುದ್ಧೀಕರಣ ಮಾಡುವ ವಿವಿಧ ವರ್ಗಗಳಾಗಿ ವಿಂಗಡಿಸುವ ಆಹಾರ ಸಂಸ್ಕರಣಾ ಘಟಕಗಳು ಮತ್ತು ಉತ್ತಮ ಪ್ಯಾಕಿಂಗ್ ವ್ಯವಸ್ಥೆಯನ್ನು ಸಹ ರೈತರ ಪರವಾಗಿ ಕೈಗೊಳ್ಳುತ್ತವೆ. ಸಾಗಣೆ ವ್ಯವಸ್ಥೆ ರಾಜ್ಯ ಉಗ್ರಾಣಗಳಲ್ಲಿ ದಾಸ್ತಾನು ವ್ಯವಸ್ಥೆ, ಉತ್ತಮ ಬೆಲೆಗೆ ಮಾರಾಟ ಮತ್ತು ಬ್ಯಾಂಕುಗಳಿಂದ ಮುಂಗಡವಾಗಿ ಸಾಲಸೌಲಭ್ಯ ಮೊದಲಾದ ಕಾರ್ಯಗಳನ್ನು ನಿರ್ವಹಿಸುತ್ತವೆ. ರೈತರಿಗೆ ಲಾಭದಾಯಕ ಬೆಲೆ ದೊರಕದ ಸಂದರ್ಭದಲ್ಲಿ ಮಾರಾಟ ಸಂಘವು ತಮ್ಮ ಉಗ್ರಾಣದಲ್ಲಿ ಧಾನ್ಯಗಳನ್ನು ದಾಸ್ತಾನಾಗಿದ್ದುಕೊಂಡು ಅದರ ಆಧಾರವಾಗಿ ಅಥವಾ ಪಹಣಿಯ ಆಧಾರವಾಗಿ ಬ್ಯಾಂಕುಗಳಿಂದ ಮುಂಗಡವಾಗಿ ಸಾಲ ನೀಡುವ ಕಾರ್ಯವನ್ನು ಸಹ ನಿರ್ವಹಿಸುತ್ತಿವೆ. ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯು ಕೃಷಿ ಉತ್ಪನ್ನಗಳ ಆಹಾರ ಸಂಸ್ಕರಣಾ ಘಟಕಗಳನ್ನು ಪ್ರತಿ ತಾಲೂಕು ಹಾಗೂ ಹೋಬಳಿಗಳಲ್ಲಿ ಸ್ಥಾಪಿಸಿದ್ದು, ಅವು ಸರ್ಕಾರವು ಶಿಫಾರಸ್ಸು ಮಾಡಿದ ಬೆಂಬಲ ಬೆಲೆಗೆ ಕೊಳ್ಳುತ್ತವೆ.

**ಕೋಷ್ಟಕ ೬.೧೦: ಚಾಮರಾಜನಗರ ಜಿಲ್ಲೆಯ ಕೃಷಿ ಉತ್ಪನ್ನ ಮಾರಾಟ ಸಹಕಾರ ಸಂಘಗಳ ಪ್ರಗತಿ**

**(₹ ಲಕ್ಷಗಳಲ್ಲಿ)**

| ಕ್ರ. ಸಂ | ವಿವರ | ವರ್ಷ | | | |
|---|---|---|---|---|---|
| | | ೨೦೦೪–೦೫ | ೨೦೦೫–೦೬ | ೨೦೦೬–೦೭ | ೨೦೦೭–೦೮ |
| ೧ | ತಾಲೂಕು ಕೃಷಿ ಉತ್ಪನ್ನ ಮಾರಾಟ ಸಹಕಾರ ಸಂಘಗಳ ಒಟ್ಟು ಸಂಖ್ಯೆ | ೦೪ | ೦೪ | ೦೪ | ೦೪ |
| ೨ | ಸದಸ್ಯರ ಸಂಖ್ಯೆ | ೩೬೨೫ | ೩೭೩೪ | ೩೮೨೪ | ೩೯೯೮ |
| ೩ | ಷೇರು ಬಂಡವಾಳ | ೧೧.೧೨ | ೧೧.೩೧ | ೧೧.೪೮ | ೧೧.೫೪ |
| ೪ | ಸರ್ಕಾರದ ಪಾಲು | ೪೩.೯೮ | ೪೪.೮೪ | ೪೫.೭೧ | ೪೫.೭೨ |

| | | | | | |
|---|---|---|---|---|---|
| ೫ | ದುಡಿಯುವ ಬಂಡವಾಳ | ೩೧೩.೮೪ | ೨೧೪.೯೮ | ೨೧೬.೧೪ | ೨೧೭.೧೮ |
| ೬ | ಕಾಯ್ದಿಟ್ಟ ಹಾಗೂ ಇತರ ನಿಧಿಗಳು | ೨೧.೩೨ | ೨೨.೮೪ | ೨೩.೩೪ | ೨೪.೧೪ |
| ೭ | ಸಾಲ ಪಡೆದದ್ದು | ೮೮.೯೪ | ೮೯.೯೮ | ೯೧.೩೪ | ೯೫.೦೭ |
| ೮ | ಬಿತ್ತನೆ ಬೀಜ, ಗೊಬ್ಬರ ಮಾರಾಟ | ೧೦೪.೮೪ | ೧೦೨.೩೦ | ೧೦೧.೧೦ | ೧೦೩.೧೨ |
| ೯ | ಉಗ್ರಾಣಗಳ ಸಂಖ್ಯೆ | ೧೭ | ೧೭ | ೧೭ | ೧೭ |
| ೧೦ | ಗಳಿಸಿದ ಲಾಭ | ೨.೯೮ | ೩.೨೪ | ೪.೨೫ | ೭.೨೪ |

*ಆಧಾರ : ಜಿಲ್ಲಾ ಸಹಕಾರ ಇಲಾಖೆ*

## ಕೊಳ್ಳೆಗಾಲ ತಾಲೂಕು ಕೃಷಿ ಉತ್ಪನ್ನ ಮಾರಾಟ ಸಹಕಾರ ಸಂಘ

ಕೊಳ್ಳೆಗಾಲ ತಾಲೂಕು ಕೃಷಿ ಉತ್ಪನ್ನ ಮಾರಾಟ ಸಹಕಾರ ಸಂಘವನ್ನು ೧೯೫೯ರಲ್ಲಿ ಸ್ಥಾಪಿಸಲಾಯಿತು. ಸಂಘವು ೪೬೮ ಸದಸ್ಯರನ್ನು ಹೊಂದಿದ್ದು, ₹ ೪೨,೯೮೦ಗಳ ಒಟ್ಟು ಷೇರು ಬಂಡವಾಳದಲ್ಲಿ ಸರ್ಕಾರದ ಪಾಲು ₹ ೨೦,೦೦೦ಗಳಷ್ಟಿತ್ತು. ೧೯೬೯ರಲ್ಲಿ ಸಂಘದ ಸದಸ್ಯರ ಸಂಖ್ಯೆ ೭೫೪ಕ್ಕೆ ಹೆಚ್ಚಿದ್ದು, ಅದರ ಷೇರು ಬಂಡವಾಳವು ₹ ೪,೧೬ ಲಕ್ಷಗಳಷ್ಟಿತ್ತು. ಕೃಷಿ ಉತ್ಪನ್ನಗಳ ಮಾರಾಟದ ಮೌಲ್ಯವು ₹ ೪.೦೯ ಲಕ್ಷಗಳು ಇತ್ತು. ೧೯೬೮–೬೯ರಲ್ಲಿ ಕೃಷಿ ಉತ್ಪನ್ನಗಳ ಒಟ್ಟು ಮಾರಾಟ ₹ ೧೭.೩೪ ಲಕ್ಷಗಳಷ್ಟಿತ್ತು. ೧೯೭೯–೮೦ರಲ್ಲಿ ಸಂಘದ ಸದಸ್ಯರ ಸಂಖ್ಯೆ ೧೬೬೫ ಮತ್ತ ಷೇರು ಬಂಡವಾಳ ₹ ೨೫ ಲಕ್ಷಗಳಲ್ಲಿ ಸರ್ಕಾರದ ಪಾಲು ₹ ೧.೯೨ ಲಕ್ಷಗಳಷ್ಟಿತ್ತು. ಸಂಘದ ಖರೀದಿ ಮತ್ತು ಮಾರಾಟದ ಒಟ್ಟು ಮೌಲ್ಯವು ಕ್ರಮವಾಗಿ ₹ ೧೪.೬೭ ಲಕ್ಷಗಳು ಮತ್ತು ₹ ೧೪.೯೨ ಲಕ್ಷ ರೂ.ಗಳಷ್ಟಿದೆ. ಸಂಘದ ಲಾಭಗಳಿಕೆಯು ₹ ೧೦,೩೮೯ಗಳಾಗಿತ್ತು. ೧೯೮೭ರಲ್ಲಿ ಸಂಘವು 'ಎ' ದರ್ಜೆಯ ೨೦ ಸದಸ್ಯರು, ಸರ್ಕಾರದ ಒಬ್ಬ ಅಧಿಕಾರಿ ಸದಸ್ಯ (ಸಿ ದರ್ಜೆ) ಮತ್ತು ರೈತ ವರ್ಗ ಮತ್ತು ವರ್ತಕರ ವರ್ಗದಿಂದ ೧೩೬೧ ಸದಸ್ಯರನ್ನು ಹೊಂದಿತ್ತು. (ಬಿ'ದರ್ಜೆ) ೧೮೮೨ರಲ್ಲಿ ₹ ೩.೮೮ ಲಕ್ಷಗಳಷ್ಟು ಷೇರು ಬಂಡವಾಳವನ್ನು ಹೊಂದಿದ್ದು, ಅದರಲ್ಲಿ ಸರ್ಕಾರದ ಪಾಲು ₹ ೩.೫೪ ಲಕ್ಷಗಳು ಸೇರಿತ್ತು. ೧೯೮೨ರಿಂದ ೧೯೮೪ರಲ್ಲಿ ಸಂಘದ ಖರೀದಿ ಮತ್ತು ಮಾರಾಟದ ಮೌಲ್ಯವು ಕ್ರಮವಾಗಿ ₹೯೩.೬೨ ಲಕ್ಷಗಳು, ₹೬೫.೪೩ ಲಕ್ಷಗಳು; ₹೧೦೭.೯೮ ಮತ್ತು ₹೧೧೨.೫೮ ಲಕ್ಷಗಳು ಮತ್ತು ₹೧೪೬.೭೪ ಮತ್ತು ₹೧೪೭.೭೪ ಲಕ್ಷಗಳಷ್ಟಿತ್ತು. ಹನೂರು ಗ್ರಾಮದಲ್ಲಿ ಪೆಟ್ರೋಲ್ ಡೀಝಲ್ ಚಿಲ್ಲರೆ ಬಂಕನ್ನು ₹ ೧.೨೫ ಲಕ್ಷಗಳ ವೆಚ್ಚದಿಂದ ನಿರ್ಮಿಸಿ ಸಾರ್ವಜನಿಕವಾಗಿ ಮಾರಾಟ ಮಾಡಲಾಗುತ್ತಿದೆ. ಎರಡು ಉಗ್ರಾಣ ಮಳಿಗೆಗಳನ್ನು ವ್ಯಾಪಾರ ಮಳಿಗೆ, ಹಾಗೂ ಸ್ವಂತ ಆಡಳಿತ ಕಚೇರಿಯನ್ನು ಹೊಂದಿರುವ ಮಾರುಕಟ್ಟೆ ಸಂಕೀರ್ಣವನ್ನು ಸ್ವಂತವಾಗಿ ಸ್ಥಾಪಿಸಿದೆ. ೧೯೮೪–೮೫ರಿಂದ ೧೯೮೬–೮೭ರ ಮೂರು ವರ್ಷಗಳಲ್ಲಿ ಸಂಘವು ಗಳಿಸಿದ ಲಾಭಾಂಶವು ಕ್ರಮವಾಗಿ ₹ ೫೮,೫೪೬ಗಳು, ₹ ೨,೦೧,೦೦೦ಗಳು ಮತ್ತು ₹ ೪೩೨೫೧ಗಳಿಷ್ಟಿತ್ತು.

## ಕೃಷಿ ಉತ್ಪನ್ನ ನಿಯಂತ್ರಿತ ಮಾರುಕಟ್ಟೆ ಚಾಮರಾಜನಗರ ಜಿಲ್ಲೆ

ಕೃಷಿ ಉತ್ಪನ್ನ ನಿಯಂತ್ರಿತ ಮಾರುಕಟ್ಟೆ ಸಹಕಾರಿ ವಲಯಗಳಲ್ಲಿ ಸ್ಥಾಪನೆಯಾಗುವುದಕ್ಕಿಂತ ಮೊದಲು ರೈತರು ಬೆಳೆದ ದವಸಧಾನ್ಯಗಳನ್ನು ತಮ್ಮ ಗ್ರಾಮದ ಸಾಹುಕಾರರಿಗೆ, ಶ್ರೀಮಂತ ಜಮೀನ್ದಾರರು, ದಲ್ಲಾಳಿಗಳು, ವ್ಯಾಪಾರಿಗಳು ಮತ್ತು ದಿನಸಿ ಮಂಡಿ, ವರ್ತಕರಿಗೆ ಕಡಿಮೆ ಬೆಲೆಗೆ ಮೋಸ, ವಂಚನೆಯಿಂದ ಕೂಡಿದ ಕಡಿಮೆ ತೂಕಕ್ಕೆ ಮಾರಾಟ ಮಾಡಿ ತಮ್ಮ ಶ್ರಮಕ್ಕೆ ತಕ್ಕ ಪ್ರತಿಫಲ ಪಡೆಯದೆ ನಷ್ಟವನ್ನುಂಟು ಮಾಡಿಕೊಂಡು ಹಣದ ತಾಪತ್ರಯದಲ್ಲಿಯೇ ಕನಿಷ್ಟ ಜೀವನ ನಡೆಸುತ್ತಿದ್ದರು.

ಭಾರತದ ಒಟ್ಟು ಜನಸಂಖ್ಯೆಯಲ್ಲಿ ಶೇ. ೭೦.೦೦ ರಷ್ಟು ರೈತರಿಗೆ ಕೃಷಿಯೇ ಜೀವನೋಪಾಯ ಕಸುಬಾಗಿದೆ. ಅವರಲ್ಲಿ ಶೇ. ೮೦ರಷ್ಟು ರೈತರು ಬಡವರು, ತಮ್ಮ ಗ್ರಾಮದ ಸಾಹುಕಾರರಲ್ಲಿ ತಲೆಮಾರಿನಿಂದ ಸಾಲ ಮಾಡಿ ಅದರಿಂದ ಋಣಮುಕ್ತರಾಗದೆ ಋಣಬಂಧಿ ಗಳಾಗಿದ್ದರು. ಸಾಲದ ಹೊರೆಯಿಂದ ತಪ್ಪಿಸಿಕೊಳ್ಳಲು ತಾವು ಬೆಳೆದ ಉತ್ಪನ್ನಗಳನ್ನು ಸಾಲಿಗರಿಗೆ ಕಡಿಮೆ ಬೆಲೆಗೆ ಮೋಸದ ತೂಕ ಮತ್ತು ಅಳತೆಗೆ ಮಾರಾಟ ಮಾಡಿ ಅವರಿಂದ ಶೋಷಣೆ ಮತ್ತು ಸುಲಿಗೆಗೆ ಒಳಗಾಗಿದ್ದರು. ಮುಂದೆ ಉತ್ತಮ ಬೆಲೆ ಸಿಗುತ್ತದೆಂಬ ನಿರೀಕ್ಷೆಯಿಂದ ದವಸಧಾನ್ಯಗಳನ್ನು ಕೆಡದಂತೆ ದಾಸ್ತಾನಾಗಿಡಲು ಅವರಲ್ಲಿ ಉಗ್ರಾಣ ಅಥವಾ ಗೋದಾಮು ವ್ಯವಸ್ಥೆಗಳಿರಲಿಲ್ಲ. ಇಂತಹ ಪರಿಸ್ಥಿತಿಯನ್ನು ಮನಗಂಡ ಸರ್ಕಾರ ರೈತರ ಕೃಷಿ ಉತ್ಪನ್ನಗಳ ಮಾರಾಟಕ್ಕೆ ನಿಯಂತ್ರಿತ ಮಾರುಕಟ್ಟೆಯೇ ಸೂಕ್ತವಾದ ಮತ್ತು ಉತ್ತಮವಾದ ವ್ಯವಸ್ಥೆಯೆಂದು ತಿಳಿದು ೧೯೩೯ರಲ್ಲಿ ಮೈಸೂರು ಕೃಷಿ ಉತ್ಪನ್ನ ಮಾರುಕಟ್ಟೆ ಕಾಯಿದೆಯನ್ನು ಜಾರಿಗೊಳಿಸಿ ೧೯೪೭ರಿಂದ ಕಾರ್ಯಾರಂಭ ಮಾಡಿತು. ೧೯೬೬ರ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ನಿಯಂತ್ರಣ ಕಾಯಿದೆಯನ್ವಯ ಮೈಸೂರು ಜಿಲ್ಲೆಯಲ್ಲಿ ೧೯೬೮ ರಿಂದ ನಿಯಂತ್ರಿತ ಮಾರುಕಟ್ಟೆ ವಿದ್ಯುಕ್ತವಾಗಿ ಪ್ರಾರಂಭಗೊಂಡಿತು. ಈ ಕಾಯಿದೆಯ ಪ್ರಕಾರ ಕರ್ನಾಟಕ ಸರ್ಕಾರವು ೧೯೮೭ರಲ್ಲಿ ಜಿಲ್ಲಾ ಮಾರುಕಟ್ಟೆ ಅಧಿಕಾರಿಯನ್ನು ನೇಮಕ ಮಾಡಿತು. ೧೯೮೭ರ ನಂತರ ಸಹಾಯಕ ನಿರ್ದೇಶಕರು, ಕೃಷಿ ಉತ್ಪನ್ನ ಮಾರುಕಟ್ಟೆ ಮೈಸೂರು ಅವರಿಗೆ ಮೈಸೂರು ಜಿಲ್ಲೆಯ ಮಾರಾಟ ವ್ಯವಸ್ಥೆಯ ಅಧಿಕಾರವನ್ನು ವಹಿಸಿತು. ಇಂದಿನ ಮೈಸೂರು ಜಿಲ್ಲೆ ಮತ್ತು ಚಾಮರಾಜನಗರ ಜಿಲ್ಲೆಯ ನಾಲ್ಕು ತಾಲೂಕುಗಳಿಗೆ ಒಳಪಡುವಂತೆ ಕೃಷಿ ಉತ್ಪನ್ನ ನಿಯಂತ್ರಿತ ಮಾರುಕಟ್ಟೆಯ ಸ್ಥಾಪನೆ, ರಾಜ್ಯ ಉಗ್ರಾಣ ವ್ಯವಸ್ಥೆ, ಕೃಷಿ ಉತ್ಪನ್ನಗಳನ್ನು ವಿವಿಧ ದರ್ಜೆಗಳಲ್ಲಿ ಗುಣಮಟ್ಟದ ಆಧಾರದಲ್ಲಿ ವರ್ಗೀಕರಣ, ಆಹಾರ ಧಾನ್ಯ ಸಂಸ್ಕರಣಾ ವ್ಯವಸ್ಥೆ ಮೊದಲಾದ ಕೃಷಿ ಉತ್ಪನ್ನ ಮಾರಾಟದ ಸುಧಾರಣೆಗಳು, ರೈತರ ಹುಟ್ಟುವಳಿಗಳಿಗೆ ಉತ್ತಮ ಬೆಲೆಗೆ ಮಾರಾಟ ಮಾಡಲು ರಾಜ್ಯ ಉಗ್ರಾಣಗಳಲ್ಲಿ ದಾಸ್ತಾನಾಗಿಡಲು ಮತ್ತು ಮೆಟ್ರಿಕ್ ಪದ್ಧತಿ ವಿದ್ಯುನ್ಮಾನ ತೂಕ ಮತ್ತು ಅಳತೆ, ಬ್ಯಾಂಕುಗಳಿಂದ ಮುಂಗಡಸಾಲ ನೀಡಿಕೆ ಮೊದಲಾದ ಸೌಲಭ್ಯಗಳು ರೈತರಿಗೆ ಸುಗ್ಗಿಯ ನಂತರದ ಕಾರ್ಯತಂತ್ರದ ಸುಧಾರಣೆಗಳಾಗಿವೆ.

ಚಾಮರಾಜನಗರ, ಗುಂಡ್ಲುಪೇಟೆ, ಕೊಳ್ಳೇಗಾಲ, ಹನೂರು, ಯಳಂದೂರು, ತೆರಕಣಾಂಬಿ ಮತ್ತು ಸಂತೆಮರನಹಳ್ಳಿಯಲ್ಲಿ ಮಾರಾಟಕೇಂದ್ರಗಳನ್ನು ಸ್ಥಾಪಿಸಲಾಗಿದ್ದು, ಚಾಮರಾಜನಗರ, ಗುಂಡ್ಲುಪೇಟೆ, ಮತ್ತು ಕೊಳ್ಳೇಗಾಲ ತಾಲೂಕುಗಳಲ್ಲಿ ತಲಾ ಒಂದೊಂದು ಮುಖ್ಯ ಮತ್ತು ಉಪಮುಖ್ಯ ನಿಯಂತ್ರಿತ ಮಾರುಕಟ್ಟೆಗಳನ್ನು ಸ್ಥಾಪಿಸಲಾಯಿತು. ಯಳಂದೂರು ತಾಲೂಕಿನ ಮಾರಾಟ ವ್ಯವಹಾರವನ್ನು ಚಾಮರಾಜನಗರ ನಿಯಂತ್ರಿತ ಮಾರುಕಟ್ಟೆಗೆ ವಹಿಸಲಾಯಿತು. ಕೃಷಿ ಉತ್ಪನ್ನ ಮಾರುಕಟ್ಟೆಗಳಲ್ಲಿ ಸುಮಾರು ೩೦ ಮುಖ್ಯ ಕೃಷಿ ಉತ್ಪನ್ನಗಳಾದ ಬೆಲ್ಲ, ಅಕ್ಕಿ, ಭತ್ತ, ಅಡಿಕೆ, ರಾಗಿ, ಈರುಳ್ಳಿ, ಹುಣಸೇಬೀಜ, ಬೇಳೆಕಾಳುಗಳು, ಜೋಳ, ಮೆಣಸಿನಕಾಯಿ, ತೆಂಗಿನಕಾಯಿ, ಎಳನೀರು, ಬಾಳೆಕಾಯಿ, ಶುಂಠಿ, ಆಲೂಗಡ್ಡೆ, ವಿವಿಧ ತರಕಾರಿ, ಹಣ್ಣುಹಂಪಲು, ಸೂರ್ಯಕಾಂತಿ, ಶೇಂಗಾ, ಹತ್ತಿ, ಎಳ್ಳು, ಹೊಂಗೆ ಮೊದಲಾದ ಎಣ್ಣೆಬೀಜಗಳು ವೀಳೇದೆಲೆ ಮೊದಲಾದವನ್ನು ನಿಯಂತ್ರಿತ ಮಾರುಕಟ್ಟೆಯ ಪ್ರಾಂಗಣದಲ್ಲಿ ಮಾರುಕಟ್ಟೆ ಅಧಿಕಾರಿಗಳು, ರೈತರು ವರ್ತಕರು ಮತ್ತು ಸಮಿತಿಯ ಸದಸ್ಯರ ಸಮಕ್ಷಮ ಬಹಿರಂಗ ಹರಾಜಿನ ಮೂಲಕ ಮಾರಾಟ ಮಾಡಲಾಗುತ್ತದೆ. ಕೃಷಿ ಉತ್ಪನ್ನ ಮಾರಾಟದಲ್ಲಿ ಕೆಲವು ಉತ್ಪನ್ನಗಳನ್ನು ರಫ್ತು ಮಾಡುವ ಮತ್ತು ಅಗತ್ಯವಿರುವ ಉತ್ಪನ್ನಗಳನ್ನು ಆಮದು ಮಾಡಿಕೊಳ್ಳುವ ವ್ಯವಸ್ಥೆಯನ್ನೂ ಮಾಡಲಾಗಿದೆ.

ಜಿಲ್ಲೆಯ ನಿಯಂತ್ರಿತ ಮಾರುಕಟ್ಟೆಗಳ ವಿಶಾಲವಾದ ಆವರಣದಲ್ಲಿ ರೈತರ ಉತ್ಪನ್ನಗಳನ್ನು ದಾಸ್ತಾನಾಗಿಡಲು ವೈಜ್ಞಾನಿಕವಾದ ರಾಜ್ಯ ಉಗ್ರಾಣ, ಬ್ಯಾಂಕು ಸೌಲಭ್ಯ, ವಾಹನಗಳಿಗೆ ವಿಶಾಲವಾದ ಪಾರ್ಕಿಂಗ್, ವಿಶ್ರಾಂತಿ ಗೃಹ, ಉಪಹಾರಗೃಹ, ರೈತರಿಗೆ ತಂಗುದಾಣ, ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆ, ಮೊದಲಾದ ನಾಗರೀಕ ಸೌಲಭ್ಯಗಳನ್ನು ಅತ್ಯಾಧುನಿಕವಾಗಿ ನಿರ್ಮಿಸಲಾಗಿದೆ. ಚಾಮರಾಜನಗರ ಜಿಲ್ಲೆಯ ತಾಲೂಕು ಕೃಷಿ ಉತ್ಪನ್ನ ನಿಯಂತ್ರಿತ ಮಾರುಕಟ್ಟೆಗಳ ವ್ಯಾಪಾರ ವ್ಯವಹಾರ ಮತ್ತು ವಹಿವಾಟುಗಳ ವಿವರವನ್ನು ಕೋಷ್ಟಕ ೬.೧೧ರಲ್ಲಿ ನೀಡಲಾಗಿದೆ.

## ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕು (ನಿ)

ರಾಜ್ಯ ಸಹಕಾರಿ ರಂಗದಲ್ಲಿ ದೀರ್ಘಾವಧಿ ಸಾಲ ಸೌಲಭ್ಯಗಳನ್ನು ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿಗಾಗಿ ನೀಡುತ್ತಿರುವ ಈ ಬ್ಯಾಂಕು ರೈತರನ್ನು ಖಾಸಗಿ ಲೇವಾದೇವಿದಾರರ ಕಪಿಮುಷ್ಟಿಯಿಂದ ಅಧಿಕ ಬಡ್ಡಿಯ ಸಾಲದ ಹೊರೆಯಿಂದ ಮುಕ್ತಗೊಳಿಸುವುದಕ್ಕಾಗಿ ೧೯೨೯ರಲ್ಲಿ ಸ್ಥಾಪನೆಯಾಗಿದೆ. ೧೯೬೩ರವರೆಗೆ ಹಳೆ ಸಾಲ ತೀರುವಳಿ ಮತ್ತು ಕೆಲ ಭೂಅಭಿವೃದ್ಧಿ ಉದ್ದೇಶಗಳಿಗೆ ಸಾಲ ವಿತರಿಸುತ್ತಿದ್ದ ಈ ಬ್ಯಾಂಕು ಕೃಷಿ ಪುನರ್ಧನ ಮತ್ತು ಅಭಿವೃದ್ಧಿ ನಿಗಮದ ಸ್ಥಾಪನೆಯ ನಂತರ ಪುನರ್ಧನ ನೆರವಿನಿಂದ ಕೃಷಿ ಅಭಿವೃದ್ಧಿಯ ಅನೇಕ ಉತ್ಪಾದನಾ ಸಾಲಗಳನ್ನು ನೀಡಲು ಮುಂದಾಯಿತು. ಧ್ಯೇಯ ಧೋರಣೆಗಳಲ್ಲಿನ ಬದಲಾವಣೆಗಳಿಂದಾಗಿ ಮೊದಲು ಭೂ ಅಡಮಾನ ಬ್ಯಾಂಕು ಎಂದು ಕರೆಯಲ್ಪಡುತ್ತಿದ್ದ ಈ ಬ್ಯಾಂಕಿನ ಹೆಸರನ್ನು "ಭೂ ಅಭಿವೃದ್ಧಿ ಬ್ಯಾಂಕು" ಎಂದು ಬದಲಾಯಿಸಲಾಯಿತು. ೧೯೮೨ರಲ್ಲಿ ಸ್ಥಾಪನೆಯಾದ ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ (ನಬಾರ್ಡ್) ನಿಂದ ಪುನರ್ಧನ ಪಡೆಯಲು ಪ್ರಾರಂಭಿಸಿದ ನಂತರ, ಗ್ರಾಮೀಣ ಪ್ರದೇಶಗಳ ಸರ್ವಾಂಗೀಣ ಅಭಿವೃದ್ಧಿಗೆ ದೀರ್ಘಾವಧಿ ಸಾಲಗಳನ್ನು ಒದಗಿಸುತ್ತಿರುವ ಹಿನ್ನೆಲೆಯಲ್ಲಿ ಬ್ಯಾಂಕಿಗೆ ಈಗಿನ ಹೆಸರಾದ "ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್: ಎಂದು ಪುನರ್ ನಾಮಕರಣಗೊಂಡು ಕಾರ್ಯನಿರ್ವಹಿಸುತ್ತಿದ್ದು, ಗ್ರಾಮೀಣ ಪ್ರದೇಶದ ಎಲ್ಲಾ ವರ್ಗದ ಜನರಿಗೆ ಆರ್ಥಿಕ ನೆರವು ನೀಡುತ್ತಲಿದೆ.

ಚಾಮರಾಜನಗರ ಜಿಲ್ಲೆಯ ನಾಲ್ಕು ತಾಲೂಕು ಕೇಂದ್ರಗಳಲ್ಲಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿಗೆ ದೀರ್ಘಾವಧಿ ಸಾಲಗಳನ್ನು ಒದಗಿಸುತ್ತದೆ. ಬಹುತೇಕ ಯೋಜನೆಗಳ ಸಾಲ ಮಂಜೂರಾತಿ ಅಧಿಕಾರವನ್ನು ಅಯಾ ಪ್ರಾಥಮಿಕ ಬ್ಯಾಂಕುಗಳಿಗೆ ಮತ್ತು ಬ್ಯಾಂಕಿನ ಎಲ್ಲಾ ಶಾಖಾ ಕಚೇರಿಗಳಿಗೆ ವಿಕೇಂದ್ರೀಕರಣ ಮಾಡಿದ್ದು– ಸಾಲ ಮಂಜೂರಾತಿ, ಮೇಲ್ವಿಚಾರಣೆ, ವಸೂಲಾತಿ, ಮುಂತಾದ ಕಾರ್ಯಗಳು ಸುಗಮವಾಗಿ ಜರುಗುವಂತೆ ವ್ಯವಸ್ಥೆ ಮಾಡಲಾಗಿದೆ. ಪ್ರಾಥಮಿಕ ಬ್ಯಾಂಕುಗಳು ಸ್ವಾಯತ್ತ ಸಂಸ್ಥೆಗಳಾಗಿದ್ದು, ರಾಜ್ಯ ಬ್ಯಾಂಕಿನ ಸದಸ್ಯತ್ವ ಹೊಂದಿವೆ. ರಾಜ್ಯ ಸರ್ಕಾರದ ಕೃಷಿ ಕೈಗಾರಿಕಾ ನಿಗಮ ಮಾರಾಟ ಮಂಡಳಿ, ಉಗ್ರಾಣ ನಿಗಮ, ವಿದ್ಯುತ್ ಮಂಡಳಿ ಅಚ್ಚುಕಟ್ಟು ಪ್ರಾಧಿಕಾರಗಳು, ಮುಂತಾದ ೧೩ ಸಂಸ್ಥೆಗಳು ಬ್ಯಾಂಕಿನ ಸಹ ಸದಸ್ಯತ್ವ ಹೊಂದಿದ್ದು, ಇವುಗಳಿಗೆ ಸಾರ್ವಜನಿಕ ಹಿತಾಸಕ್ತಿಯ ಅಭಿವೃದ್ಧಿ ಉದ್ದೇಶಗಳಿಗೆ ಆರ್ಥಿಕ ನೆರವು ನೀಡಲಾಗಿದೆ. ೧೯೮೭ರಿಂದ ಕೃಷಿಯೇತರ ಚಟುವಟಿಕೆಗಳಾದ ಗೃಹ ಮತ್ತು ಗ್ರಾಮೀಣ ಕೈಗಾರಿಕೆಗಳು, ಗ್ರಾಮೋದ್ಯೋಗ, ಗೃಹ ನಿರ್ಮಾಣ, ಪಶುಸಂಗೋಪನೆ, ರೇಷ್ಮೆ ಹೈನುಗಾರಿಕೆ ಮೀನುಗಾರಿಕೆ ಮೊದಲಾದವುಗಳಿಗೆ ಸಾಲಸೌಲಭ್ಯಗಳನ್ನು ಒದಗಿಸುತ್ತದೆ. ಈ ಬ್ಯಾಂಕು ನಬಾರ್ಡ್ ನೀಡುವ ನಿರ್ದೇಶನದಂತೆ ಸಾಲ ವಿತರಣೆಯನ್ನು ಆದ್ಯತಾ ವಲಯಗಳಿಗೆ, ರೈತರು ತಮ್ಮ ಬೇಸಾಯದಲ್ಲಿ ಅಧಿಕ ಇಳುವರಿ ಪಡೆಯುವ ಗುರಿಯಲ್ಲಿ ಸುಧಾರಿತ ಬೇಸಾಯಕ್ಕೆ ಅಗತ್ಯವಾಗಿ ಬೇಕಾಗುವ ಆಧುನಿಕ ಕೃಷಿ ಉಪಕರಣಗಳನ್ನು ಕೊಳ್ಳಲು, ಶಾಶ್ವತ ನೀರಾವರಿ ಅಭಿವೃದ್ಧಿಗೆ ಹೈನುಗಾರಿಕೆ, ತೋಟಗಾರಿಕೆ, ರೇಷ್ಮೆ ಕೃಷಿ ಅಭಿವೃದ್ಧಿಗೆ, ಕುರಿ ಕೋಳಿ ಸಾಕಣೆ, ಆಹಾರ ಸಂಸ್ಕರಣೆ, ಗ್ರಾಮೀಣ ಆರ್ಥಿಕ ಮೂಲ ಸೌಲಭ್ಯಗಳ

ಅಭಿವೃದ್ಧಿಗೆ ಸಾಲ ನೀಡಿಕೆ, ಗೃಹ ಮತ್ತು ಗ್ರಾಮೀಣ ಗುಡಿ ಕೈಗಾರಿಕೆ, ಗ್ರಾಮೋದ್ಯೋಗ, ಮೊದಲಾದ ಸಮಗ್ರ ಗ್ರಾಮೀಣ ಅಭಿವೃದ್ಧಿಗೆ ದೀರ್ಘಾವಧಿ ಸಾಲ ಒದಗಿಸುತ್ತವೆ. ಜಿಲ್ಲೆಯ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ದುರ್ಬಲ ಅಲ್ಪಸಂಖ್ಯಾತ ಬಡವರಿಗೆ ಮತ್ತು ಸಣ್ಣ ರೈತರಿಗೆ ಸಾಲ ನೀಡುತ್ತದೆ.

**ಕೋಷ್ಟಕ.೬.೧೧: ಚಾಮರಾಜನಗರ ಜಿಲ್ಲೆಯ ಕೃಷಿ ಉತ್ಪನ್ನ ನಿಯಂತ್ರಿತ ಮಾರುಕಟ್ಟೆಗಳ ಪ್ರಗತಿ ೧೯೯೭-೯೮ ರಿಂದ ೨೦೦೭-೦೮ರವರೆಗೆ ಒಟ್ಟು ವ್ಯವಹಾರದ ಮೌಲ್ಯ (₹ ಕೋಟಿಗಳಲ್ಲಿ)**

| ಕ್ರ. ಸಂ | ತಾಲೂಕು | ನಿಯಂತ್ರಿತ ಮಾರುಕಟ್ಟೆ | | | ವಹಿವಾಟು (₹ ಕೋಟಿಗಳಲ್ಲಿ) ಪ್ರತಿ ವರ್ಷ ಮಾರ್ಚಿ ೩೧ ರವರೆಗೆ | | | | | | | | | | |
|---|---|---|---|---|---|---|---|---|---|---|---|---|---|---|---|
| | | ಮುಖ್ಯ | ಉಪ | ಒಟ್ಟು | ೧೯೯೭ | ೧೯೯೮ | ೧೯೯೯ | ೨೦೦೦ | ೨೦೦೧ | ೨೦೦೨ | ೨೦೦೩ | ೨೦೦೪ | ೨೦೦೫ | ೨೦೦೬ | ೨೦೦೭ |
| ೧ | ಚಾ. ರಾ. ನಗರ | ೧ | ೧ | ೨ | ೨೬ | ೩೬.೭೪ | ೨೪.೨೬ | ೨.೬೫ | ೨೬.೫೨ | ೩೮.೮೪ | ೩೪.೨೭ | ೩೭.೩೩ | ೩೬.೭೮ | ೨೯.೭೮ | ೩೮.೬೮ |
| ೨ | ಗುಂಡ್ಲುಪೇಟೆ | ೧ | ೧ | ೨ | ೧೯ | ೧೮.೦೦ | ೧೪.೩೪ | ೧.೩೫ | ೧೩.೫೦ | ೧೦.೫೧ | ೧೯.೮೭ | ೧೧.೩೪ | ೨೨.೦೯ | ೧೮.೮೧ | ೨೮.೪೦ |
| ೩ | ಕೊಳ್ಳೇಗಾಲ | ೧ | ೧ | ೨ | ೧೭ | ೩೭.೦೦ | ೨೬.೯೫ | ೨.೬೦ | ೨೬.೫೧ | ೩೧.೩೮ | ೨೪.೩೧ | ೩೨೨.೫೩ | ೩೦.೪೪ | ೨೫.೮೫ | ೨೩.೫೫ |
| ೪ | ಯಳಂದೂರು * | – | – | – | – | – | – | – | – | – | – | – | – | – | – |
| | ಒಟ್ಟು | ೩ | ೩ | ೬ | ೬೨.೦೦ | ೮೭.೭೪ | ೬೧.೭೪ | ೬೫.೫೫ | ೬೬.೭೫ | ೮೦.೭೪ | ೬೮.೪೪ | ೭೧.೨೧ | ೮೯.೩೧ | ೭೪.೨೪ | ೯೦.೬೩ |

** ಯಳಂದೂರು ತಾಲೂಕಿನ ವ್ಯವಹಾರ ವಹಿವಾಟು ಚಾಮರಾಜನಗರ ನಿಯಂತ್ರಿತ ಮಾರುಕಟ್ಟೆಯಲ್ಲಿ ಅಡಕವಾಗಿದೆ.*

## ಉಗ್ರಾಣ ವ್ಯವಸ್ಥೆ

ರೈತರು ಬೆಳೆದ ವಿವಿಧ ಬೆಳೆ ಪೈರುಗಳನ್ನು ಕಟಾವು ಮಾಡಿ ಕಣಗಳಲ್ಲಿ ಒಕ್ಕಣೆ ಮಾಡಿದ ದವಸಧಾನ್ಯಗಳನ್ನು ರಾಶಿ ಪೂಜೆಯೊಂದಿಗೆ ಸಂಕ್ರಾಂತಿ ಹಬ್ಬವನ್ನು ಆಚರಿಸಿದ ನಂತರ ಅವುಗಳನ್ನು ವರ್ಷವಿಡೀ ಉಪಯೋಗಿಸುವುದಕ್ಕಾಗಿ ಮತ್ತು ಉತ್ತಮ ಬೆಲೆಗೆ ಮಾರಾಟ ಮಾಡಲು ಕಣಜ, ಉಗ್ರಾಣ ಅಥವಾ ಗೋದಾಮುಗಳಲ್ಲಿ ದಾಸ್ತಾನಾಗಿಡುವ ಅಥವಾ ಸಂಗ್ರಹಿಸುವ ವಿಧಾನಕ್ಕೆ ಸುಗ್ಗಿನಂತರದ ತಂತ್ರಜ್ಞಾನವೆಂದು ಕರೆಯಲಾಗಿದೆ. ಸುಗ್ಗಿಪೂರ್ವದ ತಂತ್ರಜ್ಞಾನವು ರೈತರ ಉತ್ಪಾದನಾ ಹಂತವಾಗಿದ್ದರೆ, ಸುಗ್ಗಿಯ ನಂತರದ ಕಾರ್ಯತಂತ್ರಕ್ಕೆ ಕೃಷಿ ಉತ್ಪನ್ನಗಳ ದಾಸ್ತಾನು ವ್ಯವಸ್ಥೆ ಅಥವಾ ಉಗ್ರಾಣ ವ್ಯವಸ್ಥೆ ಎಂದು ಹೆಸರು.

ಪ್ರಾಚೀನ ಕಾಲದಿಂದಲೂ ರೈತರು ತಮ್ಮ ಕೃಷಿ ಉತ್ಪನ್ನಗಳನ್ನು ದಾಸ್ತಾನಿಡಲು ಅನುಸರಿಸುತ್ತಿದ್ದ ಸಾಂಪ್ರದಾಯಿಕ ಉಗ್ರಾಣಗಳಾದ ಮನೆಯಲ್ಲಿನ ಕಣಜ, ಭೂಮಿಯೊಳಗೆ ಮಾಡಿದ ಹಗೇವು, ಬಿದಿರಿನಿಂದ ಮಾಡಿದ ಗೂಡೆ, ಪಂಡ್ತ, ಮಣ್ಣಿನಿಂದ ಮಾಡಿದ ವಾಡೆ, ಚೀಲಗಳಲ್ಲಿ ತುಂಬಿದ ಮೂಟೆ, ಹುಲ್ಲಿನ ಬವಣೆಯೊಳಗೆ ಧಾನ್ಯಗಳ ಸಂಗ್ರಹ ಮೊದಲಾದವು ದೋಷಪೂರಿತವಾಗಿದ್ದವು. ಗೆದ್ದಲು, ಹುಳ ಉಪ್ಪಟೆ, ಜಿಟ್ಟೆ, ಗೊದ್ದ, ಇರುವೆ, ಜಿರಲೆ, ಇಲಿ, ಹೆಗ್ಗಣಗಳ ಉಪಟಳಕ್ಕೆ ಒಳಗಾಗಿ ಶೇ.೧೦ ರಿಂದ ೨೦ರಷ್ಟು ಆಹಾರ ಧಾನ್ಯವು ನಷ್ಟವಾಗುತ್ತಿತ್ತು. ಭಾರೀ ಮಳೆಯಿಂದ, ವಾತಾವರಣದ ತೇವಾಂಶದಿಂದ ಧಾನ್ಯಗಳು ಬೂಷ್ಟು ಹಿಡಿದು ಶೇ. ೧೦ರಷ್ಟು ಧಾನ್ಯಗಳು ನಷ್ಟವಾಗುತ್ತಿದ್ದವು. ಉಷ್ಣತಾಪದಿಂದ (ಬಿಸಿಲಿನ ತಾಪದಿಂದ) ಗಟ್ಟಿ ಕಾಳುಗಳು ಜೊಳ್ಳಾಗಿ ಶೇ. ೧೦ರಷ್ಟು ನಷ್ಟವುಂಟಾಗುತ್ತಿದ್ದವು. ರೈತರು ಕಷ್ಟಪಟ್ಟು ಬೆಳೆದ ಕೃಷಿ ಉತ್ಪನ್ನಗಳಲ್ಲಿ ಶೇ ೩೦ರಷ್ಟು ಆಹಾರ ಧಾನ್ಯಗಳು ಈ ಬಗೆಯ ಅವೈಜ್ಞಾನಿಕ ಉಗ್ರಾಣ ವ್ಯವಸ್ಥೆಯಿಂದ ಕೈಗೆ ಬಂದ ತುತ್ತು ಬಾಯಿಗೆ ಬರದಂತಾಗುತ್ತಿತ್ತು. ಇಂತಹ

ದೋಷಪೂರಿತ ಹಳೆಯ ಉಗ್ರಾಣ ಪದ್ಧತಿಯನ್ನು ವೈಜ್ಞಾನಿಕವಾಗಿ ಉತ್ತಮಪಡಿಸಲು ಸರ್ಕಾರ ಆಧುನಿಕ ತಂತ್ರಜ್ಞಾನದಿಂದ ಕೂಡಿದ ಉಗ್ರಾಣಗಳ ನಿರ್ಮಾಣಕ್ಕೆ ಒಂದು ಯೋಜನೆಯನ್ನು ರೂಪಿಸಿತು.

ದೇಶದ ರೈತರಿಗೆ ವೈಜ್ಞಾನಿಕ ಕಾರ್ಯತಂತ್ರದ ಉತ್ತಮ ಉಗ್ರಾಣ ಸೌಲಭ್ಯಗಳನ್ನು ಒದಗಿಸಲು ಕೇಂದ್ರ ಸರ್ಕಾರವು ೧೯೫೪ರಲ್ಲಿ ರಚಿಸಿದ್ದ ಗ್ರಾಮೀಣ ಪತ್ತು ಸಮೀಕ್ಷಾ ಸಮಿತಿಯು ರಾಷ್ಟ್ರ, ರಾಜ್ಯ ಮತ್ತು ಸ್ಥಳೀಯ ಮಟ್ಟದಲ್ಲಿ ಮೂರು ಹಂತಗಳ ಉಗ್ರಾಣ ವ್ಯವಸ್ಥೆಯನ್ನು ಜಾರಿಗೆ ತರಲು ಶಿಫಾರಸ್ಸು ಮಾಡಿತು. ಇದರನ್ವಯ ೧೯೫೬ರಲ್ಲಿ ಕೇಂದ್ರ ಸರ್ಕಾರ "ರಾಷ್ಟ್ರೀಯ ಸಹಕಾರ ಅಭಿವೃದ್ಧಿ ಮತ್ತು ಉಗ್ರಾಣ ಮಂಡಳಿಯನ್ನೂ ಮತ್ತು ೧೯೫೭ರಲ್ಲಿ ಕೇಂದ್ರ ಉಗ್ರಾಣ ನಿಗಮವನ್ನೂ ಸ್ಥಾಪಿಸಿತು. ಈ ನಿಗಮಗಳು ರಾಜ್ಯದ ಪ್ರಮುಖ ನಗರ ಪಟ್ಟಣಗಳಲ್ಲಿ ಗೋದಾಮು ಅಥವಾ ದಾಸ್ತಾನು ಮಳಿಗೆಗಳನ್ನು ವೈಜ್ಞಾನಿಕವಾಗಿ ನಿರ್ಮಿಸಿವೆ. ಕರ್ನಾಟಕ ಸರ್ಕಾರವೂ ರಾಜ್ಯ ಉಗ್ರಾಣ ನಿಗಮವನ್ನು ಸ್ಥಾಪಿಸಿದೆ.

ರಾಷ್ಟ್ರಮಟ್ಟದಲ್ಲಿ "ಭಾರತ ಆಹಾರ ನಿಗಮ"ವು ೧೯೬೫ರಿಂದ ಅಸ್ತಿತ್ವದಲ್ಲಿದೆ. ರಾಜ್ಯದಾದ್ಯಂತ ಸಹಕಾರ ಸಂಘಗಳು ಪ್ರತಿ ನಗರ, ಜಿಲ್ಲೆ, ತಾಲೂಕು ಮತ್ತು ಹೋಬಳಿ ಮಟ್ಟದಲ್ಲಿ ಉಗ್ರಾಣ ವ್ಯವಸ್ಥೆಯನ್ನು ರೈತರಿಗೆ ಕಲ್ಪಿಸಿವೆ. ಖಾಸಗಿ ಆಹಾರ ಸಂಸ್ಕರಣ ಸಂಸ್ಥೆಗಳು ಮಂಡಿ ವರ್ತಕರ ಗೋದಾಮು ಆಹಾರ ಧಾನ್ಯ ಹಂಚಿಕೆ ಘಟಕಗಳು, ದಲ್ಲಾಳಿಗಳು, ಖಾಸಗಿ ಉದ್ಯಮಿಗಳು, ಪ್ರತಿಷ್ಠಿತ ಶ್ರೀಮಂತ ಜಮೀನ್ದಾರರೂ ಸೇರಿದಂತೆ, ಖಾಸಗಿ ಕಂಪನಿಗಳೂ ವೈಜ್ಞಾನಿಕವಾದ ಉಗ್ರಾಣ ಸೌಲಭ್ಯಗಳನ್ನು ಒದಗಿಸುತ್ತಿವೆ.

ಕೇಂದ್ರಿಯ ಉಗ್ರಾಣ ನಿಗಮ, ಎಫ್.ಸಿ.ಐ., ರಾಜ್ಯ ಉಗ್ರಾಣ ನಿಗಮಗಳು, ರಾಜ್ಯ ಸರ್ಕಾರ ಆಹಾರ, ನಾಗರೀಕ ಸರಬರಾಜು ಇಲಾಖೆ, ಸಹಕಾರಿ ಕೃಷಿ ಉತ್ಪನ್ನ ಮಾರಾಟ ಸಂಸ್ಥೆ ಮತ್ತು ನಿಯಂತ್ರಿತ ಮಾರುಕಟ್ಟೆ ಆವರಣಗಳಲ್ಲಿ ನಿರ್ಮಿಸಿದ ಕೃಷಿ ಉತ್ಪನ್ನ ಮಳಿಗೆಗಳು ಆಹಾರ ದಾಸ್ತಾನು ಉಗ್ರಾಣಗಳ ಸೌಲಭ್ಯಗಳನ್ನು ಒದಗಿಸುತ್ತಿವೆ.

ಜಿಲ್ಲಾ ಕೇಂದ್ರ ಚಾಮರಾಜನಗರದಲ್ಲಿ ಮೂರು ಸಾವಿರ ಮೆಟ್ರಿಕ್ ಟನ್ ಸಾಮರ್ಥ್ಯದ ಉಗ್ರಾಣವನ್ನು ಕರ್ನಾಟಕ ರಾಜ್ಯ ಉಗ್ರಾಣ ನಿಗಮವು ನಿಯಂತ್ರಿತ ಮಾರುಕಟ್ಟೆಗಳ ಅವರಣದ ಪಕ್ಕದಲ್ಲಿ ವೈಜ್ಞಾನಿಕ ವಿಧಾನವನ್ನು ಅನುಸರಿಸಿ ನಿರ್ಮಿಸಿದೆ. ಜಿಲ್ಲೆಯ ನಾಲ್ಕು ತಾಲೂಕುಗಳು ಮತ್ತು ಹೋಬಳಿಗಳಲ್ಲಿ ಉಪಉಗ್ರಾಣ ಮಳಿಗೆಗಳನ್ನು ರಾಜ್ಯ ಸರ್ಕಾರವು ಸ್ಥಾಪಿಸಿದೆ. ಉಗ್ರಾಣ ನಿಗಮವು ದಾಸ್ತಾನುದಾರರಿಗೆ ಸಂಗ್ರಹಣೆ ಸೌಲಭ್ಯವನ್ನು ಒದಗಿಸುವುದಲ್ಲದೆ ದಾಸ್ತಾನು ಮಾಡಲ್ಪಟ್ಟ ಸರಕುಗಳಿಗೆ ಧೂಮೋಪಚಾರ ಮತ್ತು ಔಷಧಿ ಸಿಂಪಡಣೆ ಸೌಲಭ್ಯವನ್ನು ಒದಗಿಸುತ್ತದೆ.

ಸುಗ್ಗಿಯ ನಂತರ ರೈತರು ತಮ್ಮ ಗ್ರಾಮದ ಸಾಹುಕಾರರಿಗೆ, ದಲ್ಲಾಳಿಗಳಿಗೆ ಮತ್ತು ಮಂಡಿ ವರ್ತಕರಿಗೆ ಕಡಿಮೆ ಬೆಲೆಗೆ ಮತ್ತು ಮೋಸದ ತೂಕಕ್ಕೆ ಮಾರಾಟ ಮಾಡುವುದನ್ನು ತಪ್ಪಿಸಲು, ದಲ್ಲಾಳಿಗಳಿಂದ ರಕ್ಷಿಸಲು, ಉಗ್ರಾಣದಲ್ಲಿ ದಾಸ್ತಾನಾಗಿದ್ದ ಧಾನ್ಯಗಳ ಪ್ರಸ್ತುತ ಮಾರುಕಟ್ಟೆ ಮೌಲ್ಯಗಳ ಮೇಲೆ ಶೇ. ೭೦ ರಷ್ಟು ನಗದು ಹಣವನ್ನು ಬ್ಯಾಂಕಿನಿಂದ ಮುಂಗಡ ಸಾಲವಾಗಿ ಪಡೆಯುವ ಸಾಲಸೌಲಭ್ಯವನ್ನು ಕಲ್ಪಿಸಿವೆ. ರೈತ ಕೃಷಿ ಉತ್ಪನ್ನಗಳ ಮಾರಾಟಕ್ಕೆ ವಿದ್ಯುನ್ಮಾನ ಮೆಟ್ರಿಕ್ ತೂಕ ಮತ್ತು ಅಳತೆ ಪದ್ಧತಿಯನ್ನು ಅಳವಡಿಸಲಾಗಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟಪಂಗಡದ ರೈತರು, ಬಡಮಹಿಳಾ ರೈತರು, ದುರ್ಬಲವರ್ಗದವರಿಗೆ, ಎಲ್ಲಾ ಸಣ್ಣ ರೈತರಿಗೆ

ಪಹಣಿ ಆಧಾರದ ಮೇಲೆ ಆಹಾರ ಭದ್ರತೆಯೊಂದಿಗೆ ಶೇ.೭೦ರಷ್ಟು ಹಣವನ್ನು ಮುಂಗಡವಾಗಿ ಬ್ಯಾಂಕುಗಳು ಸಾಲ ನೀಡುತ್ತಿದ್ದು, ದಾಸ್ತಾನಾಗಿದ್ದ ಎಲ್ಲಾ ಕೃಷಿ ಉತ್ಪನ್ನಗಳು ಉಗ್ರಾಣ ವಿಮೆಗೆ ಒಳಪಟ್ಟಿವೆ.

ಉಗ್ರಾಣದಲ್ಲಿ ಸಂಗ್ರಹಣೆಗೆ ಇಟ್ಟ ದಾಸ್ತಾನಿಗೆ ಧಾನ್ಯಗಳ ಮೌಲ್ಯಗಳ ಆಧಾರದ ಮೇಲೆ ಶೇ.೧ರಿಂದ ಶೇ.೪ರಷ್ಟು ದಾಸ್ತಾನು ಶುಲ್ಕವನ್ನು ವಿಧಿಸಲಾಗುತ್ತದೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ದುರ್ಬಲ ವರ್ಗದವರು, ಮಹಿಳೆಯರಿಗೆ ಅತಿಸಣ್ಣ ರೈತರಿಗೆ ಇದರಿಂದ ಪೂರ್ತಿ ವಿನಾಯಿತಿ ನೀಡಲಾಗಿದೆ. ಮಾರುಕಟ್ಟೆಯಲ್ಲಿ ಉತ್ತಮ ಬೆಲೆಗೆ ರೈತರು ಮಾರಾಟ ಮಾಡುವವರೆಗೂ, ಉಗ್ರಾಣ ನಿಗಮ ಸುರಕ್ಷಿತವಾಗಿ ದಾಸ್ತಾನಿಡುವ ಸೌಲಭ್ಯವಿದ್ದು, ದಾಸ್ತಾನುದಾರರು ಉಗ್ರಾಣ ರಶೀತಿಯ ಆಧಾರದ ಮೇಲೆ ಬ್ಯಾಂಕುಗಳಿಂದ ಸಾಲವನ್ನು ಪಡೆಯಬಹುದಾಗಿದೆ.

## ಕೃಷಿಯೇತರ ಸಾಲ ಕ್ಷೇತ್ರ

**ಪಟ್ಟಣ ಸಹಕಾರ ಬ್ಯಾಂಕು ಮತ್ತು ನೌಕರರ ಪತ್ತಿನ ಸಹಕಾರ ಸಂಘಗಳು:** ವ್ಯವಸಾಯ ಚಟುವಟಿಕೆಗಳಿಗೆ ಒಳಪಡದ ಇತರ ಸಹಕಾರ ಕ್ಷೇತ್ರಗಳಾದ ಪಟ್ಟಣ ಸಹಕಾರ ಬ್ಯಾಂಕು ಮತ್ತು ನೌಕರರ ಪತ್ತಿನ ಸಹಕಾರ ಸಂಘಗಳು ಮುಖ್ಯವಾದ ಸಹಕಾರ ಮನೋಭಾವವುಳ್ಳ ಪತ್ತಿನ ಸಹಕಾರ ಸಂಘಗಳಾಗಿವೆ. ಪಟ್ಟಣ ಸಹಕಾರ ಬ್ಯಾಂಕುಗಳು ತಾಲೂಕು ಜಿಲ್ಲಾ ಮತ್ತು ನಗರಗಳಲ್ಲಿರುವ ಪ್ರಜೆಗಳ ಉಳಿತಾಯ ಮನೋಭಾವವನ್ನು ಬೆಳೆಸುತ್ತವೆ. ಈ ಸಹಕಾರ ಬ್ಯಾಂಕುಗಳು ಪಟ್ಟಣವಾಸಿಗಳಿಂದ ಠೇವಣಿಯನ್ನು ಸ್ವೀಕರಿಸುತ್ತವೆ. ಬ್ಯಾಂಕಿನ ಸದಸ್ಯರು ಮತ್ತು ಸದಸ್ಯೇತರರಲ್ಲಿರುವ ಉಳಿತಾಯದ ಹಣವನ್ನು ಆಕರ್ಷಕ ಬಡ್ಡಿ ನೀಡುವುದರ ಮೂಲಕ ವಿವಿಧ ಪ್ರಕಾರದ ಠೇವಣಿಗಳನ್ನು ಸ್ವೀಕರಿಸುತ್ತವೆ. ಸಾಮಾನ್ಯ ವರ್ಗದ ಜನರಿಗೆ, ನೌಕರರಿಗೆ, ಸಣ್ಣ ವರ್ತಕರಿಗೆ, ಕುಶಲಕರ್ಮಿಗಳಿಗೆ ಮಹಿಳೆಯರಿಗೆ, ಸ್ವಂತ ಉದ್ಯೋಗಸ್ಥರು ಮತ್ತು ನಿರುದ್ಯೋಗಿ ಯುವಕರು ಸ್ವಂತ ಉದ್ದಿಮೆಗಳನ್ನು ನಡೆಸಲು ಅನುಕೂಲವಾಗುವಂತೆ ಪಟ್ಟಣ ಸಹಕಾರ ಬ್ಯಾಂಕುಗಳು ಸಾಲವನ್ನು ನೀಡುತ್ತವೆ.

ನೌಕರರ ಪತ್ತಿನ ಸಹಕಾರ ಸಂಘಗಳು ಸರ್ಕಾರಿ, ಖಾಸಗಿ ಮತ್ತು ಇತರ ಎಲ್ಲಾ ವರ್ಗದ ನೌಕರ ಸದಸ್ಯರಿಗೆ ಸಾಲವನ್ನು ಒದಗಿಸುತ್ತವೆ. ಇವುಗಳಲ್ಲಿ ಕೆಲವು ಮಹಿಳಾ ಸಹಕಾರ ಪತ್ತಿನ ಸಂಘಗಳು ಮತ್ತು ಮಹಿಳಾ ಸಹಕಾರ ಬ್ಯಾಂಕುಗಳು ಸಹ ಸೇರುತ್ತವೆ. ಇಂತಹ ಬ್ಯಾಂಕುಗಳು ಮತ್ತು ನೌಕರರ ಸಹಕಾರ ಸಂಘಗಳು ಚಾಮರಾಜನಗರ ಜಿಲ್ಲೆ ಮತ್ತು ಇತರ ತಾಲೂಕು ಮತ್ತು ಹೋಬಳಿ ಕೇಂದ್ರಗಳಲ್ಲಿ ಯಶಸ್ವಿಯಾಗಿ ಕಾರ್ಯ ನಿರ್ವಹಿಸುತ್ತಿವೆ.

**ಕೋಷ್ಟಕ ೬.೧೨: ಚಾಮರಾಜನಗರ ಜಿಲ್ಲಾ ಪಟ್ಟಣ ಸಹಕಾರ ಬ್ಯಾಂಕು ಪ್ರಗತಿ (₹ ಲಕ್ಷಗಳಲ್ಲಿ)**

| ಕ್ರ. ಸಂ | ವಿವರ | ವರ್ಷ | | | |
|---|---|---|---|---|---|
| | | ೨೦೦೪-೦೫ | ೨೦೦೫-೦೬ | ೨೦೦೬-೦೭ | ೨೦೦೭-೦೮ |
| ೧ | ಪಟ್ಟಣ ಸಹಕಾರ ಬ್ಯಾಂಕುಗಳು | | | | |
| ೧ | ಒಟ್ಟು ಬ್ಯಾಂಕುಗಳ ಸಂಖ್ಯೆ | ೦೧ | ೦೧ | ೦೧ | ೦೧ |
| ೨ | ಸದಸ್ಯರ ಸಂಖ್ಯೆ | ೩೦೭೪ | ೩೧೩೫ | ೩೨೭೭ | ೩೪.೭೭ |
| ೩ | ಷೇರು ಬಂಡವಾಳ | ೩೦.೦೭ | ೩೧.೦೩ | ೩೨.೩೭ | ೩೩.೫೯ |

| | | | | | |
|---|---|---|---|---|---|
| ೪ | ಕಾಯ್ದಿಟ್ಟ ಹಾಗೂ ಇತರ ನಿಧಿಗಳು | ೧೨೪.೦೩ | ೧೩೫.೨೪ | ೧೫೪.೦೧ | ೧೬೧.೧೨ |
| ೫ | ಠೇವಣಿಗಳು | ೨೧೫.೪೦ | ೨೩೪.೮೭ | ೨೭೪.೭೬ | ೩೦೮.೦೮ |
| ೬ | ನೀಡಿದ ಸಾಲ | ೧೦೪.೧೪ | ೧೧೩.೨೪ | ೧೨೪.೩೪ | ೧೫೫.೮೨ |
| ೭ | ದುಡಿಯುವ ಬಂಡವಾಳ | ೩೧೧.೩೪ | ೩೧೮.೨೩ | ೩೩೪.೬೫ | ೩೭೯.೫೪ |
| ೮ | ಲಾಭ | ೪.೧೬ | ೪.೮೭ | ೫.೮೪ | ೬.೯೪ |
| ೯ | ನಷ್ಟ | – | – | – | – |
| ೨ | ಕೃಷಿಯೇತರ ಪತ್ತಿನ ಸಂಘಗಳು | | | | |
| ೧ | ಒಟ್ಟು ಸಂಘಗಳ ಸಂಖ್ಯೆ | ೧೧ | ೧೨ | ೧೩ | ೧೩ |
| ೨ | ಸದಸ್ಯರ ಸಂಖ್ಯೆ | ೫೬೧೮ | ೫೮೨೪ | ೬೧೫೦ | ೬೩೫೦ |
| ೩ | ಷೇರು ಬಂಡವಾಳ | ೨೨.೧೪ | ೨೩.೪೫ | ೨೬.೦೦ | ೨೬.೧೦ |
| ೪ | ದುಡಿಯುವ ಬಂಡವಾಳ | ೫೬.೧೮ | ೫೮.೨೪ | ೬೦.೬೮ | ೬೦.೮೦ |
| ೫ | ಕಾಯ್ದಿಟ್ಟ ಹಾಗೂ ಇತರ ನಿಧಿಗಳು | ೧೬.೩೮ | ೧೦.೨೪ | ೨೦.೩೮ | ೨೧.೩೪ |
| ೬ | ಒಟ್ಟು ಠೇವಣಿ | ೨೦.೪೫ | ೨೩.೧೮ | ೨೫.೪೫ | ೨೬.೯೫ |
| ೭ | ನೀಡಿದ ಸಾಲ | ೧.೬೩ | ೦.೯೬ | ೦.೮೫ | ೦.೯೦ |
| ೮ | ಲಾಭ | ೧.೬೪ | ೧.೩೪ | ೧.೮೫ | ೧.೯೦ |
| ೯ | ನಷ್ಟ | ೨.೯೧ | ೨.೮೨ | ೨.೪೨ | ೨.೮೬ |

*ಆಧಾರ : ಸಹಕಾರ ಇಲಾಖೆ, ಚಾಮರಾಜನಗರ*

## ಕೇಂದ್ರ ಸಹಕಾರಿ ಸಗಟು ಮಾರಾಟ ಸಂಘ

ಜನತಾ ಬಜಾರ್ ಮೈಸೂರು ಜಿಲ್ಲಾ ಕೇಂದ್ರ ಸಹಕಾರಿ ಸಗಟು ಮಾರಾಟ ಸಂಘವನ್ನು ೧೯೬೩ರಲ್ಲಿ ಸ್ಥಾಪಿಸಲಾಯಿತು. ಈ ಸಂಘಗಳ ಸದಸ್ಯರು ಸರ್ಕಾರದ ಸಹಕಾರ ಇಲಾಖೆಯಿಂದ ನೇಮಕಗೊಂಡ ಅಧಿಕಾರಿಗಳು, ಪ್ರಾಥಮಿಕ ಸಹಕಾರ ಮಾರಾಟ ಸಂಘಗಳ ಸದಸ್ಯರಿಂದ ನೇಮಕಗೊಂಡ ಸದಸ್ಯರು ಮತ್ತು ಇತರ ಸೇವಾ ವಲಯಗಳಿಂದ ಪ್ರತಿನಿಧಿಸಿದ ಸದಸ್ಯರಿಂದ ಒಳಗೊಂಡಿರುತ್ತದೆ. ಜೂನ್ ೧೯೮೭ರ ಅಂತ್ಯದ ವೇಳೆಗೆ ಇದು ಸಹಕಾರ ಸಂಘಗಳ ಸಂಯುಕ್ತ ವಲಯಗಳಿಂದ ನೇಮಕಗೊಂಡ ೧೯ ಸದಸ್ಯರು ಮತ್ತು ಪ್ರಾಥಮಿಕ ಸಂಘಗಳಿಂದ ನೇಮಕಗೊಂಡ ೧೪೨ ಸದಸ್ಯರನ್ನೊಳಗೊಂಡಿತ್ತು. ಈ ಸಂಘವು ₹ ೧೪-೪೪ ಲಕ್ಷಗಳಷ್ಟು ಷೇರು ಬಂಡವಾಳವನ್ನು ಹೊಂದಿದ್ದು, ಅದರಲ್ಲಿ ಸರ್ಕಾರದ ಪಾಲು ₹ ೧೧.೪೭ ಲಕ್ಷಗಳು ಸೇರಿತ್ತು.

೧೯೮೬-೮೭ರಲ್ಲಿ ಸಂಘದ ಒಟ್ಟು ವಾರ್ಷಿಕ ಮಾರಾಟ ಮತ್ತು ಖರೀದಿಸಿದ ಮೌಲ್ಯಗಳು ಕ್ರಮವಾಗಿ ₹ ೨೨೧.೩೨ ಲಕ್ಷಗಳು ಮತ್ತು ₹ ೨೧೪.೭೯ ಲಕ್ಷಗಳಾಗಿತ್ತು. ಈ ಸಂಘಗಳ ಲಾಭಗಳಿಕೆಯು ₹ ೨.೩೦ ಲಕ್ಷಗಳಷ್ಟಿದೆ. ೧೯೬೮ರಲ್ಲಿ ಕೇಂದ್ರ ಸಹಕಾರಿ ಸಗಟು ಮಾರಾಟ ಸಂಘಗಳು ಮೈಸೂರಿನಲ್ಲಿ ಎರಡು ಜನತಾ

ಬಜಾರ್, ಚಾಮರಾಜನಗರ, ಕೊಳ್ಳೆಗಾಲದಲ್ಲಿ ತಲಾ ಒಂದೊಂದು ಜನತಾ ಬಜಾರ್‌ಗಳನ್ನು ತೆರೆದಿದೆ. ಈ ಅಂಗಡಿಗಳ ಮೂಲಕ ವಿದ್ಯಾ ವಿಕಾಸ ಯೋಜನೆಯಲ್ಲಿ ನೋಟು ಪುಸ್ತಕ ಮತ್ತು ಲೇಖನ ಸಾಮಗ್ರಿಗಳನ್ನು ಗ್ರಾಹಕರಿಗೆ ಮತ್ತು ಸಹಕಾರ ಸಂಘಗಳಿಗೆ ಮಾರಾಟ ಮಾಡುತ್ತಿದೆ. ಔಷಧಿಗಳ ಮಾರಾಟ, ಜವಳಿ ಮತ್ತು ಸುಮಾರು ೨೦೦ ವಿವಿಧ ಬಗೆಯ ಗ್ರಾಹಕರ ಅಪೇಕ್ಷೆಗೊಳಪಟ್ಟ ವಸ್ತುಗಳನ್ನು ಮಾರಾಟ ಮಾಡಲಾಗುತ್ತಿದೆ. ಚಾಮರಾಜನಗರದ ಜನತಾ ಬಜಾರ್ ಇಂದಿಗೂ ತನ್ನ ಅಸ್ತಿತ್ವ ಉಳಿಸಿಕೊಂಡು ಗ್ರಾಹಕರಿಗೆ ಉತ್ತಮ ಸೇವೆ ಸಲ್ಲಿಸುತ್ತಿದೆ.

## ಪ್ರಾಥಮಿಕ ಬಳಕೆದಾರರ ಸಹಕಾರ ಸಂಘಗಳು

ಗ್ರಾಹಕರಿಗೆ ದಿನಬಳಕೆ ವಸ್ತುಗಳನ್ನು ಯೋಗ್ಯ ಬೆಲೆಗೆ ವಿತರಿಸುವ ಕಾರ್ಯದಲ್ಲಿ ಬಳಕೆದಾರರ ಸಹಕಾರ ಸಂಘಗಳ ಪಾತ್ರ ಅತ್ಯಂತ ಮಹತ್ವಪೂರ್ಣವಾದುದು. ಇವು ಜೀವನಾವಶ್ಯಕ ವಸ್ತುಗಳ ಬೆಲೆಯನ್ನು ತಡೆಗಟ್ಟುವಲ್ಲಿ ಮತ್ತು ಮಧ್ಯವರ್ತಿ ವರ್ತಕರು ಕಾಳಸಂತೆಯಲ್ಲಿ ಅಧಿಕ ಲಾಭಕ್ಕೆ ಮಾರುವುದನ್ನು ತಪ್ಪಿಸುವಲ್ಲಿ ತಮ್ಮ ಕಾರ್ಯವನ್ನು ಗ್ರಾಹಕರ ಪರವಾಗಿ ನಿರ್ವಹಿಸುತ್ತವೆ. ಮೊದಲನೆಯ ಜಾಗತಿಕ ಯುದ್ಧದ ಘಟನೆಗಳು ಗ್ರಾಹಕ ಸಹಕಾರ ಸಂಘಗಳ ಸ್ಥಾಪನೆಗೆ ಕಾರಣವಾದುವು. ೧೯೧೮ರಲ್ಲಿ ಮೈಸೂರಿನಲ್ಲಿ ನಂತರ ಚಾಮರಾಜನಗರದಲ್ಲಿ ಗ್ರಾಹಕರ ಸಹಕಾರ ಸಂಘಗಳು ಸ್ಥಾಪನೆಗೊಂಡಿವೆ. ದ್ವಿತೀಯ ವಿಶ್ವ ಸಮರದ ಸಂದರ್ಭದಲ್ಲಿ ಆಹಾರ ಮತ್ತು ಇತರ ಜೀವನಾವಶ್ಯಕ ವಸ್ತುಗಳಿಗೆ ತೀವ್ರ ಅಭಾವವುಂಟಾದ್ದರಿಂದ ನಗರ ಪಟ್ಟಣಗಳ ಗ್ರಾಹಕರಿಗೆ ದಿನಬಳಕೆ ವಸ್ತುಗಳನ್ನು ಮಾರಾಟ ಮಾಡುವ ಉದ್ದೇಶದಿಂದ ಎಲ್ಲಾ ಬಡಾವಣೆಗಳಲ್ಲಿ ಗ್ರಾಹಕ ಸಹಕಾರ ಸಂಘಗಳು ಸ್ಥಾಪನೆಗೊಂಡಿವೆ. ಜಿಲ್ಲೆಯಲ್ಲಿ ಪ್ರಾಥಮಿಕ ಗ್ರಾಹಕರ ಸಹಕಾರ ಸಂಘಗಳ ಜೊತೆಗೆ ಜಿಲ್ಲಾ ಕೇಂದ್ರ ಸಹಕಾರಿ ಸಗಟು ಮಾರಾಟ ಸಂಘವೂ ಸಹ ಸ್ಥಾಪನೆಗೊಂಡಿವೆ.

ಚಾಮರಾಜನಗರ ಜಿಲ್ಲೆ ಬುಡಕಟ್ಟು ವರ್ಗದವರ ದೊಡ್ಡ ಪ್ರಮಾಣದ ಕೃಷಿ ಸಹಕಾರ ಪತ್ತಿನ ವಿವಿಧೋದ್ದೇಶ ಸಂಘಗಳು ಆದಿವಾಸಿ ಬುಡಕಟ್ಟು ಜನಾಂಗದವರ ಕ್ಷೇಮಾಭ್ಯುದಯಕ್ಕೆಂದೇ ಪ್ರತ್ಯೇಕವಾದ ಸಂಘವು ೧೯೭೧ರಲ್ಲಿ ಸ್ಥಾಪನೆಗೊಂಡಿತು. ಇದರ ಜೊತೆಗೆ ಭೂರಹಿತ ಕೃಷಿ ಕಾರ್ಮಿಕರ ಸಂಘವನ್ನೂ ಸಹ ಸ್ಥಾಪಿಸಲಾಯಿತು. ಸರ್ಕಾರವು ವಿಶೇಷ ಯೋಜನೆ ಕಾರ್ಯಕ್ರಮದಡಿ ಸೋಲಿಗರು, ಗಿರಿಜನರು ಮತ್ತು ವಿವಿಧ ಬುಡಕಟ್ಟು ಜನಾಂಗದವರಿಗೆ ಸಹಕಾರ ಸಂಘಗಳ ಮೂಲಕ ಧನ ಸಹಾಯ ನೀಡುತ್ತಿದೆ.

ಚಾಮರಾಜನಗರ ಜಿಲ್ಲೆಯ ನಾಲ್ಕು ತಾಲೂಕುಗಳಲ್ಲದೇ ಬಿಳಿಗಿರಿರಂಗನಬೆಟ್ಟದಲ್ಲಿ ವಾಸಿಸುವ ಸೋಲಿಗ ಜನಾಂಗದವರಿಗೆ ವಿವೇಕಾನಂದ ಕ್ಷೇಮಾಭಿವೃದ್ಧಿ ಸಹಕಾರ ಸಂಘವನ್ನು ಸ್ಥಾಪಿಸಿದೆ. ಇವರು ಕಾಡಿನಲ್ಲಿ ಸಂಗ್ರಹಿಸಿದ ಜೇನುತುಪ್ಪ, ಗೋಂದು, ಗೇರುಬೀಜ, ಅರಗು, ಕಾಡುಮೃಗಗಳ ಕೊಂಬು, ಬಿದಿರಿನಿಂದ ತಯಾರಿಸಿದ ಚಾಪೆ, ಬುಟ್ಟಿ ಮತ್ತು ಕೈಮಗ್ಗದ ಬಟ್ಟೆಗಳನ್ನು ಸಂಘಗಳಲ್ಲಿ ಮಾರಾಟ ಮಾಡುವುದರ ಜೊತೆಗೆ ಬುಡಕಟ್ಟು ಜನರಿಗೆ ಅಗತ್ಯವಾಗಿ ಬೇಕಾಗುವ ಸೀಮೆಎಣ್ಣೆ, ಬಟ್ಟೆ, ಔಷಧಿ, ಪಡಿತರ ಮುಂತಾದವನ್ನು ಸಂಘಗಳ ಮೂಲಕ ವಿತರಣೆ ಮಾಡಲಾಗುತ್ತಿದೆ.

ಬಿಳಿಗಿರಿರಂಗನಬೆಟ್ಟದಲ್ಲಿರುವ ದೊಡ್ಡ ಪ್ರಮಾಣದ ಬುಡಕಟ್ಟು ಜನಾಂಗದ ವಿವಿಧೋದ್ದೇಶ ಪತ್ತಿನ ಸಹಕಾರ ಸಂಘವು ಸೋಲಿಗರ ಜೀವನವನ್ನು ಪುನಶ್ಚೇತನಗೊಳಿಸುವ ಉದ್ದೇಶದಿಂದ ಉತ್ತಮ ವಸತಿ ಸೌಲಭ್ಯವನ್ನು ನೀಡಿದೆ. ಸೇವಾ ಸಹಕಾರ ಸಂಘದ ಮೂಲಕ ಕಿರು ಅರಣ್ಯ ಉತ್ಪನ್ನಗಳನ್ನು ಮಾರಾಟ ಮಾಡಲು ಅವಕಾಶ

ಕಲ್ಪಿಸುವುದರ ಜೊತೆಗೆ ಅವರಿಗೆ ಅಗತ್ಯವಾಗಿ ಬೇಕಾಗುವ ದಿನಬಳಕೆ ವಸ್ತುಗಳನ್ನು ಕಡಿಮೆ ಬೆಲೆಗೆ ಒದಗಿಸಿ ಕೊಡಲಾಗುತ್ತಿದೆ.

ಡಾ. ಸುದರ್ಶನ್ ಅವರು, ವಿವೇಕಾನಂದ ಗಿರಿಜನ ಕಲ್ಯಾಣ ಕೇಂದ್ರವನ್ನು ಬಿಳಿಗಿರಿರಂಗನ ಬೆಟ್ಟದಲ್ಲಿ ಸ್ಥಾಪಿಸಿ, ಸೋಲಿಗರ ಉತ್ತಮ ಜೀವನಕ್ಕೆ ಹಗಲಿರುಳು ಶ್ರಮಿಸುತ್ತಿದ್ದಾರೆ. ಗಿರಿಜನರ ಕ್ಷೇಮಾಭ್ಯುದಯ ಸಂಘದ ಅಭಿವೃದ್ಧಿಗೆ ಸರ್ಕಾರವು ವಿಶೇಷವಾದ ಆರ್ಥಿಕ ನೆರವು ನೀಡುತ್ತಿದೆ. ವಸತಿ ಗೃಹ, ನಿರ್ಮಾಣ, ಆಸ್ಪತ್ರೆ, ಶಾಲೆ, ರಸ್ತೆಗಳ ನಿರ್ಮಾಣ ಮೊದಲಾದ ಗ್ರಾಮೀಣಾಭಿವೃದ್ಧಿ ಕಾರ್ಯಗಳನ್ನು ಈ ಸಂಘವು ನಿರ್ವಹಿಸುತ್ತಿದೆ.

ಸೋಲಿಗರ ಸಹಕಾರ ಸಂಘವು ಸದಸ್ಯರು ಶುದ್ಧೀಕರಿಸಿದ 'ಬಿಳಿಗಿರಿ' ಎಂಬ ಅಗ್‌ಮಾರ್ಕಿನ ಜೇನುತುಪ್ಪವನ್ನು ಪ್ರತಿವರ್ಷ ಸುಮಾರು ೧೫೦೦ ಕಿಲೋಗ್ರಾಂಗಳಷ್ಟು ಸಂಗ್ರಹಿಸಿ ಮಾರಾಟ ಮಾಡಿತ್ತು. ಅದರ ವಾರ್ಷಿಕ ಮಾರಾಟವು ₹ ೨೨,೩೦೦ಗಳಷ್ಟಿತ್ತು. ಮೂರು ವರ್ಷಗಳಲ್ಲಿ ಸಂಘದ ಲಾಭಾಂಶವು ಸರಾಸರಿ ₹ ೪೦,೦೦೦ಗಳಷ್ಟಿತ್ತು. ಇದು ೧೯೮೭ರಲ್ಲಿ ಬಿಳಿಗಿರಿ ರಂಗನಬೆಟ್ಟದ ತಪ್ಪಲಿನ ವಿವಿಧ ಭಾಗಗಳಲ್ಲಿ ನಾಲ್ಕು ಜೇನುತುಪ್ಪ ಸಹಕಾರ ಮಾರಾಟ ಸಂಘಗಳನ್ನು ಸ್ಥಾಪಿಸಿದೆ. ಅಲ್ಲಿನ ಯರಗನಘಡ್ಡ, ಹೊಸಪೋಡು ಮತ್ತು ಘೋರನ್ ಪೋಡು ಗುಂಪುಗಳ ಸದಸ್ಯರಿಗೆ ಜೇನುತುಪ್ಪದ ಸಂಟಾಗನ್, ಶುದ್ಧೀಕರಣಕ್ಕೆ ಆಧುನಿಕ ಹಾಗೂ ವೈಜ್ಞಾನಿಕವಾದ ಪ್ರಯೋಗಾಲಯಗಳನ್ನು ಸ್ಥಾಪಿಸಿದೆ. ಇಂತಹ ಯಶಸ್ವೀ ಸಾಧನೆಯ ಪ್ರಯತ್ನದಿಂದ ೧೯೮೬-೮೭ರಲ್ಲಿ ಸಂಘವು ₹ ಮೂರು ಲಕ್ಷದಷ್ಟು ವ್ಯಾಪಕ ವಹಿವಾಟು ನಡೆಸಿತ್ತು. ಜೇನುತುಪ್ಪ ಸಹಕಾರ ಸಂಘದ ಆಡಳಿತ ನಿರ್ವಹಣೆಗೆ ೧೫ ನಿರ್ದೇಶಕರು ಮತ್ತು ಸಹಕಾರ ಇಲಾಖೆಯ ಇತರ ಸಿಬ್ಬಂದಿ ವರ್ಗದವರನ್ನು ನೇಮಕ ಮಾಡಲಾಗಿದೆ.

**ಕೋಷ್ಟಕ ೬.೧೨: ಚಾಮರಾಜನಗರ ಜಿಲ್ಲೆಯ ಬಳಕೆದಾರರ ಸಹಕಾರ ಸಂಘಗಳ ವಿವರ ( ₹ ಲಕ್ಷಗಳಲ್ಲಿ)**

| ಕ್ರ. ಸಂ | ವಿವರ | ವರ್ಷ | | | | |
|---|---|---|---|---|---|---|
| | | ೨೦೦೩-೦೪ | ೨೦೦೪-೦೫ | ೨೦೦೫-೦೬ | ೨೦೦೬-೦೭ | ೨೦೦೭-೦೮ |
| ೧ | ಒಟ್ಟು ಸಂಘಗಳ ಸಂಖ್ಯೆ | ೦೨ | ೦೨ | ೦೭ | ೦೭ | ೦೫ |
| ೨ | ಸದಸ್ಯರ ಸಂಖ್ಯೆ | ೧೧೩೪ | ೧೭೩೪ | ೧೯೩೪ | ೨೧೧೦ | ೧೭೩೪ |
| ೩ | ಷೇರು ಬಂಡವಾಳ | ೧.೩೪ | ೧.೭೨ | ೧.೯೪ | ೨.೩೫ | ೨.೧೬ |
| ೪ | ಕಾಯ್ದಿಟ್ಟ ಹಾಗೂ ಇತರ ನಿಧಿಗಳು | ೦.೩೪ | ೦.೩೯ | ೦.೪೧ | ೦.೪೫ | ೦.೫೨ |
| ೫ | ದುಡಿಯುವ ಬಂಡವಾಳ | ೧.೩೪ | ೧.೬೫ | ೨.೧೦ | ೨.೩೫ | ೨.೫೬ |
| ೬ | ಖರೀದಿ | ೧೭.೫೬ | ೧೯.೫೦ | ೧೬.೩೪ | ೧೯.೫೦ | ೧೬.೫೪ |
| ೭ | ಮಾರಾಟ | ೧೬.೪೪ | ೧೭.೩೫ | ೧೫.೩೧ | ೧೬.೫೪ | ೧೫.೩೪ |
| ೮ | ಲಾಭ | ೦.೨೧ | ೦.೩೨ | ೦.೪೧ | ೦.೫೦ | ೦.೪೦ |
| ೯ | ನಷ್ಟ | ೦.೪೫ | ೦.೫೭ | ೦.೮೭ | ೧.೧೦ | ೦.೯೮ |

*ಆಧಾರ: ಜಿಲ್ಲಾ ಸಹಕಾರ ಇಲಾಖೆ, ಚಾಮರಾಜನಗರ*

## ಚಾಮರಾಜನಗರ ಜಿಲ್ಲಾ ಕೈಗಾರಿಕಾ ಸಹಕಾರ ಸಂಘ (ನಿಯಮಿತ)

ಕೈಗಾರಿಕಾ ಸಹಕಾರ ಸಂಘಗಳ ಸ್ಥಾಪನೆಯ ಪ್ರಮುಖ ಉದ್ದೇಶಗಳೆಂದರೆ – ಪ್ರತಿಯೊಂದು ಗ್ರಾಮದಲ್ಲಿ ಕೃಷಿ ಉಪಕರಣಗಳನ್ನು ತಯಾರಿಸುವ ಗೃಹ ಕೈಗಾರಿಕೆ, ಗ್ರಾಮೋದ್ಯೋಗ ಮತ್ತು ಕುಶಲಕರ್ಮಿಗಳ ಗುಡಿ, ಕೈಗಾರಿಕೆಗಳನ್ನು ಸ್ಥಾಪಿಸಿ ಅಭಿವೃದ್ಧಿಪಡಿಸುವುದರಿಂದ ಆಯಾ ಗ್ರಾಮಗಳಲ್ಲಿ ವರ್ಷವಿಡೀ ಉದ್ಯೋಗಗಳು

ದೊರಕುವುದರಿಂದ ನಗರ–ಪಟ್ಟಣಗಳಿಗೆ ಉದ್ಯೋಗ ಹುಡುಕಿ ವಲಸೆ ಹೋಗುವಿಕೆಯನ್ನು ತಡೆಯಬಹುದಾಗಿದ್ದು, ಸ್ಥಳೀಯವಾಗಿ ಲಭ್ಯವಿರುವ ಸಂಪನ್ಮೂಲಗಳನ್ನು ಆಯ ಗ್ರಾಮಗಳಲ್ಲಿಯೇ ಗೃಹ ಕೈಗಾರಿಕೆಗಳಿಗೆ ಕಚ್ಚಾ ಪದಾರ್ಥಗಳಾಗಿ ಉಪಯೋಗಿಸಬಹುದಾಗಿದೆ. ಅದರಂತೆ ಗ್ರಾಮ ಸ್ವರಾಜ್ಯವನ್ನು ಸ್ಥಾಪಿಸುವ ಉದ್ದೇಶದಿಂದ ಕೈಗಾರಿಕಾ ಸಹಕಾರ ಬ್ಯಾಂಕು ಸಂಘದ ಸದಸ್ಯರಿಗೆ ಸಾಲ ಸೌಲಭ್ಯ ಒದಗಿಸುತ್ತದೆ.

ಚಾಮರಾಜನಗರ ಜಿಲ್ಲೆಯಲ್ಲಿ ಕೈಗಾರಿಕಾ ಸಹಕಾರ ಸಂಘವು ಗ್ರಾಮಾಂತರ ಪ್ರದೇಶದ ಕುಶಲಕರ್ಮಿಗಳು (ಬಡಗಿ, ಕಮ್ಮಾರ), ಕುಂಬಾರಿಕೆ, ಬೆಲ್ಲ ತಯಾರಿಕೆ, ಇಟ್ಟಿಗೆ ತಯಾರಿಕೆ, ನಾರಿನ ಉದ್ಯಮ, ಜೇನುಸಾಕಣೆ, ರೇಷ್ಮೆ ನೇಯ್ಗೆ, ಕಿರು ಅರಣ್ಯ ಉತ್ಪನ್ನಗಳಾದ ಚಾಪೆ, ಬುಟ್ಟಿ ತಯಾರಿಕೆ, ಸಿದ್ದ ಉಡುಪು ತಯಾರಿಕೆ, ನೇಕಾರರಿಗೆ, ದರ್ಜಿಗಳಿಗೆ, ಮಹಿಳೆಯರಿಗೆ ಹೊಲಿಗೆಯಂತ್ರ, ಕಸೂತಿ ಮತ್ತು ಗೃಹ ಉಪಯೋಗಿ ವಸ್ತುಗಳ ತಯಾರಿಕೆ, ಎಣ್ಣೆಗಾಣ, ಕೊಟ್ಟಣದ ಅಕ್ಕಿ, ಚರ್ಮೋದ್ಯೋಗ, ಕೈಮಗ್ಗ ಮುಂತಾದ ವೃತ್ತಿಗೆ ಸಂಬಂಧಿಸಿದಂತೆ ಹಲವಾರು ಕೈಗಾರಿಕಾ ಸಂಘಗಳು ಚಾಮರಾಜನಗರ ಜಿಲ್ಲೆಯಲ್ಲಿವೆ. ಈ ಕೈಗಾರಿಕೆಗಳಿಗೆ ಬೇಕಾದ ಕಚ್ಚಾ ಪದಾರ್ಥವನ್ನು ಸದಸ್ಯರಿಗೆ ಒದಗಿಸುವುದರ ಜೊತೆಗೆ ಅಗತ್ಯವಾದ ತಾಂತ್ರಿಕ ಸಲಹೆಗಳನ್ನು ನೀಡುವುದು. ಸಣ್ಣ ಉದ್ಯಮಿಗಳಿಗೆ ಅಗತ್ಯವಿರುವ ಯಂತ್ರಗಳು, ಬಿಡಿಭಾಗಗಳು ಮತ್ತು ಸಲಕರಣೆಗಳನ್ನು ಒದಗಿಸುವುದು. ಕುಶಲಕರ್ಮಿಗಳಿಗೆ ತಾಂತ್ರಿಕ ತರಬೇತಿ ನೀಡುವುದು ಮತ್ತು ಸದಸ್ಯರು ಉತ್ಪಾದಿಸಿದ ವಸ್ತುಗಳ ಮಾರಾಟ ವ್ಯವಸ್ಥೆಯನ್ನು ಈ ಸಂಘವು ಮಾಡುತ್ತಿದೆ.

**ಕೋಷ್ಟಕ ೬.೧೩: ಚಾಮರಾಜನಗರ ಜಿಲ್ಲೆಯ ಕೈಗಾರಿಕಾ ಸಹಕಾರ ಸಂಘಗಳ ವಿವರ (₹ ಲಕ್ಷಗಳಲ್ಲಿ)**

| ಕ್ರ. ಸಂ | ವಿವರ | ವರ್ಷ | | | |
|---|---|---|---|---|---|
| | | ೨೦೦೪–೦೫ | ೨೦೦೫–೦೬ | ೨೦೦೬–೦೭ | ೨೦೦೭–೦೮ |
| ೧ | ಸಂಘಗಳ ಸಂಖ್ಯೆ | ೧೪ | ೧೫ | ೧೬ | ೧೭ |
| ೨ | ಒಟ್ಟು ಸದಸ್ಯರು | ೫೭೨೪ | ೫೯೨೪ | ೬೧೩೪ | ೬೫೭೬ |
| ೩ | ಷೇರು ಬಂಡವಾಳ | ೬.೬೫ | ೬.೯೮ | ೭.೧೪ | ೭.೫೨ |
| ೪ | ದುಡಿಯುವ ಬಂಡವಾಳ | ೪೧.೨೪ | ೪೩.೩೮ | ೪೩.೩೪ | ೪೬.೫೨ |
| ೫ | ಖರೀದಿ | ೪.೭೨ | ೭.೯೮ | ೫.೧೩ | ೪.೧೩ |
| ೬ | ಮಾರಾಟ | ೪.೬೪ | ೪.೨೪ | ೪.೧೮ | ೪.೧೩ |
| ೭ | ಲಾಭ | ೦.೮೫ | ೦.೮೪ | ೦.೩೬ | ೦.೨೪ |
| ೮ | ನಷ್ಟ | ೫.೭೨ | ೫.೮೪ | ೬.೧೦ | ೬.೩೫ |

*ಆಧಾರ: ಜಿಲ್ಲಾ ಸಹಕಾರ ಇಲಾಖೆ, ಚಾಮರಾಜನಗರ*

## ರೇಷ್ಮೆ ಕೃಷಿಕರ ಸಹಕಾರ ಸಂಘ

ಜಿಲ್ಲೆಯ ಕೊಳ್ಳೇಗಾಲ, ಯಳಂದೂರು, ಚಾಮರಾಜನಗರ, ಮಾಂಬಳ್ಳಿ, ಸಂತೆಮರಹಳ್ಳಿ ಮೊದಲಾದ ಸ್ಥಳಗಳಲ್ಲಿ, ರೇಷ್ಮೆ ಬೆಳೆ ಅಭಿವೃದ್ಧಿಗೆ ವಿಶ್ವ ಬ್ಯಾಂಕಿನ ವಿಶೇಷ ಆರ್ಥಿಕ ನೆರವಿನಿಂದ ಸರ್ಕಾರವು ರೈತರಿಗೆ ಸಹಕಾರ ಸಂಘಗಳ ಮೂಲಕ ಸಾಲ ನೀಡುತ್ತಿದೆ. ಜಿಲ್ಲೆಯ ವಾಣಿಜ್ಯ ಬ್ಯಾಂಕುಗಳು, ಗ್ರಾಮೀಣ ಬ್ಯಾಂಕು, ಕೃಷಿ ಸಹಕಾರ ಪ್ರಾಥಮಿಕ ಪತ್ತಿನ ಸಂಘ ಮತ್ತು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು ಅಗತ್ಯವಾದ ಸಾಲ ಸೌಲಭ್ಯಗಳನ್ನು ನೀಡುತ್ತಿವೆ. ೧೯೮೬ರಲ್ಲಿ ಜಿಲ್ಲೆಯಲ್ಲಿ ಒಟ್ಟು ೫೭ ಸಹಕಾರ ಸಂಘಗಳು ರೇಷ್ಮೆ ಅಭಿವೃದ್ಧಿಗೆ ಸಾಲ ನೀಡುವ

ಯೋಜನೆಯನ್ನು ಕೈಗೊಂಡಿದ್ದವು. ರೇಷ್ಮೆ ಚಾಕಿ ಕೇಂದ್ರ, ಗೂಡು ಸಂಗ್ರಹಣೆ, ಸಾಕಾಣಿಕೆ ಮತ್ತು ರೇಷ್ಮೆ ದಾರ ಉತ್ಪಾದನೆ ಮೊದಲಾದ ರೇಷ್ಮೆ ಉದ್ದಿಮೆಗೆ ಒಳಪಟ್ಟ ಸಂಸ್ಕರಣಾ ವ್ಯವಸ್ಥೆಗೆ ಸಾಲ ಸೌಲಭ್ಯ ಒದಗಿಸುತ್ತಿವೆ.

ರೇಷ್ಮೆ ಬೇಸಾಯ ಮತ್ತು ಹಿಪ್ಪುನೇರಳೆ ಬೆಳೆಗಾರರ ಸೇವಾ ಸಹಕಾರ ಸಂಘವನ್ನು ಚಾಮರಾಜನಗರದ ಹೊಂಗನೂರು ಮತ್ತು ಸುತ್ತಮುತ್ತಲಿನ ಗ್ರಾಮಗಳು ಸಂಘಟಿತಗೊಂಡು ರೇಷ್ಮೆ ಬೆಳೆಗಾರರ ವಿವಿಧೋದ್ದೇಶ ರೈತ ಸೇವಾ ಸಹಕಾರ ಸಂಘವನ್ನು ಹೊಂಗನೂರು ಗ್ರಾಮದಲ್ಲಿ ಸ್ಥಾಪಿಸಿವೆ. ಇಂಡಿಯನ್ ಓವರ್‌ಸೀಸ್ ಬ್ಯಾಂಕು ಅದರ ಅಭಿವೃದ್ಧಿಗೆ ಹಣಕಾಸಿನ ನೆರವು ಮತ್ತು ಮಾರ್ಗಸೂಚಿಯನ್ನು ನೀಡುವ ಜವಾಬ್ದಾರಿಯನ್ನು ವಹಿಸಿಕೊಂಡಿತ್ತು. ಈ ಸಂಘವು ೧೯೭೬ರಲ್ಲಿ ಕೇವಲ ₹ ೧೯,೦೦೦ಗಳ ಷೇರು ಬಂಡವಾಳದಿಂದ ಪ್ರಾರಂಭಗೊಂಡು ಹತ್ತು ವರ್ಷಗಳ ನಂತರ ಅಂದರೆ ೧೯೮೬ರಲ್ಲಿ ಸುಮಾರು ೫೦೦೦ ಸದಸ್ಯರನ್ನು ಹೊಂದಿದೆ. ಅವರಲ್ಲಿ ೩೦೨೬ ಮಂದಿ ಪರಿಶಿಷ್ಟ ಜಾತಿ ಮತ್ತು ೩೪೫ ಮಂದಿ ಪರಿಶಿಷ್ಟ ಪಂಗಡದವರಾಗಿದ್ದರೆ, ಉಳಿದ ೧೬೦೦ ಸದಸ್ಯರು ಹಿಂದುಳಿದ ದುರ್ಬಲ ವರ್ಗದವರಾಗಿದ್ದರು. ಇವರಲ್ಲಿ ಸಣ್ಣ, ಅತಿ ಸಣ್ಣ ಕೃಷಿಕರು, ಭೂರಹಿತ ಕಾರ್ಮಿಕರು ಹೆಚ್ಚಾಗಿದ್ದರು. ೧೯೮೬ರಲ್ಲಿ ಸಂಘದ ಷೇರು ಬಂಡವಾಳವು ಸುಮಾರು ₹ ಐದು ಲಕ್ಷಗಳಷ್ಟಿದ್ದು ಅದರಲ್ಲಿ ಸರ್ಕಾರದ ಪಾಲು ₹ ೮೦,೦೦೦ಗಳಾಗಿತ್ತು.

ಇಂಡಿಯನ್ ಓವರ್‌ಸಿಸ್ ಬ್ಯಾಂಕು ೧೯೮೫ ಮತ್ತು ೧೯೮೬ರಲ್ಲಿ ಕ್ರಮವಾಗಿ ₹ ೪.೬೭ ಲಕ್ಷಗಳು ಮತ್ತು ₹ ೩.೨೧ ಲಕ್ಷಗಳಷ್ಟು ಸಾಲ ನೀಡಿದ್ದು, ೧೯೮೬ರಲ್ಲಿ ಅಲ್ಪಾವಧಿ ಮಧ್ಯಮಾವಧಿ ಮತ್ತು ದೀರ್ಘಾವಧಿ ಸಾಲಗಳು ಕ್ರಮವಾಗಿ ₹ ೨.೪೬ ಲಕ್ಷಗಳು, ₹ ೧.೩೧ ಲಕ್ಷಗಳು ಮತ್ತು ₹ ೮,೪೩ ಲಕ್ಷಗಳಷ್ಟಿತ್ತು. ಸಂಘದ ಖರೀದಿ ಮತ್ತು ಮಾರಾಟದ ವಹಿವಾಟು ₹ ೫.೩೬ ಲಕ್ಷಗಳು ಮತ್ತು ₹ ೫.೫೫ ಲಕ್ಷಗಳಷ್ಟಿತ್ತು. ೧೯೮೪ರಲ್ಲಿ ಸ್ಥಾಪನೆಯಾದ ಸಹಕಾರಿ ಅಭಿವೃದ್ಧಿ ಸಹಕಾರ ಸಂಘ (ಎನ್.ಸಿ.ಡಿ.ಸಿ) ದ ಸಹವರ್ತಿಯಿಂದ ಸರ್ಕಾರವು ೧೯೮೬ರಲ್ಲಿ ರೇಷ್ಮೆ ಬೆಳೆ ಅಭಿವೃದ್ಧಿಗೆ ಒಟ್ಟು ೯.೪೫ ಲಕ್ಷ ರೂ.ಗಳ ಸಾಲವನ್ನು ಸಂಘಕ್ಕೆ ನೀಡಿತ್ತು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೇಷ್ಮೆ ಬೆಳೆಗಾರರಿಗೆ ಮತ್ತು ಕಾರ್ಮಿಕರಿಗೆ ₹ ೧ ಲಕ್ಷಗಳಷ್ಟು ವಿಶೇಷ ಧನಸಹಾಯ ನೀಡಿತ್ತು. ಜೊತೆಗೆ ರಿಯಾಯಿತಿ ಸೌಲಭ್ಯಗಳನ್ನು ಸಹ ನೀಡಿದೆ. ಸರ್ಕಾರದಿಂದ ಇಷ್ಟೆಲ್ಲಾ ಧನಸಹಾಯ ರಿಯಾಯಿತಿ ಸೌಲಭ್ಯಗಳನ್ನು ಸಂಘವು ಪಡೆದಿದ್ದರೂ ಫಲಾನುಭವಿಗಳು ಸರ್ಕಾರಕ್ಕೆ ಸಾಲ ಮರುಪಾವತಿ ಮಾಡದಿರುವುದರಿಂದ ಅದರ ನಷ್ಟದ ಮೊತ್ತವು ೧೯೮೦–೮೧ರಲ್ಲಿ ₹ ೨೬,೦೦೦ಗಳಷ್ಟಿದ್ದದ್ದೂ ೧೯೮೬–೮೭ರಲ್ಲಿ ₹ ೮.೫೪ ಲಕ್ಷಕ್ಕೆ ಹೆಚ್ಚಿತ್ತು.

**ಸಹಕಾರಿ ಸಕ್ಕರೆ ಕಾರ್ಖಾನೆ**

೧೯೮೬ರ ಜೂನ್ ವೇಳೆಗೆ ಅವಿಭಜಿತ ಮೈಸೂರು ಜಿಲ್ಲೆಯಲ್ಲಿ ಎರಡು ಸಹಕಾರಿ ಸಕ್ಕರೆ ಕಾರ್ಖಾನೆಗಳು ಅಸ್ತಿತ್ವದಲ್ಲಿದ್ದವು. ಅವುಗಳೆಂದರೆ ಕೊಳ್ಳೇಗಾಲ ತಾಲೂಕಿನ ಕುಂತೂರುನಲ್ಲಿ ೧೯೬೩ರಲ್ಲಿ ಸ್ಥಾಪನೆಗೊಂಡ ಶ್ರೀ ಮಹದೇಶ್ವರ ಸಕ್ಕರೆ ಕಾರ್ಖಾನೆ ಮತ್ತು ೧೯೭೩ರಲ್ಲಿ ಕೆ.ಆರ್.ನಗರದ ಚುಂಚನಕಟ್ಟೆಯಲ್ಲಿ ಸ್ಥಾಪನೆಗೊಂಡ ಶ್ರೀರಾಮ ಸಕ್ಕರೆ ಕಾರ್ಖಾನೆಗಳು ಜಿಲ್ಲೆಯ ಸುಮಾರು ೧೭೭೧ ಗ್ರಾಮಗಳ ರೈತರಿಂದ ಈ ಎರಡು ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಪೂರೈಕೆಯಾಗುತ್ತಿದ್ದಿತು. ೧೯೮೫–೮೬ರಲ್ಲಿ ಮಹದೇಶ್ವರ ಸಹಕಾರ ಸಕ್ಕರೆ ಕಾರ್ಖಾನೆಯು ವಿಸರ್ಜನೆಗೊಂಡಿದ್ದರಿಂದ ಅದರ ಆಸ್ತಿ ಮತ್ತು ಹೊಣೆಗಾರಿಕೆಯನ್ನು ೧೯೮೭ರಲ್ಲಿ ಖಾಸಗಿ ಕಂಪನಿಗೆ ವರ್ಗಾವಣೆ ಮಾಡಲಾಯಿತು. ೧೯೮೪–೮೫ರಲ್ಲಿ ಈ ಎರಡು ಸಕ್ಕರೆ ಕಾರ್ಖಾನೆಗಳ ಒಟ್ಟು ಸದಸ್ಯರ ಸಂಖ್ಯೆ ೧೮,೭೦೨ ರಷ್ಟು ಅವುಗಳ ಷೇರು ಬಂಡವಾಳಗಳು ₹ ೪೨೦.೧೧ ಲಕ್ಷಗಳಿಷ್ಟಿದ್ದಿತು. ಅದರಲ್ಲಿ ಸರ್ಕಾರದ ಪಾಲು ₹ ೧೪೨.೩೦ ಲಕ್ಷಗಳಷ್ಟಿತ್ತು. ಈ ಎರಡು ಕಾರ್ಖಾನೆಗಳಿಗೆ ಸರ್ಕಾರದಿಂದ ಎರವಲು ತಂದ

ಮೊತ್ತವು ೯೨೧.೬೫ ಲಕ್ಷ ರೂ.ಗಳಷ್ಟಿತ್ತು. ಇವು ೩೧,೪೨೬ ಟನ್ನುಗಳಷ್ಟು ಕಬ್ಬು ಅರೆಯುವ ಸಾಮರ್ಥ್ಯವನ್ನು ಹೊಂದಿದ್ದು, ಅವುಗಳ ವಾರ್ಷಿಕ ಸಕ್ಕರೆ ಮಾರಾಟವು ₹ ೪೩.೨೭ ಲಕ್ಷಗಳಷ್ಟಿತ್ತು. ೧೯೮೬ರಲ್ಲಿ ಈ ಎರಡು ಸಕ್ಕರೆ ಘಟಕಗಳ ಒಟ್ಟು ನಷ್ಟವು ₹ ೧೧೭೯.೨೭ ಲಕ್ಷದಷ್ಟಿತ್ತು.

## ಗೃಹ ನಿರ್ಮಾಣ ಸಹಕಾರ ಸಂಘಗಳು

ನಗರ ಪಟ್ಟಣಗಳಲ್ಲಿ ವಾಸಿಸುವ ಸರ್ಕಾರಿ ಮತ್ತು ಖಾಸಗಿ ನೌಕರರು ಶಿಕ್ಷಕರು, ಕಾರ್ಖಾನೆಯ ಕಾರ್ಮಿಕರೂ ಸೇರಿದಂತೆ ಇತರ ಕಾರ್ಮಿಕರು ಹಾಗೂ ಸಂಘಟಿತ ವಲಯದ ಕಾರ್ಮಿಕರು ಸಂಯುಕ್ತವಾಗಿ ವಿವಿಧ ಗೃಹ ನಿರ್ಮಾಣ ಸಹಕಾರ ಸಂಘಗಳನ್ನು ಸ್ಥಾಪಿಸಿಕೊಂಡು ಸಂಘದ ಸದಸ್ಯರಿಗೆ ಕಡಿಮೆ ಬೆಲೆಯಲ್ಲಿ ಗೃಹ ನಿವೇಶನಗಳ ವಿತರಣೆ, ಗೃಹನಿರ್ಮಾಣ, ಮನೆ ದುರಸ್ತಿ ಮತ್ತು ವಿಸ್ತರಣೆಗೆ ಅಥವಾ ಕಟ್ಟಿದ ಮನೆಗಳನ್ನು ಕೊಳ್ಳಲು ದೀರ್ಘಾವಧಿ ಸಾಲವನ್ನು ಒದಗಿಸುತ್ತಿವೆ. ಇವು ಗೃಹ ನಿರ್ಮಾಣ ಸಹಕಾರ ಸಂಘಗಳ ಪ್ರಮುಖ ಉದ್ದೇಶಗಳಾಗಿರುತ್ತವೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರಿಗೆ ಹಿಂದುಳಿದ ದುರ್ಬಲ ಅಲ್ಪಸಂಖ್ಯಾತ ನಾಗರೀಕರಿಗೆ ವಸತಿ ಸೌಲಭ್ಯಗಳನ್ನು ಒದಗಿಸಲು ಪ್ರತ್ಯೇಕವಾದ ಗೃಹನಿರ್ಮಾಣ ಸಹಕಾರ ಸಂಘಗಳಿವೆ. ಮೈಸೂರು ನಗರ ಗೃಹ ನಿರ್ಮಾಣ ಅಭಿವೃದ್ಧಿ ಪ್ರಾಧಿಕಾರ ಮೈಸೂರು (ಸಿ.ಐ.ಟಿ.ಬಿ.) ನೋಂದಾಯಿತ ಗೃಹ ಮಂಡಳಿಗಳಿಗೆ ನಿವೇಶನಗಳನ್ನು ಹಂಚಿಕೆ ಮಾಡುತ್ತದೆ.

ಚಾಮರಾಜನಗರ, ಕೊಳ್ಳೇಗಾಲ, ಗುಂಡ್ಲುಪೇಟೆ ಮತ್ತು ಯಳಂದೂರು ತಾಲೂಕುಗಳಲ್ಲಿ ಅನೇಕ ಗೃಹನಿರ್ಮಾಣ ಸಹಕಾರ ಸಂಘಗಳು ಸ್ಥಾಪನೆಗೊಂಡಿವೆ. ಗಿರಿಜನ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರ ಗೃಹ ನಿರ್ಮಾಣ ಮಂಡಳಿಗಳು, ಶಾಲಾ ನೌಕರರ ಗೃಹ ನಿರ್ಮಾಣ ಸಹಕಾರ ಸಂಘಗಳು, ಸರ್ಕಾರಿ ಮತ್ತು ಸರ್ಕಾರೇತರ ನೌಕರರ ಗೃಹನಿರ್ಮಾಣ ಸಹಕಾರ ಸಂಘಗಳು ನಾಲ್ಕು ತಾಲೂಕುಗಳಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸಿ ಮಂಡಳಿಯ ಸದಸ್ಯರಿಗೆ ನಿವೇಶನಗಳನ್ನು ಹಂಚುವ ಗೃಹನಿರ್ಮಾಣಕ್ಕೆ ಸಾಲ ನೀಡುವ ಮತ್ತು ಇತರ ನಿರ್ಮಾಣ ಕಾರ್ಯಗಳಲ್ಲಿ ಮಾರ್ಗದರ್ಶನ ನೀಡಿ ಪ್ರೋತ್ಸಾಹಿಸುತ್ತಿವೆ.

**ಕೋಷ್ಟಕ ೬.೧೪: ಚಾಮರಾಜನಗರ ಜಿಲ್ಲೆಯ ಗೃಹನಿರ್ಮಾಣ ಸಹಕಾರ ಸಂಘಗಳ ವಿವರ**

| ಕ್ರ ಸಂ | ವಿವರ | ೨೦೦೪-೦೫ | ೨೦೦೫-೦೬ | ೨೨೦೬-೦೭ | ೨೦೦೭-೦೮ |
|---|---|---|---|---|---|
| ೧ | ಸಂಘಗಳ ಸಂಖ್ಯೆ | ೦೫ | ೦೬ | ೦೭ | ೦೭ |
| ೨ | ಸದಸ್ಯರ ಸಂಖ್ಯೆ | ೧೪೨೪ | ೧೬೨೧ | ೧೮೨೧ | ೧೮೨೪ |
| ೩ | ಷೇರು ಬಂಡವಾಳ (ಲಕ್ಷಗಳಲ್ಲಿ) | ೧.೪೨ | ೧.೬೧ | ೧.೮೨ | ೧.೮೩ |
| ೪ | ದುಡಿಯುವ ಬಂಡವಾಳ (ಲಕ್ಷಗಳಲ್ಲಿ) | ೧.೫೨ | ೧.೮೨ | ೧.೯೧ | ೧.೯೩ |
| ೫ | ಹಂಚಿನ ನಿವೇಶನಗಳು (ಲಕ್ಷಗಳಲ್ಲಿ) | – | – | ೧೧೭ | – |

*ಆಧಾರ: ಜಿಲ್ಲಾ ಸಹಕಾರ ಇಲಾಖೆ, ಚಾಮರಾಜನಗರ*

## ಚಾಮರಾಜನಗರ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ

ವಿಶ್ವಬ್ಯಾಂಕಿನ ನೆರವಿನೊಡನೆ ಪ್ರಾರಂಭಿಸಲ್ಪಟ್ಟ ಕರ್ನಾಟಕ ಹೈನು ಅಭಿವೃದ್ಧಿ ಯೋಜನೆಯಡಿಯಲ್ಲಿ ಮೈಸೂರು, ಚಾಮರಾಜನಗರ ಮತ್ತು ಮಂಡ್ಯ ಜಿಲ್ಲೆಗಳನ್ನೊಳಗೊಂಡ ಮೈಸೂರು ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟವು ದಿನಾಂಕ ೨೩-೧೧-೧೯೭೬ರಂದು ನೋಂದಾಯಿಸಲ್ಪಟ್ಟಿತು. ಗ್ರಾಮೀಣ

ಜನರು ಕೃಷಿಯ ಜೊತೆಗೆ ಹೈನುಗಾರಿಕೆಯನ್ನು ಪ್ರಮುಖ ಉಪವೃತ್ತಿಯನ್ನಾಗಿ ರೂಪಿಸಿಕೊಳ್ಳುವಂತೆ ಮಾಡಿ, ಸಾಮಾಜಿಕ ಮತ್ತು ಆರ್ಥಿಕ ಮಟ್ಟವನ್ನು ಅಭಿವೃದ್ಧಿಗೊಳಿಸುವ ಸಲುವಾಗಿ ಆಯ್ದ ಹಳ್ಳಿಗಳಲ್ಲಿ 'ಅಮುಲ್' ಮಾದರಿಯಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘಗಳನ್ನು ಪ್ರಾರಂಭಿಸುವ ಕಾರ್ಯ ಇದರೊಂದಿಗೆ ಆರಂಭವಾಯಿತು. ೧.೪.೧೯೮೭ರಿಂದ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಿಗೆ ಮಾತ್ರ ಸೀಮಿತವಾಗಿ ಒಕ್ಕೂಟ ಕಾರ್ಯನಿರ್ವಹಿಸುತ್ತಿದೆ. ಹಾಲು ಉತ್ಪಾದಕರ ಸಹಕಾರ ಸಂಘಗಳ ಮೂಲ ಉದ್ದೇಶ ಗ್ರಾಮೀಣ ಪ್ರದೇಶಗಳಲ್ಲಿ ಹೈನು ಉದ್ಯಮಕ್ಕೆ ಸಹಾಯಕವಾಗುವ ಮೂಲಭೂತ ಸೌಲಭ್ಯಗಳನ್ನು ಸದಸ್ಯರಿಗೆ ಒದಗಿಸುವಲ್ಲಿ ನೆರವಾಗುವುದಲ್ಲದೆ, ಸದಸ್ಯರು ಉತ್ಪಾದಿಸಿದ ಹಾಲನ್ನು ಶೇಖರಿಸಲು ಮತ್ತು ಮಾರಾಟ ಮಾಡಲು ಸೂಕ್ತ ವ್ಯವಸ್ಥೆಯನ್ನು ಮಾಡುವುದಾಗಿದೆ.

ಗ್ರಾಮೀಣ ಪ್ರದೇಶದ ಉತ್ಪಾದಕರು ಪೂರೈಸುವ ಹಾಲಿಗೆ ನಿಯಮಿತವಾಗಿ ಯೋಗ್ಯ ದರ ನೀಡಿ ವರ್ಷ ಪೂರ್ತಿ ಮಾರುಕಟ್ಟೆ ಒದಗಿಸುವುದು, ಗ್ರಾಮೀಣ ಪ್ರದೇಶದಿಂದ ಸಂಗ್ರಹಿಸಿದ ಹಾಲನ್ನು ವೈಜ್ಞಾನಿಕ ರೀತಿಯಲ್ಲಿ ಸಂಸ್ಕರಿಸಿ ಶುದ್ಧ ಹಾಲನ್ನು ಪಾಲಿಥಿನ್ ಪ್ಯಾಕೆಟ್‌ಗಳಲ್ಲಿ ತುಂಬಿ ಬೆಳಿಗ್ಗೆ ಮತ್ತು ಸಂಜೆ ನಿಗದಿತ ಸಮಯಕ್ಕೆ ಸರಿಯಾಗಿ ಗ್ರಾಹಕರಿಗೆ ತಲುಪುವಂತೆ ವ್ಯವಸ್ಥೆ ಮಾಡುವುದು. ಉತ್ಪಾದಕರ ರಾಸುಗಳಿಗೆ ಪಶು ವೈದ್ಯಕೀಯ ಸೌಲಭ್ಯ ಒದಗಿಸುವುದು ಮತ್ತು ಸಹಕಾರ ಸಂಘಗಳ ಸಿಬ್ಬಂದಿಯ ಮೂಲಕ ರಾಸುಗಳಿಗೆ ಪ್ರಥಮ ಚಿಕಿತ್ಸೆಯ ಸೌಲಭ್ಯ ಒದಗಿಸುವುದು. ರಾಸುಗಳ ತಳಿ ಅಭಿವೃದ್ಧಿಗೊಳಿಸುವುದಕ್ಕಾಗಿ ಕೃತಕ ಗರ್ಭಧಾರಣಾ ಸೌಲಭ್ಯ ಕಲ್ಪಿಸುವುದು. ಸಂಘಗಳ ಸದಸ್ಯರ ರಾಸುಗಳಿಗೆ ಹಸಿರು ಮೇವು, ಮತ್ತು ಅಧಿಕ ಹಾಲಿನ ಉತ್ಪಾದನೆಗಾಗಿ ಸಮತೋಲನ ಪಶು ಆಹಾರವನ್ನು ಉತ್ಪಾದಕರಿಗೆ ಪೂರೈಸುವುದು. ಸಂಘಗಳ ಸಾಂಸ್ಥಿಕ ಬಲವರ್ಧನೆಗಾಗಿ ಸಹಕಾರ ಅಭಿವೃದ್ಧಿ ಕಾರ್ಯಕ್ರಮದಡಿ ಮಹಿಳಾ ಶಿಕ್ಷಣ ಶಿಬಿರ, ಸದಸ್ಯರ ಶಿಕ್ಷಣ ಶಿಬಿರಗಳನ್ನು ಏರ್ಪಡಿಸುವುದು ಮತ್ತು ಸಂಘಗಳ ಸಿಬ್ಬಂದಿ ಮತ್ತು ಸದಸ್ಯರುಗಳಿಗೆ ತರಬೇತಿ ನೀಡುವುದು ಮುಂತಾದವು, ಹಾಲು ಒಕ್ಕೂಟದ ಕಾರ್ಯೋದ್ದೇಶಗಳಾಗಿವೆ. ಒಕ್ಕೂಟವು ವಿವಿಧ ಕಾರ್ಯಚಟುವಟಿಕೆಗಳಲ್ಲಿ ಸಾಧಿಸಿರುವ ಪ್ರಗತಿಯನ್ನು ಮುಂದಿನ ಕೋಷ್ಟಕದಲ್ಲಿ ವಿವರಿಸಲಾಗಿದೆ.

**ಕೋಷ್ಟಕ೬.೧೪: ಚಾಮರಾಜನಗರ ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ವಿವರ (₹ ಲಕ್ಷಗಳಲ್ಲಿ)**

| ಕ್ರ ಸಂ | ವಿವರ | ೨೦೦೩-೦೪ | ೨೦೦೪-೦೫ | ೩೦೦೫-೦೬ | ೨೦೦೬-೦೭ | ೨೦೦೭-೦೮ |
|---|---|---|---|---|---|---|
| ೧ | ಒಟ್ಟು ಸಂಘಗಳು | ೨೯೧ | ೩೧೩ | ೩೨೯ | ೩೪೪ | ೩೪೮ |
| ೨ | ಷೇರು ಬಂಡವಾಳ | – | ೩೬೭.೭೦ | ೩೯೯.೯೪ | ೪೨೮.೧೭ | ೪೬೩೦೭ |
| ೩ | ವಹಿವಾಟು | – | ೯೬೬೭.೭೯ | ೧೦೨೬೮.೭೫ | ೧೧೨೦೯.೯೪ | ೧೩೯೧೪.೨೮ |
| ೪ | ಲಾಭ | – | ೧೧೩.೧೧ | ೧೦೧.೧೬ | ೧೪೬.೪೦ | ೪೪೧.೪೮ |
| ೫ | ಶೇಖರಣೆ ವಾರ್ಷಿಕ (ಲೀಟರ್‌ಗಳಲ್ಲಿ) | ೩೧೧೦೦೩೩೩ | ೩೫೪೩೬೨೬೬ | ೩೯೦೫೩೮೬೪ | ೩೮೪೫೩೧೬೨ | ೪೪೫೬೬೧೭೩ |
| | ದಿನವಹಿ ಶೇಖರಣೆ | ೮೫೨೦೬ | ೯೭೦೯೪ | ೧೦೬೯೯೭ | ೧೦೫೩೫೧ | ೧೨೧೭೬೬ |
| ೬ | ಮಾರಾಟ (ಲೀಟರ್‌ಗಳಲ್ಲಿ) | | | | | |
| | ವಾರ್ಷಿಕ ಮಾರಾಟ | ೩೦೩೨೧೧೬ | ೩೧೩೩೩೮೮ | ೩೨೮೪೩೪೩ | ೩೫೮೩೧೭೦ | ೩೮೬೨೭೬೪ |
| | ದಿನವಹಿ ಮಾರಾಟ | ೮೩೦೭ | ೮೫೮೫ | ೮೯೯೮ | ೯೮೧೭ | ೧೦೫೫೪ |
| ೯ | ಒಟ್ಟು ಸದಸ್ಯರು | | ೭೮೧೭೧ | ೮೦೮೪೨ | ೮೨೮೭೮ | ೮೫೧೩೮ |
| ೧೦ | ಮಹಿಳೆಯರು | | ೨೦೪೧೯ | ೨೧೮೫೧ | ೨೨೪೪೬ | ೨೩೪೧೩ |
| ೧೧ | ಪರಿಶಿಷ್ಟ ಜಾತಿ | | ೧೧೨೧೫ | ೧೧೭೫೪ | ೧೨೧೪೫ | ೧೨೩೨೭ |

| | | | | | | |
|---|---|---|---|---|---|---|
| ೧೨ | ಪರಿಶಿಷ್ಟ ಪಂಗಡ | | ೧೭೬೫ | ೧೭೬೩ | ೧೭೭೬ | ೧೯೦೪ |
| ೧೩ | ಸಣ್ಣ ರೈತರು | | ೩೨೧೬೬ | ೩೩೪೧೪ | ೩೪೨೦೦ | ೩೫೩೩೩ |
| ೧೪ | ಅತಿ ಸಣ್ಣರೈತರು | | ೧೮೯೮ | ೧೯೬೬೫ | ೨೦೧೨೮ | ೨೦೭೮೬ |
| ೧೫ | ಭೂ ರಹಿತ ಕಾರ್ಮಿಕರು | | ೧೫೩೮೪ | ೧೫೮೬೧ | ೧೬೨೧೭ | ೧೬೭೫೨ |
| ೧೬ | ಇತರರು | | ೧೧೬೨೩ | ೧೧೯೦೨ | ೧೨೩೨೩ | ೧೨೨೬೭ |

# ವ್ಯಾಪಾರ ಮತ್ತು ವಾಣಿಜ್ಯ

**೧ ವ್ಯಾಪಾರ ಮತ್ತು ವಾಣಿಜ್ಯದ ಬೆಳವಣಿಗೆ:** ಕರ್ನಾಟಕ ರಾಜ್ಯದ ಇತರ ಜಿಲ್ಲೆಗಳಂತೆ ಚಾಮರಾಜನಗರ ಜಿಲ್ಲೆಯು ಮೈಸೂರು ಸಂಸ್ಥಾನದೊಂದಿಗೆ ವ್ಯಾಪಾರ ಮತ್ತು ವಾಣಿಜ್ಯ ವ್ಯವಹಾರಗಳು ಪ್ರಾಚೀನ ಕಾಲದಿಂದ ಇಂದಿನವರೆಗೆ ನಡೆದು ಬಂದ ಪ್ರಗತಿಯನ್ನು ತಿಳಿದುಕೊಳ್ಳುವುದು ಮುಖ್ಯವಾಗಿದೆ.

ಪ್ರಾಚೀನ ಕಾಲದಲ್ಲಿ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳ ವ್ಯಾಪಾರ ಮತ್ತು ವಾಣಿಜ್ಯಗಳು ತಮಿಳುನಾಡು ಮತ್ತು ಕೇರಳ ರಾಜ್ಯಗಳೊಂದಿಗೆ ಸಂಪರ್ಕ ಬೆಳೆಸಿಕೊಂಡಿರುವುದರ ಜೊತೆಗೆ ಅರಬ್ಬಿ ಸಮುದ್ರದ ಬಂದರು ಪ್ರದೇಶಗಳಾದ ತೆಲಚೇರಿ ಮತ್ತು ಮಂಗಳೂರು ಮೂಲಕ ಕೃಷಿ ಅರಣ್ಯ ಉತ್ಪನ್ನಗಳ ಜೊತೆಗೆ ಸಾಂಬಾರ ಪದಾರ್ಥಗಳನ್ನು ವಿದೇಶಗಳಿಗೆ ರಫ್ತು ವ್ಯಾಪಾರ ಸಂಪರ್ಕ ಹೊಂದಿದ ಬಗ್ಗೆ ಕ್ರಿ.ಪೂ. ೧೩೦ರಲ್ಲಿ ಟಾಲಮಿ ಎಂಬ ಪ್ರಾಚೀನ ಇತಿಹಾಸಕಾರನ ದಾಖಲೆಗಳ ಉಲ್ಲೇಖಗಳಿಂದ ತಿಳಿದುಬಂದಿದೆ.

ಚಾಮರಾಜನಗರ ಜಿಲ್ಲೆಯ ಐತಿಹಾಸಿಕ ಸ್ಥಳಗಳಾದ ಹಳೇ ಆಲೂರು, ತೆರಕಣಾಂಬಿಕೆ, ಬಿಳಿಗಿರಿರಂಗನಬೆಟ್ಟ, ಕೊಳ್ಳೇಗಾಲ, ಗುಂಡ್ಲುಪೇಟೆ, ಯಳಂದೂರು, ಮಾಂಬಳ್ಳಿ, ಹೆಗ್ಗಡದೇವನಕೋಟೆ, ಮಹದೇಶ್ವರಬೆಟ್ಟ, ಹನೂರು, ಮಲಳಿ, ಮಿರ್ಲೆ, ಕಳಲೆ, ಕಾಮಗೆರೆ, ಬಂಡಹಳ್ಳಿ, ಸಂತೆಮರಹಳ್ಳಿ, ಮುಡಿಗೊಂಡ, ಬಂಡೀಪುರ, ಮೊದಲಾದ ಸ್ಥಳಗಳಿಂದ ಬೆಲ್ಲ, ರೇಷ್ಮೆ, ವೀಳೇದೆಲೆ, ಹೊಗೆಸೊಪ್ಪು, ಜೇನುತುಪ್ಪ, ಅರಗು ಗೋಂದು, ವನ್ಯಮೃಗಗಳ ಕೊಂಬು ಮತ್ತು ಚರ್ಮ ಶ್ರೀಗಂಧದ ಸುಗಂಧಭರಿತ ವಸ್ತುಗಳು, ಗಿಡಮೂಲಿಕೆ ಔಷಧಿಗಳು, ಸಾಂಬಾರ ದಿನಸಿಗಳೇ ಮೊದಲಾದ ವಸ್ತುಗಳು ದೇಶವಿದೇಶಗಳಲ್ಲಿ ಮಾರಾಟವಾಗುತ್ತಿದ್ದ ಬಗ್ಗೆ ಐತಿಹಾಸಿಕ ದಾಖಲೆಗಳಿವೆ.

೧೩ ನೆಯ ಶತಮಾನದಲ್ಲಿ ಜಿಲ್ಲೆಯ ಪ್ರಮುಖ ಪಟ್ಟಣ ಮತ್ತು ಹೋಬಳಿಗಳಲ್ಲಿ ನಡೆಯುತ್ತಿದ್ದ ವಾರದ ಸಂತೆಯಲ್ಲಿ ರೈತರು, ಕಾರ್ಮಿಕರು, ಗಿರಿಜನರು ಮತ್ತಿತರ ವರ್ಗದ ಜನರು ವ್ಯಾಪಾರಿಗಳೊಂದಿಗೆ ವಸ್ತು ವಿನಿಮಯ ಪದ್ಧತಿಯಲ್ಲಿ ಪರಸ್ಪರ ಕೊಳ್ಳುವ ಮಾರುವ ಮೂಲಕ ತಮ್ಮ ಬಯಕೆಗಳನ್ನು ನೆರವೇರಿಸಿಕೊಳ್ಳುತ್ತಿದ್ದರು. ಆಗಿನ ಕಾಲದಲ್ಲಿ ಸಂತೆಮರಹಳ್ಳಿ ಯಳಂದೂರು, ತೆರಕಣಾಂಬಿ, ಕೊಳ್ಳೇಗಾಲ, ಚಾಮರಾಜನಗರ, ಹನೂರು, ಗುಂಡ್ಲುಪೇಟೆ, ಮೊದಲಾದ ಸ್ಥಳಗಳಲ್ಲಿ ವಾರದ ಸಂತೆಯ ಜೊತೆಗೆ ದನಗಳ ಜಾತ್ರೆಗಳಲ್ಲಿ (ಪರಿಷೆಗಳು) ಸಹ ಜರುಗುತ್ತಿದ್ದವು. ಕಣ, ಸುಗ್ಗಿಯ ನಂತರ ಸಂಕ್ರಾಂತಿ, ಶಿವರಾತ್ರಿ, ಯುಗಾದಿ ಮತ್ತು ಬಸವ ಜಯಂತಿ ಹಬ್ಬಗಳ ನಡುವೆ ಕೈಗೊಳ್ಳುವ ವಾರದ ಸಂತೆ, ದನಗಳ ಜಾತ್ರೆಗಳಲ್ಲದೆ ತೇರು, ರಥೋತ್ಸವ, ಗ್ರಾಮದೇವತೆಗಳ ಜಾತ್ರೆ, ಕೆಂಡ ಉತ್ಸವಗಳು ರೈತ ಸಮುದಾಯಕ್ಕೆ ಸಂಭ್ರಮ ಸಂತಸ ನೀಡುತ್ತಿದ್ದವು. ಇಂತಹ ಸಂದರ್ಭದಲ್ಲಿಯೇ ವ್ಯಾಪಾರ ವಹಿವಾಟುಗಳು ಅಧಿಕ ಸಂಖ್ಯೆಯಲ್ಲಿ ಜರುಗುತ್ತಿದ್ದವು. ಪ್ರತಿಯೊಂದು ಸಂತೆ ಮೈದಾನದ ಸುಂಕದ ಕಟ್ಟೆಯಲ್ಲಿ ಸುಂಕದ ಅಧಿಕಾರಿಗಳು ಸುಂಕವನ್ನು ವಸೂಲಿ ಮಾಡಿ ಮಾರುಕಟ್ಟೆಗಳಲ್ಲಿ ಅನುಕೂಲವಾಗುವಂತೆ

ರಸ್ತೆ ಹಾಗೂ ವ್ಯಾಪಾರ ಮಳಿಗೆಗಳನ್ನು ನಿರ್ಮಿಸುತ್ತಿದ್ದರು. ಗ್ರಾಮದ ಮುಖ್ಯಸ್ಥರು ಜಾತ್ರೆ ಮತ್ತು ಸಂತೆ ಮೈದಾನದಲ್ಲಿ ದೇವಸ್ಥಾನ, ಗುಡಿಗಳನ್ನು ಕಟ್ಟಿಸಿ, ದೇವರನ್ನು ಪ್ರತಿಷ್ಠಾಪಿಸಿ ಪೂಜೆಯ ಕಾರ್ಯವನ್ನು ದಿನಂ ಪ್ರತಿ ನೆರವೇರಿಸುತ್ತಿದ್ದರು. ಪ್ರಯಾಣಿಕರ ಅನುಕೂಲಕ್ಕಾಗಿ ಸಂತೆ ಸ್ಥಳಗಳಲ್ಲಿ ಕಲ್ಯಾಣಿ ಕಟ್ಟಿಸಿ ನೀರಿನ ಸೌಕರ್ಯವನ್ನುಂಟು ಮಾಡಿದ್ದರು. ದನಕರುಗಳಿಗೆ ನೀರು ಕುಡಿಯಲು ಕಲ್ಲಿನ ಬಾನಿಗಳನ್ನು ಸಹ ಕಟ್ಟಿಸಿದ್ದರು. ಪ್ರಯಾಣಿಕರಿಗೆ ಕುಡಿಯಲು ಅರವಂಟಿಗೆಯನ್ನೂ ಸಹ ಏರ್ಪಡಿಸಿದ್ದರು. ವಿಶ್ರಾಂತಿಗೆ ಚಾವಡಿಗಳು, ತಂಪಾದ ಸಾಲುಮರಗಳು ಮತ್ತು ಗುಂಡು ತೋಪುಗಳನ್ನು ಸಹ ಬೆಳೆಸಿದ್ದರಿಂದ ಇವುಗಳೆಲ್ಲವು ವ್ಯಾಪಾರ ಅಭಿವೃದ್ಧಿಗೆ ಉತ್ತೇಜನ ನೀಡಿದವು. ಚಾಮರಾಜನಗರದ ವಿಳ್ಳೆದೆಲೆ, ಬೆಲ್ಲ, ದವಸಧಾನ್ಯ, ಹೊಗೆಸೊಪ್ಪು ಮೊದಲಾದವುಗಳು ವ್ಯಾಪಾರದಲ್ಲಿ ಹೆಸರುವಾಸಿ ಪಡೆದಿರುವುದರ ಬಗ್ಗೆ ೧೩ನೇ ಶತಮಾನದ ವೀರಶೈವ ಸಾಹಿತ್ಯದಿಂದ ತಿಳಿದು ಬಂದಿದೆ.

೧೨೧೮ ರಲ್ಲಿ ಕಲ್ಲಂಬಾಳು, ಸುತ್ತೂರು, ಉಮ್ಮತ್ತೂರು, ಚಾಮರಾಜನಗರ, ಕೊಳ್ಳೆಗಾಲ, ಗುಂಡ್ಲುಪೇಟೆ, ಯಳಂದೂರು ಮೊದಲಾದ ಪಟ್ಟಣ ಮತ್ತು ಮುಖ್ಯ ಗ್ರಾಮಗಳಲ್ಲಿ ನಖರ, (ನಗರ್ತಕರು) ಪಟ್ಟಣ ಶೆಟ್ಟಿ, ವೈಶ್ಯರು, ಬಣಜಿಗರು ಮೊದಲಾದ ಹೆಸರಿನಲ್ಲಿ ಕರೆಯಲ್ಪಟ್ಟ ವರ್ತಕರು ರೇಷ್ಮೆ, ಕೈಮಗ್ಗದ ಬಟ್ಟೆಗಳು, ಬಣ್ಣದ ಚಾಪೆಗಳು, ವಿಳ್ಳೆದೆಲೆ, ಅಡಿಕೆ, ತೆಂಗಿನಕಾಯಿ, ಬೆಲ್ಲ, ಗಂಧದ ಬಿಲ್ಲೆ, ಅರಗು, ಮೇಣ, ಜೇನುತುಪ್ಪ, ವನ್ಯಮೃಗಗಳ ಚರ್ಮ, ಕೊಂಬು, ದಂತ, ಹುಣಸೇಹಣ್ಣು, ಹುಣಸೇಬೀಜ, ಧನಿಯಾ ರಾಗಿ, ಹುರಳಿ, ವಿವಿಧ ದಿನಸಿ ಪದಾರ್ಥ, ಹಣ್ಣು ತರಕಾರಿ, ಶುಂಠಿ, ಏಲಕ್ಕಿ, ಲವಂಗ, ಜಾಯಿಕಾಯಿ ಪತ್ರೆ, ದಾಲ್ಚಿನ್ನಿ, ಗೇರುಬೀಜ, ಹೊಗೆಸೊಪ್ಪು, ಸುಗಂಧ ದ್ರವ್ಯ, ಕಬ್ಬು, ಗೆಣಸು, ಬಿದಿರಿನ ವಸ್ತು, ಬೆಂಡು, ಆಟದ ಆಟಿಕೆ, ದ್ವಿದಳ ಧಾನ್ಯಗಳು, ದ್ರಾಕ್ಷಿ, ಗೋಡಂಬಿ, ಖರ್ಜೂರ, ಹಲ್ಲುಪುಡಿ, ಸೋಪು, ಸೀಗೇಪುಡಿ, ಮರಮುಟ್ಟು, ಬೆಣ್ಣೆ, ತುಪ್ಪ, ಕ್ಷೀರ ಪದಾರ್ಥ, ತರಕಾರಿ, ಸಿಹಿಮಿಠಾಯಿ, ಮೊದಲಾದ ವಸ್ತುಗಳ ಮಾರಾಟದಲ್ಲಿ ಪ್ರಸಿದ್ಧಿ ಪಡೆದಿದ್ದರು. ಮೈಸೂರು ಅರಸರು, ಹೈದರಾಲಿ, ಟಿಪ್ಪುಸುಲ್ತಾನ್ ಆಳ್ವಿಕೆಯಲ್ಲಿ ಆಗಿನ ಮೈಸೂರು ಸಂಸ್ಥಾನದ ದಿವಾನರು ಮತ್ತು ಬ್ರಿಟೀಷರು ರಸ್ತೆ ಮಾರ್ಗಗಳನ್ನು ನಿರ್ಮಿಸಿ ವ್ಯಾಪಾರಕ್ಕೆ ಸುಗಮವಾದ ದಾರಿ ಮಾಡಿಕೊಟ್ಟ ಅಂಶಗಳು ಶಾಸನಗಳಿಂದ ವೇದ್ಯವಾಗುತ್ತದೆ.

೧೮೬೦ರಲ್ಲಿ ಕೊಳ್ಳೆಗಾಲವನ್ನು ಒಂದು ಮುಖ್ಯ ವ್ಯಾಪಾರ ಕೇಂದ್ರವಾಗಿ ಅಭಿವೃದ್ಧಿಪಡಿಸುವ ಗುರಿಯಿಂದ ಮೈಸೂರು ಚಾಮರಾಜನಗರ ಮತ್ತು ಕೊಳ್ಳೆಗಾಲಗಳ ಮುಖ್ಯರಸ್ತೆಗಳನ್ನು ಆಧುನಿಕ ರೀತಿಯಲ್ಲಿ ಅಭಿವೃದ್ಧಿ ಪಡಿಸಿ ಕೊಳ್ಳೇಗಾಲದಿಂದ ಚಾಮರಾಜನಗರ ಮತ್ತು ಸತ್ಯಮಂಗಲ ರಾಜ್ಯದ ರಸ್ತೆ ಮಾರ್ಗವನ್ನು ವಿಶಾಲವಾಗಿ ಅಭಿವೃದ್ಧಿ ಪಡಿಸಿದ್ದರಿಂದ ಕೊಯಮತ್ತೂರು, ಮಧುರೈ ಮತ್ತು ಮದ್ರಾಸ್ ಪ್ರಾಂತಗಳೊಂದಿಗೆ ನೇರ ವ್ಯಾಪಾರ ಸಂಪರ್ಕ ಹೊಂದಿದ್ದ ಕೊಳ್ಳೇಗಾಲ ಪ್ರಧಾನ ವ್ಯಾಪಾರ ಕೇಂದ್ರವಾಗಿ ಅಭಿವೃದ್ಧಿ ಹೊಂದಿತು.

೧೮೬೪ರಲ್ಲಿ ಬೆಂಗಳೂರು ದಂಡುಪ್ರದೇಶದ ಮೂಲಕ ಮದ್ರಾಸ್ ರಾಜಧಾನಿಗೆ ರೈಲ್ವೆಮಾರ್ಗ ನಿರ್ಮಾಣದಿಂದ ಮತ್ತು ೧೮೮೨ರಲ್ಲಿ ಬೆಂಗಳೂರು–ಮೈಸೂರು ರೈಲ್ವೆ ನಿರ್ಮಾಣದಿಂದ ಮೈಸೂರು ಕೊಳ್ಳೆಗಾಲ ಮತ್ತು ಚಾಮರಾಜನಗರ ಪ್ರದೇಶಗಳಲ್ಲಿ ವ್ಯಾಪಾರದ ವಿಸ್ತರಣೆ ಬೆಂಗಳೂರು ಮೂಲಕ ಮದ್ರಾಸಿಗೆ ನೇರ ಸಂಪರ್ಕ ಏರ್ಪಟ್ಟಿತು. ೧೮೮೯ರಲ್ಲಿ ಬೆಂಗಳೂರಿನಿಂದ ಹರಿಹರದ ಮೂಲಕ ಬಾಂಬೆ ಮಹಾನಗರಕ್ಕೆ ರೈಲು ಮಾರ್ಗದ ನಿರ್ಮಾಣದಿಂದ ಮೈಸೂರು ಪ್ರಾಂತದ ವ್ಯಾಪಾರದ ಅಭಿವೃದ್ಧಿಗೆ ಇನ್ನಷ್ಟು ಉತ್ತೇಜನ ದೊರಕಿತು. ಇದೇ ಸಂದರ್ಭದಲ್ಲಿ ಬ್ರಿಟೀಷರು ಭಾರತದಲ್ಲಿ ಜಾರಿಗೆ ತಂದ ನಾಣ್ಯ ಪದ್ಧತಿ ಮತ್ತು ಅದರ ಚಲಾವಣೆಯಿಂದ ಚಾಮರಾಜನಗರ ಮತ್ತು ಮೈಸೂರು ಸಂಸ್ಥಾನದ ವ್ಯಾಪಾರ ಅಭಿವೃದ್ಧಿ ಹೊಂದಲು ಅವಕಾಶವಾಯಿತು.

೧೮೯೨–೯೩ರಲ್ಲಿ ಮೈಸೂರು ಸರ್ಕಾರ ಅಮೇರಿಕಾ ಸಂಯುಕ್ತ ಸಂಸ್ಥಾನದ ಚಿಕಾಗೋದಲ್ಲಿ ವಿಶ್ವ ವ್ಯಾಪಾರ ಪ್ರದರ್ಶನದಲ್ಲಿ ಭಾಗವಹಿಸಿದ್ದು, ಮೈಸೂರಿನ ರೇಷ್ಮೆ, ಜೇನುತುಪ್ಪ, ಶ್ರೀಗಂಧದ ಬಿಲ್ಲೆಗಳು, ಕಿರು ಅರಣ್ಯ ಉತ್ಪನ್ನಗಳು, ಸಾಂಬಾರ ದಿನಸಿ ಪದಾರ್ಥಗಳು, ಮೊದಲಾದ ವಸ್ತುಗಳಿಗೆ ಹೆಚ್ಚಿನ ಬೇಡಿಕೆಯುಂಟಾಯಿತು. ೧೯೦೮ರಲ್ಲಿ ಫ್ರಾನ್ಸ್, ಬ್ರಿಟನ್, ಇಟಲಿ, ಜರ್ಮನಿ ದೇಶಗಳೊಂದಿಗೆ ವ್ಯಾಪಾರ ಪ್ರದರ್ಶನಗಳಲ್ಲಿ ನಮ್ಮ ನಾಡಿನ ಸುಪ್ರಸಿದ್ಧ ವಸ್ತುಗಳಿಗೆ ಜಗತ್ತಿನಾದ್ಯಂತ ಇದ್ದ ಬೇಡಿಕೆ ಇನ್ನಷ್ಟು ಹೆಚ್ಚಿತು. ೧೮೮೮ರಿಂದ ಪ್ರಾರಂಭವಾದ ಮೈಸೂರು ದಸರಾ ವಸ್ತು ಪ್ರದರ್ಶನವು ವಿಶ್ವದ ಎಲ್ಲ ರಾಷ್ಟ್ರಗಳ ಪ್ರವಾಸಿಗಳ ಗಮನವನ್ನು ಸೆಳೆದಿದ್ದರಿಂದ ಚಾಮರಾಜನಗರ, ಕೊಳ್ಳೇಗಾಲ, ಗುಂಡ್ಲುಪೇಟೆ, ಯಳಂದೂರು, ಬಿಳಿಗಿರಿರಂಗನಬೆಟ್ಟ, ಮಾಂಬಳ್ಳಿ, ಸಂತೆಮರಹಳ್ಳಿ, ಮೊದಲಾದ ಸ್ಥಳಗಳಲ್ಲಿ ತಯಾರಿಸಿದ ವಸ್ತುಗಳು, ಪ್ರಸಿದ್ಧ ರೇಷ್ಮೆ ವಸ್ತ್ರಗಳು, ಗಂಧದ ಬಿಲ್ಲೆ, ಬೆಲ್ಲ, ವಿಳೇದೆಲೆ, ಹಾಗೂ ಅರಣ್ಯ ಉತ್ಪನ್ನಗಳಿಗೆ ಜಪಾನ್ ಮತ್ತು ಪೂರ್ವ ಏಷ್ಯಾ ರಾಷ್ಟ್ರಗಳಲ್ಲಿ ಗಮನಾರ್ಹವಾದ ಬೇಡಿಕೆಯುಂಟಾಯಿತು. ಇದರಿಂದ ರಫ್ತು ವ್ಯಾಪಾರಕ್ಕೆ ಹೆಚ್ಚಿನ ಉತ್ತೇಜನ ದೊರೆಯಿತು. ೧೯ನೆಯ ಶತಮಾನದಲ್ಲಿ ಮೈಸೂರು ಜಿಲ್ಲೆ ಮತ್ತು ಚಾಮರಾಜನಗರ ಜಿಲ್ಲೆಯ ನಾಲ್ಕು ತಾಲೂಕುಗಳಲ್ಲಿ ತಯಾರಿಸಿದ ಸಿದ್ಧ ವಸ್ತುಗಳ ರಫ್ತು ವ್ಯಾಪಾರದಿಂದ ಮೈಸೂರು ಸಂಸ್ಥಾನ ವಿದೇಶಿ ವ್ಯಾಪಾರದಲ್ಲಿ ಹೆಚ್ಚಿನ ಜನಪ್ರಿಯತೆ ಗಳಿಸಿತು.

## ೧೯೩೦ರ ತರುವಾಯ ಚಾಮರಾಜನಗರ ಜಿಲ್ಲೆಯ ವಿದೇಶಿ ವ್ಯಾಪಾರ

**ರಫ್ತು ವ್ಯಾಪಾರ:** ಬೆಲ್ಲ, ಕಚ್ಚಾ ರೇಷ್ಮೆ, ಕ್ರೇಪ್, ಡಿ ಶೈಲಿಯ ನವಿರಾದ ರೇಷ್ಮೆ ಜವಳಿಗಳು, ಅರಣ್ಯ ಉತ್ಪನ್ನಗಳು, ಜೇನುತುಪ್ಪ, ಸಾಂಪ್ರದಾಯಕ ಕೃಷಿ ಮತ್ತು ಇತರ ತಯಾರಿಕಾ ವಸ್ತುಗಳು, ಆಯುರ್ವೇದ ಔಷಧಿಗಳು, ಶ್ರೀಗಂಧದ ಬಿಲ್ಲೆ, ಸುಗಂಧಭರಿತ ವಸ್ತುಗಳು, ಬೀಡಿ, ತಂಬಾಕು ಕಂಬಳಿ, ವಿಳೇದೆಲೆ, ಮೆಣಸಿನಕಾಯಿ, ಸಾಂಬಾರ ಪದಾರ್ಥ ಮೊದಲಾದವುಗಳು ವಿದೇಶಗಳಿಗೆ ರಫ್ತಾಗುತ್ತಿದ್ದವು.

**ಆಮದು ವ್ಯಾಪಾರ** ಆಂತರಿಕವಾಗಿ ಅಗತ್ಯವಾಗಿ ಬೇಕಾದ ತಯಾರಿಕಾ ವಸ್ತುಗಳು, ಮತ್ತು ಕೆಲವು ಕಚ್ಚಾ ಸರಕುಗಳನ್ನು ಆಮದು ಮಾಡಿಕೊಳ್ಳಲಾಗಿದ್ದಿತು. ಹೀಗೆ ವಿದೇಶಿ ವ್ಯಾಪಾರದಿಂದ ಚಾಮರಾಜನಗರ ಜಿಲ್ಲೆಯಲ್ಲಿ ಕ್ರಮೇಣ ವಿವಿಧ ವಾಣಿಜ್ಯ ಸಂಸ್ಥೆಗಳು ಸ್ಥಾಪನೆಗೊಂಡವು.

**ವಾಣಿಜ್ಯ ಸಂಸ್ಥೆಗಳು:** ಆಧುನಿಕ ವ್ಯಾಪಾರ ಮತ್ತು ವಾಣಿಜ್ಯ ಕ್ಷೇತ್ರಗಳಲ್ಲಿ ವರ್ತಕರು, ಸಗಟು ಮತ್ತು ಚಿಲ್ಲರೆ ವ್ಯಾಪಾರಿಗಳು ವಣಿಕ ವೃಂದದವರು ಮತ್ತು ವಾಣಿಜ್ಯ ಉದ್ಯಮಿಗಳು ಕೊಳ್ಳೇಗಾಲ, ಚಾಮರಾಜನಗರ, ಗುಂಡ್ಲುಪೇಟೆ, ಮೊದಲಾದ ಪ್ರಮುಖ ಪಟ್ಟಣಗಳಲ್ಲಿ ಅನೇಕ ವ್ಯಾಪಾರಿ ಸಂಘ ಸಂಸ್ಥೆಗಳನ್ನು ರಚಿಸಿಕೊಂಡು ಪರಸ್ಪರ ಸಹಕಾರದಿಂದ ವ್ಯಾಪಾರಿ ಮನೋಧರ್ಮದಂತೆ ನಡೆದುಕೊಳ್ಳಲು ವಾಣಿಜ್ಯ ಮಂಡಳಿಗಳನ್ನು ಸ್ಥಾಪಿಸಿಕೊಂಡಿದ್ದಾರೆ. ಆಹಾರ ಧಾನ್ಯಗಳ ದಲ್ಲಾಳಿಗಳ ಸಂಘ, ಮಂಡಿ ವರ್ತಕರ ಸಂಘ, ವ್ಯಾಪಾರ ಉದ್ಯಮಿಗಳ ಸಂಸ್ಥೆ, ತೋಟಗಾರಿಕೆ ಉತ್ಪನ್ನಗಳ ಮಾರಾಟ ಸಂಘ, ಸಗಟು ವ್ಯಾಪಾರಿಗಳ ಸಂಘ, ಚಿಲ್ಲರೆ ವ್ಯಾಪಾರಿಗಳ ಸಂಘ, ಹಾಲು ಉತ್ಪಾದಕರು ಕುರಿ, ಕೋಳಿ ಮೊದಲಾದ ಮಾರಾಟ ಸಂಘಗಳು ಸ್ಥಾಪನೆಗೊಂಡಿವೆ. ೧೯೧೬ರಲ್ಲಿ ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಬೆಂಗಳೂರಿನಲ್ಲಿ ಸ್ಥಾಪನೆಯಾದ ನಂತರ ೧೯೩೮ರಲ್ಲಿ ಮೈಸೂರು ವರ್ತಕರ ಸಂಘ ಸ್ಥಾಪನೆಗೊಂಡು ಕೊಳ್ಳೇಗಾಲ ಮತ್ತು ಚಾಮರಾಜನಗರಗಳ ವ್ಯಾಪಾರ ವಾಣಿಜ್ಯೋದ್ಯಮಿಗಳೊಂದಿಗೆ ನೇರ ಸಂಪರ್ಕ ಹೊಂದಿದ್ದಿತು. ಈ ಸಂಘವು ಚಾಮರಾಜನಗರ ಜಿಲ್ಲೆಯ ಇತರ ತಾಲೂಕುಗಳ ವರ್ತಕರೊಂದಿಗೆ ಸಹವರ್ತಿಗಳಾಗಿ ಕಾರ್ಯನಿರ್ವಹಿಸುವುದರ ಜೊತೆಗೆ ಸರ್ಕಾರದೊಂದಿಗೆ ತಮ್ಮ ಕುಂದುಕೊರತೆಗಳನ್ನು ನಿವಾರಿಸಿಕೊಳ್ಳಲು ಆಕ್ಟ್ರಾಯ್, ಸುಂಕ, ಮಾರಾಟ, ತೆರಿಗೆಗಳಲ್ಲಿ ರಿಯಾಯಿತಿಯನ್ನು ಪಡೆಯುವುದು. ವ್ಯಾಪಾರ, ವ್ಯವಹಾರಗಳು ಲಾಭದಾಯಕದ ಜೊತೆಗೆ ಗುಣಾತ್ಮಕವಾಗಿದ್ದು

ರೈತ ಉತ್ಪಾದಕರೊಂದಿಗೆ ಮತ್ತು ಗ್ರಾಹಕರೊಂದಿಗೆ ವಿಶ್ವಾಸ ಬೆಳೆಸಿಕೊಂಡು ಮುಂದುವರಿಯುವ ಗುರಿಯನ್ನು ಹೊಂದಿರುತ್ತವೆ.

### ಸಂತೆಗಳು

ಭಾರತದ ಗ್ರಾಮೀಣ ಆರ್ಥಿಕತೆಯಲ್ಲಿ ವಾರದ ಸಂತೆಗಳು ಪ್ರಾಚೀನ ಕಾಲದಿಂದಲೂ ಜನರು ಅಪೇಕ್ಷಿಸಿದ ವಸ್ತುಗಳನ್ನು ಕೊಂಡುಕೊಳ್ಳುವ ಮತ್ತು ಅವುಗಳನ್ನು ಮಾರಾಟ ಮಾಡುವ ವ್ಯಾಪಾರ ವಹಿವಾಟುಗಳನ್ನು ನಾವು ಈಗಲೂ ಕಾಣುತ್ತಿದ್ದೇವೆ. ಹಿಂದಿನ ಕಾಲದಲ್ಲಿ ಪ್ರತಿ ಗ್ರಾಮ, ಗುಡ್ಡಗಾಡು ಮತ್ತು ಪಟ್ಟಣದ ನಿವಾಸಿಗಳು ಪ್ರತಿ ವಾರದ ಸಂತೆಯಲ್ಲಿ ಪರಸ್ಪರ ವಸ್ತು ವಿನಿಮಯ ಪದ್ಧತಿ ಅಥವಾ ಸಾಟಿ ವ್ಯಾಪಾರದಿಂದ ವಸ್ತುಗಳನ್ನು ಕೊಳ್ಳುತ್ತಿದ್ದರು. ಆಗಿನ ಕಾಲದಲ್ಲಿ ಪ್ರಾಚೀನ ಪದ್ಧತಿಯಲ್ಲಿ ತೂಕ ಮತ್ತು ಅಳತೆಗಳ ಮೂಲಕ ವ್ಯಾಪಾರಗಳು ನಡೆಯುತ್ತಿದ್ದವು. ರೂಪಾಯಿ ಮತ್ತು ನಾಣ್ಯ ಪದ್ಧತಿ ಜಾರಿಗೆ ಬಂದನಂತರ ಮಾರಾಟವಾಗುವ ವಸ್ತುಗಳ ಬೆಲೆ ನಿರ್ಧಾರದಲ್ಲಿ ಪರಸ್ಪರ ಕೊಳ್ಳುವ ಮತ್ತು ಮಾರುವ ಹಣದ ಮಾರುಕಟ್ಟೆ ಮತ್ತು ಬ್ಯಾಂಕುಗಳು ವ್ಯಾಪಾರ ವಾಣಿಜ್ಯ ಮೊದಲಾದವು ಜನರ ಹಣಕಾಸಿನ ವ್ಯವಹಾರಗಳಲ್ಲಿ ಹಾಸುಹೊಕ್ಕಾಗಿ ಬೆಳೆದಿವೆ. ಮೆಟ್ರಿಕ್ ಪದ್ಧತಿಯ ತೂಕ ಮತ್ತು ಅಳತೆ ಜಾರಿಯಲ್ಲಿದ್ದರೂ ವಾರದ ಸಂತೆಯಲ್ಲಿ ಈಗಲೂ ಹಳೆಯ ಕಾಲದ ಸೇರುಗಳು ವಿವಿಧ ಪ್ರಕಾರದ ಅಳತೆಗಳು ಮತ್ತು ತೂಕಗಳನ್ನು ಬಳಸುತ್ತಿರುವುದನ್ನು ಕಾಣುತ್ತೇವೆ. ನಗರಸಭೆ, ಪುರಸಭೆ ಮತ್ತು ಗ್ರಾಮ ಪಂಚಾಯಿತಿಗೆ ಒಳಪಡುವ ಪ್ರಮುಖ ಸ್ಥಳಗಳ ವಾರದ ಸಂತೆಯ ಟೋಲ್‌ಗೇಟ್‌ಗಳಲ್ಲಿ ಸಂತೆಯೊಳಗೆ ಮಾರಾಟಕ್ಕೆ ಪ್ರವೇಶಿಸುವ ವಸ್ತುಗಳ ಮೇಲೆ ಮತ್ತು ಮಾರಾಟವಾದ ವಸ್ತುಗಳು ಸುಂಕದ ಕಟ್ಟೆಯಿಂದ ಹೊರಗೆ ಹೋಗುವಾಗ ಅವುಗಳ ತೂಕ ಮತ್ತು ಅಳತೆ ಮತ್ತು ಮೌಲ್ಯಗಳ ಆಧಾರದ ಮೇಲೆ ವಿವಿಧ ರೀತಿಯ ಸುಂಕಗಳನ್ನು (ಆಕ್ಟ್ರಾಯ್) ಮಾರಾಟ ತೆರಿಗೆಯನ್ನು ವಸೂಲಿ ಮಾಡಿ ಮಾರಾಟ ತೆರಿಗೆಗಳ ಸಂಗ್ರಹದಿಂದ ಆದಾಯವನ್ನು ಹೆಚ್ಚಿಸಿಕೊಂಡು ಅಭಿವೃದ್ಧಿ ಹೊಂದುವುದನ್ನು ಸಹ ನಾವು ಕಾಣುತ್ತಿದ್ದೇವೆ.

ವಾರದ ಸಂತೆ ಮತ್ತು ದನಗಳ ಜಾತ್ರೆಯಲ್ಲಿ ರೈತರು ರಾಸುಗಳನ್ನು ಕೊಳ್ಳುವ ಮತ್ತು ಮಾರುವ ವ್ಯಾಪಾರ ಚಟುವಟಿಕೆಗಳು ಸಹ ನಡೆಯುತ್ತದೆ. ರೈತರು ಕಾರ್ಮಿಕರು, ದಿನಗೂಲಿ ಕಾರ್ಮಿಕರು ಹಾಗೂ ನೌಕರ ವರ್ಗದವರು ಪ್ರತಿ ವಾರದ ಸಂತೆಯಲ್ಲಿ ತಮಗೆ ಅವಶ್ಯಕವಾಗಿ ಬೇಕಾಗುವ ವಸ್ತುಗಳನ್ನು ಕೊಳ್ಳುವುದು ಮತ್ತು ಕೃಷಿ ಉತ್ಪನ್ನಗಳನ್ನು ರೈತರು ಸಂತೆಯಲ್ಲಿ ಮಾರಾಟ ಮಾಡಿದ ನಂತರ ತಮಗೆ ಬೇಕಾಗುವ ವಸ್ತುಗಳನ್ನು ಕೊಳ್ಳುವ ಪ್ರಕ್ರಿಯೆ ವಾರದ ಸಂತೆಯ ವೈಶಿಷ್ಟ್ಯವಾಗಿರುತ್ತದೆ.

ಚಾಮರಾಜನಗರದಲ್ಲಿ ಪ್ರತಿ ಬುಧವಾರ ಮತ್ತು ಶನಿವಾರ ಸಂತೆಯಲ್ಲಿ ಬೆಲ್ಲದ ಹರಾಜು ನಡೆಯುತ್ತದೆ. ಸಂತೆಮರಹಳ್ಳಿ ಮಂಗಳವಾರದ ಸಂತೆಯಲ್ಲಿ ಸುಮಾರು ೬,೦೦೦ ಜನರು ಸಂತೆಯ ಮೈದಾನದಲ್ಲಿ ಸೇರಿ ವ್ಯಾಪಾರದಲ್ಲಿ ಪಾಲ್ಗೊಳ್ಳುತ್ತಾರೆ. ಸಂತೆಯಲ್ಲಿ ಸುಮಾರು ₹ ಹತ್ತು ಲಕ್ಷಗಳಷ್ಟು ವ್ಯಾಪಾರ–ವಹಿವಾಟು ನಡೆಯುತ್ತದೆ. ಸಂತೆಮರಹಳ್ಳಿಯ ಸಂತೆಯು ಜಿಲ್ಲೆಗೇ ಹೆಸರುವಾಸಿಯಾದ ಸಂತೆಯೆಂದು ಖ್ಯಾತಿ ಪಡೆದಿದೆ. ತೆರಕಣಾಂಬಿಯಲ್ಲಿ ಪ್ರತಿ ಗುರುವಾರ, ಯಳಂದೂರಿನಲ್ಲಿ ಪ್ರತಿ ಭಾನುವಾರ, ಗುಂಡ್ಲುಪೇಟೆ ಮತ್ತು ಕೊಳ್ಳೇಗಾಲದಲ್ಲಿ ಪ್ರತಿ ಸೋಮವಾರ ಸಂತೆ ನಡೆಯುತ್ತದೆ. ಹನೂರು, ಕಾಮಗೆರೆಯಲ್ಲಿ ವಾರದ ಸಂತೆಗಳು ಜರುಗುತ್ತವೆ..

ಚಂದಕವಾಡಿಯಲ್ಲಿ ಪ್ರತಿವರ್ಷ ಶಿವರಾತ್ರಿಯ ನಂತರ ಒಂದು ತಿಂಗಳು ದನಗಳ ಜಾತ್ರೆ ನಡೆಯುತ್ತದೆ. ಬೇಗೂರು, ತೆರಕಣಾಂಬಿ, ಹಂಗಳ, ಹಂಪಾಪುರ, ಮಾಂಬಳ್ಳಿ, ಸಂತೆಮಾರನಹಳ್ಳಿ, ಹನೂರು, ಯಳಂದೂರು, ಮೊದಲಾದ ಹೋಬಳಿ ಸ್ಥಳಗಳಲ್ಲಿ ವಾರದ ಸಂತೆಗಳು ಜರುಗುತ್ತವೆ. ವಾರದ ಸಂತೆಯ ಜೊತೆ ಪ್ರಸಿದ್ಧ ಜಾತ್ರೆ ರಥೋತ್ಸವಗಳಾದ ಮಲೈಮಹದೇಶ್ವರ ಜಾತ್ರೆ, ಶ್ರೀ ಹಿಮವತ್ ಗೋಪಾಲಸ್ವಾಮಿ ರಥೋತ್ಸವ, ಚಾಮರಾಜನಗರ ರಥೋತ್ಸವ, ಶ್ರೀರಂಗನಾಥ ಸ್ವಾಮಿ ರಥೋತ್ಸವ, ಬಿಳಿಗಿರಿರಂಗನ ಜಾತ್ರೆ, ಚಾಮರಾಜನಗರ ಜಿಲ್ಲೆಗೆ ಒಳಪಟ್ಟ ಪ್ರಸಿದ್ಧ ಊರು ಪಟ್ಟಣಗಳಲ್ಲಿ ಗ್ರಾಮದೇವತೆ ಮತ್ತು ಇತರ ಪ್ರಮುಖ ದೇವರುಗಳ ಜಾತ್ರೆ, ತೇರು ರಥೋತ್ಸವಗಳು ಬಹಳ ಅದ್ಧೂರಿಯಾಗಿ ನಡೆಯುತ್ತದೆ. ಜಿಲ್ಲೆಯ ಜನರು ತುಂಬಾ ಭಕ್ತಿಭಾವದಿಂದ ಶ್ರದ್ಧಾಭಕ್ತಿಯಿಂದ ತೇರು, ಜಾತ್ರೆ ಮತ್ತು ರಥೋತ್ಸವಗಳಲ್ಲಿ ಭಾಗವಹಿಸಿ ದೇವರಿಗೆ ಹರಕೆ ಮತ್ತು ಕಾಣಿಕೆಗಳನ್ನು ಅರ್ಪಿಸುತ್ತಾರೆ.

## ತೂಕ ಮತ್ತು ಅಳತೆ

ಪ್ರಾಚೀನ ಕಾಲದಿಂದ ಮೈಸೂರು ಸಂಸ್ಥಾನದಲ್ಲಿ ವಿವಿಧ ಪ್ರಕಾರದ ತೂಕ ಮತ್ತು ಅಳತೆ ಪದ್ಧತಿ ಜಾರಿಯಲ್ಲಿದ್ದ ಬಗ್ಗೆ ಶಾಸನಗಳಿಂದ ವೇದ್ಯವಾಗುತ್ತದೆ. ಗ್ರಾಹಕರು ಖರೀದಿಸುವ ಪ್ರತಿಯೊಂದು ವಸ್ತುವನ್ನು ತೂಕ ಮತ್ತು ಅಳತೆ ಮಾಪನದಿಂದ ನಿರ್ದಿಷ್ಟಪಡಿಸಿ ಅವುಗಳ ಮೌಲ್ಯಗಳನ್ನು ನಿರ್ಧರಿಸಿ ಮಾರಾಟ ಮಾಡುವ ವ್ಯವಸ್ಥೆಯು ಪ್ರತಿಯೊಂದು ರಾಷ್ಟ್ರದ ಆರ್ಥಿಕ ವ್ಯವಸ್ಥೆಗೆ ಒಳಪಟ್ಟಿರುತ್ತದೆ. ಆದ್ದರಿಂದ ಮಾರುಕಟ್ಟೆಯಲ್ಲಿ ಖರೀದಿಸುವ ಮತ್ತು ಮಾರುವ ಪ್ರತಿಯೊಂದು ವಸ್ತು ಮತ್ತು ಸೇವೆಗಳು ಇಂದಿನ ಮೆಟ್ರಿಕ್ ಪದ್ಧತಿಯ ತೂಕ ಮತ್ತು ಅಳತೆಗೆ ಒಳಪಡಿಸಿ ರೂಪಾಯಿ ಮೌಲ್ಯದಿಂದ ಬೆಲೆಯನ್ನು ನಿರ್ಧರಿಸುವ ಹಣದ ವ್ಯವಸ್ಥೆ ಸರ್ವಮಾನ್ಯತೆ ಮತ್ತು ಎಲ್ಲರ ಒಪ್ಪಿಗೆಗೆ ಒಳಪಟ್ಟಿರುತ್ತದೆ.

ಪ್ರಾಚೀನ ಕಾಲದಲ್ಲಿ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯಲ್ಲಿ ದವಸ ಧಾನ್ಯಗಳನ್ನು ವಿವಿಧ ಪ್ರಕಾರದ ಅಳತೆಗಳಾದ ಸೇರು, ಸವ್ವಾಸೇರು, ಅರ್ಧಸೇರು, ಪಾವುಲಿ, ಚಿಟ್ಟೆ, ಚಟಾಕುಗಳ ಮೂಲಕ ಸಣ್ಣ ಪ್ರಮಾಣದಲ್ಲಿ ಅಳೆಯುವ ಪದ್ಧತಿ ಜಾರಿಯಲ್ಲಿದ್ದಿತು. ಹೆಚ್ಚಿನ ಪ್ರಮಾಣದ ಧಾನ್ಯಗಳ ಮಾಪನಕ್ಕೆ ಖಂಡುಗ, ಕೊಳಗ, ಪಡಿ ಮೊದಲಾದ ಅಳತೆಗಳನ್ನು ಬಳಸುತ್ತಿದ್ದರು. ಆಗಿನ ಕಾಲದಲ್ಲಿ ವಸ್ತುಗಳನ್ನು ತೂಕ ಮಾಡಲು ತಕ್ಕಡಿಗಳನ್ನು ಬಿದಿರಿನ ಕೋಲಿನ ಎರಡು ತುದಿಗೆ ಸಮಪ್ರಮಾಣದ ಬೆತ್ತದ ತಟ್ಟೆಗಳನ್ನು ಹಗ್ಗದಲ್ಲಿ ಕಟ್ಟಿ ಮಧ್ಯ ಭಾಗದಲ್ಲಿ ಮೊಣಕೈ ಎತ್ತರಕ್ಕೆ ಕೈಯಲ್ಲಿ ಹಿಡಿದು ತೂಗುವಾಗ ಒಂದು ಬಟ್ಟಲಿಗೆ ತೂಕದ ಬಟ್ಟುಗಳನ್ನು ಇನ್ನೊಂದು ಬಟ್ಟಲಿಗೆ ಮಾರುವ ವಸ್ತುಗಳನ್ನು ಸಮಮಟ್ಟದಲ್ಲಿ ತೂಗಿ ಮಾರಾಟ ಮಾಡುತ್ತಿದ್ದರು. ಇದಕ್ಕೆ ತಕ್ಕಡಿ ಎಂದು ಹೆಸರು. ಮಣ, ದಡಿಯ, ಪಂಚೇರು, ಮೊದಲಾದವು ತೂಕದ ಬಟ್ಟುಗಳಾಗಿ ಬಳಸುತ್ತಿದ್ದರು. ಬಟ್ಟೆಯನ್ನು ಗಜ, ಮೊಳ, ಗೇಣು, ಅಡಿ, ಮೊದಲಾದ ಮಾಪನಗಳಿಂದ ಅಳೆಯುತ್ತಿದ್ದರು. ಗ್ರಾಮೀಣ ಗುಡ್ಡಗಾಡು ಮತ್ತು ಅಲೆಮಾರಿ ಜನರು ಈಗಲೂ ಸಹ ಹಳೆಯ ಪದ್ಧತಿಯ ತೂಕ ಮತ್ತು ಅಳತೆಯಲ್ಲಿ ವಸ್ತುಗಳನ್ನು ಮಾರುವುದು ಇಲ್ಲವೇ ಕೊಳ್ಳುವುದು ರೂಢಿಯಲ್ಲಿದೆ.

೧೭ನೆಯ ಶತಮಾನದಲ್ಲಿ ಮೈಸೂರು ರಾಜಮನೆತನದ ಚಿಕ್ಕದೇವರಾಜ ಒಡೆಯರ ಆಳ್ವಿಕೆಯಲ್ಲಿ ಎಲ್ಲರಿಗೂ ಅನ್ವಯಿಸುವಂತೆ ಸಾಮಾನ್ಯ ರೂಪದ ತೂಕ ಮತ್ತು ಅಳತೆ ಪದ್ಧತಿಯನ್ನು ಜಾರಿಗೆ ತಂದರು. ರಾಜಮನೆತನದ ಲಾಂಛನವುಳ್ಳ ಚಿಹ್ನೆಯನ್ನು ತೂಕದ ಬಟ್ಟು ಮತ್ತು ಅಳತೆಗಳ ಮೇಲೆ ಮುದ್ರಿಸಿ ಎಲ್ಲರೂ ಒಪ್ಪಿ ಬಳಸುವಂತೆ ಜಾರಿಗೊಳಿಸಿದರು. ಮೂರು ಕಂಠೀರವ ತೂಕವು ಒಂದು ದುಡ್ಡಿಗೆ ಸಮವೆಂದು ಅದರ ಅಳತೆಯ ಪ್ರಕಾರ ತಕ್ಕಡಿಯಲ್ಲಿ ತೂಗುವ ಪದ್ಧತಿಯನ್ನು ಜಾರಿಗೆ ತಂದರು. ಒಂದು ದುಡ್ಡು ಒಂದು ತೊಲಕ್ಕೆ ಸಮವೆಂದು, ೨೪

ದುಡ್ಡುಗಳು ಒಂದು ಪಕ್ಕಸೇರು ಎಂದೂ, ಹತ್ತು ಪಕ್ಕಸೇರು ಒಂದು ದಡಿಯಕ್ಕೆ ಸಮವೆಂದೂ, ನಾಲ್ಕು ದಡಿಯ ಒಂದು ಚಿಕ್ಕಮಣವೆಂದೂ, ೪೪ ಪಕ್ಕ ಸೇರು ಒಂದು ದೊಡ್ಡ ಮಣವೆಂದೂ ಅಳತೆ ಮಾಡುತ್ತಿದ್ದರು. ಬೆಲ್ಲ, ಅಡಿಕೆ, ಹತ್ತಿ, ರೇಷ್ಮೆ, ದವಸ-ಧಾನ್ಯ ಮೊದಲಾದವನ್ನು ಆ ಪ್ರಕಾರ ತೂಕ ಮಾಡುತ್ತಿದ್ದರು. ಪಾವಿನ ತುಂಬ ನವಧಾನ್ಯಗಳನ್ನು ಅಳೆದು, ಅವು ₹ ೮೪ಗಳಿಗೆ ಸಮವೆಂದು ಮಾರುತ್ತಿದ್ದರು. ತುಪ್ಪ, ಎಣ್ಣೆ, ಮೊದಲಾದ ದ್ರವಪದಾರ್ಥಗಳನ್ನು ಸೇರುಗಳಿಂದ ಅಳೆಯುತ್ತಿದ್ದರು. ತಾಮ್ರ, ಹಿತ್ತಾಳೆ, ತಗಡುಗಳಿಂದ, ಕರಾರುವಕ್ಕಾದ ಸೇರು, ಅರ್ಧಸೇರು, ಪಾವು, ಚಟಾಕು, ಚಿಟ್ಟೆ, ಮೊದಲಾದ ಅಳತೆಯ ಭಾಗಗಳಾಗಿ ತಯಾರಿಸಿ ಅಳೆಯಲು ಉಪಯೋಗಿಸುತ್ತಿದ್ದರು. ಜವಳಿ ಬಟ್ಟೆಗಳನ್ನು ಅಳೆಯಲು ಗಜಕಡ್ಡಿಯನ್ನು ಬಳಸುತ್ತಿದ್ದರು. ಎರಡು ಮೊಳ ಅಳತೆ ಒಂದು ಗಜವೆಂದೂ, ಒಂದೂವರೆ ಗೇಣು ಒಂದು ಅಡಿ ಎಂದು ಎರಡು ಕೈಚಾಚಿನ ತುದಿಯು ಒಂದು ಮಾರು ಎಂದು ಹೂವು, ಹಗ್ಗಗಳನ್ನು ಅಳೆಯುತ್ತಿದ್ದರು.

೧೮ನೆಯ ಶತಮಾನದಲ್ಲಿ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯಲ್ಲಿ ತೂಕ ಮತ್ತು ಅಳತೆಯನ್ನು ಎಲ್ಲರೂ ಒಪ್ಪಿಕೊಳ್ಳುವಂತೆ ವಸ್ತುಗಳನ್ನು ತೂಕ ಮಾಡಿ ಖರೀದಿಸಲು ಮತ್ತು ರಾಜ್ಯದ ಆಡಳಿತಕ್ಕೆ ಆದಾಯವನ್ನು ವಿವಿಧ ಸುಂಕಗಳ ರೂಪದಲ್ಲಿ ಸಂಗ್ರಹಿಸುವ ಗುರಿಯಿಂದ ಬಳಸಲಾಗುತ್ತಿದ್ದಿತು. ಅವುಗಳೆಂದರೆ, (೧) ಬಲ್ಲಾರ್ ತೂಕ ಪದ್ಧತಿಯಿಂದ ಮಾರಾಟವಾಗುವ ಹುಣಸೇಹಣ್ಣು, ಅರಿಸಿನ ಮತ್ತು ಇತರ ಎಲ್ಲ ಬಳಕೆಯ ವಸ್ತುಗಳನ್ನು ತೂಕ ಮಾಡುವ ಪದ್ಧತಿ. (೨) ಮಾರಾಟವಾಗುವ ವಸ್ತುಗಳನ್ನು ತೂಕ ಮಾಡುವ ಮೂಲಕ ವ್ಯಾಪಾರ-ವಹಿವಾಟಿನಿಂದ ಆದಾಯವನ್ನು ಸಂಗ್ರಹಿಸುವ ಉದ್ದೇಶ. ಇಂತಹ ಪದ್ಧತಿಯ ತೂಕ ಮತ್ತು ಅಳತೆ ಎಲ್ಲ ಗ್ರಾಮ, ಪಟ್ಟಣಗಳಲ್ಲಿ, ಎಲ್ಲ ಪ್ರಕಾರದ ಮಾರಾಟದ ವಸ್ತುಗಳನ್ನು ತೂಕ ಮಾಡುವ ಪದ್ಧತಿಗೆ ಎಲ್ಲ ಜನರಿಂದ ಸರ್ವಮಾನ್ಯತೆಯಿಂದ ಒಪ್ಪಿಗೆ ಪಡೆದಿದ್ದಿತು. ತೂಕ ಮತ್ತು ಅಳತೆಯಲ್ಲಿ ಮೋಸಮಾಡುವ ವರ್ತಕರಿಗೆ ದಂಡ ವಿಧಿಸುವ ಮತ್ತು ತಪ್ಪಿತಸ್ಥ ವ್ಯಾಪಾರಿಗಳಿಗೆ ಶಿಕ್ಷೆ ವಿಧಿಸುವ ಕ್ರಮವನ್ನು ಸಹ ಕಟ್ಟುನಿಟ್ಟಾಗಿ ನೋಡಿಕೊಳ್ಳಲಾಗುತ್ತಿದ್ದಿತು. ತೂಕ ಮತ್ತು ಅಳತೆಯ ಬಳಕೆಯಲ್ಲಿ ವರ್ತಕರ ಮತ್ತು ಕೊಳ್ಳುವ ಗ್ರಾಹಕರೊಂದಿಗೆ ಪರಸ್ಪರ ಚೌಕಾಶಿಯಿಂದ ಕೊನೆಗೆ ಇಬ್ಬರಲ್ಲಿಯೂ ಒಪ್ಪಿಗೆಯಾಗುವ ರೀತಿಯಲ್ಲಿ ವಸ್ತುಗಳ ಬೆಲೆಯನ್ನು ನಿರ್ಧರಿಸಿ ಮಾರಾಟ ಮಾಡಲಾಗುತ್ತಿದ್ದಿತು. ಸಣ್ಣ ಪ್ರಮಾಣದಲ್ಲಿ ತೂಕ ಮಾಡಲು ತಾಮ್ರ, ಹಿತ್ತಾಳೆ ಮತ್ತು ಇತರೆ ಲೋಹಗಳಿಂದ ತಯಾರಿಸಿದ ವಿವಿಧ ಪ್ರಮಾಣದ ತೂಕದ ಬಟ್ಟುಗಳನ್ನು ಬಳಸುತ್ತಿದ್ದರೆ, ಭಾರೀ ಪ್ರಮಾಣದ ಹತ್ತಿ ಮತ್ತು ದವಸ ಧಾನ್ಯಗಳನ್ನು ನಿರ್ದಿಷ್ಟ ಗಾತ್ರದ ಕಲ್ಲುಗಳನ್ನು ತಕ್ಕಡಿಗಳೊಂದಿಗೆ ಬಳಸಿ ತೂಕ ಮಾಡಲಾಗುತ್ತಿದ್ದಿತು. ೧೮೯೪ರಲ್ಲಿ ಗಜಕಡ್ಡಿಯನ್ನು ಬಳಸಿ ಬಟ್ಟೆಗಳನ್ನು ಅಳೆಯಲು ಬಳಸಲಾಗುತ್ತಿದ್ದಿತು. ಬಿತ್ತನೆ ಮಾಡಿದ ಜಮೀನು ಮತ್ತು ಬೀಳುಬಿದ್ದ ಜಮೀನು, ಹುಲ್ಲುಗಾವಲು ಮೊದಲಾದ ಭೂಮಿಯನ್ನು ಅಳೆದು ಚಕ್ಕುಬಂಧಿಯನ್ನು ಗುರುತಿಸಲು ಬಾಂದುಕಲ್ಲುಗಳನ್ನು ಸಾಕ್ಷಿ ಕಲ್ಲುಗಳಾಗಿ ನೆಟ್ಟು ಜಮೀನಿನ ಸುತ್ತಳತೆಯನ್ನು ಗಜ, ಮಾರು ಲೆಕ್ಕದಲ್ಲಿ ಹಗ್ಗ (ಈಗಿನ ಚೈನ್)ದಿಂದ ಅಳೆಯುವ ಪದ್ಧತಿ ಜಾರಿಯಲ್ಲಿದ್ದಿತು. ಇಂತಹ ಅಳತೆಗೆ ನಿವರ್ತನ ಕಮ್ಮ ಮತ್ತು ಮತ್ತರ್ ಎಂದು ಕರೆಯಲಾಗುತ್ತಿದ್ದಿತು. ಇಂತಹ ತೂಕ ಮತ್ತು ಅಳತೆಯನ್ನು ೧೯೦೨ರವರೆಗೂ ಬಳಸಲಾಗುತ್ತಿದ್ದಿತು. ೧೯೦೨ರಲ್ಲಿ ಮೈಸೂರು ಸಂಸ್ಥಾನದಲ್ಲಿ ತೂಕ ಮತ್ತು ಅಳತೆಯ ಕಾಯಿದೆ ಬಗ್ಗೆ ನಿಯಂತ್ರಣಗಳನ್ನು ಆಗಿನ ಸರ್ಕಾರ ಜಾರಿಗೊಳಿಸಿ ೧೯೧೨ರಿಂದ ಅನ್ವಯಿಸುವಂತೆ ಶಾಸನ ಬದ್ಧವಾಗಿ ಜಾರಿಗೆ ತರಲಾಯಿತು. ೧೯೨೭ರಲ್ಲಿ ಈ ಕಾಯಿದೆಗೆ ತಿದ್ದುಪಡಿ ತಂದು ಜಾರಿಗೊಳಿಸಿ ಕಾನೂನು ಬದ್ಧವಾಗಿ ವ್ಯಾಪಾರಗಳಲ್ಲಿ ಬಳಸಲು ಕ್ರಮ ಕೈಗೊಳ್ಳಲಾಯಿತು. ಪ್ರಮಾಣೀಕೃತ ತೂಕ ಮತ್ತು ಅಳತೆಯನ್ನು ಅಂದಿನ ಸರ್ಕಾರ ಜಾರಿಗೊಳಿಸಿತು. ಪ್ರಮಾಣಬದ್ಧ ಕರಾರುವಕ್ಕಾದ ತೂಕ ಮತ್ತು ಅಳತೆಯ ಪ್ರಕಾರ ಲೋಹದ ತಗಡಿನಿಂದ ತಯಾರಿಸಿದ ಒಂದು ಸೇರು ೨೪ ತೊಲ ತೂಕಕ್ಕೆ ಸಮವೆಂದು ಅದರ ಮೌಲ್ಯವನ್ನು

₹ ೨೪ಗಳೆಂದು ತೀರ್ಮಾನಿಸಲಾಯಿತು. ಈ ಪ್ರಕಾರದ ತೂಕ ಮತ್ತು ಅಳತೆ ಬ್ರಿಟಿಷ್ ನಾಣ್ಯಪದ್ಧತಿಯೊಂದಿಗೆ ಪರಿವರ್ತಿಸಿ ವ್ಯಾಪಾರಕ್ಕೆ ಬಳಸಲಾಗುತ್ತಿದ್ದಿತು. ಅರಪಾವು ೩ ತೊಲ ಅಥವಾ ೧/೮ರ ಭಾಗದ ಸೇರು ಎಂದೂ, ಒಂದು ಪಾವು ತೊಲಕ್ಕೆ ಸಮ ಅಥವಾ ೧/೪ ಸೇರೂ ಎಂದೂ ಅಚ್ಚೇರು ೧೨ ತೊಲಕ್ಕೆ ಸಮವೆಂದೂ ಅಥವಾ ಅರ್ಧ ಸೇರು ಎಂದೂ ಐದು ಸೇರು = ಒಂದು ಪಂಚೇರು ಎಂದೂ ಹತ್ತು ಸೇರು = ಒಂದು ದಡಿಯಾ ಎಂದೂ ೪೦ ಸೇರು = ಒಂದು ಮಣ ಎಂದೂ ತೂಕ ಮಾಡಲಾಗುತ್ತಿದ್ದಿತು. ನಾಲ್ಕು ಸೇರು = ಒಂದು ಬಳ್ಳ, ಎಂಟು ಸೇರು = ಒಂದು ಕೊಳಗ ಎಂದೂ, ನೂರು ಸೇರು = ಒಂದು ಪಲ್ಲವೆಂದೂ ಮತ್ತು ೧೬೦ ಸೇರು ಅಥವಾ ಇಪ್ಪತ್ತು ಕೊಳಗ = ಒಂದು ಖಂಡುಗ ಎಂದೂ ದವಸಗಳನ್ನು ಅಳೆಯಲಾಗುತ್ತಿದ್ದಿತು.

ಟಿಪ್ಪುಸುಲ್ತಾನನು ಸುಲ್ತಾನಿ ಕೊಳಗವನ್ನು ಅಳತೆಯಾಗಿ ಬಳಸುವಂತೆ ಅಜ್ಞೆ ಹೊರಡಿಸಿ ಅದರ ಪ್ರಕಾರ ಹದಿನಾರು ಸೇರುಗಳು ಒಂದು ಕೊಳಗವೆಂದು ವ್ಯಾಪಾರದಲ್ಲಿ ಬಳಸಲಾಗುತ್ತಿದ್ದಿತು. ದಿವಾನ್ ಪೂರ್ಣಯ್ಯ ಕೃಷ್ಣರಾಜ ಕೊಳಗವನ್ನು ಅಳತೆಯಾಗಿ ಒಪ್ಪಿಕೊಳ್ಳುವಂತೆ ಜಾರಿಗೊಳಿಸಿ, ಎಂಟು ಸೇರು = ಒಂದು ಕೊಳಗವೆಂದೂ ಅಥವಾ ಅದು ೧/೨೦ ರ ಪ್ರಮಾಣಕ್ಕೆ ಸಮವೆಂದೂ ಅದರಂತೆ ಅಳತೆಗೆ ಬಳಸಲಾಗುತ್ತಿದ್ದಿತು. ಖಂಡುಗ, ಕರಾರು ಕೊಳಗ, ಪಕ್ಕ ಸೇರು, ಮೊದಲಾದ ಅಳತೆಯ ಪ್ರಮಾಣಗಳನ್ನು ವ್ಯಾಪಾರದಲ್ಲಿ ಬಳಸಲಾಗುತ್ತಿದ್ದಿತು.

೧೯೧೬ರಲ್ಲಿ ಮೈಸೂರಿನಲ್ಲಿ ವಾಣಿಜ್ಯ ಮತ್ತು ಕೈಗಾರಿಕೆ ಸಂಘವು ಏರ್ಪಡಿಸಿದ ಆರ್ಥಿಕ ಸಮ್ಮೇಳನದಲ್ಲಿ ತೂಕ ಮತ್ತು ಅಳತೆಯ ಬಗ್ಗೆ ಆರ್ಥಿಕ ತಜ್ಞರು ಸುದೀರ್ಘ ಚರ್ಚೆ ನಡೆಸಿ ಸರ್ವಸಮ್ಮತವಾದ ತೂಕ ಮತ್ತು ಅಳತೆ ಪದ್ಧತಿಯನ್ನು ಜಾರಿಗೆ ತರುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡಿದರು. ಅದರ ಪ್ರಕಾರ ೧೯೧೮ರಲ್ಲಿ ಕರಾರುವಕ್ಕಾದ ಸರ್ವಸಮ್ಮತವಾದ ಮತ್ತು ಪ್ರಮಾಣೀಭೂತವಾದ ತೂಕ ಮತ್ತು ಅಳತೆಯ ಬಟ್ಟುಗಳಿಗೆ ಲೋಹದ ಮೊಹರುಗಳನ್ನು ಮುದ್ರಿಸಿದ ವಿವಿಧ ತೂಕ ಮತ್ತು ಅಳತೆಗಳ ಪರಿಕರ ಸಾಧನಗಳನ್ನು ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ನಿರ್ದೇಶಕರು, ಅವುಗಳ ಪ್ರಮಾಣೀಕೃತ ಪರೀಕ್ಷೆಗೆ ಒಳಪಡುವಂತೆ, ಕಂದಾಯ ಮತ್ತು ಪೊಲೀಸ್ ಇಲಾಖೆಗೆ ವರ್ಗಾವಣೆ ಮಾಡಲಾಯಿತು. ಮೈಸೂರು ಪ್ರೀಮಿಯರ್ ಮೆಟಲ್ ಕಾರ್ಖಾನೆಯು ತೂಕ ಮತ್ತು ಅಳತೆ ಸಾಧನಗಳನ್ನು ತಯಾರಿಸಿ ಸರಬರಾಜು ಮಾಡುವ ಜವಾಬ್ದಾರಿಯನ್ನು ವಹಿಸಿಕೊಂಡಿತು. ಮೆಟ್ರಿಕ್ ಪದ್ಧತಿಯ ತೂಕ ಮತ್ತು ಅಳತೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಲ್ಲಿ ದೇಶಾದ್ಯಂತ ಏಕ ಪ್ರಕಾರದ ಕಾಯಿದೆ ಜಾರಿಗೆ ಬರುವುದಕ್ಕಿಂತ ಪೂರ್ವದಲ್ಲಿ ನಮ್ಮ ರಾಜ್ಯದಲ್ಲಿ ವಿವಿಧ ತಾಲೂಕುಗಳ ಮಾರಾಟ ಪದ್ಧತಿಯಲ್ಲಿ ವಿವಿಧ ಪ್ರಕಾರದ ತೂಕ ಮತ್ತು ಅಳತೆಗಳನ್ನು ಸಂಪೂರ್ಣವಾಗಿ ನಿಷೇಧಿಸಿ ಮೆಟ್ರಿಕ್ ಪದ್ಧತಿಗೆ ಒಳಪಡುವಂತೆ ಮೆಟ್ರಿಕ್ ಪದ್ಧತಿಯ ತೂಕ ಮತ್ತು ಅಳತೆಯ ಕಾಯಿದೆಯನ್ನು ೧೯೫೬ರಲ್ಲಿ ಜಾರಿಗೆ ತರಲಾಯಿತು.

## ಮೆಟ್ರಿಕ್ ಪದ್ಧತಿಯ ತೂಕ ಮತ್ತು ಅಳತೆ

೧೯೫೬ರಲ್ಲಿ ಕೇಂದ್ರೀಯ ಕಾಯಿದೆಯನ್ವಯ ಪ್ರಮಾಣೀಕೃತ ಮೆಟ್ರಿಕ್ ಪದ್ಧತಿಯ ತೂಕ ಮತ್ತು ಅಳತೆಯನ್ನು ಕರ್ನಾಟಕ ರಾಜ್ಯದಲ್ಲಿ ಜಾರಿಗೊಳಿಸಲಾಯಿತು. ಈ ಕಾಯಿದೆಯನ್ವಯ ಮೈಸೂರು, ಚಾಮರಾಜನಗರ ಜಿಲ್ಲೆಗಳಲ್ಲಿ ೧೯೫೮ರಿಂದ ವಿದ್ಯುಕ್ತವಾಗಿ ಜಾರಿಗೊಳಿಸಲಾಯಿತು. ಜಿಲ್ಲೆಯ ನಾಲ್ಕು ತಾಲೂಕುಗಳೂ ಸೇರಿ ಪ್ರತಿಯೊಂದು ವ್ಯಾಪಾರದಲ್ಲಿ ಪ್ರತಿಯೊಂದು ವಸ್ತುವನ್ನು ಮೆಟ್ರಿಕ್ ಪದ್ಧತಿಗೆ ಅಳವಡಿಸಿಕೊಂಡು ಕಾನೂನುಬದ್ಧವಾಗಿ ನೋಡಿಕೊಳ್ಳಲು ಚಾಮರಾಜನಗರ ಮತ್ತು ಕೊಳ್ಳೇಗಾಲಗಳಲ್ಲಿ ಸಹಾಯಕ ತೂಕ ಮತ್ತು ಅಳತೆ ನಿಯಂತ್ರಣಾಧಿಕಾರಿಗಳನ್ನು ನೇಮಕ ಮಾಡಲಾಯಿತು. ೧೯೫೮ರ ಕರ್ನಾಟಕ

ತೂಕ ಮತ್ತು ಅಳತೆ (ನಿಬಂಧನೆ) ಅಧಿನಿಯಮವನ್ನು ೧೯೬೦ರ ಏಪ್ರಿಲ್ ಒಂದರಿಂದ ರಾಜ್ಯದ ಎಲ್ಲಾ ಜಿಲ್ಲೆಗಳಿಗೆ ವಿಸ್ತರಿಸಲಾಯಿತು. ಈ ಹೊಸತೂಕಗಳ ಬಳಕೆಯನ್ನು ಇಡೀ ರಾಜ್ಯದಲ್ಲಿ ೧೯೭೨ರ ಏಪ್ರಿಲ್ ಒಂದರಿಂದ ಕಡ್ಡಾಯವಾಗಿ ಜಾರಿಗೆ ತರಲಾಗಿದೆ.

ಕರ್ನಾಟಕ ರಾಜ್ಯ ಮಾರುಕಟ್ಟೆ ಇಲಾಖೆಯ ಅವಿಭಾಜ್ಯ ಅಂಗವಾಗಿದ್ದ ತೂಕ ಮತ್ತು ಅಳತೆ ಇಲಾಖೆಯನ್ನು ೧೯೭೬ರಲ್ಲಿ ಪ್ರತ್ಯೇಕಿಸಿ ಸ್ವತಂತ್ರ ಇಲಾಖೆಯಾದ 'ತೂಕ ಮತ್ತು ಅಳತೆ ಮಾಪನ ಇಲಾಖೆ'ಯನ್ನು ಸ್ಥಾಪಿಸಲಾಯಿತು. ೧೯೯೦ರಿಂದ ಈ ಇಲಾಖೆಯ ಹೆಸರನ್ನು ಕಾನೂನು ಮಾಪನ ಶಾಸ್ತ್ರ (ಲೀಗಲ್ ಮೆಟ್ರಾಲಜಿ) ಇಲಾಖೆಯೆಂದು ಪುನರ್‌ನಾಮಕರಣ ಮಾಡಲಾಗಿದೆ.

ಮೆಟ್ರಿಕ್ ಪದ್ಧತಿಯ ತೂಕ ಮತ್ತು ಅಳತೆ ನಿಯಂತ್ರಣಾಧಿಕಾರಿಗಳ ಮುಖ್ಯ ಕಾರ್ಯವೆಂದರೆ, ಜಿಲ್ಲೆಯಾದ್ಯಂತ ಪ್ರತಿ ಗ್ರಾಮ, ಹೋಬಳಿ, ಪಟ್ಟಣ, ತಾಲೂಕು ಮತ್ತು ನಗರದ ಎಲ್ಲ ವ್ಯಾಪಾರಿಗಳು ಸರ್ಕಾರದ ಅಧಿಕೃತ ಮೊಹರುಳ್ಳ ಲೋಹಗಳಿಂದ ತಯಾರಿಸಿ ಸರ್ಕಾರದ ಮುದ್ರೆಯೊತ್ತಿದ ಮೆಟ್ರಿಕ್ ಪದ್ಧತಿಗೆ ಅಳವಡಿಸಿದ ಎಲ್ಲ ತೂಕದ ಬಟ್ಟುಗಳು, ತಕ್ಕಡಿ, (ತ್ರಾಸು), ಲೀಟರ್ ಅಳತೆಯ ಸಾಧನಗಳು ಅವುಗಳ ಪರಿಕರಗಳು ಶುದ್ಧ ಪ್ರಮಾಣೀಕೃತ ಹಾಗೂ ಕರಾರುವಕ್ಕಾಗಿ ಪರೀಕ್ಷೆಗೊಳಪಟ್ಟು ನ್ಯಾಯಬದ್ಧವಾಗಿ ತೂಕ ಮತ್ತು ಅಳತೆಯನ್ನು ಚಾಚುತಪ್ಪದೆ ನೋಡಿಕೊಳ್ಳುವುದು. ಕಾನೂನಿನ ನಿಬಂಧನೆ ಮತ್ತು ನಿಯಂತ್ರಣಗಳಿಗೆ ಒಳಪಟ್ಟ ಇವನ್ನು ಪ್ರತಿ ವರ್ಷ ನವೀಕರಿಸುವಂತೆ ಜಾರಿಗೆ ತಂದಿದೆ. ಇಂತಹ ಅಳತೆ ಮತ್ತು ತೂಕದಲ್ಲಿ ಮೋಸ, ವಂಚನೆ ಅಥವಾ ಕೃತಕವಾಗಿ ಕಡಿಮೆ ತೂಕ ಮತ್ತು ಅಳತೆ ಮಾಡುವ ಪ್ರಕರಣಗಳನ್ನು ನಿಯಂತ್ರಣ ಕಾಯಿದೆ ಪ್ರಕಾರ ವ್ಯಾಪಾರದ ಲೈಸೆನ್ಸ್ ರದ್ದುಪಡಿಸುವ, ದಂಡ ಮತ್ತು ಶಿಕ್ಷೆಗೆ ಒಳಪಡಿಸುವ ಕಾನೂನನ್ನು ಜಾರಿಗೆ ತಂದಿದೆ.

ಕಾನೂನು ಮಾಪನ ಶಾಸ್ತ್ರ ಇಲಾಖೆಯವರು ತೂಕ ಮತ್ತು ಅಳತೆಗಳಿಗೆ ಸಂಬಂಧಪಟ್ಟ ಅಧಿನಿಯಮವನ್ನು ಸಹ ಕಾರ್ಯಗತಗೊಳಿಸುವುದರ ಜೊತೆಗೆ ಉಪಯೋಗದಲ್ಲಿದ್ದಂತೆ ತೂಕ ಮತ್ತು ಅಳತೆಗಳ ಪರೀಕ್ಷೆ ಅವುಗಳಿಗೆ ಮುದ್ರೆ ಹಾಕುವುದು ಮತ್ತು ಅವುಗಳನ್ನು ಪರಿಶೀಲಿಸುವುದೇ ಮೊದಲಾದ ಕೆಲಸಗಳಲ್ಲದೇ ಅಧಿನಿಯಮ ಹಾಗೂ ನಿಬಂಧನೆಗಳನ್ನು ಉಲ್ಲಂಘಿಸುವಂತಹ ವ್ಯಾಪಾರಿಗಳ ವಿರುದ್ಧ ಕಾನೂನು ಕ್ರಮ ಸಹ ಕೈಗೊಳ್ಳುವರು. ಈ ಇಲಾಖೆ ತೂಕ ಮತ್ತು ಅಳತೆ ಪ್ರಮಾಣಗಳ ಅಧಿನಿಯಮ (ಪ್ಯಾಕ್ ಮಾಡಿದ ವಸ್ತುಗಳು) ೧೯೭೭ನ್ನು ಕಾನೂನು ಬದ್ಧವಾಗಿ ಜಾರಿಗೆ ತರುತ್ತಿದೆ. ಇದಕ್ಕನುಗುಣವಾಗಿ ಪ್ರತಿಯೊಬ್ಬ ತಯಾರಕನೂ ಮತ್ತು ಭಾಂಗಿ (ಪೊಟ್ಟಣ) ಕಟ್ಟುವವನು, ಭಾಂಗಿಯ ಮೇಲೆ ತಯಾರಕನ ಹೆಸರು, ಪ್ಯಾಕ್ ಮಾಡುವವರ ಹೆಸರು, ವಸ್ತು ತಯಾರಾದ ಮತ್ತು ಪ್ಯಾಕ್ ಮಾಡಿದ ದಿನಾಂಕ, ವಸ್ತುವಿನ ನಿವ್ವಳ ತೂಕ ಮತ್ತು ನಿವ್ವಳ ಬೆಲೆ, ವಸ್ತುವಿನ ಗುಣಮಟ್ಟ ಮತ್ತು ಅದರ ಉಪಯೋಗದ ಒಳಗಿನ ದಿನಾಂಕ ಮುಂತಾದವುಗಳನ್ನು ಶಾಸನ ರೀತ್ಯ ಕಡ್ಡಾಯಗೊಳಿಸಲಾಗಿದೆ. ತೂಕ ಮತ್ತು ಅಳತೆಯ ಸಾಧನಗಳು ಅವುಗಳ ಪರಿಕರಗಳು ಶುದ್ಧ ಪ್ರಾಮಾಣೀಕೃತ ಹಾಗೂ ಕರಾರುವಕ್ಕಾಗಿ ಪರೀಕ್ಷೆಗೊಳಪಟ್ಟು ನ್ಯಾಯಬದ್ಧವಾಗಿ ತೂಕ ಮತ್ತು ಅಳತೆಯನ್ನು ನೋಡಿಕೊಳ್ಳುವುದು, ಕಾನೂನಿನ ನಿಬಂಧನೆ ಮತ್ತು ನಿಯಂತ್ರಣಗಳಿಗೆ ಒಳಪಟ್ಟು ಪ್ರತಿವರ್ಷ ನವೀಕರಿಸುವಂತೆ ಕಟ್ಟುನಿಟ್ಟಾಗಿ ಜಾರಿಗೆ ತಂದಿದೆ. ಇಂತಹ ಪ್ರಾಮಾಣೀಕೃತ ಅಳತೆ ಮತ್ತು ತೂಕದಲ್ಲಿ ಮೋಸ, ವಂಚನೆ, ಅಥವಾ ಕೃತಕವಾಗಿ ಕಡಿಮೆ ತೂಕ ಮತ್ತು ಅಳತೆ ಮಾಡುವ ಪ್ರಕರಣಗಳನ್ನು ನಿಯಂತ್ರಣ ಕಾಯಿದೆ ಪ್ರಕಾರ ವ್ಯಾಪಾರದ ಲೈಸೆನ್ಸ್ ರದ್ದುಪಡಿಸುವ, ದಂಡ ಮತ್ತು ಶಿಕ್ಷೆಗೆ ಒಳಪಡಿಸುವ ಕಾನೂನನ್ನು ಜಾರಿಗೆ ತಂದಿದೆ.

ಪೆಟ್ರೋಲ್ ಬಂಕುಗಳಲ್ಲಿ ವಿದ್ಯುನ್ಮಾನ ಮೆಟ್ರಿಕ್ ಪದ್ಧತಿಯ ಸ್ವಯಂ ಚಾಲಿತ ವಿದ್ಯುತ್ ಉಪಕರಣಗಳನ್ನು ಅಳವಡಿಸಿ ಕರಾರುವಕ್ಕಾಗಿ ಪೆಟ್ರೋಲ್, ಡೀಜಲ್ ಮತ್ತು ಇತರೇ ದ್ರವಪದಾರ್ಥಗಳನ್ನು ಅಳತೆ ಮಾಡುವಂತೆ ನೋಡಿಕೊಳ್ಳಲಾಗುತ್ತದೆ. ನಿಯಂತ್ರಿತ ಮಾರುಕಟ್ಟೆ ಸಹಕಾರಿ ಮಾರಾಟ ಮಂಡಳಿ, ಮಂಡಿಪೇಟೆಯಲ್ಲದೆ ಜಿಲ್ಲೆಯ ಎಲ್ಲ ಅಂಗಡಿಗಳಲ್ಲಿ ಆಹಾರ ಮತ್ತು ನಾಗರೀಕ ಸರಬರಾಜು ಮತ್ತು ಗ್ರಾಹಕರ ವಿಭಾಗವು ಪಡಿತರ ಪದ್ಧತಿಗೊಳಪಟ್ಟ ಕಾರ್ಡುದಾರರಿಗೆ ನ್ಯಾಯಬೆಲೆ ಅಂಗಡಿಗಳು ಮತ್ತು ಗ್ರಾಹಕರ ಸಹಕಾರ ಸೊಸೈಟಿಗಳಲ್ಲಿ ವಿದ್ಯುನ್ಮಾನದ ಮೆಟ್ರಿಕ್ ಪದ್ಧತಿಯ ತೂಕ ಮತ್ತು ಅಳತೆಯನ್ನು ಅಳವಡಿಸಿದೆ.

ಪ್ರಸ್ತುತ ಮೆಟ್ರಿಕ್ ಪದ್ಧತಿಯ ತೂಕ ಮತ್ತು ಅಳತೆಯಲ್ಲಿ ಬೆಲೆಗಳನ್ನು ನಮೂದಿಸಲು ಬಹಳ ಸುಲಭವಾಗಿರುತ್ತದೆ. ತೂಕ ಮಾಡಲು ಕಿಲೋ ಗ್ರಾಂ (ಕೆ.ಜಿ.) ಗುಣಕಗಳಲ್ಲಿ ವಿಭಾಗಗಳಿವೆ. ಅಳತೆ ಮಾಡಲು ಬೇರೆ ಬೇರೆ ಗುಣಕಗಳಲ್ಲಿ ಲೀಟರ್ ಮತ್ತು ಮೀಟರ್‌ಗಳಿವೆ. ಭಾರವಾದಂತಹ ಸಾಮಾನುಗಳನ್ನು ತೂಕ ಮಾಡಲು ಕಾಂಟರ್, ಸ್ಕೇಲ್, ಪ್ಲಾಟ್‌ಫಾರಂ, ತೂಕದ ಸಾಧನಗಳು, ಲಾರಿ ವೇ ಬ್ರಿಡ್ಜ್ ಮುಂತಾದವುಗಳಿವೆ. ಅದೇ ರೀತಿ ಅತಿ ಸೂಕ್ಷ್ಮವಾದ ಬೆಲೆ ಬಾಳುವ ವಸ್ತುಗಳನ್ನು ತೂಕ ಮಾಡಲು ಇಲೆಕ್ಟ್ರಾನಿಕ್ ಬ್ಯಾಲೆನ್ಸ್ ತಕ್ಕಡಿಗಳು ವಿಶೇಷ ಇಲೆಕ್ಟ್ರಾನಿಕ್ ಕ್ಯಾರಟ್ ಬ್ಯಾಲೆನ್ಸ್‌ಗಳು ಕೂಡ ಬಳಕೆಯಲ್ಲಿವೆ. ವಾಹನಗಳಿಗೆ ಪೆಟ್ರೋಲ್, ಡೀಜಲ್ ಮುಂತಾದ ಇಂಧನ ತುಂಬಲು ಮೀಟರ್‌ಗಳನ್ನೊಳಗೊಂಡ ಪೆಟ್ರೋಲ್ ಪಂಪುಗಳಿವೆ. ಇದೇ ರೀತಿ ಅಡುಗೆ ಅನಿಲ ಸಿಲೆಂಡರ್ (ಎಲ್‌ಪಿಜಿ) ಮತ್ತು ವಾಹನಗಳಿಗೆ ಅನಿಲದ ಪ್ರಮಾಣವನ್ನು ತಿಳಿಸುವ ಮಾಪಕಗಳು ಉಪಯೋಗದಲ್ಲಿವೆ. ಮುಚ್ಚಿರುವ ಪೊಟ್ಟಣಗಳ ಕಾನೂನು (ಪ್ಯಾಕೇಜ್ ಕಾಮೋಡಿಟಿ ನಿಯಮ), ಸ್ಟ್ಯಾಂಡರ್ಡ್ಸ್ ಆಫ್ ವೈಟ್ಸ್ ಅಂಡ್ ಮೆಸರ್ಸ್ ಆಕ್ಟ್ ೧೯೭೬ರ ನಿಯಮ ಜಾರಿಯಲ್ಲಿದೆ.

ಜಿಲ್ಲೆಯಲ್ಲಿ ಮೋಸದ ಅಳತೆಯನ್ನು ಬಳಸಿ ತೂಕ ಮಾಡುವ ವ್ಯಾಪಾರಿಗಳ ತೂಕ ಮತ್ತು ಅಳತೆ ಸಾಧನ ಸಲಕರಣೆಗಳನ್ನು ನಿಯಂತ್ರಣಾಧಿಕಾರಿಗಳು ವಶಪಡಿಸಿಕೊಂಡು ವ್ಯಾಪಾರದ ಪರವಾನಗಿಯನ್ನು ರದ್ದುಪಡಿಸುವ ದಂಡವಿಧಿಸುವ ಜೊತೆಗೆ ಶಿಕ್ಷೆಗೆ ಒಳಪಡಿಸುವ ಕ್ರಮವನ್ನು ಜಾರಿಗೊಳಿಸಿದೆ. ಕಾನೂನು ಮಾಪನ ಇಲಾಖೆ, ಚಾಮರಾಜನಗರ ಜಿಲ್ಲೆ ೨೦೦೩– ರಿಂದ ೨೦೦೮ರವರೆಗೆ ಸಾಧಿಸಿದ ಪ್ರಗತಿಯನ್ನು ಮುಂದಿನ ಕೋಷ್ಟಕದಲ್ಲಿ ತಿಳಿಸಲಾಗಿದೆ.

**ಕೋಷ್ಟಕ ೬.೧೩: ಕಾನೂನು ಮಾಪನ ಶಾಸ್ತ್ರ ಇಲಾಖೆ ಸಾಧಿಸಿದ ಪ್ರಗತಿ (ಲಕ್ಷ ರೂ.ಗಳಲ್ಲಿ)**

| ವಿವರ | ೨೦೦೩–೦೪ | ೨೦೦೪–೦೫ | ೨೦೦೫–೦೬ | ೨೦೦೬–೦೭ | ೨೦೦೭–೦೮ |
| --- | --- | --- | --- | --- | --- |
| ವ್ಯಾಪಾರಸ್ಥರ ನೋಂದಣಿ ಸಂಖ್ಯೆ | ೨೧೦೦ | ೨೧೦೦ | ೨೧೦೦ | ೧೪೫೦ | ೧೪೫೦ |
| ಸತ್ಯಾಪನ ಶುಲ್ಕ | ೨೯೦೯೮೭ | ೩೦೦೯೧೪ | ೩೬೩೫೭೨ | ೫೩೫೯೨೪ | ೫೯೦೪೦೬ |
| ಅಭಿಸಂದಾನ ದಂಡ | ೧೧೨೫೫೦ | ೧೮೭೦೭೫ | ೨೯೬೭೫೦ | ೨೩೬೯೦೦ | ೨೬೫೩೦೦ |
| ಹೂಡಿದ ಮೊಕದ್ದಮೆಗಳ ಸಂಖ್ಯೆ | ೩೭೧ | ೪೯೫ | ೨೭೫ | ೩೩೫ | ೪೦೧ |

## ನಾಣ್ಯ ಪದ್ಧತಿ ಮತ್ತು ಹಣದ ಚಲಾವಣೆ

ಪ್ರಾಚೀನ ಕಾಲದಲ್ಲಿ ಮೈಸೂರು ಸಂಸ್ಥಾನವು ರಾಜಮನೆತನದ ಆಳ್ವಿಕೆಗೆ ಒಳಪಟ್ಟ ಕಾಲದಲ್ಲಿ ರಾಜ್ಯದಲ್ಲಿ ನಾಣ್ಯ ಪದ್ಧತಿ ಚಲಾವಣೆಯಲ್ಲಿದ್ದಂತೆ ಚಾಮರಾಜನಗರ ಜಿಲ್ಲೆಯಲ್ಲೂ ಚಿನ್ನ, ಬೆಳ್ಳಿ ನಾಣ್ಯಗಳು ಚಲಾವಣೆಯಲ್ಲಿದ್ದ ಅಂಶ ಶಾಸನಗಳಲ್ಲಿದೆ. ತಲಕಾಡಿನ ಗಂಗರಸರ ಕಾಲದಲ್ಲಿ ಗಜರಾಜನ ಚಿಹ್ನೆಯನ್ನು ನಾಣ್ಯದಲ್ಲಿ ಮುದ್ರಿಸಿ,

ಜಾರಿಗೆ ತಂದ ಬಗ್ಗೆ ಇತಿಹಾಸಕಾರ ಪ್ರೊ. ಎಂ.ಎಚ್. ಕೃಷ್ಣ ಅವರು ಉಲ್ಲೇಖಿಸಿದ್ದಾರೆ. ಆಗಿನ ಕಾಲದಲ್ಲಿ ಚಿನ್ನ, ಬೆಳ್ಳಿ ಮತ್ತು ತಾಮ್ರದ ಲೋಹಗಳಿಂದ ಮುದ್ರಿಸಿದ ಐದು ಪ್ರಕಾರದ ನಾಣ್ಯಗಳು ಚಲಾವಣೆಯಲ್ಲಿದ್ದು, 'ಗದ್ಯಾಣ" ನಾಣ್ಯಪದ್ಧತಿ ಚಾಲ್ತಿಯಲ್ಲಿದ್ದಿತು.

ಹಿಂದಿನ ಕಾಲದಲ್ಲಿ ಹಲವಾರು ತರಹದ 'ಗದ್ಯಾಣ' ನಾಣ್ಯಗಳು ಚಲಾವಣೆಯಲ್ಲಿದ್ದವು. ಕ್ರಿ.ಶ. ೧೧೪೯ರ ಶಾಸನಗಳಲ್ಲಿ ಗದ್ಯಾಣದ ಉಲ್ಲೇಖವಿದೆ. ಈ ನಾಣ್ಯಗಳು ಚಿನ್ನದಲ್ಲಿ ಮಾಡಲ್ಪಟ್ಟಿದ್ದವು. ತರುವಾಯ ಟಂಕಸಾಲೆಯಲ್ಲಿ ಬಂಗಾರದ ಎರಕ ಹೊಯ್ಯಲ್ಪಟ್ಟ ನಾಣ್ಯಗಳು ಚಿನ್ನ, ಬೆಳ್ಳಿ, ತಾಮ್ರ ಮುಂತಾದ ಒಂದಕ್ಕಿಂತ ಹೆಚ್ಚು ಲೋಹಗಳ ಮಿಶ್ರಣಗಳಿಂದ ಮಾಡಲ್ಪಟ್ಟ ನಾಣ್ಯಗಳಾಗಿದ್ದು, ಚಲಾವಣೆಯಲ್ಲಿದ್ದವು. ಬಂಗಾರದ ಗಟ್ಟಿಯಿಂದ ಮಾಡಲ್ಪಟ್ಟ ನಾಣ್ಯಕ್ಕೆ ಹೊನ್ನು ನಾಣ್ಯಗಳೆಂದೂ, 'ಗಟ್ಟಿ ವರಾಹ' ಅಂದರೆ ಹೆಚ್ಚು ಬಂಗಾರವನ್ನು ಹೊಂದಿರುವ ವರಹಗಳಿಗೆ ದೊಡ್ಡ ವರಹ ಗದ್ಯಾಣ ನಾಣ್ಯವೆಂದೂ, ತುಮಕೂರು ಜಿಲ್ಲೆಯಲ್ಲಿ ಆಗಿನ ಕಾಲದಲ್ಲಿ ಚಲಾವಣೆಯಲ್ಲಿದ್ದವು. ವಿಜಯನಗರ ರಾಜರಿಂದ ನೀಡಲ್ಪಟ್ಟ ಸಣ್ಣ ಪ್ರತಾಪ ಗದ್ಯಾಣ ನಾಣ್ಯಗಳು ಬಳಕೆಯಲ್ಲಿದ್ದವು. ಗದ್ಯಾಣ ಅಥವಾ ವರಾಹ ನಾಣ್ಯಗಳೆಂದು ಚಾಮರಾಜನಗರ ಜಿಲ್ಲೆಯಲ್ಲಿ ಚಲಾವಣೆಯಲ್ಲಿದ್ದ ಬಗ್ಗೆ ಶಾಸನಾಧಾರಗಳಿವೆ. ಅಲ್ಪ ಮೊತ್ತದ ಬೆಳ್ಳಿ ನಾಣ್ಯವೂ ಸಹ ಚಲಾವಣೆಯಲ್ಲಿದ್ದವು.

ವಿಜಯನಗರದ ಆಳ್ವಿಕೆಯ ಕಾಲದಲ್ಲಿ ಚಿನ್ನ ಮತ್ತು ಬೆಳ್ಳಿ ಲೋಹಗಳಿಂದ ಟಂಕಿಸಿದ ಒಂದು ನಾಣ್ಯದ ತೂಕವು ೫೨ ಗ್ರೈನ್ಸ್ ಇತ್ತು. ಆ ಕಾಲದಲ್ಲಿ ಪಗೋಡ, ಹೊನ್ನು, ಪ್ರತಾಪ, ಕಟಿ, ಪಣ ಆಗ, ಪಾವಲಿ, ಆಣೆ, ಕಾಸು, ದುಗ್ಗಾಣೆ ಮುಂತಾಗಿ ವಿವಿಧ ವರ್ಗಗಳಲ್ಲಿ ಚಲಾವಣೆಯಲ್ಲಿದ್ದವು. ಮೈಸೂರು ರಾಜರು ಈ ನಾಣ್ಯ ಪದ್ಧತಿಯನ್ನು ಚಲಾವಣೆಗೆ ತಂದಿದ್ದರು.

೧೬೩೮-೧೬೫೯ರ ಅವಧಿಯಲ್ಲಿ ಮೈಸೂರು ಸಂಸ್ಥಾನದ ಕಂಠೀರವ ನರಸರಾಜರು ಮತ್ತು ಮುಮ್ಮಡಿ ಕೃಷ್ಣರಾಜ ಒಡೆಯರು (೧೭೯೯-೧೮೬೮ರಲ್ಲಿ) ವಿಜಯನಗರ ನಾಣ್ಯ ಪದ್ಧತಿಯನ್ನು ಮುಂದುವರಿಸುವುದರ ಜೊತೆಗೆ ಬೆಳ್ಳಿ ಮತ್ತು ತಾಮ್ರ ಮಿಶ್ರಿತ ಲೋಹದಲ್ಲಿ, ಸಿಂಹ ಲಾಂಛನವನ್ನು ನಾಣ್ಯದ ಒಂದು ಮುಖದಲ್ಲಿ ಮುದ್ರಿಸಿ ಇನ್ನೊಂದು ಮುಖದಲ್ಲಿ ಕನ್ನಡ, ದೇವನಾಗರಿ, ಇಂಗ್ಲಿಷ್ ಮತ್ತು ಪರ್ಶಿಯನ್ ಭಾಷೆಗಳಲ್ಲಿ ಲೇಖ ಮುದ್ರಿಸುವುದರ ಮೂಲಕ ಚಲಾವಣೆಗೆ ತಂದಿದ್ದರು. ಅವುಗಳನ್ನು ಕಂಠೀರಾಯ ಪಗೋಡ, ಆಣೆ, ದುಡ್ಡು ಎಂದು ಕರೆಯಲಾಗಿದ್ದಿತು. ಚಿನ್ನದ ಒಂದು ರೂಪಾಯಿ ನಾಣ್ಯದ ಮುಖ ಬೆಲೆ ೫೨ ಗ್ರೈನ್ಸ್, ೨೬ ವರಹದ ನಾಣ್ಯಕ್ಕೆ ಅರ್ಧ ರೂಪಾಯಿ, ೫.೨ ಗ್ರೈನ್ಸ್ ನಾಣ್ಯಕ್ಕೆ ಹತ್ತನೇ ಒಂದು ಭಾಗದ ನಾಣ್ಯವೆಂದು ಕರೆಯಲಾಗಿದ್ದಿತು. ಬೆಳ್ಳಿಯ ರೂಪಾಯಿ, ಅರ್ಧರೂಪಾಯಿ, ಕಾಲು ರೂಪಾಯಿ (ಪಾವಲಿ) ಎಂಬುದಾಗಿ ಚಲಾವಣೆಯಲ್ಲಿದ್ದಿತು.

ಭಾರತ ಸರಕಾರವು ೧೮೭೦ರಲ್ಲಿ ನೂತನ ನಾಣ್ಯ ಪದ್ಧತಿಯನ್ನು ಜಾರಿಗೆ ತಂದ ಸಂದರ್ಭದಲ್ಲಿ ಮೈಸೂರು ಸಂಸ್ಥಾನವು ಈ ನಾಣ್ಯಪದ್ಧತಿಯನ್ನು ಶಾಸನಬದ್ಧವಾಗಿ ಸರ್ವಮಾನ್ಯತೆ ನೀಡಿ ಚಲಾವಣೆಗೆ ಸ್ವೀಕರಿಸಿತ್ತು. ೧೮೮೧ರ ಅನುಬಂಧ ೧೫ರ ಶಾಸನದ ಪ್ರಕಾರ ಬ್ರಿಟೀಷ್ ಸರ್ಕಾರವು ಮೈಸೂರು ಸಂಸ್ಥಾನದಲ್ಲಿ ಕಾನೂನುಬದ್ಧವಾದ ನಾಣ್ಯ ಪದ್ಧತಿಯನ್ನು ಚಲಾವಣೆಗೆ ತಂದಿತು.

ಹೈದರಾಲಿ ಆಳ್ವಿಕೆಯಲ್ಲಿ ಚಿನ್ನ, ಬೆಳ್ಳಿ ಮತ್ತು ತಾಮ್ರ ಮಿಶ್ರಿತ ನಾಣ್ಯಪದ್ಧತಿ ಜಾರಿಯಲ್ಲಿದ್ದಿತು. ಈ ನಾಣ್ಯ ಪದ್ಧತಿಯು ಕೆಳದಿಯ ಸದಾಶಿವರಾಯರು ಚಲಾವಣೆಗೆ ತಂದ ನಾಣ್ಯ ಪದ್ಧತಿಯಂತೆಯೇ ಸಮಾನವಾಗಿದ್ದಿತು.

ಟಿಪ್ಪುಸುಲ್ತಾನ ಪರ್ಶಿಯನ್ ಲಿಪಿಯೊಂದಿಗೆ ತಮ್ಮ ಮುಸ್ಲಿಮ್ ಧರ್ಮಗುರುಗಳ ಮುಖವನ್ನೂ ನಾಣ್ಯವನ್ನು ಚಲಾವಣೆಗೆ ತಂದಿರುವುದರ ಬಗ್ಗೆ ಆಗಿನ ಶಾಸನಗಳಿಂದ ತಿಳಿದುಬಂದಿದೆ. ಟಿಪ್ಪುಸುಲ್ತಾನ್ ಅಧಿಕ ಮೌಲ್ಯವುಳ್ಳ ನಾಣ್ಯಕ್ಕೆ ಅಹಮದಿ ಎಂದೂ, ಅತ್ಯಂತ ಕಡಿಮೆ ಮೌಲ್ಯದ ನಾಣ್ಯಕ್ಕೆ ಪನಮ್ ಎಂದು ಟಿಪ್ಪು ಕರೆದಿದ್ದರು. ಅರ್ಧ ರೂಪಾಯಿಗೆ ಅಬೀದಿ ಎಂದೂ, ಕಾಲು ರೂಪಾಯಿಗೆ ಬದೂರಿ ಎಂದು ಕರೆಯಲಾಗಿದ್ದಿತು. ತಾಮ್ರದ ನಾಣ್ಯಗಳಿಗೆ ಪಾವಲಿ, ಎರಡಾಣೆ, ಒಂದಾಣೆ, ದುಗ್ಗಾಣೆ, ಕಾಸು (ಪೈಸೆ) ಎಂದು ಗುರುತಿಸಲಾಗಿದ್ದಿತು. ಟಿಪ್ಪುಸುಲ್ತಾನ್ ಕಾಲದಲ್ಲಿ ಶ್ರೀರಂಗಪಟ್ಟಣದ ಟಂಕಸಾಲೆಯಲ್ಲಿ ಲೋಹಗಳಿಂದ ಮುದ್ರಿಸಿದ ನಾಣ್ಯಗಳಿಗೆ ಹೈದರಾಲಿ, ಇಮಾನಿ ಎಂಬ ಹೆಸರುಗಳಿಂದ ಕರೆಯುತ್ತಿದ್ದರು.

೧೯೧೯ರಲ್ಲಿ ಭಾರತ ಸರ್ಕಾರವು ಕಾನೂನು ಬದ್ಧವಾದ ನಾಣ್ಯ ಪದ್ಧತಿಯನ್ನು (ಕರೆನ್ಸಿ ನೋಟುಗಳೆಂದು) ಚಲಾವಣೆಗೆ ತಂದಿತು. ಈ ನಾಣ್ಯಪದ್ಧತಿ ಮೈಸೂರು ಸಂಸ್ಥಾನದಲ್ಲಿ ಜಾರಿಯಲ್ಲಿದ್ದು, ಒಂದು ರೂಪಾಯಿ=೧೬ ಆಣೆ; ಅರ್ಧ ರೂಪಾಯಿ=ಎಂಟು ಆಣೆ; ಪಾವಲಿ = ನಾಲ್ಕು ಆಣೆ, ಎರಡಾಣೆ, ಅರ್ಧ ಆಣೆ, ಕಾಸು(ಪೈ), ಎಂಬ ಹೆಸರುಗಳಿಂದ ಚಲಾವಣೆಯಲ್ಲಿದ್ದಿತು. (ಒಂದು ಆಣೆಗೆ ೧೨ ಕಾಸು ಲೆಕ್ಕದಲ್ಲಿ)

ಸ್ವಾತಂತ್ರ್ಯಪೂರ್ವ ಭಾರತದಲ್ಲಿ ಬ್ರಿಟಿಷ್ ಚರ್ಕವರ್ತಿ ಆರನೇ ಜಾರ್ಜ್‌ನ ಮುಖ ಮುದ್ರೆಯುಳ್ಳ ನಾಣ್ಯಗಳು ನಮ್ಮ ರಾಜ್ಯದಲ್ಲಿ ಚಲಾವಣೆಯಲ್ಲಿದ್ದಿತು. ಸ್ವಾತಂತ್ರ್ಯಾನಂತರ ಭಾರತದ ನಾಣ್ಯ ಪದ್ಧತಿಯಲ್ಲಿ ಸಂವಿಧಾನಾತ್ಮಕವಾದ, ಪ್ರಜಾಸತ್ತಾತ್ಮಕ ಗಣರಾಜ್ಯದ ರಚನೆಯಲ್ಲಿ ನಾಣ್ಯ ಪದ್ಧತಿ ೧೯೫೭ರವರೆಗೂ ಚಲಾವಣೆಯಲ್ಲಿತ್ತು. ೧-೦೭-೧೯೫೭ರಿಂದ ಜಾರಿಯಾದ ದಶಮಾಂಶ ಪದ್ಧತಿಯ ನಾಣ್ಯ ಪದ್ಧತಿಯ ಈಗ ಚಾಮರಾಜನಗರ ಜಿಲ್ಲೆಯಲ್ಲಿಯೂ ಚಲಾವಣೆಯಲ್ಲಿದೆ.

ಭಾರತೀಯ ರಿಜರ್ವ್ ಬ್ಯಾಂಕು ೧೯೩೫ ಏಪ್ರಿಲ್ ೧ ರಂದು ಸ್ಥಾಪನೆಯಾದ ನಂತರ ರೂಪಾಯಿ ಕರೆನ್ಸಿ ನೋಟುಗಳನ್ನು ಮುದ್ರಿಸಿ ಚಲಾವಣೆಗೆ ತರುವ ಪರಮಾಧಿಕಾರ ಹೊಂದಿದೆ. ರೂ. ೨, ೫, ೧೦, ೨೦, ೫೦, ೧೦೦, ೫೦೦ ಮತ್ತು ೧,೦೦೦ ಮೌಲ್ಯಗಳ ನೋಟುಗಳನ್ನು ಮುದ್ರಿಸಿ ಚಲಾವಣೆಗೆ ತರುತ್ತದೆ. ಒಂದು ರೂಪಾಯಿ ಮತ್ತು ಚಿಲ್ಲರೆ ನಾಣ್ಯಗಳನ್ನು ಭಾರತ ಸರ್ಕಾರದ ಹಣಕಾಸು ಸಚಿವಾಲಯ ಮುದ್ರಿಸುತ್ತದೆ. ಭಾರತೀಯ ರಿಜ಼ರ್ವ್ ಬ್ಯಾಂಕಿನಲ್ಲಿ ಇಶ್ಯೂ ಇಲಾಖೆ ಎಂಬ ಪ್ರತ್ಯೇಕವಾದ ಕಾರ್ಯಾಲಯವು ಕರೆನ್ಸಿ ನೋಟುಗಳಿಗೆ ಆಧಾರವಾಗಿ (ಬೆಂಬಲವಾಗಿ) ಚಿನ್ನ ಅಥವಾ ಬಂಗಾರದ ಗಟ್ಟಿಗಳು, ವಿದೇಶಿ ಸಾಲಪತ್ರಗಳು, ಮತ್ತು ಸರ್ಕಾರದ ರೂಪಾಯಿ ಭರವಸೆಯ ಸಾಲ ಪತ್ರಗಳನ್ನು ಆಸ್ತಿಗಳನ್ನಾಗಿ ಬ್ಯಾಂಕು ಬೆಂಬಲವಾಗಿ ಇಟ್ಟುಕೊಂಡಿರುತ್ತದೆ. ರೂಪಾಯಿ ಕರೆನ್ಸಿ ನೋಟುಗಳ ಚಲಾವಣೆಯು ಚಾಮರಾಜನಗರ ಜಿಲ್ಲೆಯಲ್ಲಿಯೂ ಚಾಲ್ತಿಯಲ್ಲಿದೆ.

## ವಿಮೆ ವ್ಯವಹಾರ

**ಕರ್ನಾಟಕ ಸರ್ಕಾರಿ ವಿಮಾ ಇಲಾಖೆ:** ಕರ್ನಾಟಕ ಸರ್ಕಾರಿ ವಿಮಾ ಇಲಾಖೆಯು ೧೮೬೧ರಲ್ಲಿ ಮೈಸೂರು ಸಂಸ್ಥಾನದ ದಿವಾನರಾಗಿದ್ದ ಶ್ರೀ. ಕೆ. ಶೇಷಾದ್ರಿ ಅಯ್ಯರ್‌ರವರಿಂದ ಸ್ಥಾಪಿಸಲ್ಪಟ್ಟು ರಾಜ್ಯ ಸರ್ಕಾರಿ ನೌಕರರಿಗೆ ತನ್ನ ಸೇವೆಯನ್ನು ಸಲ್ಲಿಸುವುದರಲ್ಲಿ ಅತ್ಯಂತ ಪ್ರಮುಖವಾದ ಹೊಣೆಯನ್ನು ಹೊಂದಿದೆ. ಸರ್ಕಾರಿ ನೌಕರರು ಮತ್ತು ಅವರ ಕುಟುಂಬದ ಸದಸ್ಯರ ಭವಿಷ್ಯದ ಯೋಗಕ್ಷೇಮಕ್ಕೆ ಸಂರಕ್ಷಣೆ ನೀಡುತ್ತದೆ. ರಾಜ್ಯಸರ್ಕಾರಿ ನೌಕರರಿಗೆ ಜೀವವಿಮೆಯನ್ನು ಕಡ್ಡಾಯಗೊಳಿಸಿದೆ. ನೌಕರರು ತಮ್ಮ ಸೇವೆಯಿಂದ ನಿವೃತ್ತಿ ಹೊಂದಿದಾಗ ಆರ್ಥಿಕ ಸೌಲಭ್ಯಗಳನ್ನು ಒದಗಿಸಿದ್ದು, ನೌಕರರು ಸೇವೆಯಲ್ಲಿರುವಾಗ ಅಕಾಲಿಕ ಮರಣಕ್ಕೆ ತುತ್ತಾದಾಗ ಆ ನೌಕರನ ಕುಟುಂಬ ವರ್ಗಕ್ಕೆ ಮತ್ತು ಆಶ್ರಿತರಿಗೆ ಸಂರಕ್ಷಣೆಯನ್ನು ನೀಡುತ್ತದೆ. ಕರ್ನಾಟಕ ಸರ್ಕಾರಿ ವಿಮಾ

ಇಲಾಖೆಯು ೧೯೭೬ರಲ್ಲಿ ತನ್ನ ಆಡಳಿತವನ್ನು ವಿಕೇಂದ್ರೀಕರಿಸಿ ವಿಮಾ ಪಾಲಿಸಿದಾರರ ವಾಸಸ್ಥಳದಲ್ಲಿಯೇ ತ್ವರಿತ ಸೇವೆ ಸಲ್ಲಿಸಲು ಅನುಕೂಲವಾಗುವಂತೆ ಚಾಮರಾಜನಗರ ಜಿಲ್ಲೆಯ ನಾಲ್ಕು ತಾಲೂಕುಗಳಲ್ಲಿ ವಿಮಾ ಕಛೇರಿಗಳನ್ನು ಈಗಾಗಲೇ ತೆರೆದಿದೆ.

**೧. ಕಡ್ಡಾಯ ಜೀವವಿಮಾ ಶಾಖೆ:** ಕರ್ನಾಟಕ ಸರ್ಕಾರಿ ನೌಕರರಿಗೆ ಕಡ್ಡಾಯ ಜೀವವಿಮಾ ನಿಯಮಗಳು ೧೯೫೫ರಿಂದ ಜಾರಿಯಲ್ಲಿದೆ. ನೌಕರರು ತಮ್ಮ ವೇತನ ಶ್ರೇಣಿಗೆ ಅನುಗುಣವಾಗಿ ಮತ್ತು ತಾನು ಅಪೇಕ್ಷಿಸಿದಲ್ಲಿ ಹೆಚ್ಚಿನ ಮೊತ್ತಕ್ಕೆ ಕಡ್ಡಾಯವಾಗಿ ವಿಮೆ ಪಾಲಿಸಿಗಳಿಗೆ ಒಳಪಡಬೇಕಾಗುತ್ತದೆ.

**೨. ವಾಹನ ವಿಮಾ ಶಾಖೆ:** ಕರ್ನಾಟಕ ರಾಜ್ಯ ಸರ್ಕಾರದ ಹಾಗೂ ಸರ್ಕಾರದ ಆರ್ಥಿಕ ಹಿತಾಸಕ್ತಿ ಹೊಂದಿರುವ ಎಲ್ಲಾ ವಾಹನಗಳನ್ನು ಕಡ್ಡಾಯ ವಿಮೆಗೆ ಒಳಪಡಿಸಿ ಪ್ರತಿ ವರ್ಷ ಜಿಲ್ಲಾ ಕೇಂದ್ರದ ಕಚೇರಿಯಲ್ಲಿಯೇ ನವೀಕರಿಸುವ ಕಾರ್ಯ ನಿರ್ವಹಿಸುತ್ತಿದೆ. ಅಪಘಾತದ ವಿಮೆಗೆ ಸಂಬಂಧಿಸಿದ ಪ್ರಕರಣಗಳನ್ನು ಬೆಂಗಳೂರಿನ ಕೇಂದ್ರ ಕಚೇರಿಯಲ್ಲಿ ನಿರ್ವಹಿಸಲಾಗುತ್ತದೆ.

**೩. ಕುಟುಂಬ ಕಲ್ಯಾಣ ನಿಧಿ:** ಕುಟುಂಬ ಕಲ್ಯಾಣ ನಿಧಿ ಯೋಜನೆಯು ಸ್ಥಳೀಯ ಸಂಸ್ಥೆಗಳು ಮತ್ತು ಅನುದಾನ ಪಡೆಯುತ್ತಿರುವ ಶಿಕ್ಷಣ ಸಂಸ್ಥೆಗಳ ನೌಕರರ ಸಾಮೂಹಿಕ ಭದ್ರತೆಯ ಕ್ರಮವಾಗಿ ಈ ಶಾಖೆಯು ಕಾರ್ಯನಿರ್ವಹಿಸುತ್ತದೆ.

೧೯೧೬ರಲ್ಲಿ ಜೀವವಿಮಾ ನಿಗಮವು ಸರ್ಕಾರೇತರ ಖಾಸಗಿ ನೌಕರರಿಗೆ, ಇತರ ಎಲ್ಲಾ ವರ್ಗದ ಜನರಿಗೆ ವಿಮಾ ಯೋಜನೆಯನ್ನು ವಿಸ್ತರಿಸಿತು. ೧೯೩೧ರಲ್ಲಿ ವಿಮಾ ಸಂಸ್ಥೆಯು ಸುರಕ್ಷಿತಾ ಯೋಜನೆ ಮತ್ತು ವಿವಾಹ ವಿಮಾ ಆಶ್ವಾಸನೆ ಸಂಸ್ಥೆಯನ್ನು ಸ್ಥಾಪಿಸಿ ಅದರ ವಿಸ್ತರಣೆಗಳಿಗೆ ₹ ೩.೨೧ ಲಕ್ಷಗಳಷ್ಟು ಬಂಡವಾಳವನ್ನು ವಿನಿಯೋಗಿಸಿ ಅದರ ಪ್ರಯೋಜನದಿಂದ ವಿಮಾ ಸೌಲಭ್ಯಗಳನ್ನು ವಿಸ್ತರಿಸಿತು. ಅದೇ ಸಂದರ್ಭದಲ್ಲಿ ವಿಮಾ ಸಂಸ್ಥೆಯು ಏಷ್ಯಾಟಿಕ್ ಸುರಕ್ಷತಾ ಜೀವವಿಮಾ ಸಂಸ್ಥೆ ಮತ್ತು ಸಾರ್ವತ್ರಿಕ ಆಶ್ವಾಸನಾ ಸಂಸ್ಥೆಯನ್ನು ಸ್ಥಾಪಿಸಿತು. ೧೯೫೬ರಲ್ಲಿ ಜೀವವಿಮಾ ನಿಗಮವನ್ನು ರಾಷ್ಟ್ರೀಕರಣಗೊಳಿಸಲಾಯಿತು. ರಾಷ್ಟ್ರೀಕರಣದ ನಂತರ ಮೈಸೂರು ಜಿಲ್ಲೆ ಮತ್ತು ಚಾಮರಾಜನಗರ ಜಿಲ್ಲೆಯ ನಾಲ್ಕು ತಾಲೂಕುಗಳಲ್ಲಿ ಜೀವವಿಮಾ ಯೋಜನೆ ಮತ್ತು ಸಾಮಾನ್ಯ ವಿಮಾಭದ್ರತಾ ಯೋಜನಾ ವ್ಯವಹಾರಗಳನ್ನು ಹೆಚ್ಚು ಜನಪ್ರಿಯವಾಗುವಂತೆ ಪ್ರಚಾರಾಂದೋಲನವನ್ನು ಜಿಲ್ಲಾದ್ಯಂತ ಕೈಗೊಂಡಿತು. ಈ ವಿಮಾ ವಿಭಾಗವು ರಾಜ್ಯ ಸರ್ಕಾರಿ ನೌಕರರಿಗೆ ಪ್ರತ್ಯೇಕವಾದ ರಾಜ್ಯ ಸರ್ಕಾರಿ ವಿಮಾ ಇಲಾಖೆಯನ್ನು (ಕೆ.ಜಿ.ಐ.ಡಿ) ಸ್ಥಾಪಿಸಿತು. ೧೯೭೬ರಲ್ಲಿ ರಾಜ್ಯ ವಿಮಾ ಇಲಾಖೆಯ ಆಡಳಿತವನ್ನು ವಿಕೇಂದ್ರೀಕರಣಗೊಳಿಸಲಾಯಿತು. ಈ ವಿಮಾ ವಿಭಾಗವು ಮೋಟಾರು ವಾಹನ ವಿಮಾ ವ್ಯವಹಾರವನ್ನು ಸಹ ನಿರ್ವಹಿಸುತ್ತದೆ. ವಿಮಾ ವಿಭಾಗವು ಜಿಲ್ಲೆಯ ಎಲ್ಲಾ ತಾಲೂಕು, ಹೋಬಳಿ ಮತ್ತು ಗ್ರಾಮಾಂತರ ಪ್ರದೇಶದ ಜನರೊಂದಿಗೆ ವಿಮಾ ಏಜೆಂಟರ ಮೂಲಕ ಸಂಪರ್ಕ ಬೆಳೆಸಿ ವಿಮಾ ಪಾಲಿಸಿಗಳ ಸಂಖ್ಯೆಯನ್ನು ಹೆಚ್ಚಿನ ಸಂಖ್ಯೆಯಲ್ಲಿ ವಿಸ್ತರಿಸಿದೆ. ೧೯೮೭ರಲ್ಲಿ ಜೀವ ವಿಮಾ ನಿಗಮವು ಜಿಲ್ಲೆಯ ಮೂರು ತಾಲೂಕುಗಳಲ್ಲಿ ಪ್ರತ್ಯೇಕವಾದ ಶಾಖೆಗಳನ್ನು ತೆರೆದಿದೆ. ೧೯೮೦ರಿಂದ ೧೯೮೭ರವರೆಗೆ ಸುಮಾರು ₹ ೧೯ ಕೋಟಿ ವಿಮಾ ಮೊತ್ತವನ್ನು ಮತ್ತು ₹ ಆರು ಕೋಟಿಗಳಷ್ಟು ಪ್ರೀಮಿಯಂ ಹಣವನ್ನು ಸಂಗ್ರಹಿಸಿದ್ದು, ಈ ಅವಧಿಯಲ್ಲಿ ವಿಮಾ ಪಾಲಸಿಗಳ ಸಂಖ್ಯೆ ೨೪,೦೦೦ಗಳಷ್ಟಿತ್ತು. ಅವುಗಳ ವಾರ್ಷಿಕ ವಿಮಾ ಕಂತು ಸುಮಾರು ₹ ಎಂಟು ಕೋಟಿಗಳಷ್ಟಿತ್ತು. ಸುಮಾರು ೧,೨೦೦ ವಿಮಾ ಏಜೆಂಟರು ವಿಮಾ ಪಾಲಿಸಿಗಳ ವ್ಯವಹಾರಗಳನ್ನು ನಿರ್ವಹಿಸುತ್ತಿದ್ದರು.

## ಸಾಮೂಹಿಕ ವಿಮಾ ಯೋಜನೆ

೧೯೮೧ರಲ್ಲಿ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಾಮೂಹಿಕ ವಿಮಾ ಯೋಜನೆ ಜಾರಿಗೆ ಬಂದಿದೆ. ಈ ಯೋಜನೆಯಲ್ಲಿ ಸರ್ಕಾರಿ ನೌಕರರ ವಿವಿಧ ದರ್ಜೆಗಳಾದ ಎ ದರ್ಜೆಗೆ ₹ ೨೪೦, ಬಿ.ದರ್ಜೆಗೆ ₹ ೧೮೦, ಸಿ ದರ್ಜೆಗೆ ₹ ೧೨೦ ಮತ್ತು ಡಿ ದರ್ಜೆಗೆ ₹ ೬೦ಗಳನ್ನು ಪ್ರತಿ ತಿಂಗಳ ವೇತನಗಳಲ್ಲಿ ಕಡಿತಗೊಳಿಸಲಾಗುತ್ತದೆ. ಈ ಯೋಜನೆಯಡಿಯಲ್ಲಿ ಒಳಪಟ್ಟಿರುವ ಸರ್ಕಾರಿ ನೌಕರರು ಮೃತಪಟ್ಟ ಸಂದರ್ಭದಲ್ಲಿ ಸಾಮೂಹಿಕ ವಿಮಾ ಯೋಜನೆಯಡಿಯಲ್ಲಿ ಎ, ಬಿ, ಸಿ ಮತ್ತು ಡಿ ದರ್ಜೆ ನೌಕರರಿಗೆ ಕ್ರಮವಾಗಿ ₹ ೨,೪೦,೦೦೦, ₹ ೧,೮೦,೦೦೦, ₹ ೧,೨೦,೦೦೦ ಮತ್ತು ₹ ೬೦,೦೦೦ಗಳನ್ನು ಪಾವತಿಸಲಾಗುತ್ತದೆ. ಉಳಿತಾಯ ನಿಧಿಯಿಂದ ತೊಡಗಿಸಿರುವ ಮೊತ್ತವನ್ನು ಸರ್ಕಾರ ನಿಗದಿಪಡಿಸಿರುವ ಕೋಷ್ಟಕಗಳಂತೆ ಪಾವತಿಸಲಾಗುವುದು. ಜಿಲ್ಲೆಯಲ್ಲಿ ಒಟ್ಟು ೧೬೪೦ ವೇತನ ಬಟವಾಡೆ ಅಧಿಕಾರಿಗಳಿದ್ದು ಅವರ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರ ಮತ್ತು ಅಧಿಕಾರಿಗಳ ಸೇವಾ ಪುಸ್ತಕವನ್ನು ಪರಿಶೀಲಿಸಿ ಮತ್ತು ಅವರ ವಂತಿಗೆ ಮತ್ತು ಪಾವತಿಗಳನ್ನು ಸಹ ಪರಿಶೀಲಿಸಲಾಗುತ್ತದೆ. ಇದಕ್ಕಾಗಿ ಜಿಲ್ಲೆಯಲ್ಲಿ ಪ್ರತ್ಯೇಕ ವ್ಯವಸ್ಥೆಯನ್ನು ಮಾಡಲಾಗಿದೆ.

ಅಂಚೆ ಜೀವವಿಮಾ ಯೋಜನೆಯನ್ನು ರೂಪಿಸಿರುವ ಅಂಚೆ ಇಲಾಖೆಯು ಅಂಚೆ ಕಚೇರಿಗಳ ಮೂಲಕ ಸಾರ್ವಜನಿಕರಿಂದ ವಿಮಾಪಾಲಿಸಿಯನ್ನು ಸಂಗ್ರಹಿಸುವುದರ ಜೊತೆಗೆ ಪ್ರೀಮಿಯಂ ಹಣವನ್ನು ಕಂತುಗಳ ಮೂಲಕ ಸಂಗ್ರಹಿಸುತ್ತಿವೆ. ಕರ್ನಾಟಕ ಸರ್ಕಾರಿ ವಿಮಾ ಇಲಾಖೆಯು ೧೯೭೬ರ ನಂತರ ವಿಮಾದಾರರ ವಾಸಸ್ಥಳದಲ್ಲಿಯೇ ತ್ವರಿತ ಸೇವೆ ಸಲ್ಲಿಸಲು ಅನುಕೂಲವಾಗುವಂತೆ ಇಲಾಖೆಯನ್ನು ವಿಕೇಂದ್ರೀರಕಣಗೊಳಿಸಿದ್ದು, ಆಯಾ ಜಿಲ್ಲೆ ತಾಲೂಕುಗಳಲ್ಲಿಯೇ ವಿಮಾ ಕಚೇರಿಗಳನ್ನು ತೆರೆಯಲಾಗಿದೆ. ಕರ್ನಾಟಕ ಸರ್ಕಾರ ವಿಮಾ ಇಲಾಖೆಯು ಚಾಮರಾಜನಗರ ಜಿಲ್ಲಾ ಕೇಂದ್ರದಲ್ಲಿ ತನ್ನ ವಿಮಾ ಕಚೇರಿಯನ್ನು ಹೊಂದಿದೆ. ಜಿಲ್ಲೆಯ ನಾಲ್ಕು ತಾಲೂಕುಗಳಲ್ಲಿ ಪ್ರತ್ಯೇಕ ವಿಮಾ ಶಾಖೆಗಳು ಕಾರ್ಯನಿರ್ವಹಿಸುತ್ತಿವೆ. ಇಲಾಖೆಯು ಜೀವವಿಮಾನಿಧಿ, ವಾಹನ ವಿಮಾ ನಿಧಿಯನ್ನು ಹೊಂದಿರುತ್ತದೆ. ಸರ್ಕಾರದ ಆದೇಶದಂತೆ ಇಲಾಖೆಯ ಎಲ್ಲಾ ಕೆಲಸ ಕಾರ್ಯಗಳನ್ನು ಗಣಕೀಕರಣಗೊಳಿಸಲು ಕ್ರಮಕೈಗೊಳ್ಳಲಾಗಿದೆ. ವಿಮಾ ಶಾಖೆಗೆ ಸಂಬಂಧಿಸಿದಂತೆ ಬೆಂಗಳೂರು ಮತ್ತು ಮೈಸೂರು ವಿಭಾಗೀಯ ಕಚೇರಿಗಳಲ್ಲಿ ಪೂರಕ ಮಾಹಿತಿ ಹಾಗೂ ಅಂಕಿ–ಅಂಶಗಳ ಗಣಕೀಕರಣ ಮಾಡಲಾಗಿದ್ದು, ಇಲಾಖೆಯನ್ನು ಪೂರ್ಣ ಗಣಕೀಕರಣಗೊಳಿಸಲು ನಿರ್ದೇಶನಾಲಯದಿಂದ ಕ್ರಮ ಕೈಗೊಳ್ಳಲಾಗುತ್ತಿದೆ.

**ಕರ್ನಾಟಕ ಸರ್ಕಾರಿ ವಿಮಾ ಇಲಾಖೆ, ಚಾಮರಾಜನಗರದ ೨೦೦೬–೦೭ನೇ ಸಾಲಿನ ವಿಮಾ ವ್ಯವಹಾರ ವಿವರ**

| ಕ್ರ.ಸಂ | ಮಾಹೆ | ನೀಡಲಾದ ಪಾಲಿಸಿಗಳು | ವಿಮಾಕಂತು | ವಿಮಾ ಮೊತ್ತ | ಕಚೇರಿಗೆ ಸಂದಾಯವಾದ ವಿಮಾ ಕಂತು | ಸಾಲಗಳು |
|---|---|---|---|---|---|---|
| ೧ | ೦೪/೨೦೦೬ | ೨೩ | ೧೦೦೮೫ | ೨೯೫೨೩೦ | ೩೪೨೯೯೩ | ೪೦೬೩೧೮೪ |
| ೨ | ೦೫/೨೦೦೬ | ೧೪ | ೫೦೮೦ | ೧೩೭೨೪೪೦ | ೩೩೪೨೦೭೯ | ೪೦೪೯೧೦೩ |
| ೩ | ೦೬/೨೦೦೬ | ೪೮ | ೧೮೯೫೦ | ೪೩೬೦೮೫೦ | ೨೫೭೭೧೫೫ | ೩೧೪೪೮೬೫ |
| ೪ | ೦೭/೨೦೦೬ | ೩೫ | ೧೭೨೯೫ | ೯೧೦೬೫೫ | ೩೦೫೮೩೩೪ | ೩೬೭೮೩೮ |
| ೫ | ೦೮/೨೦೦೬ | ೩೭ | ೧೬೨೬೫ | ೪೧೦೪೩೪೦ | ೩೨೭೦೫೮೮ | ೪೨೩೬೩೧೨ |

| | | | | | | |
|---|---|---|---|---|---|---|
| ೬ | ೦೯/೨೦೦೬ | ೩೩ | ೧೭೨೪೦ | ೪೩೧೮೧೨೦ | ೨೭೦೫೯೧೩ | ೩೨೯೧೧೬೨ |
| ೭ | ೧೦/೨೦೦೬ | ೪೨ | ೧೭೮೭೩ | ೪೭೧೦೯೯೩ | ೨೯೩೬೮೬೧ | ೩೬೯೭೨೩೧ |
| ೮ | ೧೧/೨೦೦೬ | ೩೪ | ೧೨೩೦೦ | ೩೬೨೮೮೯೦ | ೩೧೪೩೬೭೪ | ೪೦೭೨೮೪೨ |
| ೯ | ೧೨/೨೦೦೬ | ೨೮ | ೧೨೭೫೫ | ೩೨೩೫೧೧೦ | ೨೯೬೦೨೨೨ | ೩೨೦೨೮೧೩ |
| ೧೦ | ೦೧/೨೦೦೭ | ೨೯ | ೧೨೦೭೦ | ೩೩೨೬೩೦೫ | ೨೨೬೮೦೪೨ | ೩೦೬೬೯೪೩ |
| ೧೧ | ೦೨/೨೦೦೭ | ೧೮ | ೭೫೨೦ | ೨೦೫೮೬೫೦ | ೨೬೨೭೫೦೬ | ೩೨೫೧೦೦೦ |
| ೧೨ | ೦೩/೨೦೦೭ | ೪೦ | ೧೭೧೭೧ | ೪೧೦೭೮೬೦ | ೨೯೦೧೭೧೪ | ೩೬೯೭೨೮೪ |
| | **ಒಟ್ಟು** | **೩೮೧** | **೧೬೪೬೦೩** | **೪೧೫೨೬೪೪೩** | **೩೫೨೯೦೮೧** | **೪೩೪೪೩೮೭೭** |

## ಜೀವವಿಮಾ ನಿಗಮ

ಭಾರತೀಯ ಜೀವವಿಮಾ ನಿಗಮವು ೧೯೫೬ರಲ್ಲಿ ಸ್ಥಾಪನೆಗೊಳ್ಳುವ ಮೊದಲು ಚಾಮರಾಜನಗರ, ಗುಂಡ್ಲುಪೇಟೆ, ಕೊಳ್ಳೇಗಾಲ, ಮತ್ತು ಯಳಂದೂರು ತಾಲೂಕುಗಳಲ್ಲಿ ಜೀವವಿಮೆ ಮತ್ತು ಸಾಮಾನ್ಯ ವ್ಯವಹಾರವನ್ನು ಪ್ರೋತ್ಸಾಹಿಸಲು ಕೆಲವು ಖಾಸಗಿ ವಿಮಾ ಸಂಸ್ಥೆಗಳು ಜಿಲ್ಲೆಯ ಪ್ರಮುಖ ಸ್ಥಳಗಳಲ್ಲಿ ವಿಮಾ ಏಜೆಂಟರನ್ನು ಹೊಂದಿದ್ದವು. ೧೯೫೬ರಲ್ಲಿ ಜೀವವಿಮಾ ನಿಗಮ ರಾಷ್ಟ್ರೀಕರಣಗೊಂಡ ನಂತರ ಭಾರತೀಯ ಜೀವ ವಿಮಾ ನಿಗಮವು ತನ್ನ ಏಜೆಂಟರ ಮೂಲಕ ಅಂದಿನ ಮೈಸೂರು ಜಿಲ್ಲೆಯಲ್ಲಿ ಅಂತರ್ಗತವಾಗಿದ್ದ ಇಂದಿನ ಚಾಮರಾಜನಗರ ಜಿಲ್ಲೆಯಲ್ಲೂ ಜೀವ ವಿಮಾ ವ್ಯವಹಾರವನ್ನು ಸಮರ್ಪಕವಾಗಿ ನಿರ್ವಹಿಸಲು ಮತ್ತು ಅದನ್ನು ಇನ್ನಷ್ಟು, ಅಭಿವೃದ್ಧಿಪಡಿಸಲು ಕೊಳ್ಳೇಗಾಲ, ಗುಂಡ್ಲುಪೇಟೆ ಮತ್ತು ಯಳಂದೂರು ತಾಲೂಕುಗಳಲ್ಲಿ ತನ್ನ ಶಾಖೆಗಳನ್ನು ಸ್ಥಾಪಿಸಿತು. ಚಾಮರಾಜನಗರ ಜಿಲ್ಲೆಯಲ್ಲಿ ೧೯೯೭ರಿಂದ ೨೦೦೭ರವರೆಗೆ ಜೀವವಿಮಾ ನಿಗಮದ ಚಾಲ್ತಿಯಲ್ಲಿರುವ ವಿಮಾ ಪಾಲಸಿಗಳ ಸಂಖ್ಯೆ ೯೮೭೬. ೨೦೦೬–೦೭ರಲ್ಲಿ ಒಟ್ಟು ವಿಮಾ ಮೊತ್ತ ₹ ೫೯೧.೫೭ ಕೋಟಿಗಳು ಮತ್ತು ವಿಮಾ ಕಂತಿನ ಪ್ರೀಮಿಯಂ ಆದಾಯ ₹ ೩೫.೧೩ ಕೋಟಿಗಳು ಇವೆ.

**ಆಶಾಕಿರಣ:** ಆಶಾಕಿರಣ ಯೋಜನೆಯನ್ನು ಅಸಂಘಟಿತ ವಲಯಕ್ಕೊಳಪಟ್ಟ ರೈತರು, ರೈತ ಕಾರ್ಮಿಕರು, ಅಶಕ್ತರು, ದುರ್ಬಲವರ್ಗದವರು ವಿಕಲಚೇತನರು, ಬಡಕುಟುಂಬದ ಮಹಿಳೆಯರು, ಗರ್ಭಿಣಿಯರೇ ಮೊದಲಾದವರಿಗೆ ಸಾಮಾಜಿಕ ಆಶ್ವಾಸನಾ ಯೋಜನೆಗಳನ್ನು ಸೆಪ್ಟೆಂಬರ್ ೧೯೮೨ರಲ್ಲಿ ಜಾರಿಗೆ ತಂದಿದೆ. ಈ ಯೋಜನೆಯಡಿಯಲ್ಲಿ ಗುಂಪು, ವೈಯಕ್ತಿಕ ಅಪಘಾತ ವಿಮಾ ಸೌಲಭ್ಯಗಳನ್ನು ಸಹ ಕಡ್ಡಾಯವಾಗಿ ಜಾರಿಗೊಳಿಸಿದೆ. ಪ್ರಸ್ತುತ ಜಾರಿಯಲ್ಲಿರುವ ವೈಯಕ್ತಿಕ ಮತ್ತು ಗುಂಪು ಅಪಘಾತ ವಿಮಾ ಯೋಜನೆಯಲ್ಲಿ ೧೬ ವರ್ಷ ವಯಸ್ಸಿನಿಂದ ೬೫ ವರ್ಷದವರೆಗಿನ ವಯೋಮಿತಿಗೊಳಪಟ್ಟ ಖಾಸಗಿ, ಸ್ವಂತ ವೃತ್ತಿ, ಸ್ವಉದ್ಯೋಗದಲ್ಲಿರುವವರಿಗೆ, ಅಸಂಘಟಿತ ವಲಯದ ಎಲ್ಲಾ ಕಾರ್ಮಿಕರಿಗೆ, ಅಪಘಾತಕ್ಕೊಳಗಾದಾಗ ಅದರ ಪರಿಹಾರವಾಗಿ ವಿಮಾಯೋಜನೆಯನ್ನು ಜಾರಿಗೊಳಿಸಲಾಗಿದೆ. ಪ್ರಕೃತಿ ವಿಕೋಪಕ್ಕೊಳಗಾಗಿ ಜೀವ ಕಳೆದುಕೊಂಡ ನತದೃಷ್ಟ ಕುಟುಂಬಗಳಿಗೆ, ಬಡಕುಟುಂಬದ ರೋಗಿಗಳಿಗೆ, ಗರ್ಭಿಣಿಯರು, ಬಡಕುಟುಂಬದ ಹೆಣ್ಣುಮಕ್ಕಳಿಗೆ ವಿಮಾ ಯೋಜನೆ, ಆಶ್ರಿತರಿಗೆ ವಿಮಾ ಯೋಜನೆಯಡಿಯಲ್ಲಿ ₹ ಒಂದು ಲಕ್ಷಗಳಿಗೂ ಹೆಚ್ಚಿನ ಪರಿಹಾರ ನೀಡುವ ವಿಮಾ ಯೋಜನೆಯನ್ನು ಜಾರಿಗೆ ತರಲಾಗಿದೆ.

**ರೈತ ಸಂಜೀವಿನಿ ಅಪಘಾತ ವಿಮಾ ಯೋಜನೆ:** ರೈತರು, ರೈತ ಕಾರ್ಮಿಕರು ಹಾಗೂ ಕುಟುಂಬದ ಸದಸ್ಯರು (೧೮ ರಿಂದ ೬೦ ವಯಸ್ಸಿನ) ಕೃಷಿ ಚಟುವಟಿಕೆಯಲ್ಲಿ ತೊಡಗಿರುವಾಗ ಹಾಗೂ ಕೃಷಿ ಉತ್ಪನ್ನ ಮಾರುಕಟ್ಟೆ

ಪ್ರಾಂಗಣಗಳಲ್ಲಿ ಕಾರ್ಯನಿರತರಾದಾಗ ಅಪಘಾತವಾಗಿ ಸಾವು ಸಂಭವಿಸಿದರೆ, ಅಥವಾ ಅಂಗವಿಕಲರಾದರೆ ಕನಿಷ್ಟ ₹ ೧೫೦೦ಗಳಿಂದ ₹ ೨೫,೦೦೦ಗಳವರೆಗೆ ಪರಿಹಾರವನ್ನು ಈ ಯೋಜನೆಯಡಿಯಲ್ಲಿ ನೀಡಲಾಗುತ್ತದೆ. ಹಮಾಲರಿಗೆ ಮತ್ತು ತೂಕದವರಿಗೆ ಸಾಮಾಜಿಕ ಭದ್ರತೆಗಾಗಿ ಸಮೂಹ ವಿಮಾ ಯೋಜನೆಯನ್ನು ಜಾರಿಗೆ ತಂದಿದೆ. ₹ ೨೫,೦೦೦ ರಿಂದ ₹ ಒಂದು ಲಕ್ಷದವರೆಗೂ ವಿಮಾ ಪರಿಹಾರವನ್ನು ಪಡೆಯಬಹುದಾಗಿದೆ.

## ಬಂಡವಾಳ ಹೂಡಿಕೆ, ಮಾಹಿತಿ ನಿರ್ವಹಣೆ ಹಾಗೂ ವಸೂಲಾತಿ ಇಲಾಖೆ, ಚಾಮರಾಜನಗರ

ಕರ್ನಾಟಕ ಸರ್ಕಾರದ ಆದೇಶದಂತೆ ೨೦೦೬ರಿಂದ ಸಣ್ಣ ಉಳಿತಾಯ ಮತ್ತು ರಾಜ್ಯ ಲಾಟರಿ ಇಲಾಖೆಯ ಹೆಸರನ್ನು "ಬಂಡವಾಳ ಹೂಡಿಕೆ ಮಾಹಿತಿ ನಿರ್ವಹಣೆ ಹಾಗೂ ವಸೂಲಾತಿ" ಎಂದು ಮಾರ್ಪಡಿಸಲಾಗಿದೆ. ೧೯೪೮ರಲ್ಲಿ ಭಾರತ ಸರ್ಕಾರದ ರಾಷ್ಟ್ರೀಯ ಉಳಿತಾಯ ಯೋಜನೆಯನ್ನು ದೇಶದಾದ್ಯಂತ ಜಾರಿಗೆ ತರಲಾಯಿತು. ಈ ಯೋಜನೆಯಡಿಯಲ್ಲಿ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ರಾಷ್ಟ್ರೀಯ ಉಳಿತಾಯ ಯೋಜನಾ ಸಂಸ್ಥೆ ೧೯೫೭ರಲ್ಲಿ ಸ್ಥಾಪನೆಗೊಂಡಿತು. ೧೮೭೦ ರಲ್ಲಿ ಆಗಿನ ಮೈಸೂರು ಸಂಸ್ಥಾನದ ಪ್ರಾಂತೀಯ ಸರ್ಕಾರ ಮೈಸೂರು ಜಿಲ್ಲೆಯಲ್ಲಿ ಸಣ್ಣ ಉಳಿತಾಯ ಯೋಜನೆಯನ್ನು ಜಾರಿಗೊಳಿಸಿ ಸಾರ್ವಜನಿಕರ ಉಳಿತಾಯದ ಹಣವನ್ನು ಅಂಚೆಕಚೇರಿಗಳು ಸಂಗ್ರಹಿಸಿ ನಿಶ್ಚಿತ ಠೇವಣಿಯಾಗಿಟ್ಟು, ಠೇವಣಿದಾರರಿಗೆ ಮಾಸಿಕ ಬಡ್ಡಿಯನ್ನು ನೀಡುವುದರ ಜೊತೆಗೆ ವಾಯಿದೆ ಮುಗಿದ ನಂತರ ಠೇವಣಿ ಮೊತ್ತವನ್ನು ಮರುಪಾವತಿ ಮಾಡುತ್ತಾ ಬಂದಿದೆ. ಜಿಲ್ಲಾ ಖಜಾನೆಯು ಸಹ ಜನರಲ್ಲಿ ಉಳಿತಾಯವನ್ನು ಪ್ರೋತ್ಸಾಹಿಸಿ ಅವರಿಂದ ಹಣವನ್ನು ಸಂಗ್ರಹಿಸಿ ಬಡ್ಡಿ ನೀಡುವ ಕಾರ್ಯವನ್ನು ನಡೆಸಿಕೊಂಡು ಬಂದಿವೆ. ೧೮೮೨ರಲ್ಲಿ ಜಿಲ್ಲೆಯ ಎಲ್ಲಾ ಅಂಚೆ ಕಚೇರಿಗಳಲ್ಲಿ ಉಳಿತಾಯ ಖಾತೆ ಬ್ಯಾಂಕನ್ನು ಸ್ಥಾಪಿಸುವುದರ ಮೂಲಕ ಜನರಿಂದ ಉಳಿತಾಯದ ಹಣವನ್ನು ಸಂಗ್ರಹಿಸಿ ನಿಗದಿತ ವಾಯಿದೆ ಮುಗಿದ ನಂತರ ಬಡ್ಡಿ ಸೇರಿಸಿ ಮರು ಪಾವತಿ ಮಾಡಿದೆ. ೧೯೪೧ರಿಂದ ರಕ್ಷಣಾ ಉಳಿತಾಯ ನಿಧಿಯನ್ನು ಸ್ಥಾಪಿಸಿ ಜನರಿಂದ ಉಳಿತಾಯದ ಹಣವನ್ನು ಸಂಗ್ರಹಿಸಿ ಆರ್ಥಿಕ ಯೋಜನೆಗಳ ಕಾರ್ಯಕ್ರಮಗಳಿಗೆ ಜಿಲ್ಲೆಯಲ್ಲಿ ಉತ್ಪಾದಕ ವೆಚ್ಚ ಮಾಡಿದೆ.

ಚಾಮರಾಜನಗರ ಜಿಲ್ಲೆಯಲ್ಲಿ ಮುಖ್ಯ ಅಂಚೆ ಕಚೇರಿ, ಉಪ ಅಂಚೆಕಚೇರಿಗಳು ಮತ್ತು ಶಾಖಾ ಅಂಚೆಕಚೇರಿಗಳು ನಗರ, ಪಟ್ಟಣ, ಗ್ರಾಮಗಳಲ್ಲಿ ಸ್ಥಾಪನೆಗೊಂಡು ಅಂಚೆ ಕಚೇರಿಗಳ ಮೂಲಕ ಸಣ್ಣ ಉಳಿತಾಯ ಖಾತೆ, ನಿಶ್ಚಿತ ಅವಧಿ ಠೇವಣಿ, ಸಂಚಿತ ಅವಧಿ ಠೇವಣಿ, ಆವರ್ತಕ ಠೇವಣಿ, ರಾಷ್ಟ್ರೀಯ ಉಳಿತಾಯ ಯೋಜನೆಯ ವಿವಿಧ ಅವಧಿಯ ಪತ್ರಗಳು, ಸಾಮಾಜಿಕ ಭದ್ರತಾ ಪತ್ರಗಳು, ಇಂದಿರಾ ವಿಕಾಸ ಪತ್ರಗಳು, ರಾಷ್ಟ್ರೀಯ ಉಳಿತಾಯ ಯೋಜನೆ ೮ನೇ ಆವೃತ್ತಿ, ಕಿಸಾನ್ ವಿಕಾಸ ಪತ್ರಗಳು, ಭವಿಷ್ಯ ನಿಧಿ ಠೇವಣಿಗಳು ೧೯೮೭ರ ರಾಷ್ಟ್ರೀಯ ಮಹಿಳಾ ಪ್ರಧಾನ ಕ್ಷೇತ್ರೀಯ ಬಜತ್ ಯೋಜನೆ, ಸಾರ್ವಜನಿಕ ಭವಿಷ್ಯ ನಿಧಿ ಮತ್ತು ಹಿರಿಯ ನಾಗರೀಕರ ಠೇವಣಿ ಯೋಜನೆ ಮುಂತಾದ ಉಳಿತಾಯ ಯೋಜನೆಗೆ ಸಂಬಂಧಪಟ್ಟ ಪತ್ರಗಳನ್ನು ನಿರ್ವಹಿಸಲಾಗುತ್ತದೆ. ಚಾಮರಾಜನಗರ ಜಿಲ್ಲಾ ಕಚೇರಿಯ ಜವಾಬ್ದಾರಿಯನ್ನು ಸಹಾಯಕ ನಿರ್ದೇಶಕರು ನಿರ್ವಹಿಸುತ್ತಿದ್ದಾರೆ. ಜಿಲ್ಲೆಯಾದ್ಯಂತ ಮಾಸಿಕ ಉಳಿತಾಯ ಸಪ್ತಾಹದ ಕಾರ್ಯಕ್ರಮವನ್ನು ಪ್ರತೀ ಗ್ರಾಮದಲ್ಲಿ ಪ್ರಚಾರ ನಡೆಸಿ ಗ್ರಾಮೀಣ ಜನರಲ್ಲಿ ಅಂಚೆ ಕಚೇರಿಗಳಲ್ಲಿ, ಉಳಿತಾಯ ಯೋಜನೆಯ ಮೂಲಕ ಠೇವಣಿಗಳನ್ನು ಸಂಗ್ರಹಿಸುವ ಉತ್ತೇಜಕ ಕ್ರಮಗಳನ್ನು ಕೈಗೊಂಡಿದೆ.

ರಾಷ್ಟ್ರೀಯ ಉಳಿತಾಯ ಸಂಸ್ಥೆಯು ಪ್ರಾರಂಭದಲ್ಲಿ ಶೇ. ೩.೭೫ ಬಡ್ಡಿದರದಲ್ಲಿ ಸಾರ್ವಜನಿಕರಿಂದ ಕನಿಷ್ಟ ಮೊತ್ತವಾದ ೦.೨೫ ಪೈಸೆಗಳಿಂದ ಗರಿಷ್ಟ ಮೊತ್ತ ₹ ೫೦೦೦ಗಳವರೆಗೆ ಉಳಿತಾಯದ ಯೋಜನೆಯಲ್ಲಿ ಠೇವಣಿಯನ್ನು ಸಂಗ್ರಹಿಸುತ್ತಿತ್ತು. ೧೯೮೯ರ ನಂತರ ಠೇವಣಿಯ ಗರಿಷ್ಠ ಮೊತ್ತವನ್ನು ₹ ೫೦೦೦ಗಳಿಂದ ₹ ೨,೦೦೦ಗಳಿಗೆ ಇಳಿಸಿ ಬಡ್ಡಿದರವನ್ನು ಸಹ ಶೇ. ೩.೨೫ಕ್ಕೆ ಇಳಿಸಿತು. ಕನಿಷ್ಟ ಠೇವಣಿ ಮೊತ್ತವನ್ನು ₹ ೨೦೦ಗಳಿಗೆ ನಿಗದಿಪಡಿಸಿದೆ. ಈಗ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯಲ್ಲಿ ೬೦೦ಕ್ಕೂ ಹೆಚ್ಚು ಅಂಚೆ ಕಚೇರಿಗಳು ನಗರ, ಪಟ್ಟಣ ಮತ್ತು ಹಳ್ಳಿಗಳಲ್ಲಿ ಸ್ಥಾಪನೆಗೊಂಡು ಅಂಚೆ ಕಚೇರಿಯ ಮೂಲಕ ಉಳಿತಾಯ ಬ್ಯಾಂಕು ಖಾತೆ, ಆವರ್ತಕ ಠೇವಣಿ, ಸಂಚಿತ ಠೇವಣಿ, ನಿಶ್ಚಿತ ಅವಧಿ ಠೇವಣಿ, ರಾಷ್ಟ್ರೀಯ ಉಳಿತಾಯ ಯೋಜನೆಯ ವಿವಿಧ ಅವಧಿಯ ಸಾಮಾಜಿಕ ಭದ್ರತಾ ಪತ್ರಗಳು, ಇಂದಿರಾ ವಿಕಾಸ ಪತ್ರಗಳು, ಕಿಸಾನ್ ವಿಕಾಸ ಪತ್ರಗಳು, ಭವಿಷ್ಯ ನಿಧಿ ಠೇವಣಿಗಳು ೧೯೮೭ರ ರಾಷ್ಟ್ರೀಯ ಉಳಿತಾಯ ಯೋಜನೆಗೆ ಒಳಪಟ್ಟ ಪತ್ರಗಳು, ಮಾಸಿಕ ಆದಾಯ ಯೋಜನೆ ಮೊದಲಾದವು ಚಾಲ್ತಿಯಲ್ಲಿವೆ. ೧೯೮೬ರಲ್ಲಿ ಮೈಸೂರು ಜಿಲ್ಲೆಯಲ್ಲಿ ೮೧,೬೩೩ ಸದಸ್ಯರಿಂದ ಉಳಿತಾಯ ಖಾತೆಗಳನ್ನು ತೆರೆದು ಸುಮಾರು ₹ ೭೩೭ ಲಕ್ಷಗಳಷ್ಟು ಠೇವಣಿಗಳನ್ನು ಸಂಗ್ರಹಿಸಿದೆ. ಸಂಚಿತ ಠೇವಣಿ ಖಾತೆಗಳಿಂದ ಒಟ್ಟು ೫೭೯೧ ಸದಸ್ಯರಿಂದ ಸಂಗ್ರಹಿಸಿದ ಉಳಿತಾಯದ ಒಟ್ಟು ಠೇವಣಿ ಮೊತ್ತವು ₹ ೨೨೩ ಲಕ್ಷಗಳಿಷ್ಟಿದೆ. ಆವರ್ತಕ ಠೇವಣಿ ಮೊತ್ತವು ೧.೦೧ ಲಕ್ಷ ಸದಸ್ಯರಿಂದ ಸಂಗ್ರಹಿಸಿದ ಒಟ್ಟು ಠೇವಣಿ ಮೊತ್ತವು ೩೨೩.೪೦ ಲಕ್ಷ ರೂ.ಗಳು ಸಂಗ್ರಹವಾಗಿದೆ. ೧೯೮೬ರಲ್ಲಿ ಜಾರಿಗೆ ತಂದ ಇಂದಿರಾ ವಿಕಾಸ ಉಳಿತಾಯ ಪತ್ರದಿಂದ ₹ ೩೬.೬೦ ಲಕ್ಷಗಳು ಸಂಗ್ರಹವಾಗಿವೆ. ಮೈಸೂರು ಜಿಲ್ಲೆಯಾದ್ಯಂತ ಮಾಸಿಕ ಉಳಿತಾಯ ಸಪ್ತಾಹದ ಕಾರ್ಯಕ್ರಮವನ್ನು ಪ್ರತೀ ಹಳ್ಳಿಯಲ್ಲಿ ಪ್ರಚಾರ ನಡೆಸಿ ಗ್ರಾಮೀಣ ಜನರಲ್ಲಿ ಅಂಚೆಕಚೇರಿಯ ಮೂಲಕ ಉಳಿತಾಯ ಯೋಜನೆಯ ಮೂಲಕ ಠೇವಣಿಗಳನ್ನು ಸಂಗ್ರಹಿಸುವ ಉತ್ತೇಜಕ ಕ್ರಮಗಳನ್ನು ಕೈಗೊಂಡಿದೆ. "ಬಚಾವತ್ ಗ್ರಾಮ" ಯೋಜನೆಯ ಕಾರ್ಯಕ್ರಮದಲ್ಲಿ ಯಳಂದೂರು ತಾಲೂಕಿನ ಸುಮಾರು ೨೭ ಗ್ರಾಮಗಳಲ್ಲಿ ಅಂಚೆ ಕಚೇರಿ ಉಳಿತಾಯ ಯೋಜನೆಯು ಯಶಸ್ವಿಯಾಗಿದೆ.

೧೯೯೮ರಿಂದ ೨೦೦೭ರವರೆಗೆ ಜಿಲ್ಲೆಯ ಸಣ್ಣ ಉಳಿತಾಯ ಸಂಗ್ರಹಣೆ ಮತ್ತು ಅದರ ಗುರಿ ಸಾಧನೆಯನ್ನು ಈ ಕೆಳಗಿನ ಪಟ್ಟಿಯಲ್ಲಿ ತಿಳಿಸಲಾಗಿದೆ.

(₹ ಲಕ್ಷಗಳಲ್ಲಿ)

| ವರ್ಷ | ನಿಗದಿಪಡಿಸಿದ ವಾರ್ಷಿಕ ಗುರಿ | ಸಾಧನೆ |
|---|---|---|
| ೧೯೯೯–೨೦೦೦ | ೧೦೦೦.೦೦ | ೧೦೨೬.೭೧ |
| ೨೦೦೦–೨೦೦೧ | ೧೫೦೦.೦೦ | ೧೨೨೬.೦೦ |
| ೨೦೦೧–೨೦೦೨ | ೧೫೦೦.೦೦ | ೧೨೭೭.೭೬ |
| ೨೦೦೨–೨೦೦೩ | ೧೫೦೦.೦೦ | ೧೭೦೩.೭೧ |
| ೨೦೦೩–೨೦೦೪ | ೧೫೦೦.೦೦ | ೧೫೪೯.೯೯ |
| ೨೦೦೪–೨೦೦೫ | ೬೬೦೦.೦೦ | ೨೩೦೦೪.೦೦ |
| ೨೦೦೫–೨೦೦೬ | ೬೬೦೦.೦೦ | ೧೮೮೭೬.೦೦ |
| ೨೦೦೬–೨೦೦೭ | ೬೯೦೦.೦೦ | ೧೮೩೪೨.೦೦ |

ಚಾಮರಾಜನಗರ ಜಿಲ್ಲೆಯಲ್ಲಿ ಮುಖ್ಯ ಅಂಚೆ ಕಚೇರಿಯೂ ಸೇರಿದಂತೆ ಒಟ್ಟು ೨೨ ಉಪ ಅಂಚೆಕಚೇರಿಗಳು ಕಾರ್ಯನಿರ್ವಹಿಸುತ್ತಿವೆ. ಜಿಲ್ಲೆಯಲ್ಲಿ ೬೩೧ ಉಳಿತಾಯ ಏಜೆಂಟರು ಮಹಿಳಾ ಪ್ರಧಾನ ಕ್ಷೇತ್ರೀಯ ಬಚಾವತ್ ಯೋಜನೆಯಡಿಯಲ್ಲಿ, ೧೫೭ ಜನರು ಸಣ್ಣ ಉಳಿತಾಯ ಯೋಜನೆಯಲ್ಲಿ ಮತ್ತು ಒಂಭತ್ತು ಜನರು ಸಾರ್ವಜನಿಕ ಭವಿಷ್ಯ ನಿಧಿ (ಪಿ.ಪಿ.ಎಫ್.) ಯೋಜನೆಯಡಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಈ ಏಜೆಂಟರುಗಳಿಗೆ ಅಂಚೆ ಕಚೇರಿಯ ಮೂಲಕ ಕಮೀಷನ್ ರೂಪದಲ್ಲಿ ಮತ್ತು ರಾಜ್ಯ ಸರ್ಕಾರದಿಂದ ಮೊತ್ತಕ್ಕೆ ಅನುಕೂಲವಾಗಿ ಪ್ರೋತ್ಸಾಹ ಧನವನ್ನೂ ಪಾವತಿಸಲಾಗುತ್ತದೆ.

## ಕರ್ನಾಟಕ ರಾಜ್ಯ ಲಾಟರಿ

೧೯೭೦ರಲ್ಲಿ ಕರ್ನಾಟಕ ಸರ್ಕಾರವು ಸಣ್ಣ ಉಳಿತಾಯ ಯೋಜನಾ ಇಲಾಖೆಯ ನಿರ್ದೇಶಕರ ಕಾರ್ಯಚರಣೆಯಲ್ಲಿ "ರಾಜ್ಯ ಲಾಟರಿ ಯೋಜನೆಯನ್ನು ಜಾರಿಗೆ ತಂದಿತು. ಇದರ ಮೂಲ ಉದ್ದೇಶವೆಂದರೆ ಸಾರ್ವಜನಿಕರಿಗೆ ಆಕರ್ಷಕ ಬಹುಮಾನ ಹಾಗೂ ಬಂಪರ್ ಬಹುಮಾನ ನೀಡುವುದರ ಮೂಲಕ ಅವರಲ್ಲಿರುವ ಉಳಿತಾಯ ಹಣವನ್ನು ಏಜೆಂಟರ ನೆರವಿನೊಂದಿಗೆ ಲಾಟರಿ ಚೀಟಿ ಮಾರಾಟ ಮಾಡುವುದರ ಮೂಲಕ ಸಂಗ್ರಹಿಸುವುದೇ ಆಗಿತ್ತು. ಈ ಯೋಜನೆಯಿಂದ ಸಂಗ್ರಹಿಸಿ ಮಿಕ್ಕ ಹಣವನ್ನು ಆರ್ಥಿಕ ಯೋಜನಾ ಕಾರ್ಯಕ್ರಮಗಳಿಗೆ ವಿನಿಯೋಗಿಸುವುದಾಗಿತ್ತು. ಲಾಟರಿ ಟಿಕೇಟ್‌ಗಳನ್ನು ಮಾರಾಟ ಮಾಡುವ ಏಜೆಂಟರಿಗೆ ಕಮಿಷನ್‌ನಿಂದ ಅವರ ಉಪಜೀವನಕ್ಕೆ ನೆರವಾಗುವುದು. ಇದರ ಮಾರಾಟದಿಂದ ದೇಶಾದ್ಯಂತ ಲಕ್ಷಾಂತರ ನಿರುದ್ಯೋಗಿಗಳಿಗೆ ಉದ್ಯೋಗ ಭರವಸೆ ನೀಡುವುದು ಸೇರಿತ್ತೆ. ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ (ಎಂ.ಎಸ್.ಐ.ಎಲ್.) ಬೆಂಗಳೂರು ಸಂಸ್ಥೆಯು ಲಾಟರಿಯ ಅಧಿಕೃತ ಮಾರಾಟಗಾರರಾಗಿದ್ದು ಅದರ ಮುದ್ರಣ ಕಾರ್ಯ, ಏಜೆಂಟರ ನೇಮಕ, ಲಾಟರಿ ಟಿಕೀಟುಗಳ ವಿತರಣೆ ಮತ್ತು ಮಾರಾಟದ ವ್ಯವಸ್ಥೆಯನ್ನು ನೋಡಿಕೊಳ್ಳುತ್ತಿತ್ತು. ರಾಜ್ಯ ಲಾಟರಿಯೋಜನೆಯಲ್ಲಿ ₹ ೫೦೦೦ಗಳಿಗಿಂತ ಹೆಚ್ಚಿನ ಮೊತ್ತದ ಬಹುಮಾನವನ್ನು ಪಡೆದ ವಿಜೇತರಿಂದ ವರಮಾನ ತೆರಿಗೆಯನ್ನು ಸಂಗ್ರಹಿಸಿ ಸಂಪನ್ಮೂಲವನ್ನು ಕ್ರೋಢೀಕರಿಸುವ ಕಡ್ಡಾಯ ರಾಷ್ಟ್ರೀಯ ಉಳಿತಾಯ ಯೋಜನೆ ಮತ್ತು ಸಣ್ಣ ಉಳಿತಾಯ ಯೋಜನೆ ಮೊದಲಾದವುಗಳು ಚಾಮರಾಜನಗರ ಜಿಲ್ಲೆಯಲ್ಲೂ ವ್ಯಾಪಕ ಪ್ರಚಾರದಿಂದ ಸಾರ್ವಜನಿಕರ ಉಳಿತಾಯದ ಹಣವನ್ನು ಸಂಗ್ರಹಿಸುವಲ್ಲಿ ಯಶಸ್ಸು ಸಾಧಿಸಿವೆ.

ಕರ್ನಾಟಕ ರಾಜ್ಯ ಲಾಟರಿ ಯೋಜನೆಯಿಂದ ಲಕ್ಷಾಂತರ ಏಜೆಂಟರ ಉಪಜೀವನಕ್ಕೆ ದಾರಿಯಾಗಿದ್ದರೂ ಅದರ ಮಾರಾಟದಿಂದ ಉಂಟಾಗುವ ಪರಿಣಾಮವನ್ನು ಸರ್ಕಾರವು ಪರಾಮರ್ಶಿಸಿ ಆದಾಯದ ದೃಷ್ಟಿಯಿಂದ ಉತ್ತಮವಾದ ಮಾರ್ಗವಾಗಿದ್ದರೂ ಅದರ ವ್ಯಾಮೋಹಕ್ಕೆ ಒಳಗಾಗಿ ದುರಾಸೆಯಿಂದ ಲಾಟರಿ ಟಿಕೇಟ್‌ಗಳನ್ನು ಕೊಂಡು ಅದೃಷ್ಟದ ಜೂಜಾಟದಲ್ಲಿ ಸೋಲು-ಗೆಲುವುಗಳು ಕಂಡು ಎಲ್ಲಾ ಕಳೆದುಕೊಂಡು ಬೀದಿಪಾಲಾದ ಸಹಸ್ರಾರು ಕುಟುಂಬಗಳ ದಾರುಣ ಸ್ಥಿತಿಗೆ ಸ್ಪಂದಿಸಿದ ಸರ್ಕಾರ, ದಿನಾಂಕ ೦೧-೦೪-೨೦೦೭ರಿಂದ ಲಾಟರಿ ಯೋಜನೆಯನ್ನು ಸಂಪೂರ್ಣವಾಗಿ ನಿಷೇಧಿಸಿ ಕರ್ನಾಟಕ ರಾಜ್ಯವನ್ನು ಲಾಟರಿ ಮುಕ್ತ ವಲಯವೆಂದು ಘೋಷಿಸಿದೆ. ಆದುದರಿಂದ ರಾಜ್ಯದಲ್ಲಿ ಯಾವುದೇ ಲಾಟರಿ ಮಾರಾಟ ಮಾಡಲು ಆಸ್ಪದ ಇರುವುದಿಲ್ಲ. ಅನಧಿಕೃತ ಲಾಟರಿ ಮಾರಾಟ ಕಂಡು ಬಂದಲ್ಲಿ ಅವುಗಳ ಮೇಲೆ ಕ್ರಮ ತೆಗೆದುಕೊಳ್ಳಲು ಮಾನ್ಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಲಾಟರಿ ವಿಚಕ್ಷಣ ದಳವನ್ನು ನೇಮಕ ಮಾಡಲಾಗಿದೆ. ಈ ದಳದಲ್ಲಿ ಪೋಲೀಸ್ ಅಧಿಕಾರಿಗಳನ್ನೊಳಗೊಂಡ ಅಧಿಕಾರಿಗಳ ತಂಡವನ್ನು ರಚಿಸಲಾಗಿದೆ. ಮಾನ್ಯ ಜಿಲ್ಲಾಧಿಕಾರಿಗಳ ನಿರ್ದೇಶನದಲ್ಲಿ ಈ ತಂಡವು ಕಾರ್ಯನಿರ್ವಹಿಸುತ್ತಿದೆ.

## ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರ

ಕ್ರಿಯಾಶೀಲ ಆರೋಗ್ಯವಂತ ಜೀವನಕ್ಕಾಗಿ ದೇಶದ ಎಲ್ಲ ಜನರಿಗೆ ಎಲ್ಲ ವೇಳೆಯಲ್ಲಿ ಸಾಕಷ್ಟು ಸತ್ವಪೂರ್ಣ ಆಹಾರ ಧಾನ್ಯಗಳಲ್ಲದೇ ಜೀವನಾವಶ್ಯಕ ವಸ್ತುಗಳನ್ನು ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೂಲಕ ಸಮರ್ಪಕವಾಗಿ ವಿತರಣೆ ಮಾಡಲು ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯು ಜಿಲ್ಲಾ ಮಟ್ಟದಲ್ಲಿ ಕಾರ್ಯರೂಪಗೊಂಡಿದೆ. ಪ್ರತೀ ಕುಟುಂಬಕ್ಕೂ ಆಹಾರ ಭದ್ರತೆಯನ್ನು ಒದಗಿಸುವ ಉದ್ದೇಶದಿಂದಾಗಿ ಸರ್ಕಾರಗಳು ಸಾರ್ವಜನಿಕ ವಿತರಣಾ ವ್ಯವಸ್ಥೆಗೆ ಉತ್ತಮ ಪಾರದರ್ಶಿಕತೆ ಒದಗಿಸಿಕೊಡಲು ಪ್ರಯತ್ನಿಸುತ್ತಿವೆ. ಕಳೆದ ಅನೇಕ ದಶಕಗಳಿಂದ ಕರ್ನಾಟಕದಲ್ಲಿ ಪಡಿತರ ವ್ಯವಸ್ಥೆ ನಿರಂತರ ಆಹಾರ ಭದ್ರತಾ ಯೋಜನೆಯಡಿಯಲ್ಲಿ ಪ್ರತಿ ಕುಟುಂಬಕ್ಕೆ ಅರ್ಹತೆಗನುಸಾರವಾಗಿ ಪಡಿತರ ಚೀಟಿ ನೀಡುವುದು, ಪ್ರತಿ ಪಡಿತರ ಕಾರ್ಡುದಾರರಿಗೆ ನಿರ್ಧಿಷ್ಟ ಪ್ರಮಾಣದ ಆಹಾರ ಧಾನ್ಯ ನೀಡುವುದು, ಅಗ್ಗದ ದರದಲ್ಲಿ ಪಡಿತರ ಪೂರೈಸುವುದು ಮತ್ತು ಪಡಿತರ ಆಹಾರ ಪೂರೈಕೆಗೆ ಸಬ್ಸಿಡಿ ನೀಡುತ್ತಿರುವುದು, ಗ್ರಾಹಕರ ಸಂರಕ್ಷಣೆ ಮುಂತಾದವು ಯೋಜನೆಯ ಮುಖ್ಯಾಂಶಗಳಾಗಿವೆ.

ಇಂದು ಕರ್ನಾಟಕದಲ್ಲಿ ಸಾರ್ವಜನಿಕ ವಿತರಣಾ ವ್ಯವಸ್ಥೆ ಒಂದು ಬೃಹತ್ ಕಾರ್ಯಕ್ರಮವಾಗಿದ್ದು, ಇದರ ಪರಿಣಾಮಕಾಗಿ ಕಾರ್ಯಾಚರಣೆಗೆ ಸರ್ಕಾರ, ಸರ್ಕಾರೇತರ ಸೇವಾಸಂಸ್ಥೆಗಳು ಮತ್ತು ಮತಮಾನ್ಯಗಳು ನಿರಂತರವಾಗಿ ಕಾರ್ಯಾಚರಣೆಯಲ್ಲಿ ತೊಡಗಿವೆ. ೨೦೦೫ರಿಂದ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೇಲ್ವಿಚಾರಣೆಯನ್ನು ಜಿಲ್ಲಾ, ತಾಲೂಕು ಮತ್ತು ಗ್ರಾಮ ಪಂಚಾಯಿತಿಗಳಿಗೆ ಸರ್ಕಾರ ನೀಡಿದೆ. ಚಾಮರಾಜನಗರ ಜಿಲ್ಲೆಯಲ್ಲಿ ಎಲ್ಲಾ ೧೨೦ ಗ್ರಾಮ ಪಂಚಾಯಿತಿಗಳಲ್ಲಿ ಆಹಾರ ಖಾತರಿ ಸಮಿತಿಯನ್ನು ರಚಿಸಲಾಗಿದೆ ಈ ಖಾತರಿ ಸಮಿತಿಯು ತನ್ನ ಪಂಚಾಯ್ತಿ ವ್ಯಾಪ್ತಿಯಲ್ಲಿ ಬರುವ ನ್ಯಾಯಬೆಲೆ ಅಂಗಡಿಗಳ ಪಡಿತರ ಹಂಚಿಕೆ, ಎತ್ತುವಳಿ ವಿತರಣೆ, ಹಾಗೂ ಪಡಿತರ ಚೀಟಿದಾರರ ಸಮಸ್ಯೆಗಳು ಮತ್ತು ನ್ಯಾಯ ಬೆಲೆ ಅಂಗಡಿಗಳ ಕಾರ್ಯನಿರ್ವಹಣೆ ಬಗ್ಗೆ ಪರಿಶೀಲಿಸುವ ಮತ್ತು ಆಹಾರ ಪಡಿತರ ಪದಾರ್ಥಗಳು ದೊರಕುವಂತೆ ಕೆಲಸ ಮಾಡಬೇಕಾಗಿದೆ ಅದರಂತೆ ಜಿಲ್ಲೆಯಲ್ಲಿ ಪ್ರತಿ ತಿಂಗಳು ಪಡಿತರ ಆಹಾರ ಧಾನ್ಯಗಳನ್ನು ನ್ಯಾಯಬೆಲೆ ಅಂಗಡಿಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತವೆ. ಪ್ರತಿಯೊಬ್ಬ ಪಡಿತರ ಕಾರ್ಡುದಾರರಿಗೆ ನ್ಯಾಯ ದೊಕಿಸಿಕೊಡುವುದು ಇದರ ಉದ್ದೇಶವಾಗಿದೆ. ಪ್ರತಿ ಗ್ರಾಮಮಟ್ಟದಲ್ಲಿ ನ್ಯಾಯ ಬೆಲೆ ಅಂಗಡಿಗಳ ಮೇಲ್ವಿಚಾರಣೆ ಮತ್ತು ಪಡಿತರ ಗ್ರಾಹಕರ ಹಿತರಕ್ಷಣೆ ಕಾಪಾಡಲು ಆಹಾರ ಖಾತರಿ ಸಮಿತಿಗಳ ಜೊತೆ ಪ್ರತಿ ನ್ಯಾಯಬೆಲೆ ಅಂಗಡಿಯಲ್ಲಿ ಏಳು ಕಾರ್ಡುದಾರ ಸದಸ್ಯರ ಆಹಾರ ಜಾಗೃತಿ ಸಮಿತಿಯನ್ನು ಸಹ ರಚಿಸಲಾಗಿದೆ. ಜಾಗೃತ ಸಮಿತಿಗಳು ಪ್ರತಿಯೊಬ್ಬ ಪಡಿತರ ಚೀಟಿದಾರನಿಗೆ ಪ್ರತಿ ತಿಂಗಳು ನಿಗಧಿತ ಪ್ರಮಾಣದ ಆಹಾರ ಧಾನ್ಯಗಳು ನ್ಯಾಯ ಬದ್ಧ ತೂಕ ಮತ್ತು ಅಳತೆಯಲ್ಲಿ ನೀಡುವಂತೆ ಕಾರ್ಯನಿರ್ವಹಿಸುವಂತೆ ನ್ಯಾಯ ಸಮ್ಮತೆ, ಪಡಿತರದಾರರ ಅಹವಾಲುಗಳು, ನ್ಯಾಯಬೆಲೆ ಅಂಗಡಿಯ ಕಾರ್ಯನಿರ್ವಹಣೆ ಬಗ್ಗೆ ಪರಾಮರ್ಶೆ ಮಾಡಲು ಅಧಿಕಾರವಿದೆ.

ಮೈಸೂರು–ಚಾಮರಾಜನಗರ ಜಿಲ್ಲೆಯಲ್ಲಿ ಪಡಿತರ ವ್ಯವಸ್ಥೆಯನ್ನು ೧೯೬೬ರಲ್ಲಿ ಜಾರಿಗೆ ತರಲಾಯಿತು. ಈ ವ್ಯವಸ್ಥೆಯನ್ನು ೪೦,೦೦೦ ಮತ್ತು ಅದಕ್ಕಿಂತ ಹೆಚ್ಚಿನ ಜನಸಂಖ್ಯೆಯಿರುವ ಎಲ್ಲ ನಗರ ಮತ್ತು ಪಟ್ಟಣಗಳಿಗೂ ವಿಸ್ತರಿಸಲಾಯಿತು. ಅದರಂತೆ ಚಾಮರಾಜನಗರ ಜಿಲ್ಲೆಯು ಅನೌಪಚಾರಿಕ ಪಡಿತರ ಪದ್ಧತಿ ವ್ಯಾಪ್ತಿಗೆ ಒಳಪಟ್ಟಿರುತ್ತದೆ. ಅವಶ್ಯಕ ವಸ್ತುಗಳು ಅಂದರೆ ಅಕ್ಕಿ, ಗೋಧಿ, ಸಕ್ಕರೆ, ಸೀಮೆಎಣ್ಣೆ ಹಾಗೂ ಪಾಮೊಲಿನ್ ಎಣ್ಣೆಯನ್ನು ಪಡಿತರ ಚೀಟಿ ವ್ಯವಸ್ಥೆಯನ್ವಯ ನ್ಯಾಯಬೆಲೆ ಅಂಗಡಿಗಳ ಮೂಲಕ ನಗರ

ಪಟ್ಟಣ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಸಾರ್ವಜನಿಕ ವಿತರಣಾ ಕಾರ್ಯವನ್ನು ಕೈಗೊಳ್ಳಲಾಗುತ್ತದೆ. ವಾರ್ಷಿಕ ಆದಾಯ ₹ ೧೨,೦೦೦ಕ್ಕಿಂತ ಕಡಿಮೆ ಇರುವ ಗ್ರಾಮಾಂತರ ಪ್ರದೇಶದ ಬಡಜನರಿಗೆ ರಿಯಾಯಿತಿ ದರದಲ್ಲಿ ಆಹಾರ ಧಾನ್ಯಗಳ ವಿತರಣಾ ಪದ್ಧತಿಯನ್ನು ೧-೧೧-೧೯೮೫ ರಿಂದ ಅನುಷ್ಠಾನಗೊಳಿಸಲಾಯಿತು. ಈ ಯೋಜನೆಯ ವ್ಯಾಪ್ತಿಗೆ ಭೂ ರಹಿತ ಕೃಷಿ ಕಾರ್ಮಿಕರು, ಸಣ್ಣ ಮತ್ತು ಅತಿ ಸಣ್ಣ ಹಿಡುವಳಿದಾರರು, ತೋಟಗಾರಿಕೆ ಕೂಲಿಕೆಲಸಗಾರರು, ಗ್ರಾಮೀಣ ಕುಶಲಕರ್ಮಿಗಳು, ಅಂಗವಿಕಲರು, ವೃದ್ಧಾಪ್ಯ ಹಾಗೂ ವಿಧವಾ ಮಾಸಾಶನದ ಫಲಾನುಭವಿಗಳು ಮುಂತಾದವರನ್ನು ಒಳಪಡಿಸಲಾಯಿತು. ಈ ಕುಟುಂಬಗಳಿಗೆ ಹಸಿರು ಪಡಿತರ ಚೀಟಿಯನ್ನು ನೀಡಲಾಗುತ್ತಿದೆ. ಪ್ರತಿ ಪಡಿತರ ಚೀಟಿಗೆ ತಿಂಗಳಿಗೆ ಐದು ಕಿಲೋ ಅಕ್ಕಿ (ಕಿಲೋ ಗ್ರಾಂಗೆ ₹ ೨.೫೦) ಮತ್ತು ಐದು ಕಿ.ಲೋ. ಗೋಧಿಯನ್ನು (ಕಿಲೋಗ್ರಾಂಗೆ ₹ ೧.೬೦) ವಿತರಿಸಲಾಗುತ್ತಿತ್ತು. ಈ ಸೌಲಭ್ಯವನ್ನು ೧೯೮೯ ಆಗಸ್ಟ್ ೧೫ರಿಂದ ೨೦,೦೦೦ಕ್ಕಿಂತ ಕಡಿಮೆ ಜನಸಂಖ್ಯೆ ಇರುವ ಪಟ್ಟಣ ಪ್ರದೇಶದ ಬಡಜನರಿಗೂ ವಿಸ್ತರಿಸಲಾಯಿತು. ಗ್ರಾಮೀಣ ಪ್ರದೇಶದ ದುರ್ಬಲ ವರ್ಗದವರನ್ನು ಪ್ರತ್ಯೇಕವಾಗಿ ಗುರುತಿಸುವ ಉದ್ದೇಶದಿಂದ ಅಂತಹ ಕುಟುಂಬಗಳಿಗೆ ಹಸಿರು ಪಡಿತರ ಚೀಟಿಯನ್ನು ಮತ್ತು ಇತರರಿಗೆ ಕೇಸರಿ ಬಣ್ಣದ ಪಡಿತರ ಚೀಟಿಯನ್ನು ನೀಡಲಾಗಿತ್ತು. ಅಂತೆಯೇ ಪಟ್ಟಣ ಪ್ರದೇಶದ ದುರ್ಬಲ ವರ್ಗದವರಿಗೆ ಹಸಿರು ಪಡಿತರ ಚೀಟಿಯನ್ನೂ ಹಾಗೂ ಇತರರಿಗೆ ಸಾಮಾನ್ಯ ಪಡಿತರ ಚೀಟಿಗಳನ್ನು ವಿತರಿಸಲಾಯಿತು. ಗ್ರಾಮೀಣ ಪ್ರದೇಶದಲ್ಲಿನ ಕೇಸರಿ ಪಡಿತರ ಚೀಟಿಯನ್ನು ಪಡೆದವರು ಮತ್ತು ಪಟ್ಟಣ ಪ್ರದೇಶಗಳಲ್ಲಿನ ಸಾಮಾನ್ಯ ಪಡಿತರ ಚೀಟಿಯನ್ನು ಹೊಂದಿದವರು ಪರಿಮಿತ ಪ್ರಮಾಣದಲ್ಲಿ ಸಾಮಾನ್ಯ ನೀಡಿಕೆ ಬೆಲೆಗಳಲ್ಲಿ ನಿರ್ದಿಷ್ಟ ಪ್ರಮಾಣದ ಅವಶ್ಯಕ ಸಾಮಗ್ರಿಗಳನ್ನು ಪಡೆಯುತ್ತಿದ್ದರು.

ರಾಜ್ಯದಲ್ಲಿ ೧೯೯೭ರ ಜೂನ್ ೧ರಿಂದ ಗುರಿ ಆಧಾರಿತ ಸಾರ್ವಜನಿಕ ವಿತರಣಾ ಪದ್ಧತಿಯನ್ನು ಆಚರಣೆಗೆ ತರಲಾಗಿದೆ. ದಿನಾಂಕ ೧-೧೧-೧೯೮೫ರಿಂದ ರಾಜ್ಯದಲ್ಲಿ ರೂಢಿಯಲ್ಲಿದ್ದ ರಿಯಾಯಿತಿ ದರದಲ್ಲಿ ಆಹಾರ ಧಾನ್ಯಗಳ ವಿತರಣಾ ಪದ್ಧತಿಯನ್ನು ಮುಂದುವರಿಸಲಾಗಿದೆ. ವಾರ್ಷಿಕ ಆದಾಯ ₹ ೧೭,೦೦೦ಕ್ಕಿಂತ ಹೆಚ್ಚಿಗೆ ಇರುವ ನಗರವಾಸಿ ಕುಟುಂಬಗಳಿಗೆ ಭಾವಚಿತ್ರವಿರುವ ಫೋಟೋ ಪಡಿತರ ಚೀಟಿಯನ್ನು, ವಾರ್ಷಿಕ ಆದಾಯ ₹ ೧೨,೦೦೦ಕ್ಕಿಂತ ಹೆಚ್ಚಿಗೆ ಇರುವ ಗ್ರಾಮಾಂತರ ಪ್ರದೇಶದ ಜನರಿಗೆ ಕೇಸರಿ ಪಡಿತರ ಚೀಟಿಯನ್ನೂ ನೀಡಲಾಗಿದೆ. ವಾರ್ಷಿಕ ಆದಾಯ ₹ ೧೨,೦೦೦ಕ್ಕಿಂತ ಕಡಿಮೆ ಇರುವ ಗ್ರಾಮಾಂತರ ಪ್ರದೇಶದ ಬಡಜನರಿಗೂ ಹಾಗೂ ವಾರ್ಷಿಕ ಆದಾಯ ₹ ೧೭,೦೦೦ಕ್ಕಿಂತ ಕಡಿಮೆ ಇರುವ ಪಟ್ಟಣ/ ನಗರವಾಸಿ ಬಡಜನರಿಗೂ ಹಸಿರು/ಹಳದಿ ಪಡಿತರ ಚೀಟಿಗಳನ್ನು ವಿತರಿಸಲಾಗಿದೆ. ಆರ್ಥಿಕ ಸ್ಥಿತಿಗತಿಗಳ ಆಧಾರದ ಮೇರೆಗೆ ಬಡತನ ರೇಖೆಯ ಕೆಳಗಿರುವ ಕುಟುಂಬಗಳಿಗೆ ಅಸ್ತಿತ್ವದಲ್ಲಿರುವ ಹಸಿರು ಪಡಿತರ ಚೀಟಿಯನ್ನು ಬದಲಿಸಿ ಹಳದಿ ಪಡಿತರ ಚೀಟಿಗಳನ್ನು ವಿತರಿಸಲಾಗಿದೆ. ಹಳದಿ ಪಡಿತರ ಚೀಟಿಯನ್ನು ಪಡೆದಿರುವ ಪ್ರತೀ ಕುಟುಂಬಕ್ಕೆ ನ್ಯಾಯಬೆಲೆ ಅಂಗಡಿಗಳ ಮೂಲಕ ತಿಂಗಳಿಗೆ ೨೮ ಕಿ.ಗ್ರಾಂ ಅಕ್ಕಿ ಮತ್ತು ೭ ಕಿ.ಗ್ರಾಂ ಗೋಧಿಯನ್ನು ನೀಡಲಾಗುತ್ತಿತ್ತು. ಈ ಯೋಜನೆಯನ್ನು ದಿನಾಂಕ ೧-೯-೨೦೦೪ ರಿಂದ ಪರಿಷ್ಕರಿಸಲಾಗಿದ್ದು, ಅದರಂತೆ ೨೦ ಕಿಗ್ರಾಂ ಅಕ್ಕಿ (ಕಿಲೋಗೆ ₹ ೩) ಹಾಗೂ ಐದು ಕಿ.ಗ್ರಾಂ. ಗೋಧಿಯನ್ನು (ಕಿಲೋಗೆ ₹ ೩) ನೀಡಲಾಗುತ್ತಿದೆ.

ಭಾರತ ಸರ್ಕಾರ ಕಡುಬಡವರಿಗಾಗಿ "ಅಂತ್ಯೋದಯ ಅನ್ನ ಯೋಜನೆ" (ಎ.ಎ.ವೈ.) ಎಂಬ ಹೊಸ ಯೋಜನೆಯನ್ನು ೨೦೦೧-೦೨ರಲ್ಲಿ ಆರಂಭಿಸಿದೆ. ಈ ಯೋಜನೆಯಡಿಯಲ್ಲಿ ಪ್ರತಿ ಕುಟುಂಬಕ್ಕೆ ತಿಂಗಳಿಗೆ

೨೮ ಕಿ.ಗ್ರಾಂ. ಅಕ್ಕಿಯನ್ನು ಮತ್ತು ೭ ಕಿ.ಗ್ರಾಂ. ಗೋಧಿಯನ್ನು ಅತಿ ರಿಯಾಯಿತಿ ದರಗಳಲ್ಲಿ ಅಂದರೆ ಅಕ್ಕಿ ಕಿ.ಗ್ರಾಂ.ಗೆ ರೂ.೩ ಹಾಗೂ ಗೋಧಿ ಕಿ.ಗ್ರಾಂ.ಗೆ ರೂ. ೨ ರಂತೆ ವಿತರಿಸಲಾಗುತ್ತಿದೆ.

## ಆಹಾರ ಮತ್ತು ನಾಗರೀಕ ಸರಬರಾಜು–ವಿವಿಧ ಪಡಿತರ ಚೀಟಿ ವ್ಯವಸ್ಥೆ

೧೯೪೨ರಲ್ಲಿ ಆಹಾರ ಧಾನ್ಯ ನಿಯಂತ್ರಣ ಕಾಯ್ದೆಯನ್ನು ಸರಕಾರ ಜಾರಿಗೆ ತಂದು ಆಹಾರ ಧಾನ್ಯಗಳು ಹೊರ ಜಿಲ್ಲೆಗಳಿಗೆ ರವಾನೆಯಾಗದಂತೆ ನಿರ್ಬಂಧಿಸಿತು. ನಂತರ ೧೯೫೦ರಲ್ಲಿ ಸರಕಾರ ನ್ಯಾಯಬೆಲೆ ಅಂಗಡಿಗಳನ್ನು ತೆರೆಯಿತು. ಮತ್ತು ಕೆಲವು ವರ್ತಕರಿಗೆ ಇದರ ಜವಾಬ್ದಾರಿಯನ್ನು ವಹಿಸಿತು. ನ್ಯಾಯ ಬೆಲೆ ಅಂಗಡಿಗಳ ಮೂಲಕ ಆಹಾರ ಮತ್ತು ನಾಗರಿಕ ಪದಾರ್ಥಗಳನ್ನು ಸರಬರಾಜು ಮಾಡಲು ಕುಟುಂಬ ಆಧಾರಿತ ಚೀಟಿ (ರೇಶನ್ ಕಾರ್ಡ್) ವ್ಯವಸ್ಥೆಯನ್ನು ಜಾರಿಗೊಳಿಸಿತು. ಪ್ರಸ್ತುತ ಕುಟುಂಬದ ಆರ್ಥಿಕ ಪರಿಸ್ಥಿತಿ ಗಮನದಲ್ಲಿಟ್ಟುಕೊಂಡು ಪಡಿತರ ಚೀಟಿಯನ್ನು ೨ ಮುಖ್ಯ ಭಾಗಗಳಾಗಿ ವಿಂಗಡಿಸಲಾಗಿದೆ. (೧) ಎಪಿಲ್ (ಬಡತನದ ರೇಖೆಯ ಮೇಲಿರುವ ಕುಟುಂಬ (೨) ಬಿ.ಪಿ.ಎಲ್ (ಬಡತನದ ರೇಖೆಯ ಕೆಳಗೆ ಇರುವ ಕುಟುಂಬ) ಬಿ.ಪಿ.ಎಲ್ ಕಾರ್ಡುಗಳಲ್ಲಿಯೂ ೨ ವಿಧದ ಬಣ್ಣವನ್ನು ಹೊಂದಿರುವ ಅಂದರೆ ಹಸಿರು ಕಾರ್ಡ್ ಅತಿ ಬಡವರಿಗೆ, ಹಳದಿ ಕಾರ್ಡ್ ಸುಧಾರಿತ ಬಡವರಿಗೆ ನೀಡಲಾಗಿದೆ.

೧. ಚಾಮರಾಜನಗರ ಜಿಲ್ಲೆಯ ವಿವಿಧ ವರ್ಗಗಳ ಪಡಿತರ ಚೀಟಿದಾರರಿಗೆ ೨೦೧೦ನೇ ಏಪ್ರಿಲ್ ಮಾಹೆಗೆ ಪಡಿತರ ವಿತರಣೆ ಮಾಡಲು ೩೮೪೮೮ ಕ್ವಿಂಟಾಲ್ ಅಕ್ಕಿ, ೬೪೦೦ ಕ್ವಿಂಟಾಲ್ ಗೋಧಿ, ೨೩೭೫ ಕ್ವಿಂಟಾಲ್ ಸಕ್ಕರೆಯನ್ನು ತಾಲೂಕು ಕಾರ್ಯ ನಿರ್ವಹಣಾಧಿಕಾರಿಗಳು/ತಹಶೀಲ್ದಾರವರಿಗೆ ಬಿಡುಗಡೆ ಮಾಡಿದೆ.

೨. ಭಾವಚಿತ್ರ ತೆಗೆಯಿಸಿರುವ ವಿವಿಧ ವರ್ಗದ ಕಾರ್ಡುದಾರರಿಗೆ, ಯೂನಿಟ್‌ವಾರು, ಏಪ್ರಿಲ್ ೨೦೧೦ರ ಮಾಹೆಗೆ ಜಿಲ್ಲೆಯಲ್ಲಿ ಅಂತ್ಯೋದಯ, ನೆಮ್ಮದಿ ಪೂರ್ವ ಮತ್ತು ನೆಮ್ಮದಿ ಕೇಂದ್ರದಲ್ಲಿ ವಿತರಿಸಿರುವ ಪಡಿತರ ಚೀಟಿದಾರರಿಗೆ ಅಕ್ಕಿ, ಗೋಧಿ ಪ್ರಮಾಣ ಮತ್ತು ದರದ ವಿವರಗಳನ್ನು ಸಾರ್ವಜನಿಕರ ಮಾಹಿತಿಗಾಗಿ ಪ್ರಕಟಿಸಿದೆ.

| ಪಡಿತರ ಚೀಟಿ ವಿವರ | ಪ್ರತಿ ಕಾರ್ಡಿಗೆ ನೀಡುವ ಪದಾರ್ಥ (ಕೆಜಿ.ಗಳಲ್ಲಿ) | | | ಪ್ರತಿ ಕೆ.ಜಿಗೆ ಬೆಲೆ (₹ ಗಳಲ್ಲಿ) | | |
|---|---|---|---|---|---|---|
| | ಅಕ್ಕಿ | ಗೋಧಿ | ಸಕ್ಕರೆ | ಅಕ್ಕಿ | ಗೋಧಿ | ಸಕ್ಕರೆ |
| ಅಂತ್ಯೋದಯ | ೨೯ | ೬ | ೧ | ೩.೦೦ | ೨.೦೦ | ೧೩.೫೦ |
| ನೆಮ್ಮದಿ ಪೂರ್ವ ಮತ್ತು ನೆಮ್ಮದಿ | | | | | | |
| ಏಕ ಸದಸ್ಯ ಕುಟುಂಬ | ೪ | ೧ | ೧ | ೩.೦೦ | ೩.೦೦ | ೧೩.೫೦ |
| ದ್ವಿಸದಸ್ಯ ಕುಟುಂಬ | ೮ | ೧ | ೧ | ೩.೦೦ | ೩.೦೦ | ೧೩.೫೦ |
| ತ್ರಿಸದಸ್ಯ ಕುಟುಂಬ | ೧೨ | ೨ | ೧ | ೩.೦೦ | ೩.೦೦ | ೧೩.೫೦ |
| ನಾಲ್ಕು ಸದಸ್ಯ ಕುಟುಂಬ | ೧೬ | ೩ | ೧ | ೩.೦೦ | ೩.೦೦ | ೧೩.೫೦ |
| ಐದು ಮತ್ತು ಅದಕ್ಕಿಂತ ಹೆಚ್ಚಿನ ಸದಸ್ಯರನ್ನೊಳಗೊಂಡ ಕುಟುಂಬ | ೨೦ | ೩ | ೧ | ೩.೦೦ | ೩.೦೦ | ೧೩.೫೦ |
| ಎಪಿಎಲ್ ಪಡಿತರ ಚೀಟಿದಾರರಿಗೆ ಪಟ್ಟಣ/ನಗರ | ೧೦ | ೫ | – | ೧೬.೨೫ | ೧೧.೫೫ | – |

೩. ಎಪಿಎಲ್ ಕಾರ್ಡುದಾರರಿಗೆ ಸೀಮೆಎಣ್ಣೆ ಹಾಗೂ ಪಟ್ಟಣ/ನಗರ ಪ್ರದೇಶಕ್ಕೆ ಪ್ರತೀ ಪಡಿತರ ಚೀಟಿದಾರರಿಗೆ ೧೦ ಕೆ.ಜಿ. ಅಕ್ಕಿ ಐದು ಕೆಜಿ. ಗೋದಿ ಬಿಡುಗಡೆ ಮಾಡಲಾಗಿದೆ. ಯಾವುದಾದರೂ ನ್ಯಾಯಬೆಲೆ ಅಂಗಡಿಯವರು ಕಾರ್ಡುದಾರರಿಗೆ ಹೆಚ್ಚಿನ ದರದಲ್ಲಿ ಅಕ್ಕಿ, ಗೋಧಿ ಮಾರಾಟ ಮಾಡಿದರೆ ಅಂತಹ ನ್ಯಾಯಬೆಲೆ ಅಂಗಡಿಯವರ ಮೇಲೆ ದೂರು ಸಲ್ಲಿಸಲು ಕೋರಿದೆ.

೪. ಚಾಮರಾಜನಗರ ಜಿಲ್ಲೆಯಲ್ಲಿ ಭಾವಚಿತ್ರ ತೆಗೆಯಿಸಿರುವ ನೆಮ್ಮದಿ ಪೂರ್ವ ಮತ್ತು ನೆಮ್ಮದಿ ಪಡಿತರ ಚೀಟಿದಾರರಿಗೆ ಎಲ್ಲಾ ವಿಧದ ಅನಿಲರಹಿತ ಇತರ ಚೀಟಿದಾರರಿಗೆ ಏಪ್ರಿಲ್ ೨೦೧೦ರ ಮಾಹೆಗೆ ೯,೨೭,೧೧೬ ಲೀ. ಸೀಮೆಎಣ್ಣೆಯನ್ನು ಬಿಡುಗಡೆ ಮಾಡಿದೆ. ಗ್ಯಾಸ್ ಸಂಪರ್ಕ ಹೊಂದಿರುವವರಿಗೆ ಸೀಮೆಎಣ್ಣೆ ಹಂಚಿಕೆಯನ್ನು ನೀಡಿರುವುದಿಲ್ಲ. ಕಾರ್ಡುದಾರರಿಗೆ ಬಿಡುಗಡೆ ಮಾಡಿರುವ ಸೀಮೆಎಣ್ಣೆ ಪ್ರಮಾಣ ಮತ್ತು ದರ ಈ ಕೆಳಕಂಡಂತಿದೆ.

| ತಾಲೂಕು/ಪಟ್ಟಣ ಪ್ರದೇಶ | ಪ್ರಮಾಣ (ಲೀಟರುಗಳಲ್ಲಿ) | | | ಪ್ರತಿ ಲೀಟರಿಗೆ ದರ ₹ ಗಳಲ್ಲಿ | |
|---|---|---|---|---|---|
| | ನಗರ | ಪಟ್ಟಣ | ಗ್ರಾಮಾಂತರ | ನಗರ/ಪಟ್ಟಣ | ಗ್ರಾಮಾಂತರ |
| **ಚಾಮರಾಜನಗರ** | ೬ | – | ೩ | ೯.೫೦ | ೯.೮೦ |
| **ಕೊಳ್ಳೇಗಾಲ** | ೬ | – | ೩ | ೯.೫೦ | ೯.೮೦ |
| **ಗುಂಡ್ಲುಪೇಟೆ** | – | ೫ | – | ೯.೫೦ | – |
| **ಯಳಂದೂರು** | – | ೫ | ೩ | ೯.೩೦ | ೯.೬೦ |
| **ಒಟ್ಟು** | – | ೫ | ೩ | ೯.೫೦ | ೯.೮೦ |

೫. ಏಪ್ರಿಲ್ ೨೦೧೦ರ ಮಾಹೆಯ ಆಹಾರ ಧಾನ್ಯವನ್ನು ಮತ್ತು ಸೀಮೆಎಣ್ಣೆಯನ್ನು ದಿ. ೨೦–೦೪–೨೦೧೦ ರೊಳಗೆ ಕಾರ್ಡುದಾರರಿಗೆ ವಿತರಿಸಲು ಎಲ್ಲಾ ನ್ಯಾಯಬೆಲೆ ಅಂಗಡಿ/ಚಿಲ್ಲರೆ ಸೀಮೆಎಣ್ಣೆ ಅಂಗಡಿ ಮಾಲೀಕರಿಗೆ ಸೂಚನೆ ನೀಡಲಾಗಿತ್ತು. ಆಯಾ ತಿಂಗಳೇ ಪಡಿತರವನ್ನು ಹಂಚಿಸುವ ಜವಾಬ್ದಾರಿಯನ್ನು ಈಗಾಗಲೇ ಆಯಾ ಗ್ರಾಮ ಪಂಚಾಯ್ತಿಯ "ಆಹಾರ ಖಾತರಿ ಸಮಿತಿಗಳಿಗೆ" ವಹಿಸಲಾಗಿದೆ. ಪ್ರತೀ ಗ್ರಾಮಕ್ಕೆ ಪ್ರತೀ ತಿಂಗಳು ಸರಬರಾಜಾಗುವ ಆಹಾರ ಧಾನ್ಯದ ಬಗ್ಗೆ ಗ್ರಾಮದಲ್ಲಿರುವ ಜಾಗೃತಿ ಸಮಿತಿಗಳು ಮೇಲ್ವಿಚಾರಣೆ ಮಾಡಬಹುದಾಗಿದೆ.

೬. ಆಯಾ ತಿಂಗಳ ಕೊನೆಯ ದಿನದೊಳಗೆ ಆಹಾರ ಧಾನ್ಯ ಮತ್ತು ಸೀಮೆಎಣ್ಣೆ ದೊರೆದಿದ್ದರೆ ಕಾರ್ಡುದಾರರು ದೂರುಗಳನ್ನು ಗ್ರಾಮ ಪಂಚಾಯ್ತಿ ಕಾರ್ಯದರ್ಶಿ ಅಥವಾ ತಾಲೂಕು ಪಂಚಾಯ್ತಿ ಕಾರ್ಯನಿರ್ವಹಣಾಧಿಕಾರಿಗಳು, ತಹಸೀಲ್ದಾರ್ ಅಥವಾ ಜಿಲ್ಲಾಧಿಕಾರಿಗಳ ಆಹಾರ ವಿಭಾಗಕ್ಕೆ ಸಲ್ಲಿಸಲು ಕೋರಿದೆ.

**ಚಾಮರಾಜನಗರ ಜಿಲ್ಲೆಯಲ್ಲಿ ಅಕ್ಷಯ ಯೋಜನೆಯಡಿಯಲ್ಲಿ ವಿತರಿಸಿದ ಪಡಿತರ ಚೀಟಿಗಳಿಗೆ ಭಾವಚಿತ್ರ ಸೆರೆಹಿಡಿದ ವಿವರ (೩೧-೦೩-೨೦೧೦)**

| ಕ್ರ. ಸಂ | ತಾಲೂಕಿನ ಹೆಸರು | ಕುಟುಂಬಗಳ ಸಂಖ್ಯೆ | ಕುಟುಂಬಗಳು | | | | ಶೇ. |
|---|---|---|---|---|---|---|---|
| | | | ಅಂತ್ಯೋದಯ ಅನ್ನ ಯೋಜನೆ | ಬಡತನ ರೇಖೆಯ ಕೆಳಗೆ ಇರುವ ಕುಟುಂಬ | ಬಡತನ ರೇಖೆಯ ಮೇಲಿರುವ ಕುಟುಂಬ | ಒಟ್ಟು | |
| ೧ | ಗುಂಡ್ಲುಪೇಟೆ | ೫೭೧೨೨ | ೮೨೦೦ | ೩೫೧೬೪ | ೧೩೭೫೮ | ೫೭೧೨೨ | ೧೦೦ |
| ೨ | ಚಾಮರಾಜನಗರ | ೯೪೫೭೧ | ೧೦೮೫೬ | ೫೦೫೭೯ | ೨೧೯೬೫ | ೮೩೪೦೦ | ೮೮ |
| ೩ | ಯಳಂದೂರು | ೧೯೮೨೧ | ೨೯೨೩ | ೧೧೩೧೫ | ೩೮೮೨ | ೧೮೮೨೦ | ೯೧ |
| ೪ | ಕೊಳ್ಳೇಗಾಲ | ೯೭೬೭೨ | ೧೧೦೮೭ | ೫೭೨೩೨ | ೧೫೨೮೨ | ೮೩೬೦೧ | ೮೬ |
| | **ಒಟ್ಟು** | **೨೬೯೧೮೬** | **೩೩೦೬೬** | **೧೫೪೨೯೦** | **೫೪೮೮೭** | **೨೪೨೯೪೩** | **೯೦** |

**ಚಾಮರಾಜನಗರ ಜಿಲ್ಲೆಯಲ್ಲಿರುವ ನ್ಯಾಯ ಬೆಲೆ ಅಂಗಡಿಗಳ ವರ್ಗವಾರು ವಿವರ (೩೧-೦೩-೨೦೧೦)**

| ಕ್ರ. ಸಂ | ತಾಲೂಕಿನ ಹೆಸರು | ಪರಿಶಿಷ್ಟ ಜಾತಿ | ಪರಿಶಿಷ್ಟ ಪಂಗಡ | ಅಲ್ಪಸಂಖ್ಯಾತರು | ಮಹಿಳೆಯರು | ಸಹಕಾರಿ ಸಂಘಗಳು | ಅಂಗವಿಕಲರು | ಇತರೆ | ಒಟ್ಟು |
|---|---|---|---|---|---|---|---|---|---|
| ೧ | ಚಾಮರಾಜನಗರ | ೨೮ | ೨ | ೫ | ೩ | ೩೫ | ೦ | ೭೨ | ೧೪೪ |
| ೨ | ಗುಂಡ್ಲುಪೇಟೆ | ೨ | ೬ | ೦ | ೯ | ೩೮ | ೦ | ೭೩ | ೧೨೮ |
| ೩ | ಕೊಳ್ಳೇಗಾಲ | ೨೯ | ೧೬ | ೬ | ೧೨ | ೨೨ | ೦ | ೭೧ | ೧೫೬ |
| ೪ | ಯಳಂದೂರು | ೧೩ | ೫ | ೧ | ೩ | ೪ | ೧ | ೧೫ | ೪೨ |
| | ಒಟ್ಟು | **೭೧** | **೨೯** | **೧೨** | **೨೮** | **೯೯** | **೧** | **೨೩೧** | **೪೭೦** |

## ಚಾಮರಾಜನಗರ ಜಿಲ್ಲಾ ಗ್ರಾಹಕರ ವಿವಾದಗಳ ಪರಿಹಾರ ವೇದಿಕೆ

ಇಂದಿನ ವೈವಿಧ್ಯಮಯ ಮತ್ತು ಶೋಷಣೆಯಿಂದ ಕೂಡಿದ ವ್ಯಾಪಾರ-ವಾಣಿಜ್ಯ ವ್ಯವಸ್ಥೆಯಲ್ಲಿ ಗ್ರಾಹಕನನ್ನು ಅಭಿವ್ಯಕ್ತ ಸ್ವಾತಂತ್ರ್ಯವುಳ್ಳ ಪ್ರಜ್ಞಾವಂತ ಸಾರ್ವಭೌಮನೆಂದೂ, ಅಗ್ರಮಾನ್ಯ ಸ್ವತಂತ್ರ ಪ್ರಭುವೆಂದೂ ಎಷ್ಟೇ ಹೊಗಳಿದರೂ ಅವನು ಎಷ್ಟೇ ಜಾಗೃತನಾಗಿದ್ದರೂ ಅವನು ಹಲವಾರು ವಿಧಗಳಲ್ಲಿ ವರ್ತಕರಿಂದ, ಮಧ್ಯವರ್ತಿ ವ್ಯಾಪಾರಿಗಳಿಂದ, ವಿತರಕರಿಂದ, ಸರ್ಕಾರಿ, ಅರೆಸರ್ಕಾರಿ ಸಂಸ್ಥೆಗಳಿಂದ ಒಂದಲ್ಲಾ ಒಂದು ಬಗೆಯ ಶೋಷಣೆಗೆ ಒಳಗಾಗುತ್ತಾನೆ. ಇಂತಹ ನಿರಂತರ ಶೋಷಣೆ ಮತ್ತು ಅತೃಪ್ತಿಕರ ಸೇವೆಗಳಿಂದ ತಪ್ಪಿಸಲು ಗ್ರಾಹಕರಿಗೆ ಅವರ ಹಕ್ಕುಗಳ ಬಗ್ಗೆ ಜಾಗೃತಿಯನ್ನು ಮೂಡಿಸಲು ಮತ್ತು ವಾಣಿಜ್ಯಕ ಮೌಲ್ಯಗಳನ್ನು, ಸೇವೆಗಳನ್ನು ಸುಧಾರಿಸಲು ಸಹಾಯಕವಾಗುವಂತೆ ಕೇಂದ್ರ ಸರ್ಕಾರವು ೧೯೮೬ರಲ್ಲಿ "ಗ್ರಾಹಕ ಸಂರಕ್ಷಣಾ ಕಾಯಿದೆ"ಯನ್ನು

ಜಾರಿಗೊಳಿಸಿತು. ಅದರ ಅನ್ವಯ ಗ್ರಾಹಕರ ಕುಂದುಕೊರತೆಗಳನ್ನು ನಿವಾರಿಸಲು ಕರ್ನಾಟಕ ಸರ್ಕಾರವು ಗ್ರಾಹಕ ಸಂರಕ್ಷಣಾ ಕಾಯಿದೆಯನ್ನು ಅನುಷ್ಠಾನಕ್ಕೆ ಜಾರಿಗೊಳಿಸಿದ್ದು, ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರ ಸ್ಥಾನಗಳಲ್ಲಿ ಗ್ರಾಹಕರ ವಿವಾದಗಳ ಪರಿಹಾರ ವೇದಿಕೆಯನ್ನು ಸ್ಥಾಪಿಸಿದೆ. ಈ ವೇದಿಕೆಯು ಜಿಲ್ಲೆಯ ನಾಲ್ಕು ತಾಲೂಕುಗಳಿಗೆ ಒಳಪಟ್ಟಿದೆ. ಗ್ರಾಹಕರ ವ್ಯಾಜ್ಯ ಪರಿಹಾರ ಪಡೆಯಲಿಚ್ಛಿಸುವವರು ಜಿಲ್ಲಾ ವ್ಯಾಪ್ತಿಯವರೇ ಆಗಿರಬೇಕು.

ಗ್ರಾಹಕ ಸಂರಕ್ಷಣಾ ಕಾಯ್ದೆಯನ್ವಯ,

೧. ಗ್ರಾಹಕರು ಯಾವುದೇ ಗೃಹಬಳಕೆ ಅಥವಾ ಇತರ ಉಪಯುಕ್ತ ವಸ್ತುವನ್ನು ಖರೀದಿಸಿದಾಗ ಮಾರಾಟಗಾರನಿಂದ ಉಂಟಾಗಿರುವಂತಹ ವಂಚನೆ, ಖರೀದಿಸಿದ ವಸ್ತು ಕಳಪೆ ಎಂದು ಕಂಡು ಬಂದಾಗ ವಂಚನೆ ಕುರಿತು ಪರಿಹಾರ ಪಡೆಯಬಹುದು.

೨. ಯಾವುದೇ ವ್ಯಕ್ತಿ, ಗ್ರಾಹಕ ಎಂದು ಪರಿಗಣಿಸಲ್ಪಟ್ಟಾಗ ಅದರಿಂದ ಉಂಟಾಗಿರುವ ಅನ್ಯಾಯದ ಕುರಿತು ಪರಿಹಾರ ಪಡೆಯಬಹುದಾಗಿದೆ.

೩. ಗ್ರಾಹಕರಿಗೆ ಸೇವಾ ನ್ಯೂನತೆ ಉಂಟು ಮಾಡಿರುವ ಬ್ಯಾಂಕು ಮತ್ತು ಇತರ ವ್ಯವಹಾರ ಸೇವಾ ಸಂಸ್ಥೆಗಳು, ಪ್ರವಾಸದಲ್ಲಿ ಅತೃಪ್ತ ಸೇವೆ, ಅಂಚೆ, ವೈದ್ಯಕೀಯ ವಿಮೆ, ವಿದ್ಯಾಭ್ಯಾಸ, ಗೃಹ ನಿರ್ಮಾಣ, ವಿಮಾನ ಯಾನ, ಸಾರಿಗೆ ಸಂಪರ್ಕ, ಮೊಬೈಲ್ ವಾಹನಗಳ ಮಾಲೀಕರಿಂದ ಸೇವಾ ನ್ಯೂನತೆ, ವಿದ್ಯುಚ್ಛಕ್ತಿ, ಗೃಹ ಬಳಕೆ ವಸ್ತುಗಳು, ಕಂಪ್ಯೂಟರ್, ಹೋಟೇಲ್ ವಸತಿ ಗೃಹಗಳು ಮೊದಲಾದವುಗಳಲ್ಲಿ ಸೇವಾ ನ್ಯೂನತೆ ಉಂಟಾಗಿದ್ದರೆ, ಗ್ರಾಹಕ ವ್ಯಾಜ್ಯದಿಂದ ಪರಿಹಾರ ಪಡೆಯಬಹುದು.

೪. ಗ್ರಾಹಕರು ತಮ್ಮ ವ್ಯಾಜ್ಯಗಳನ್ನು ಮೂರು ತಿಂಗಳಿನಿಂದ ಐದು ತಿಂಗಳ ಒಳಗಾಗಿ ಪರಿಹರಿಸಿಕೊಳ್ಳಬಹುದು.

೫. ಗ್ರಾಹಕರು ತಮ್ಮ ವ್ಯಾಜ್ಯಗಳಿಗೆ ಸಂಬಂಧಿಸಿದಂತೆ ವೇದಿಕೆಯ ಮುಂದೆ ತಮ್ಮ ವಾದವನ್ನು ತಾವೇ ಮಂಡಿಸಿ ವ್ಯಾಜ್ಯ ನಡೆಸಬಹುದು.

೬. ಗ್ರಾಹಕರು ತಮ್ಮ ವ್ಯಾಜ್ಯವನ್ನು ಸಲ್ಲಿಸಲು ವ್ಯಾಜ್ಯ ನಡೆದ ದಿನಾಂಕದಿಂದ ಎರಡು ವರ್ಷಗಳ ಒಳಗಾಗಿ ದೂರು ಸಲ್ಲಿಸಬೇಕು.

೭. ಗ್ರಾಹಕರು ವ್ಯಾಜ್ಯದಲ್ಲಿ ತಮಗೆ ಉಂಟಾಗಿರುವ ಮಾನಸಿಕ ವೇದನೆ ಪ್ರಕರಣದ ವಿಲೇವಾರಿಗೆ ಆಗಿರುವ ಖರ್ಚು ವೆಚ್ಚಗಳನ್ನು ಸಹ ಎದುರುವಾದಿಯೂ ಪಡೆಯಬಹುದು.

೮. ಗ್ರಾಹಕರು ಜಿಲ್ಲಾ ವೇದಿಕೆಯಲ್ಲಿ ದೂರು ಸಲ್ಲಿಸಿ ಪರಿಹಾರ ಕೇಳುವ ಗರಿಷ್ಠ ಮೊತ್ತ ₹ ೨೦ ಲಕ್ಷ ಮತ್ತು ₹ ೨೦ ಲಕ್ಷ ಮೀರಿ ಪರಿಹಾರ ಕೇಳಲಿಚ್ಛಿಸುವವರು ರಾಜ್ಯ ಆಯೋಗ ಮತ್ತು ರಾಷ್ಟ್ರೀಯ ಆಯೋಗಕ್ಕೆ ದೂರು ಸಲ್ಲಿಸಬಹುದು. ರಾಜ್ಯ ಆಯೋಗದ ಮಿತಿ ₹ ೨೦ ಲಕ್ಷದಿಂದ ₹ ಒಂದು ಕೋಟಿ, ರಾಷ್ಟ್ರೀಯ ಆಯೋಗದ ಮಿತಿ ₹ ಒಂದು ಕೋಟಿಗಿಂತ ಮೇಲ್ಪಟ್ಟದ್ದು

೯. ಗ್ರಾಹಕರು ಜಿಲ್ಲಾ ವೇದಿಕೆಯಿಂದ ನೀಡಲಾದ ಪರಿಹಾರಕ್ಕೆ ತೃಪ್ತಿದಾಯಕವಾಗಿಲ್ಲದಿದ್ದ ಪಕ್ಷದಲ್ಲಿ ಜಿಲ್ಲಾ ವೇದಿಕೆಯ ಆದೇಶದ ವಿರುದ್ಧ ರಾಷ್ಟ್ರೀಯ ಆಯೋಗಕ್ಕೆ ಮೇಲ್ಮನವಿ ಸಲ್ಲಿಸಬಹುದು.

೧೦. ಒಂದು ವೇಳೆ ಎದುರುದಾರರು ಜಿಲ್ಲಾ ವೇದಿಕೆಯ ಆದೇಶಕ್ಕೆ ತೃಪ್ತರಾಗದಿದ್ದಲ್ಲಿ ರಾಜ್ಯ ಆಯೋಗಕ್ಕೆ ಮೇಲ್ಮನವಿ ಸಲ್ಲಿಸಿ ತಡೆಯಾಜ್ಞೆಯನ್ನು ಪಡೆಯಬಹುದು ಅಥವಾ ವಜಾ ಆದೇಶವನ್ನೂ ಸಹ ಪಡೆಯಬಹುದು.

೧೧. ಗ್ರಾಹಕರು ಪಡೆದ ಆದೇಶವನ್ನು ಎದುರುದಾರರು ಪಾಲಿಸದಿದ್ದಲ್ಲಿ ಅವರ ವಿರುದ್ಧ ಎಕ್ಸಿಕ್ಯೂಷನ್ ಅರ್ಜಿಯ ಮೂಲಕ ಪರಿಹಾರದ ಮೊತ್ತ, ಅದರ ಮೇಲಿನ ಬಡ್ಡಿ ಖರ್ಚುವೆಚ್ಚಗಳನ್ನು ಪಾವತಿಸುವಂತೆ ಅರ್ಜಿ ಸಲ್ಲಿಸಬಹುದು.

೧೨. ಜಿಲ್ಲೆಯಲ್ಲಿ ಗ್ರಾಹಕ ಜಾಗೃತಿಯನ್ನು ಉಂಟು ಮಾಡಲು ಜಾಗೃತಿ ಅದಾಲತ್‌ಗಳು, ಶಾಲಾಕಾಲೇಜುಗಳಲ್ಲಿ, ಕ್ಲಬ್, ಮಹಿಳಾ ವೇದಿಕೆಗಳಲ್ಲಿ, ಜಾಗೃತಿ ಶಿಬಿರಗಳನ್ನು ಏರ್ಪಡಿಸುವ ಮೂಲಕ ಜಾಗೃತಿ ಉಂಟು ಮಾಡಲಾಗುತ್ತದೆ.

೧೩. ಜಿಲ್ಲಾ ವೇದಿಕೆಯಲ್ಲಿ ದೂರು ಸಲ್ಲಿಸುವವರು ₹ ಒಂದು ಲಕ್ಷದವರೆಗೆ ಪರಿಹಾರ ಕೇಳುವವರು ₹ ೧೦೦ಗಳ ಶುಲ್ಕ; ₹ ಒಂದು ಲಕ್ಷದಿಂದ ₹ ಐದು ಲಕ್ಷಗಳವರೆಗೆ ಕೇಳುವವರು ₹ ೨೦೦, ₹ ೫ ಲಕ್ಷ ದಿಂದ ₹ ೧೦ ಲಕ್ಷ ದವರೆಗೆ ಪರಿಹಾರ ಕೇಳುವವರು ₹ ೪೦೦ ಮತ್ತು ₹ ೧೦ ಲಕ್ಷದಿಂದ ₹ ೨೦ ಲಕ್ಷಗಳ ಪರಿಹಾರ ಕೇಳುವವರು ₹ ೫೦೦ ಶುಲ್ಕವನ್ನು ಡಿ.ಡಿ. ರೂಪದಲ್ಲಿ ವೇದಿಕೆಯ ಅಧ್ಯಕ್ಷರ ಹೆಸರಿನಲ್ಲಿ ನೀಡಬೇಕಾಗಿರುತ್ತದೆ. ಒಂದು ವೇಳೆ ಫಿರ್ಯಾದುದಾರರು ಬಡತನದ ರೇಖೆಗಿಂತ ಕೆಳಗೆ ಇದ್ದು, ಅಕ್ಷಯ, ಅಂತ್ಯೋದಯ ಕಾರ್ಡುದಾರರಾಗಿದ್ದರೆ ಯಾವುದೇ ಶುಲ್ಕವಿರುವುದಿಲ್ಲ.

೧೪. ಜಿಲ್ಲಾ ವೇದಿಕೆಯು ಅಧ್ಯಕ್ಷರು, ಸದಸ್ಯರು ಮತ್ತು ಒಬ್ಬ ಮಹಿಳಾ ಸದಸ್ಯರನ್ನು ಒಳಗೊಂಡಿರುತ್ತದೆ.

೧೫. ಕಾರ್ಯನಿರ್ವಹಿಸುವ ಸಿಬ್ಬಂದಿಗಳು–ಸಹಾಯಕ ನೋಂದಣಾಧಿಕಾರಿ, ಸಹಾಯಕ ಆಡಳಿತಾಧಿಕಾರಿ, ಶಿರಸ್ತೇದಾರರು, ಪ್ರಥಮ ದರ್ಜೆ ಸಹಾಯಕರು, ಶೀಘ್ರಲಿಪಿಗಾರರು, ದ್ವಿತೀಯ ದರ್ಜೆ ಸಹಾಯಕರು, ಗ್ರೂಪ್ ಡಿ ಮೂರು ನೌಕರರು, ಇಷ್ಟು ಆಡಳಿತ ಸಿಬ್ಬಂದಿ ಗಳನ್ನೊಳಗೊಂಡಿರುತ್ತದೆ.

೧೬. ಚಾಮರಾಜನಗರ ಜಿಲ್ಲೆಯಲ್ಲಿ ವೇದಿಕೆ ಪ್ರಾರಂಭವಾದ ನಂತರ ಮೈಸೂರಿನಿಂದ ೨೦೦೨ ನೇ ಸಾಲಿನ ೫೨ ಪ್ರಕರಣಗಳು ಮತ್ತು ೨೦೦೩ರಲ್ಲಿ ೧೨ ಪ್ರಕರಣಗಳು ವರ್ಗಾವಣೆಗೊಂಡಿರುತ್ತದೆ.

**ಚಾಮರಾಜನಗರದಲ್ಲಿ ಮಾರ್ಚ್ ೨೦೦೮ರವರೆಗೂ ದಾಖಲಾಗಿರುವ ಮತ್ತು ಇತ್ಯರ್ಥಕವಾಗಿರುವ ಪ್ರಕರಣಗಳ ವಿವರ**

| ವರ್ಷ | ದಾಖಲೆಗೊಂಡಿರುವುದು | ಇತ್ಯರ್ಥವಾಗಿರುವುದು |
|---|---|---|
| ೨೦೦೨ | ೫೨ | ೫೨ |
| ೨೦೦೩ | ೧೩ | ೧೩ |
| ೨೦೦೪ | ೩೨೭ | ೩೨೭ |
| ೨೦೦೫ | ೧೫೯ | ೧೫೯ |
| ೨೦೦೬ | ೧೧೦ | ೧೧೦ |
| ೨೦೦೭ | ೭೩ | ೭೩ |
| ೨೦೦೮* | ೦೯ | ೦೧ |

** ಮಾರ್ಚ್ ೩೧ರ ಒಳಗೆ*

**ವೇದಿಕೆಯಲ್ಲಿ ದಾಖಲಾಗಿರುವ ವಿವಿಧ ಪ್ರಕರಣಗಳು**

| ಕ್ರ.ಸಂ | ವಿವರ | ದಾಖಲೆ | ಇತ್ಯರ್ಥ |
|---|---|---|---|
| ೧ | ಬ್ಯಾಂಕಿಂಗ್ | ೧೧ | ೯ |
| ೨ | ರೈಲ್ವೆ | ಇಲ್ಲ | – |
| ೩ | ವಿಮಾನ ಯಾನ | ಇಲ್ಲ | – |
| ೪ | ವಿಮೆ | ೧೬೭ | ೧೫೬ |
| ೫ | ಅಂಚೆ | ೨ | ೨ |
| ೬ | ಕಟ್ಟಡ/ಮನೆ | ೧೦ | ೧೦ |
| ೭ | ವಿದ್ಯುಚ್ಛಕ್ತಿ | ೫೪ | ೫೧ |
| ೮ | ವಿದ್ಯಾಭ್ಯಾಸ | ೦೧ | ೦೧ |
| ೯ | ವೈದ್ಯಕೀಯ | ೦೧ | ೦೧ |
| ೧೦ | ಗೃಹೋಪಯೋಗಿ | ೦೨ | ೦೨ |
| ೧೧ | ಇತರೆ | ೪೮೫ | ೪೮೪ |

೨೦೦೪ ಮತ್ತು ೨೦೦೫ನೇ ಸಾಲಿನಲ್ಲಿ ಹೆಚ್ಚಿನ ದೂರುಗಳು ಕಳಪೆ ಹತ್ತಿ ಸರಬರಾಜು ಮಾಡಿದ್ದರ ಮೇಲೆ ದಾಖಲಾಗಿರುತ್ತದೆ. ಈ ಸಾಲಿನಲ್ಲಿ ಸುಮಾರು ೪೫೦ಕ್ಕೂ ಹೆಚ್ಚು ದೂರುಗಳು ದಾಖಲಾಗಿದ್ದು, ಅವುಗಳಲ್ಲಿ ೧೫೦ಕ್ಕೂ ಹೆಚ್ಚು ದೂರುಗಳಲ್ಲಿ ಫಿರ್ಯಾದುದಾರರು ಪರಿಹಾರ ಪಡೆದಿರುತ್ತಾರೆ.

೨೦೦೬ನೇ ಸಾಲಿನಲ್ಲಿ ಸುಮಾರು ೮೦ ಪ್ರಕರಣಗಳು ಜೋಳದ ಬೆಳೆ ವಿಮೆ ಮತ್ತು ಹುರಳಿ ಬೆಳೆಯ ವಿಮೆಗೆ ಸಂಬಂಧಿಸಿದ್ದಾಗಿವೆ.

ಜಿಲ್ಲಾ ಗ್ರಾಹಕರ ವೇದಿಕೆಯಲ್ಲಿ ಇದುವರೆಗೂ ಇತ್ಯರ್ಥವಾಗಿರುವ ಪ್ರಕರಣಗಳಲ್ಲಿ ೨೯೧ ಪ್ರಕರಣಗಳು, ಗ್ರಾಹಕರ ಪರವಾಗಿ, ೧೮೧ ಗ್ರಾಹಕರ ವಿರುದ್ಧವಾಗಿ ಮತ್ತು ೨೪೪ ತಾಂತ್ರಿಕ ಕಾರಣಗಳಿಗಾಗಿ ಇತ್ಯರ್ಥವಾಗಿರುತ್ತದೆ.

ಅಲ್ಲದೇ ಹೆಚ್ಚಿನ ಪ್ರಕರಣಗಳು ಪರಸ್ಪರ ಮಾತುಕತೆಯ ಮೂಲಕ ಇಲ್ಲವೇ ವೇದಿಕೆಯ ಹೊರಗೆ ಮಧ್ಯಸ್ಥಿಕೆ ಮೂಲಕ ಇತ್ಯರ್ಥವಾಗಿತ್ತು.

ಜಿಲ್ಲೆಯಲ್ಲಿ ಇರುವ ಗ್ರಾಹಕ ಪರಿಷತ್ತುಗಳು ಗ್ರಾಹಕರಿಗೆ ಜಾಗೃತಿ ಮೂಡಿಸಲು ಜಾಗೃತಿ ಕಾರ್ಯಕ್ರಮವನ್ನು ಪ್ರತಿ ವರ್ಷ ಮಾರ್ಚಿ ೧೫ ರಂದು ವಿಶ್ವ ಗ್ರಾಹಕರ ಹಕ್ಕುಗಳ ದಿನಾಚರಣೆಯ ಅಂಗವಾಗಿ ಗ್ರಾಹಕ ವ್ಯವಹಾರಗಳ ಇಲಾಖೆಯು ಆಚರಿಸುತ್ತಿದೆ.

ಜಿಲ್ಲಾ ವೇದಿಕೆಯಲ್ಲಿ ದಾಖಲಾಗಿರುವ ಪ್ರಕರಣಗಳಲ್ಲಿ ವಿಧವೆಯರು, ಹಿರಿಯ ನಾಗರಿಕರು, ಅಶಕ್ತರು, ಹಾಗೂ ವಿಕಲಾಂಗರಿಗೆ ಮೊದಲ ಆದ್ಯತೆ ನೀಡಲಾಗುತ್ತದೆ. ಇದುವರೆಗೂ ವಿಧವೆಯರು, ೩೨ ಪ್ರಕರಣಗಳನ್ನು ದಾಖಲಿಸಿದ್ದು ಎಲ್ಲ ಇತ್ಯರ್ಥವಾಗಿರುತ್ತವೆ. ಹಿರಿಯ ನಾಗರೀಕರು ೨೧ ಪ್ರಕರಣಗಳು ದಾಖಲಾಗಿದ್ದು, ೧೫ ಪ್ರಕರಣಗಳು ಇತ್ಯರ್ಥವಾಗಿರುತ್ತದೆ.

## ಚಾಮರಾಜನಗರ ಜಿಲ್ಲಾ ಬಳಕೆದಾರರ ವೇದಿಕೆ

ಜಿಲ್ಲಾ ಬಳಕೆದಾರರ ವೇದಿಕೆ ಕಾನೂನಿನ ಪ್ರಕಾರ ನೊಂದಣಿ ಹೊಂದಿದ್ದು, ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಮಾನ್ಯತೆ ಪಡೆದ ಸ್ವಯಂಸೇವಾ ಸಂಸ್ಥೆ, ಗ್ರಾಹಕ ಹಕ್ಕುಗಳ ರಕ್ಷಣೆ, ಶಿಕ್ಷಣ ಜನಜಾಗೃತಿ ಹಾಗೂ ಬಳಕೆದಾರರ ಕಲ್ಯಾಣಕ್ಕಾಗಿ ಕಟಿಬದ್ಧವಾಗಿದೆ. ೧೯೮೦ರಿಂದ ಈ ಸಂಸ್ಥೆಯು ಗ್ರಾಹಕರ ಸೇವೆಯಲ್ಲಿ ತನ್ನನ್ನು ತಾನು ತೊಡಗಿಸಿಕೊಂಡಿದೆ.

## ವೇದಿಕೆಯ ಧ್ಯೇಯಗಳು

೧ **ಬಳಕೆದಾರರ ಶಿಕ್ಷಣ:** ವೇದಿಕೆಯು ಬಳಕೆದಾರರು ತಮ್ಮ ತಮ್ಮ ಹಕ್ಕು ಮತ್ತು ಹಿತಾಸಕ್ತಿಯನ್ನು ಅರಿತುಕೊಳ್ಳುವಂತೆ ಅವರಿಗೆ ಶಿಕ್ಷಣ ನೀಡುವುದು, ಅವರ ಜಾಗೃತಿಗಾಗಿ ಶಿಬಿರಗಳನ್ನು ಏರ್ಪಡಿಸುವುದು ಅವರಿಗೆ ಮಾರ್ಗದರ್ಶನ ಮಾಹಿತಿ ಹಾಗೂ ತರಬೇತಿಯನ್ನು ನೀಡಿ ಅವರು ಸದಾ ಜಾಗೃತರಾಗುವಂತೆ ಮಾಡುವುದು.

೩. **ಬಳಕೆದಾರರ ಹೋರಾಟ:** ಬಳಕೆದಾರರು ವೈಯಕ್ತಿಕ ಹೋರಾಟ ನಡೆಸಲು ವೇದಿಕೆ ಬೆಂಬಲ ನೀಡುವುದು. ಸಾಮೂಹಿಕ ಸಮಸ್ಯೆಗಳಿಗೆ ನ್ಯಾಯಯುತ ಪರಿಹಾರಗಳನ್ನು ಒದಗಿಸಲು ಶ್ರಮಿಸುವುದು. ಅವರ ಪರವಾಗಿ ಹೋರಾಟ ನಡೆಸುವುದು. ಬಳಕೆದಾರರ ಆಂದೋಲನಕ್ಕೆ ಇದು ಎಲ್ಲಾ ಬಗೆಯ ಬೆಂಬಲವನ್ನು ನೀಡುವುದು.

## ವೇದಿಕೆ ನಡೆದು ಬಂದ ದಾರಿ

೧೯೮೦ರಲ್ಲಿ ಈ ವೇದಿಕೆ ಮೈಸೂರು–ಚಾಮರಾಜನಗರ ಜಿಲ್ಲೆಗಳಲ್ಲಿ ಕಾರ್ಯಾರಂಭಗೊಂಡು ಜಿಲ್ಲೆಯ ವ್ಯಾಪ್ತಿಗೊಳಪಟ್ಟ ಬಳಕೆದಾರರು ಜಾಗೃತ ವೇದಿಕೆಯ ಸಹಾಯವನ್ನು ಕೋರುವ ಗ್ರಾಹಕರಿಗೆ ಯಾವ ಶುಲ್ಕವನ್ನು ವಿಧಿಸದೆ, ಯಾವ ಜಾಹಿರಾತು ಮತ್ತು ಪ್ರಚಾರಾಂದೋಳನದಲ್ಲಿ ತೊಡಗದೆ ಬಳಕೆದಾರರ ನ್ಯಾಯಸಮ್ಮತವಾದ ಸಮಸ್ಯೆಗಳಿಗೆ ಸ್ಪಂದಿಸಿ ಪರಿಹಾರ ಒದಗಿಸುತ್ತಾ ಬಂದಿದೆ. ಜಾಗೃತ ಆಯೋಗದ ಮಂಡಳಿಯ ಪರಿಶ್ರಮದಿಂದ ಸಮಸ್ಯೆಗಳು ಸುಲಭದಲ್ಲಿ ಪರಿಹಾರವಾಗಿ ಗ್ರಾಹಕರಲ್ಲಿ ಜನಜಾಗೃತಿ ಮೂಡಿಸಿವೆ. ಈ ವಿಚಾರದಲ್ಲಿ ಸಮೂಹ ಮಾಧ್ಯಮಗಳೂ ಕೂಡ ವೇದಿಕೆಯ ಜೊತೆಗೆ ಸಹಕರಿಸಿ ಗ್ರಾಹಕರ ಹಕ್ಕುಗಳ ಬಗ್ಗೆ ಮಾಹಿತಿ ಒದಗಿಸುವಲ್ಲಿ ಯಶಸ್ವಿಯಾಗಿವೆ. ಸಾಮೂಹಿಕ ಸಮಸ್ಯೆಗಳಾದ ನೀರುಪೂರೈಕೆ, ರಸ್ತೆ ಚರಂಡಿ

ಸ್ವಚ್ಛತೆ, ಕಾಮಗಾರಿ ವಿದ್ಯುತ್ ಸೌಲಭ್ಯ, ಶೌಚಾಲಯಗಳ ನಿರ್ಮಾಣ, ಸಾಮೂಹಿಕ ಭವನ, ಪಡಿತರ ವ್ಯವಸ್ಥೆ ಪರಿಸರ ನೈರ್ಮಲ್ಯ, ಮೂಲಭೂತ ಆರ್ಥಿಕ ಸೌಲಭ್ಯಗಳು, ಹಿರಿಯ ನಾಗರೀಕರ ಸಮಸ್ಯೆಗಳಿಗೆ ಪರಿಹಾರ ವೈದ್ಯಕೀಯ ಸವಲತ್ತು, ಶಿಕ್ಷಣ, ಅಂಗನವಾಡಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ, ವಿಧವೆಯರು, ಅಶಕ್ತರು, ವಿಕಲರು ಹಾಗೂ ದುರ್ಬಲ ವರ್ಗದವರ ಸಮಸ್ಯೆಗಳಿಗೆ ಪರಿಹಾರ, ಸಾರ್ವಜನಿಕ ಸೌಲಭ್ಯ ಸಾರಿಗೆ ವ್ಯವಸ್ಥೆ ಮುಂತಾದವುಗಳಿಗೆ ಪರಿಹಾರ ಕ್ರಮಗಳು ಮತ್ತು ಜನಹಿತಕಾರ್ಯಗಳನ್ನು ಯಶಸ್ವಿಯಾಗಿ ನಡೆಸುತ್ತಾ ಬಂದಿದೆ ಚಳುವಳಿ ಪ್ರತಿಭಟನೆ ಮುಂತಾದವುಗಳ ಮೂಲಕ ಜನಜಾಗೃತಿಯನ್ನುಂಟು ಮಾಡಿ ಸೂಕ್ತ ಪರಿಹಾರವನ್ನು ಪಡೆಯುವಲ್ಲಿ ಯಶಸ್ವಿಯಾಗಿದೆ. ಮತ್ತು ಗ್ರಾಹಕರ ಚಳುವಳಿಗೆ ಸಕ್ರಿಯವಾಗಿ ಬೆಂಬಲ ನೀಡುತ್ತಾ ಬಂದಿದೆ. ಹೀಗೆ ವೈಯಕ್ತಿಕ ಹಾಗೂ ಸಾಮೂಹಿಕ ಆಂದೋಲನಕ್ಕೆ ಗ್ರಾಹಕ ಸಮಸ್ಯೆಗಳಿಗೆ ನ್ಯಾಯಯುತ ಪರಿಹಾರ ಒದಗಿಸುವಲ್ಲಿನ ಹೋರಾಟದಲ್ಲಿ ವೇದಿಕೆಯು ಯಶಸ್ಸನ್ನು ಕಂಡಿದೆ. ಕೇಂದ್ರ, ರಾಜ್ಯ ಸರ್ಕಾರ ಹಾಗೂ ಸ್ಥಳೀಯ ಸ್ವಯಂಆಡಳಿತ ಸಂಸ್ಥೆಗಳೊಂದಿಗೆ ಸಂವಾದ ಏರ್ಪಡಿಸಿ, ವೇದಿಕೆ ಹಲವಾರು ರಚನಾತ್ಮಕ ಕಾರ್ಯಗಳನ್ನು ಜಿಲ್ಲೆಯಲ್ಲಿ ಕೈಗೊಳ್ಳುತ್ತಾ ಬಂದಿದೆ.

*****